₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 23.08.2024 ಸಂಪುಟ: 67 ಸಂಚಿಕೆ: 107 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಪೋಲೆಂಡ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅಲ್ಲಿನ ಅಧ್ಯಕ್ಷ ಅಂದ್ರೇಜ್ ವಾಜ್ ಅವರನ್ನು ಭೇಟಿ ಮಾಡಿ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಮಾತುಕತೆ ನಡೆಸಿದರು.

ಇದು ಯುದ್ಧದ ಯುಗವಲ್ಲ

ವಾರ್ಸಾ: ಭಾರತ ಶಾಂತಿಯನ್ನು ಬೆಂಬಲಿಸುತ್ತದೆ. ರಾಜತಾಂತ್ರಿಕತೆ ಮತ್ತು ಮಾತುಕತೆಯ ಮೂಲಕ ಯಾವುದೇ ಸಂಘರ್ಷವನ್ನು ಪರಿಹರಿಸಬಹುದು. ಇದು ಯುದ್ಧದ ಯುಗವಲ್ಲ ಎಂದು ಪ್ರಧಾನಿ ಮೋದಿ ಹೇಳಿದರು. ಉಕ್ರೇನ್ ಭೇಟಿಗೂ ಮುನ್ನ ಪೋಲೆಂಡ್‌ನಲ್ಲಿ ಮಾತನಾಡಿ, ಎಲ್ಲ ದೇಶಗಳಿಂದ ಅಂತರಕಾಯ್ದುಕೊಳ್ಳಬೇಕು ಎನ್ನುವುದು ಭಾರತ ದಶಕಗಳಿಂದ ಪಾಲಿಸಿಕೊಂಡು ಬಂದ ನೀತಿ. ಆದರೆ ಎಲ್ಲ ದೇಶಗಳಿಗೆ ಹತ್ತಿರವಾಗುವುದು ಇಂದಿನ ಭಾರತದ ನೀತಿ ಎಂದು ಹೇಳಿದರು.

ಪುಟ ತೆರೆದಂತೆ...

ದಿನವೊಂದಕ್ಕೆ 25 ತಾಸು, ತಪ್ಪುವುದೇ ಜಗತ್ತಿನ ತ್ರಾಸು?
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಕಾಡುಶುಂಠಿಯ ರಸ ಕುಡಿದ ಹಸು!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಎಚ್‌ಡಿಕೆ, ರೆಡ್ಡಿ, ನಿರಾಣಿ ಜೊಲ್ಲೆ ವಿಚಾರಣೆಗೆ ಅನುಮತಿ ನೀಡಲು ಸಲಹೆ: ಸಂಪುಟ ಸಭೆ ನಿರ್ಣಯ

ಶಾಸಕಾಂಗ ಪಕ್ಷ ಸಭೆಯಲ್ಲಿ ಸಿಎಂ ಸಿದ್ದು ಪರ ನಿಂತ ಶಾಸಕರು । ನಾಳೆ ದೆಹಲಿಗೆ ಸಿಎಂ, ಡಿಸಿಎಂ ದೌಡು

ರಾಜ್ಯಪಾಲರ ಮೇಲೆ ಒತ್ತಡ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬೆನ್ನಲ್ಲೇ, ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಹಂತ-ಹಂತವಾಗಿ ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನವನ್ನು ರಾಜ್ಯ ಸರಕಾರ ಮಾಡುತ್ತಿದೆ. ಇದರ ಮುಂದುವರಿದ ಭಾಗವಾಗಿ, ಗುರುವಾರದ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

- ಒಂದೇ ದಿನ ಎರಡು ಸಚಿವ ಸಂಪುಟ ಸಭೆ
- ಸಚಿವ ಸಂಪುಟ ಮುಗಿದ ಬೆನ್ನಲ್ಲೇ ಶಾಸಕಾಂಗ ಪಕ್ಷದ ಸಭೆ ನಡೆಸಿದ ಸಿಎಂ
- ಸಭೆಯಲ್ಲಿ ಸಿಎಂ ಪರ ನಿಲ್ಲುವುದಾಗಿ ಹೇಳಿದ ಕಾಂಗ್ರೆಸ್ ಶಾಸಕರು
- ಶುಕ್ರವಾರ ಬೆಳಗ್ಗೆ ದೆಹಲಿಗೆ ತೆರಳಲಿರುವ ಸಿಎಂ, ಡಿಸಿಎಂ
- ಹೈಕಮಾಂಡ್ ಅನುಮತಿ ನೀಡಿದರೆ, ರಾಷ್ಟ್ರಪತಿಗಳನ್ನು ಭೇಟಿಯಾಗಿ, ರಾಜ್ಯಪಾಲರ ವಿರುದ್ಧ ದೂರು ದಾಖಲು

ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿದಂತೆ ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಸಲ್ಲಿಸಿರುವ ಅರ್ಜಿಯನ್ನು ಶೀಘ್ರವಾಗಿ ಇತ್ಯರ್ಥಪಡಿಸುವಂತೆ ಸಲಹೆ ನೀಡುವ ಮೂಲಕ, ರಾಜ್ಯಪಾಲರಿಗೆ ರಾಜ್ಯ ಸರಕಾರ ಠಕ್ಕರ್ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ದಿನ ದಿಂದಲೂ ಕಾಂಗ್ರೆಸ್ ನಾಯಕರು, ಬಿಜೆಪಿ-ಜೆಡಿಎಸ್ ನಾಯಕರ ವಿರುದ್ಧದ ಆರೋಪಗಳಿಗೆ ಅಭಿಯೋಜನೆಗೆ ಅನುಮತಿ ನೀಡಲು ವರ್ಷಗಟ್ಟಲೇ ಸುಮ್ಮನಿದ್ದು, ಸಿದ್ದರಾಮಯ್ಯ ವಿರುದ್ಧ ತಿಂಗಳೊಳಗೆ ಅನುಮತಿ ನೀಡಿದ್ದೇಕೆ? ಎಂದು ಪ್ರಶ್ನಿಸಿದ್ದರು. ಇದೀಗ ಇದೇ ವಿಷಯವನ್ನು ನ್ಯಾಯಾಲಯದಲ್ಲಿ ಹಾಗೂ ಕಾನೂನಾತ್ಮಕವಾಗಿ ಪ್ರಶ್ನಿಸುವ ಉದ್ದೇಶ ದಿಂದ ರಾಜ್ಯ ಸರಕಾರ, 'ಈ ಜಾಣ' ನಡೆಯನ್ನು ಅನುಸರಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಎರಡು ಸಚಿವ ಸಂಪುಟ ಸಭೆ: ಗುರುವಾರ ಒಂದೇ ದಿನ ಎರಡು ಸಚಿವ ಸಂಪುಟ ಸಭೆ ನಡೆದಿವೆ. ಮೊದಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಬಗ್ಗೆ ಸಲಹೆ ಸೇರಿದಂತೆ ಇತರೆ ಅಜೆಂಡಾಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಬಳಿಕ ಆಗಸ್ಟ್ 1ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯಪಾಲರ ನೋಟಿಸ್ ಹಿಂಪಡೆಯಲು ಖಂಡನಾ ನಿರ್ಣಯವನ್ನು ತಗೆದುಕೊಂಡಿದ್ದ ಸಂಪುಟದ ನಿರ್ಣಯವನ್ನು ದೃಢೀಕರಿಸಲು ಎರಡನೇ ಸಭೆನಡೆಯಿತು.; ದೃಢೀಕರಣ ಸಂದರ್ಭದಲ್ಲಿ ತಾವಿರುವುದು ಸೂಕ್ತವಲ್ಲವೆಂದು ಸಿಎಂ ಸಿದ್ದರಾಮಯ್ಯ ಅವರು ಸಭೆಯಿಂದ ಹೊರಗಿದ್ದರು. ಈ ಸಭೆ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯಿತು.



ಏನಿದು ಲೆಕ್ಕಾಚಾರ?

ಒಂದು ವೇಳೆ 29ರೊಳಗೆ ಈ ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡದಿದ್ದರೆ, ಹೈಕೋರ್ಟ್ ಅರ್ಜಿ ವಿಚಾರಣೆ ವೇಳೆ, ಎನ್‌ಡಿಎ ಮೈತ್ರಿಕೂಟದ ನಾಯಕರ ವಿರುದ್ಧ ವರ್ಷದ ಹಿಂದೆಯೇ ಸರಕಾರಿ ತನಿಖಾ ಸಂಸ್ಥೆಗಳು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದ್ದರೂ ಅನುಮತಿಸಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ಖಾಸಗಿ ದೂರುದಾರರು ದೂರು ನೀಡಿದ ಬೆನ್ನಲ್ಲೇ, ಪರಿಶೀಲಿಸಲು ಸಮಯ ಪಡೆಯದೇ ಅಭಿಯೋಜನೆಗೆ ಅನುಮತಿ ನೀಡಿದ್ದಾರೆ. ಈ ರೀತಿ ತರಾತುರಿಯಲ್ಲಿ ಅನುಮತಿಸಿರುವುದನ್ನು ಗಮನಿಸಿದರೆ, ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ರೂಪಿಸಲು ರಾಜಭವನದ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎನ್ನುವ ಆರೋಪವನ್ನು ಹೊರಿಸುವ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಪರ ವಕೀಲರಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

ಇಕ್ಕಟ್ಟಿನಲ್ಲಿ ರಾಜ್ಯಪಾಲ ಗೆಹ್ಲೋಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ 'ಅತಿವೇಗ'ವಾಗಿ ಅನುಮತಿ ನೀಡಿರುವ ರಾಜ್ಯಪಾಲರಿಗೆ ಇದೀಗ ಸಚಿವ ಸಂಪುಟ ಸಭೆ ಕುಮಾರಸ್ವಾಮಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಹಾಗೂ ಜನಾರ್ಧನ ರೆಡ್ಡಿ ವಿರುದ್ಧವೂ 'ಅದೇ ವೇಗದಲ್ಲಿ' ಅನುಮತಿ ನೀಡಬೇಕು ಎನ್ನುವುದು ಕಾಂಗ್ರೆಸ್‌ನ ವಾದವಾಗಿತ್ತು. ಇದರ ಭಾಗವಾಗಿ, ಸಚಿವ ಸಂಪುಟ ಸಭೆಯಲ್ಲಿ ಈ ನಾಲ್ವರ ವಿರುದ್ಧದ ಅಭಿಯೋಜನೆಗೆ ಅನುಮತಿ ನೀಡುವಂತೆ 'ಸಲಹೆ'ಯ ರೂಪದ ಒತ್ತಡವನ್ನು ಹೇರುವ ನಿರ್ಣಯವನ್ನು ಕೈಗೊಳ್ಳಲಾಗಿದೆ. ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ.ಪಾಟೀಲ್, ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ, ಎಚ್.ಡಿ ಕುಮಾರಸ್ವಾಮಿ ಹಾಗೂ ಜನಾರ್ಧನ ರೆಡ್ಡಿ ವಿರುದ್ಧದ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಅನುಮತಿ ಕೋರಲಾಗಿತ್ತು. ನಾಲ್ಕು ಪ್ರಕರಣದಲ್ಲಿ ಜನಾರ್ದನ ರೆಡ್ಡಿ ಮತ್ತು ಕುಮಾರಸ್ವಾಮಿ ಪ್ರಕರಣದಲ್ಲಿ ಆರೋಪ ಪಟ್ಟಿ ಸಲ್ಲಿಕೆ ಆಗಿದೆ. ಈ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ರಾಜ್ಯಪಾಲರಿಗೆ ಸಲಹೆ ಸಲ್ಲಿಸಲಾಗುವುದು ಎಂದರು.

ಯಾವ ಪ್ರಕರಣದಲ್ಲಿ ಅರ್ಜಿ?

- **ಎಚ್.ಡಿ.ಕುಮಾರಸ್ವಾಮಿ:** ಕುಮಾರಸ್ವಾಮಿ ಅವರ ವಿರುದ್ಧ ನವೆಂಬರ್ 21, 2023ರಂದು ಭ್ರಷ್ಟಾಚಾರ ತಡೆ ಕಾಯಿದೆ ಸೆಕ್ಷನ್ 19 ರಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಲಾಗಿದ್ದು, ಎಸ್‌ಐಟಿ ಆರೋಪ ಪಟ್ಟಿ ಸಲ್ಲಿಸಿದೆ. ರಾಜ್ಯಪಾಲರು ಕೋರಿದ್ದ ಸ್ಪಷ್ಟನೆಗೆ ಆಗಸ್ಟ್ 16, ಎಸ್‌ಐಟಿ ಅಗತ್ಯ ಸ್ಪಷ್ಟನೆ ನೀಡಲಾಗಿದೆ.
- **ಜನಾರ್ದನ ರೆಡ್ಡಿ:** ಜನಾರ್ದನ ರೆಡ್ಡಿ ವಿರುದ್ಧ ಮೇ 13, 2024ರಂದು ಭ್ರಷ್ಟಾಚಾರ ತಡೆ ಕಾಯಿದೆ ಸೆಕ್ಷನ್ 19 ಮತ್ತು ಬಿಎನ್‌ಎಸ್‌ಎಸ್‌ನ ನಿಬಂಧನೆಗಳ ಅಡಿಯಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಲಾಗಿದ್ದು, ಈ ಪ್ರಕರಣದಲ್ಲಿ ಚಾರ್ಜ್‌ಶೀಟ್ ಸಹ ಸಲ್ಲಿಸಲಾಗಿದೆ.
- **ಶಶಿಕಲಾ ಜೊಲ್ಲೆ:** ಶಶಿಕಲಾ ಜೊಲ್ಲೆ ವಿರುದ್ಧ 2021ರ ಡಿ.9ರಂದು ಭ್ರಷ್ಟಾಚಾರ ತಡೆ ಕಾಯಿದೆ ಸೆಕ್ಷನ್ 17 ಎ ಅಡಿಯಲ್ಲಿ ಲೋಕಾಯುಕ್ತರು ಪೂರ್ವಾನುಮತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ.
- **ಮುರುಗೇಶ್ ನಿರಾಣಿ:** ಮುರುಗೇಶ್ ನಿರಾಣಿ ವಿರುದ್ಧ ಫೆಬ್ರವರಿ 26, 2024ರಂದು ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17 ಎ ಅಡಿಯಲ್ಲಿ ಲೋಕಾಯುಕ್ತರು ಪೂರ್ವಾನುಮತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಸಿಎಂಗೆ ಶಾಸಕಾಂಗ ಪಕ್ಷದ ಸಭೆ ಬೆಂಬಲ

ಸಚಿವ ಸಂಪುಟ ಸಭೆಯ ಬೆನ್ನಲ್ಲೇ ವಿಧಾನ ಸೌಧದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಈ ವೇಳೆ ಒಕ್ಕೊರಲಿ ನಿಂದ ಎಲ್ಲ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುತ್ತೇವೆ ಎನ್ನುವ ಬೆಂಬಲವನ್ನು ಘೋಷಿಸಿದರು. ಸಭೆಯಲ್ಲಿ 136 ಶಾಸಕರ ಪೈಕಿ ಆರು ಶಾಸಕರು, ಗೈರಾಗಿದ್ದರು. ದೆಹಲಿಯಲ್ಲಿ ಶಾಸಕರಿಗೆ ನಡೆಯುತ್ತಿರುವ ತರಬೇತಿಯಲ್ಲಿ ಭಾಗವಹಿಸಲು ಆರು ಶಾಸಕರು ತೆರಳಿರುವುದರಿಂದ ಪೂರ್ವಾನುಮತಿ ಪಡೆದು ಸಭೆಗೆ ಗೈರಾಗಿದ್ದರು ಎಂದು ತಿಳಿದುಬಂದಿದೆ.

ಇಂದು ದೆಹಲಿಗೆ ಸಿಎಂ, ಡಿಸಿಎಂ

ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಗುರುವಾರ ಬೆಳಗ್ಗೆ ದೆಹಲಿಗೆ ತೆರಳಲಿದ್ದಾರೆ. ಈಗಾಗಲೇ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕಮಾಂಡ್‌ಗೆ ಸ್ಪಷ್ಟನೆ ನೀಡಿರುವ ಸಿದ್ದರಾಮಯ್ಯ, ಇದೀಗ ರಾಜ್ಯಪಾಲರ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.ಈ ಭೇಟಿಯ ವೇಳೆಯ ಪ್ರಕರಣವನ್ನು ರಾಷ್ಟ್ರಪತಿಗಳ ಅಂಗಳಕ್ಕೆ ತಗೆದುಕೊಂಡು ಹೋಗುವ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆಯಿದೆ. ಒಂದು ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಹುಲ್ ಗಾಂಧಿ ಒಪ್ಪಿಗೆ ನೀಡಿದರೆ, ಗುರುವಾರವೇ ರಾಷ್ಟ್ರಪತಿಗಳಿಗೂ ಅಧಿಕೃತವಾಗಿ ದೂರು ದಾಖಲಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ದೂರು ಕೊಟ್ಟ ಕೂಡಲೇ ಅನುಮತಿ ನೀಡಬಹುದೇ?

ಅಶೋಕ್ ಹಾರನಹಳ್ಳಿ ಹಿರಿಯ ವಕೀಲರು

ರಾಜ್ಯಪಾಲರ ಆದೇಶ ಅಪೂರ್ಣವಾಗಿದ್ದು, ಮುಖ್ಯಮಂತ್ರಿಗಳ ಮೇಲೆ ಯಾವುದೇ ಆರೋಪ, ಪ್ರಕರಣದಲ್ಲಿ ಅವರ ಪಾತ್ರದ ಕುರಿತು ಸ್ಪಷ್ಟ ವಿವರವಿಲ್ಲ ದಿದ್ದರೂ ಅಭಿಯೋಜನೆಗೆ ಅನುಮತಿ ನೀಡಿದ್ದಾರೆ. ರಾಜ್ಯ ಪಾಲರ ಆದೇಶದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮುಖ್ಯಮಂತ್ರಿಗಳು ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಕೂಡ ತಾತ್ಕಾಲಿಕ ಆದೇಶ ನೀಡಿದೆ.

ಕಾನೂನು ಪ್ರಕಾರ ಭ್ರಷ್ಟಾಚಾರ ವಿರೋಧಿ ಕಾಯಿದೆಯಲ್ಲಿ ಯಾವುದೇ ವಿಚಾರದಲ್ಲಿ ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾದರೆ, ವಿಚಾರಣೆ ಮಾಡುವುದಕ್ಕೂ ಅನುಮತಿ ನೀಡಬೇಕಾಗುತ್ತದೆ. ಆದರೆ ಮುಖ್ಯಮಂತ್ರಿಗಳ ವಿರುದ್ಧ ಅಭಿಯೋಜನೆಗೆ ಅನುಮತಿ ನೀಡಲು ಯಾರು ಶಿಫಾರಸು ಮಾಡಿದ್ದಾರೆ ಎನ್ನುವ ಬಗ್ಗೆ ಯಾವುದೇ ವಿವರಣೆಯಿಲ್ಲ. ನಾಗರಿಕ ಸುರಕ್ಷತಾ ಕಾಯಿದೆ 218ರ ಪ್ರಕಾರ ವಿಚಾರಣೆ ಮಾಡುವುದಕ್ಕೆ ಅನುಮತಿ ಕೊಡುವುದು ಒಂದು ಭಾಗವಾಗಿರುತ್ತದೆ. ಇನ್ನೊಂದು ಭಾಗದಲ್ಲಿ ವಿಚಾರಣೆ ನಡೆದು ತನಿಖೆ ಮುಗಿದ ಮೇಲೆ ತನಿಖೆ ಆಧಾರದ ಮೇಲೆ ಅದಕ್ಕೆ ಮಂಜೂರಾತಿ ನೀಡಲಾಗುವುದು. ಆದರೆ ರಾಜ್ಯಪಾಲರು ಒಂದೇ ಆದೇಶದಲ್ಲಿ ಎರಡನ್ನು ನೀಡಿದ್ದಾರೆ.

ಆಳವಾದ ವಿಚಾರ ನಡೆಸಿಲ್ಲ: ನ್ಯಾಯಾಲಯದಲ್ಲಿ ರಾಜ್ಯಪಾಲರ ಆದೇಶ ಪ್ರಶ್ನಿಸುವುದಕ್ಕೆ ಅನೇಕ ಸಮರ್ಥವಾದ ವಾದ ಮಂಡಿಸಲು ಅವಕಾಶವಿದೆ. ಅಲ್ಲದೇ ರಾಜ್ಯಪಾಲರ ಆದೇಶ ಸಮರ್ಥಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಮುಖ್ಯಮಂತ್ರಿಗಳ ಮೇಲೆ ಈ ರೀತಿ ಆದೇಶ ನೀಡುವ ಮುನ್ನ ಆಳವಾದ ವಿಚಾರ ಹೆಚ್ಚು ಅವಶ್ಯಕತೆಯಿದೆ. ಪೂರ್ವಾಪರ ಯೋಚನೆ ಮಾಡಿ ಆದೇಶ ನೀಡಬೇಕಾಗುತ್ತದೆ ಎಂದು ಹೈಕೋರ್ಟ್ ಈಗಾಗಲೇ ಅನೇಕ ಬಾರಿ ತೀರ್ಪು ನೀಡಿದೆ. ಯಾವುದೇ ಒಬ್ಬ ವ್ಯಕ್ತಿ ದೂರು ಬಂದ ತಕ್ಷಣ ರಾಜ್ಯಪಾಲರು ಅನುಮತಿ ಕೊಡಬಹುದಾ ? ವಿಚಾರಣೆ ಮಾಡಬೇಕು. ಅದರಲ್ಲಿ ಹುರುಳು ಇದೆಯಾ? ಮೇಲ್ನೋಟದಲ್ಲಿ ಆರೋಪ ಋಜುವಾತು ಮಾಡುವಂತಹ ಅಂಶ ಇದೆಯಾ ಎಂದು ನೋಡಬೇಕು. ಯಾರು ಬೇಕಾದರೂ ದೂರು ಕೊಟ್ಟು ಜನಾಭಿಪ್ರಾಯದಲ್ಲಿ ಜನ ಬೆಂಬಲದಿಂದ ಚುನಾಯಿತನಾದ ಮುಖ್ಯಮಂತ್ರಿಗಳನ್ನು ಕೆಳಗಿಳಿಸಬಹುದು.

ಜನಾಭಿಪ್ರಾಯಕ್ಕೆ ಬೆಲೆ: ರೆಪ್ರೆಸಂಟೇಶನ್ ಆಫ್ ಆಕ್ಟ್‌ನಲ್ಲಿ ಚುನಾವಣೆಯನ್ನು ಪ್ರಶ್ನೆ ಮಾಡಿದರೂ, ನ್ಯಾಯಾಲಯದ ಪ್ರಕಾರ ಚುನಾಯಿತ ವ್ಯಕ್ತಿ ಚುನಾವಣೆಯಲ್ಲಿ ವಜಾಮಾಡಿಸಬೇಕು ಎಂದರೆ ಅಷ್ಟು ಸುಲಭವಾಗಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಜನಾಭಿಪ್ರಾಯಕ್ಕೆ ಬೆಲೆ ಕೊಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಕಾನೂನಿನ ಆಧಾರದ ಮೇಲೆ ನ್ಯಾಯಾಲಯದಲ್ಲಿ ವಾದವನ್ನು ಮಂಡಿಸಲಿಕ್ಕೆ ಮುಖ್ಯಮಂತ್ರಿಗೆ ಅವಕಾಶವಿದೆ. ನ್ಯಾಯಾಲಯದ ಆದೇಶದ ಪ್ರಕಾರ ಪ್ರಕರಣ ಪರೀಶೀಲನೆ ಹಂತದಲ್ಲಿದ್ದು, ಅಷ್ಟರಲ್ಲಿ ತೀರ್ಮಾನ ಹೊರಬರಬಹುದು. ತಾತ್ಕಾಲಿಕವಾಗಿ ಹತ್ತು ದಿನಗಳ ಕಾಲ ಸಮಯ ನೀಡಿದ್ದು, ಅದರೊಳಗೆ ಅಂತಿಮ ತೀರ್ಮಾನ ನೀಡಬಹುದು. ಆದೇಶದ ಪ್ರಕಾರ ಪ್ರಕ್ರಿಯೆ ಶುರುವಾಗಿ ವಾದ ಪ್ರಾರಂಭವಾಗಿ ನಂತರ ನ್ಯಾಯಾಲಯ ತೀರ್ಪು ನೀಡಲಿದೆ ಎಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ರಾಜ್ಯಾಪಾಲರ ಆದೇಶ ನ್ಯಾಯಾಲಯದಲ್ಲಿ ಸಮರ್ಥಿಸುವುದು ಅಷ್ಟು ಸುಲಭವಾಗಿಲ್ಲ. ಹಾಗೂ ಮುಖ್ಯಮಂತ್ರಿಗಳು ಈ ಪ್ರಕರಣದಿಂದ ಸುಲಭವಾಗಿ ಮುಕ್ತರಾಗಿ ಹೊರಬರಬಹುದು ಎಂದು ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಅವರ ಮಾಹಿತಿಯಿಂದ ಕಂಡುಬರುತ್ತದೆ.

ಸುಪ್ರೀಂ ಭರವಸೆ ಬಳಿಕ ಕರ್ತವ್ಯಕ್ಕೆ ಮರಳುವುದಾಗಿ ಘೋಷಣೆ

ಪ್ರತಿಭಟನೆ ಕೈಬಿಟ್ಟ ವೈದ್ಯರು

- 11 ದಿನಗಳಿಂದ ನಡೆದ ಪ್ರತಿಭಟನೆ, ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದು ಭರವಸೆ
- ಪೊಲೀಸರ ಕರ್ತವ್ಯಲೋಪ, ನಿರ್ಲಕ್ಷ್ಯದ ನಡೆ ಖಂಡಿಸಿದ ಸುಪ್ರೀಂಕೋರ್ಟ್

ದೆಹಲಿ: ಕೋಲ್ಕತ್ತದಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವುದನ್ನು ಖಂಡಿಸಿ 11 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದ ದೆಹಲಿ ಏಮ್ಸ್ ವೈದ್ಯರು ಸುಪ್ರೀಂಕೋರ್ಟ್ ಭರವಸೆ ಬಳಿಕ ಕರ್ತವ್ಯಕ್ಕೆ ಮರಳುವುದಾಗಿ ಘೋಷಿಸಿದ್ದಾರೆ.

ಪ್ರತಿಭಟನೆಯನ್ನು ಕೈಬಿಟ್ಟು ಕೆಲಸಕ್ಕೆ ಮರಳುವಂತೆ ಗುರುವಾರ ಸೂಚನೆ ನೀಡಿದ್ದ ಸುಪ್ರೀಂ ಕೋರ್ಟ್, ಕೆಲಸಕ್ಕೆ ಮರಳಿದ ಬಳಿಕ ಯಾವುದೇ ಪ್ರತಿಕೂಲ ಕ್ರಮಗಳನ್ನು ಕೈಗೊಳ್ಳುವುದಿಲ್ಲ ಎಂಬ ಭರವಸೆಯನ್ನೂ ನೀಡಿದೆ. ಆರ್.ಜಿ.ಕರ್ ವೈದ್ಯಕೀಯ ಕಾಲೇಜು, ಆಸ್ಪತ್ರೆ ಸೆಮಿನಾರ್ ಸಭಾಂಗಣದಲ್ಲಿ ವಿದ್ಯಾರ್ಥಿನಿಯ ಶವ ಆಗಸ್ಟ್ 9 ರಂದು ಪತ್ತೆಯಾಗಿತ್ತು. ಇದರ ಬೆನ್ನಲ್ಲೇ ರಾಷ್ಟ್ರದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ವೈದ್ಯ ಸಂಘಟನೆಗಳು, ಎಲ್ಲ ಆಸ್ಪತ್ರೆಗಳಲ್ಲಿನ ಹೊರ ರೋಗಿಗಳ ವಿಭಾಗದ ಸೇವೆಯನ್ನು ಸ್ಥಗಿತಗೊಳಿಸಿ ಆಗಸ್ಟ್ 12ರಂದು ರಾಷ್ಟ್ರದಾದ್ಯಂತ ಹೋರಾಟಕ್ಕೆ ಕರೆ ನೀಡಿದ್ದವು.

ಸಾಮೂಹಿಕ ಅತ್ಯಾಚಾರ ನಡೆದಿಲ್ಲ

ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ನಸುಕಿನಲ್ಲಿ ಕಿರಿಯ ವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ. ಅತ್ಯಾಚಾರ ಮತ್ತು ಕೊಲೆ ಕೃತ್ಯ ಒಬ್ಬನೇ ವ್ಯಕ್ತಿಯ ಕೃತ್ಯ. ಪ್ರಕರಣದಲ್ಲಿ ಕೋಲ್ಕತ್ತ ನಗರ ಪೊಲೀಸರಿಗೆ ನಾಗರಿಕ ಸಹಾಯಕ ನಾಗಿ ಸೇವೆ ಸಲ್ಲಿಸುತ್ತಿದ್ದ ಸಂಜೋಯ್ ರೇ ಎಂಬಾತನನ್ನು ಬಂಧಿಸ ಲಾಗಿದೆ. ಡಿಎನ್‌ಎ ವರದಿಯಲ್ಲಿಯೂ ಒಬ್ಬನೇ ವ್ಯಕ್ತಿಯ ಕೈವಾಡ ವಿದೆ ಎಂದು ಸಿಬಿಐ ತನಿಖಾ ವರದಿಯಲ್ಲಿ ಹೇಳಲಾಗಿದೆ.

ಶ್ರೀ ಗುರು ರಾಯರ 543ನೇ ಆರಾಧನಾ ಮಹೋತ್ಸವದ ಉತ್ತರಾಧನೆ ಅಂಗವಾಗಿ ಗುರುವಾರ ಮಂತ್ರಾಲಯದ ರಾಜಬೀದಿಯಲ್ಲಿ ಲಕ್ಷಾಂತರ ಭಕ್ತ ನಡುವೆ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಡಿಕೆಶಿಗೆ ಲೋಕಾ ಡ್ರಿಲ್

ಲೋಕಾಗಿಂತ ಸಿಬಿಐ ಪರವಾಗಿಲ್ಲ

ಬೆಂಗಳೂರು: ಆದಾಯಕ್ಕೂ ಮೀರಿ ಆಸ್ತಿ ಸಂಪಾದನೆ ಆರೋಪದಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದ ಲೋಕಾಯುಕ್ತ ಅಧಿಕಾರಿಗಳು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ಎರಡು ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿದರು. ಪ್ರಕರಣ ದಾಖಲಾದ ಬಳಿಕ ಇದೇ ಮೊದಲ ಬಾರಿಗೆ ಡಿ.ಕೆ.ಶಿವಕುಮಾರ್ ವಿಚಾರಣೆ ಎದುರಿಸಿದರು. ಬಳಿಕ ಮಾತನಾಡಿದ ಡಿಕೆಶಿ, ಲೋಕಾಯುಕ್ತ ಅಧಿಕಾರಿಗಳು ಏನೇನೋ ಪ್ರಶ್ನೆ ಕೇಳಿ ಹಿಂಸೆ ಕೊಟ್ಟಿದ್ದಾರೆ. ಹಲವು ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಕೆಲ ಪ್ರಶ್ನೆಗಳಿಗೆ ದಾಖಲೆ ರೂಪದಲ್ಲಿ ಉತ್ತರಿಸುವುದಾಗಿ ತಿಳಿಸಿದ್ದೇನೆ. ವಿಚಾರಣೆಗೆ ಕರೆದಾಗ ಬರಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ. ಇವರಿಗಿಂತ ಸಿಬಿಐನವರೇ ಪರವಾಗಿಲ್ಲ ಎಂದರು. → 4

ಬಿಎಸ್‌ವೈ ಬಂಧನ ಬೇಡ

ಮಧ್ಯಂತರ ಆದೇಶ ವಿಸ್ತರಣೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಿಗೆ ವಿನಾಯಿತಿ ನೀಡಲಾಗಿದೆ ಎಂಬ ಮಧ್ಯಂತರ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ. ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರು ಪ್ರಕರಣದ ವಿಚಾರಣೆ ಕೈಗೆತ್ತಿಕೊಳ್ಳುವಂತೆ ಕೋರಿ ಬೆಳಗ್ಗೆ ತುರ್ತು ಮೆಮೊ ಸಲ್ಲಿಸಿದರು. ಈ ಮೆಮೊ ಅನ್ನು ದಿನದ ಕಲಾಪದ ಕೊನೆಗೆ ಕೈಗೆತ್ತಿಕೊಂಡಿತಾದರೂ, ಈಗ ಸಂಜೆ 5 ಗಂಟೆಯಾಗಿರುವ ಕಾರಣ ವಾದ ಆಲಿಸಲು ಸಮಯಾವಕಾಶದ ಕೊರತೆಯಿದೆ ಎಂದು ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು. ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ವಿಚಾರಣೆ ನಡೆಸಿತು.

ರೇಣುಕಾಸ್ವಾಮಿ ಪ್ರಾಣಭಿಕ್ಷೆ ಬೇಡುತ್ತಿರುವ ಫೋಟೋ ರಿಕವರಿ | ದರ್ಶನ್ ವಿರುದ್ಧ ಪ್ರಬಲ ಸಾಕ್ಷ್ಯ

ಡಿ ಗ್ಯಾಂಗ್‌ಗೆ ಮುಳುವಾದ ಫೋಟೋ?

- 17 ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಮೊಬೈಲ್‌ನಲ್ಲಿದ್ದ ದತ್ತಾಂಶ ಮರು ಸಂಗ್ರಹ
- ದರ್ಶನ್, ಪವಿತ್ರಾಗೌಡ ಮೊಬೈಲ್‌ನಲ್ಲಿ ದತ್ತಾಂಶ ಮರುಸಂಗ್ರಹ ಕಾರ್ಯ ಪ್ರಗತಿಯಲ್ಲಿದೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆಗೂ ಮುನ್ನ ತೆಗೆದಿರುವ ಫೋಟೊ ಮತ್ತು ವಿಡಿಯೋಗಳು ಇದೀಗ ಡಿ ಗ್ಯಾಂಗ್‌ಗೆ ಸಂಕಷ್ಟ ತಂದಿವೆ.

ಚಿತ್ರದುರ್ಗದ ರೇಣುಕಾಸ್ವಾಮಿ ಅವರು ಕೊಲೆಗೀಡಾಗುವ ಮುನ್ನ, ಹಲ್ಲೆಕೋರರದ ಎದುರು ಕೈಮುಗಿದು ಕಣ್ಣೀರಿಡುತ್ತಿರುವ ಫೋಟೊ, ನಾಲ್ಕು ಮತ್ತು ಎಂಟು ಸೆಕೆಂಡಿನ ಎರಡು ವಿಡಿಯೊಗಳನ್ನು ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಮರು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ 17 ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಮೊಬೈಲ್‌ನಲ್ಲಿದ್ದ ದತ್ತಾಂಶ ಮರು ಸಂಗ್ರಹಕ್ಕೆ ಹೈದರಾಬಾದ್ ಹಾಗೂ ಬೆಂಗಳೂರಿನ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿತ್ತು. ಪ್ರದೂಷ್ ಸೇರಿದಂತೆ ಇಬ್ಬರು ಆರೋಪಿಗಳ ಐ-ಫೋನ್‌ನಲ್ಲಿದ್ದ ದತ್ತಾಂಶವನ್ನು ಎಫ್‌ಎಸ್‌ಎಲ್ ತಜ್ಞರು ಮರುಸಂಗ್ರಹಿಸಲು ಯಶಸ್ವಿಯಾಗಿದ್ದಾರೆ. ಆರೋಪಿ ದರ್ಶನ್, ಪವಿತ್ರಾಗೌಡ ಅವರ ಮೊಬೈಲ್‌ನಲ್ಲಿ ದತ್ತಾಂಶ ಮರುಸಂಗ್ರಹ ಕಾರ್ಯ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿದ ನಟಿ ರಚಿತಾ ರಾಮ್.

ದರ್ಶನ್ ವಿರುದ್ಧ ಪ್ರಬಲ ಸಾಕ್ಷ್ಯ?: ಕೊಲೆ ಪ್ರಕರಣದಲ್ಲಿ ತನಿಖೆ ನಡೆಸಿದ ಪಶ್ಚಿಮ ವಿಭಾಗದ ಪೊಲೀಸರಿಗೆ ನಟ ದರ್ಶನ್ ಅವರ ವಿರುದ್ಧ ಪ್ರಬಲವಾದ ಸಾಕ್ಷ್ಯಗಳು ಲಭಿಸಿವೆ. ತಾಂತ್ರಿಕ ಸಾಕ್ಷ್ಯಧಾರ, ಎಫ್‌ಎಸ್‌ಎಲ್ ವರದಿ ಸಹಿತ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳು ಮುಂದಾಗಿದ್ದಾರೆ.

ಕೊಲೆ ಪ್ರಕರಣದ ಆರಂಭಿಕ ತನಿಖೆಯಲ್ಲಿ ಲಭಿಸಿದ ಸಾಕ್ಷ್ಯಾಧಾರದಂತೆ ಪವಿತ್ರಾಗೌಡ ಅವರನ್ನು ಮೊದಲನೇ ಆರೋಪಿ, ದರ್ಶನ್ ಅವರನ್ನು ಎರಡನೇ ಆರೋಪಿ ಮಾಡಿ ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿ ಸಲ್ಲಿಸಲಾಗಿತ್ತು. ಪ್ರದೂಷ್ ಐ-ಫೋನ್‌ನಲ್ಲಿ ಎರಡು ವಿಡಿಯೊಗಳು ಮರುಸಂಗ್ರಹವಾಗಿದ್ದು, ಇವು ದರ್ಶನ್ ಪಾತ್ರದ ಬಗ್ಗೆ ಪ್ರಬಲ ಸಾಕ್ಷ್ಯವಾಗಿವೆ. ಈಗ ದರ್ಶನ್ ಅವರನ್ನೇ ಮೊದಲ ಆರೋಪಿಯಾಗಿಸಿ ಆರೋಪ ಪಟ್ಟಿ ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಪವಿತ್ರಾ ಜಾಮೀನು ಅರ್ಜಿ ಮುಂದಕ್ಕೆ

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಜೈಲು ಪಾಲಾಗಿರುವ ನಟಿ ಪವಿತ್ರಾ ಗೌಡ ಕೆಲ ದಿನಗಳ ಹಿಂದೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಗುರುವಾರ ಅರ್ಜಿ ವಿಚಾರಣೆಗೆ ಬಂದಿತ್ತು. ಈ ಸಂದರ್ಭದಲ್ಲಿ ಜಾಮೀನು ನೀಡದಂತೆ ಪೊಲೀಸರ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದರು. ನ್ಯಾಯಾಧೀಶ ಜೈಶಂಕರ್ ಜಾಮೀನು ಅರ್ಜಿಯನ್ನು ಆ.27ಕ್ಕೆ ಮುಂದೂಡಿದರು. ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ತನ್ನದೇನೂ ಪಾತ್ರವಿಲ್ಲ. ನನಗೆ ಮಸೇಜ್ ಬಂದಿದ್ದನ್ನು ದರ್ಶನ್‌ಗೆ ತಿಳಿಸಿದ್ದೆ. ಆನಂತರ ಏನಾಯಿತು ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲವೆಂದು ಪವಿತ್ರಾ ಗೌಡ ಪರ ವಕೀಲರು ವಾದ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಾರಿದೀಪೋಕ್ತಿ

ನಾವೆಲ್ಲರೂ ತಪ್ಪುಗಳನ್ನು ಮಾಡುತ್ತೇವೆ. ಅದರ ಕುರಿತು ಪರಾಮರ್ಶೆ ಮಾಡುವುದರಲ್ಲಿಯೇ ಕಾಲ ಕಳೆಯಬಾರದು. ಕಳೆದು ಹೋದ ದಿನಗಳು ನೀವ್ಯಾರು ಎಂಬುದನ್ನು ನಿರ್ಧರಿಸಲಾರವು. ತಪ್ಪಿನಿಂದ ಪಾಠ ಕಲಿತು, ಮುಂದಕ್ಕೆ ಹೆಜ್ಜೆ ಹಾಕಿ. ಭವಿಷ್ಯದ ದಿನಗಳ ಬಗ್ಗೆ ಗಮನಹರಿಸಿ.

ವಕ್ರತುಂಡೋಕ್ತಿ

ಹೊರಗಿನ ಗಾಯಕ್ಕೆ ಆಲ್ಕೋಹಾಲನ್ನು ಹಚ್ಚಿ ತಿಕ್ಕಿದರೂ ಆದೀತು. ಆದರೆ ಆಂತರಿಕ ಗಾಯಕ್ಕೆ ಅದನ್ನು ಕುಡಿಯಲೇಬೇಕು.

ಸೆಪ್ಟೆಂಬರ್‌ನಲ್ಲಿ ಜನಗಣತಿ ಶುರು

ಬೆಂಗಳೂರು: 2024ರ ಸೆಪ್ಟೆಂಬರ್‌ನಲ್ಲಿ ಜನಗಣತಿ ಕಾರ್ಯ ಆರಂಭವಾಗಲಿದೆ ಎನ್ನಲಾಗಿದೆ. 2021ರಲ್ಲೇ ನಡೆಯಬೇಕಿದ್ದ ಜನಗಣತಿ ಕೋವಿಡ್ ಕಾರಣದಿಂದ ಮೂರೂವರೆ ವರ್ಷ ತಡವಾಗಿದೆ. ಜನಗಣತಿಗೆ 18 ತಿಂಗಳ ಅಗತ್ಯವಿದೆ ಎಂದು ಕೇಂದ್ರ ಸರಕಾರವು ಹೇಳಿದೆ.

ಎನ್‌ಸಿ-ಕಾಂಗ್ರೆಸ್ ಮೈತ್ರಿ ಅಂತಿಮ

ಶ್ರೀನಗರ: ಮುಂಬರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಕೇಂದ್ರಾಡಳಿತ ಪ್ರದೇಶದ ಎಲ್ಲ 90 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಅಂತಿಮಗೊಂಡಿದೆ ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ತಿಳಿಸಿದ್ದಾರೆ.

ನೀರಿನ ದರ ಹೆಚ್ಚಳ ಅನಿವಾರ್ಯ: ಡಿಕೆ

ಬೆಂಗಳೂರು: ಯಾವುದೇ ಆಕ್ಷೇಪ ವ್ಯಕ್ತಪಡಿಸಿದರೂ ನಗರದಲ್ಲಿ ನೀರಿನ ದರ ಏರಿಕೆ ಮಾಡುತ್ತೇವೆ. ಹಾಗೆಂದು, ಎಲ್ಲರಿಗೂ ನೀರಿನ ದರ ಹೆಚ್ಚಳ ಮಾಡುವುದಿಲ್ಲ, ಎಷ್ಟು ಏರಿಕೆ ಮಾಡಬೇಕೆಂದು ಇನ್ನೂ ನಿರ್ಧರಿಸಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಅಲ್‌ಖೈದಾ ಜಾಲ ಭೇದಿಸಿದ ಪೊಲೀಸ್

ದೆಹಲಿ: ವಿವಿಧೆಡೆ ಹರಡಿಕೊಂಡಿರುವ ಅಂತಾರಾಷ್ಟ್ರೀಯ ಉಗ್ರ ಸಂಘಟನೆ 'ಅಲ್‌ಖೈದಾ'ದ ಜಾಲವನ್ನು ದೆಹಲಿ ಪೊಲೀಸರು ಭೇದಿಸಿದ್ದಾರೆ. ಉತ್ತರ ಪ್ರದೇಶ, ಜಾರ್ಖಂಡ್, ರಾಜಸ್ಥಾನದಿಂದ 14 ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ.

ಟಿವಿಕೆ ಪಕ್ಷದ ಧ್ವಜ, ಚಿಹ್ನೆ ಅನಾವರಣ

ಚೆನ್ನೈ: ತಮಿಳು ಚಿತ್ರರಂಗದ ಜನಪ್ರಿಯ ನಟ, ನಿರ್ಮಾಪಕ 'ಇಳಯ ದಳಪತಿ' ಬಿರುದಿನ ವಿಜಯ್ ಅವರು ಗುರುವಾರ ಬೆಳಗ್ಗೆ ತಮ್ಮ ತಮಿಳಗ ವೇಟ್ರಿ ಕಳಗಂ(ಟಿವಿಕೆ) ರಾಜಕೀಯ ಪಕ್ಷದ ಧ್ವಜ ಮತ್ತು ಚಿಹ್ನೆಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದಾರೆ.

ಗೌರಿ ಹತ್ಯೆ ಆರೋಪಿ ಜಾಮೀನಿಗಿಲ್ಲ ತಡೆ

ಬೆಂಗಳೂರು: ಗೌರಿ ಲಂಕೇಶ್ ಹತ್ಯೆ ಆರೋಪಿ ಮೋಹನ್ ನಾಯಕ್‌ಗೆ ಕರ್ನಾಟಕ ಹೈಕೋರ್ಟ್ ನೀಡಿರುವ ಜಾಮೀನು ರದ್ದು ಮಾಡಲು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ, ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠ ನಿರಾಕರಿಸಿದೆ. 2023ರ ಡಿಸೆಂಬರ್‌ನಲ್ಲಿ ಮೋಹನ್ ನಾಯಕ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ್ದನ್ನು ಕವಿತಾ ಲಂಕೇಶ್ ಪ್ರಶ್ನಿಸಿದ್ದರು.

ಫನ್‌ತರಂಗ

- ರಘುಪತಿ ಶೃಂಗೇರಿ -



ಸಮಾಚಾರ ಸಣ್ಣದಲ್ಲ

ನವಜಾತ ಶಿಶುವಿನ ಪೋಷಕರ ಪತ್ತೆಗೆ ಮನವಿ

ಯಾದಗಿರಿ: ಹುಣಸಗಿ ತಾಲೂಕಿನ ಗೆದ್ದಲಮರಿ ಗ್ರಾಮದಲ್ಲಿ ಆ.19 ರಂದು ಒಂದು ದಿನದ ನವಜಾತ ಹೆಣ್ಣು ಶಿಶುವಿನ ಸಿಕ್ಕಿದ್ದು, ಪೋಷಕರ ಪತ್ತೆಗೆ ಮನವಿ ಮಾಡಲಾಗಿದೆ ಎಂದು ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲೆಯ ಹುಣಸಗಿ ತಾಲೂಕಿನ ಗೆದ್ದಲಮರಿ ಗ್ರಾಮದಲ್ಲಿ ಒಂದು ದಿನದ ನವಜಾತ ಹೆಣ್ಣು ಶಿಶು ಸಿಕ್ಕಿದ್ದು, ಈ ಶಿಶುವಿನ ಪಾಲಕರ ಪತ್ತೆಗಾಗಿ ಬಾಲ ನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯಿದೆ 2015 ಅನ್ವಯ ಪತ್ರಿಕಾ ಪ್ರಕಟಣೆ ನೀಡಬೇಕಾಗಿರುವುದರಿಂದ ಹಾಗೂ ವಾರಸುದಾರರು (ಪೋಷಕರು) ಯಾರು ಪತ್ತೆಯಾಗದಿದ್ದಾಗ ಈ ಕಾಯಿದೆ ಅಡಿ ಮಗುವಿನ ಯಾರು ವಾರಸುದಾರರು, ಪೋಷಕರು ಇಲ್ಲವೆಂದು ಭಾವಿಸಿ ದತ್ತು ಮುಕ್ತ ಆದೇಶ ನೀಡಲು ಅವಶ್ಯವಿರುವುದರಿಂದ ಈ ಮಗುವಿಗೆ ಪ್ರಸ್ತುತ 4 ದಿನಗಳಾಗಿದ್ದು, ಈ ನವಜಾತ ಹೆಣ್ಣು ಶಿಶುವಿನ ವಾರಸುದಾರರು, ಪೋಷಕರು ಯಾರಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 60 ದಿನಗಳ ಒಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಲು ಕೋರಿದೆ.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಬೀದರ: 2024-25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಾದ ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆ ಹಾಗೂ ಉದ್ಯೋಗಿನಿ ಯೋಜನೆಗಳಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಹತ್ತಿರದ ಬಾಪೂಜಿ ಸೇವಾ ಕೇಂದ್ರ, ಗ್ರಾಮ್ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಆ. 21 ರಿಂದ ಸೆಪ್ಟೆಂಬರ್ 21 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಲೂರ ಬೀದರ ಜಿಲ್ಲೆ ಹಾಗೂ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ಇಲಾಖೆ ಮೈಲೂರ ಬೀದರ ಜಿಲ್ಲೆ ಹಾಗೂ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಚೇರಿ ಮೈಲೂರ ಬೀದರ ಅವರಿಗೆ ಸಂಪರ್ಕಿಸಬೇಕೆಂದು ಬೀದರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಣೆಯಾದ ಮಹಿಳೆ ಪತ್ತೆಗಾಗಿ ಮನವಿ

ಬೀದರ: ಭಾಲ್ಕಿ ತಾಲೂಕಿನ ಬಳತ (ಕೆ) ಗ್ರಾಮದ (ಸಧ್ಯ ದತ್ತ ನಗರ ಭಾಲ್ಕಿ) ನಿವಾಸಿಯಾದ ಪದ್ಮಾವತಿ ಗಂ.ಶಿವಾಜಿ ಬಿರಾದಾರ (54) ಅವರು ಜುಲೈ 27 ರಂದು ಮನೆಯಿಂದ ಹೊರಗಡೆ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾದ ಮಹಿಳೆಯು 5 ಅಡಿ 4 ಇಂಚ್ ಎತ್ತರ ಇದ್ದು, ಸಾಧಾರಣ ಮೈಕಟ್ಟು ದುಂಡು ಮುಖ, ಗೋಧಿ ಮೈಬಣ್ಣ ಹೊಂದಿದ್ದು, ಮೈಮೇಲೆ ಕೆಂಪು ಬಣ್ಣದ ಪೋಲಕಾ, ಕೆಂಪು ಬಣ್ಣದ ಸೀರೆ ಧರಿಸಿರುತ್ತಾರೆ. ಈ ಕಾಣೆಯಾದ ಮಹಿಳೆ ಬಗ್ಗೆ ಯಾರಿಗಾದರೂ ಮಾಹಿತಿ ಸಿಕ್ಕಲ್ಲಿ ಭಾಲ್ಕಿ ನಗರ ಪೊಲೀಸ್ ಠಾಣೆಗೆ ಸಂಪರ್ಕಿಸುವಂತೆ ಭಾಲ್ಕಿ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸಪೆಕ್ಟರ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ವ್ಯಕ್ತಿ ಕಾಣೆ: ಪತ್ತೆಗಾಗಿ ಮನವಿ

ಬೀದರ: ಭಾಲ್ಕಿ ತಾಲೂಕಿನ ಡೋಣಗಾಪೂರ ಗ್ರಾಮದ ನಿವಾಸಿಯಾದ ಮಹಾದೇವಪ್ಪಾ ತಂ. ವೀರಪ್ಪಾ ಚಿದ್ರೆ ಅವರು ಆ.12 ರಂದು ಮನೆಯಿಂದ ಹೊರಗಡೆ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾದ ಮಹಿಳೆಯು 5.8 ಎತ್ತರ , ಸಾಧಾರಣ ಮೈಕಟ್ಟು ದುಂಡು ಮುಖ, ಗೋಧಿ ಮೈಬಣ್ಣ , ಮೈಮೇಲೆ ಬಿಳಿ ಬಣ್ಣದ ಫುಲ್ ಶರ್ಟ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಈ ಕಾಣೆಯಾದ ಮನುಷ್ಯನ ಬಗ್ಗೆ ಯಾರಿಗಾದರೂ ಮಾಹಿತಿ ಸಿಕ್ಕಲ್ಲಿ ಭಾಲ್ಕಿ ನಗರ ಪೊಲೀಸ್ ಠಾಣೆಗೆ ಸಂಪರ್ಕಿಸುವಂತೆ ಭಾಲ್ಕಿ ನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸಪೆಕ್ಟರ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿ+ ಸೋಮವಾರ

{ ಡಿ.ಕೆ.ಶಿವಕುಮಾರ } ಡಿಸಿಎಂ

ಮುಡಾ ವಿಚಾರದಲ್ಲಿ ಕಾನೂನು ಹೋರಾಟ ಮಾಡುತ್ತೇವೆ, ಕಾನೂನು ಬಾಹಿರವಾಗಿ ಅನುಮತಿ ನೀಡಿರುವುದರ ವಿರುದ್ಧ ಹೋರಾಟ ಮಾಡುತ್ತೇವೆ. ಮುಖ್ಯಮಂತ್ರಿ ವಿರುದ್ಧ ಸಂಚು ನಡೆಯುತ್ತಿದೆ. 'ಇಂಡಿಯಾ ಮೈತ್ರಿಕೂಟದ ಜತೆ ಸೇರಿ ಪ್ರತಿಭಟನೆ ನಡೆಸುವ ಕುರಿತು ತೀರ್ಮಾನಿಸುತ್ತೇವೆ.

ಅಂಬೇಡ್ಕರ್ ಪಿಯು ಕಾಲೇಜು ಸಂಸ್ಥಾಪನಾ ದಿನಾಚರಣೆ

ಬಸವ ಕಲ್ಯಾಣ ಅಭಿವೃದ್ಧಿಗೆ ಬದ್ಧ

ಬಸವಕಲ್ಯಾಣ: ಬಸವಕಲ್ಯಾಣ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ, ಕ್ಷೇತ್ರದ ಜನರ ಒಳಿತಿಗಾಗಿ ಸದಾ ಬದ್ಧವಾಗಿರುವುದಾಗಿ ವಿಧಾನ ಪರಿಷತ್ ಸದಸ್ಯ ಎಂ.ಜಿ. ಮುಳೆ ಹೇಳಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಬಸವ ಶಿಕ್ಷಣ ಸಂಸ್ಥೆಯ ಡಾ.ಅಂಬೇಡ್ಕರ್ ಸ್ವತಂತ್ರ್ಯ ಪಿಯು ಕಾಲೇಜಿನ 38ನೇ ಸಂಸ್ಥಾಪನಾ ದಿನ, ಪ್ರಶಸ್ತಿ ಪ್ರದಾನ, ದ್ವಿತೀಯ ಪಿಯುಸಿಯಲ್ಲಿ ಅಗ್ರಶ್ರೇಣಿ ಪಾಸಾದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಡಾ.ತಾತ್ಯಾರಾವ ಕಾಂಬಳೆ ನಾಡು ಕಂಡ ಅಪರೂಪದ ವ್ಯಕ್ತಿ. ನಾನು ಅವರ ಶಿಷ್ಯ. ಅವರ ನಡೆ-ನುಡಿಯಿಂದ ವಿದ್ಯಾರ್ಥಿ ದೆಸೆಯಿಂದಲೇ ಪ್ರೇರಣೆ ಪಡೆದಿದ್ದೇನೆ ಎಂದು ನುಡಿದರು. ಬೀದರ್ ಜಿಲ್ಲೆ ಶರಣರ ನಾಡಾಗಿದ್ದು, ಸಮಾನತೆ ಸಾರಿದ ಪುಣ್ಯಕ್ಷೇತ್ರದಲ್ಲಿ ಬಸವಣ್ಣ ನವರ ಹೆಸರಿನಲ್ಲಿ ಸಂಸ್ಥೆ ಸ್ಥಾಪಿಸಿ ಇದರಡಿ ಡಾ.ಅಂಬೇಡ್ಕರ್ ಕಾಲೇಜು ಆರಂಭಿಸಿರುವ ಕೀರ್ತಿ ಡಾ. ಕಾಂಬಳೆ ಅವರಿಗೆ ಸಲ್ಲುತ್ತದೆ. ಸಂಸ್ಥೆಯಲ್ಲಿ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಚಿಂತಕ ಡಾ. ತಾತ್ಯಾರಾವ ಕಾಂಬಳೆ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜೀವನ ಮತ್ತು ಚಿಂತನೆಯ ಕೃತಿಗಳನ್ನು ಅಧ್ಯಯನ ಮೂಲಕ ಚಾರಿತ್ರ್ಯ ಉತ್ತಮಪಡಿಸಿಕೊಳ್ಳಬೇಕು. ಪ್ರತಿಯೊಬ್ಬ ನಾಗರಿಕ ರಾಷ್ಟ್ರದ ಹಿತರಕ್ಷಣೆ, ಐಕ್ಯತೆ, ಅಖಂಡತೆ ಮತ್ತು ಸಾಮಾಜಿಕ ಸಾಮರಸ್ಯ ಕಾಪಾಡಲು ಬದ್ಧನಾಗಿರಬೇಕು ಎಂದು ಸಲಹೆ ನೀಡಿದರು. ಪಿಯು ಡಿಡಿ ಚಂದ್ರಕಾಂತ ಎಂ.ಶಹಾಬಾದಕರ್ ಮಾತನಾಡಿ, ವಿದ್ಯಾರ್ಥಿಗಳು ಆಕರ್ಷಿತರಾಗದೆ ದುಶ್ಚಟಗಳಿಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು. ಹೊಟ್ಟೆಪಾಡಿಗಾಗಿ ಮಾತ್ರವಲ್ಲದೆ ಜ್ಞಾನಕ್ಕಾಗಿ ಶಿಕ್ಷಣ ಪಡೆಯಲು ಪರಿಶ್ರಮಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ರಾಷ್ಟ್ರದ ಉತ್ತಮ ನಾಗರಿಕನಾಗಿ ಮುಂದಿನ ಪೀಳಿಗೆಗೆ ಮಾದರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಬಸವ ಶಿಕ್ಷಣ ಸಂಸ್ಥೆಯ ಡಾ.ಅಂಬೇಡ್ಕರ್ ಸ್ವತಂತ್ರ್ಯ ಪಿಯು ಕಾಲೇಜಿನ 38ನೇ ಸಂಸ್ಥಾಪನಾ ದಿನ, ಪ್ರಶಸ್ತಿ ಪ್ರದಾನ, ದ್ವಿತೀಯ ಪಿಯುಸಿಯಲ್ಲಿ ಅಗ್ರಶ್ರೇಣಿ ಪಾಸಾದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿದರು.

ನಾಲ್ವರಿಗೆ ಡಾ. ಅಂಬೇಡ್ಕರ್ ರತ್ನ ಪ್ರಶಸ್ತಿ ಪ್ರದಾನ

ಡಾ.ಅಂಬೇಡ್ಕರ್ ಸ್ವತಂತ್ರ್ಯ ಪಿಯು ಕಾಲೇಜಿನ ಸಂಸ್ಥಾಪನಾ ದಿನ ನಿಮಿತ್ತ ಎಂಎಲ್‌ಸಿ ಎಂ.ಜಿ. ಮುಳೆ, ಚಿಂತಕ ಡಾ. ತಾತ್ಯಾರಾವ ಕಾಂಬಳೆ, ಪಿಯು ಡಿಡಿ ಚಂದ್ರಕಾಂತ ಶಹಾಬಾದಕರ್ ಮತ್ತು ಮುಖಂಡ ರವೀಂದ್ರ ಗಾಯಕವಾಡ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಾಗೂ ದಿಲೀಪ ಶಿಂಧೆ, ಸುರೇಶ ಅಕ್ಕಣ್ಣ, ಲಕ್ಷ್ಮಣರಾವ ಗುಪ್ತಾ, ಡಾ.ಕಾಶೀನಾಥ ಚಲ್ವಾ, ತಿಪ್ಪಣ್ಣ ಶಿವಪುರೆ, ನರಸಿಂಗರೆಡ್ಡಿ ಗದಲೆಗಾಂವ, ಮಾಣಿಕ ಆರ್ ಭುರೆ, ಮಾರ್ತಂಡ ಜೋಶಿ, ಉದಯಕುಮಾರ ಮುಳೆ, ಪಿಎಸ್ಐ ಜಯಶ್ರೀ ಹೊಡಲ್, ಶಿವಾಜಿ ಶಿಂದೆ, ನಾಗನಾಥ ಗಜರೆ, ವಿನೋದ ಜಾಧವ್, ಮಂಜು ಶಿಂದೆ, ವಿಲಾಸ ಜಾಧವ್, ಸುಮೇದ ಗಜರೆ, ಗೋಪಾಳ ಗಜರೆ ಸೇರಿ ವಿವಿಧ ಕ್ಷೇತ್ರದ 38 ಜನರಿಗೆ ವಿಶೇಷ ಸನ್ಮಾನ ಮಾಡಲಾಯಿತು, ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ ಅಗ್ರಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

ಸಂವಿಧಾನ ಸಂರಕ್ಷಣಾ ಸಮಿತಿ ಜಿಲ್ಲಾ ಕಾರ್ಯದರ್ಶಿ ಅನೀಲಕುಮಾರ ಬೆಲ್ದಾರ, ಸನ್ಮಾನಿತರ ಪರವಾಗಿ ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿದರು.

ಅಂಬೇಡ್ಕರ್ ಯುಥ್ ಕ್ಲಬ್ ಅಧ್ಯಕ್ಷ, ಮುಖಂಡ ರವೀಂದ್ರ ಗಾಯಕವಾಡ, ಪೌರಾಯುಕ್ತ ರಾಜು ಬಣಕಾರ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ದಿಲೀಪಕುಮಾರ ಉತ್ತಮ, ಪ್ರಮುಖರಾದ ಹಣಮಂತ ಕಾಂಬಳೆ, ನರಸಿಂಗರಾವ ಕಾಂಬಳೆ, ಪ್ರಹ್ಲಾದರಾವ್ ಮೋರೆ, ಅಬ್ದುಲ್ ರಹಮಾನ್ ಹಾಜಿ, ಮಿರ್ಜಾ ಅನ್ವರ್ ಬೇಗ್, ಸದಾನಂದ ಭೋಸ್ಲೆ ಇತರರಿದ್ದರು.

ಸುಧಾರಣೆ ಹರಿಕಾರ

ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಯಾದಗಿರಿ: ಸಾಮಾಜಿಕ ಸುಧಾರಣೆಯ ಕ್ರಾಂತಿಗೆ ಕಾರಣರಾದ ನಾರಾಯಣಗುರು ಅವರು ಸಮಾಜ ಸುಧಾರಕರಾಗಿ ಒಂದು ಜಾತಿ, ಧರ್ಮದ ಗುರುವಲ್ಲ. ಅವರು ಲೋಕಗುರುವಾಗಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ ಅವರು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಜಯಂತ್ಯೋತ್ಸವ ಸಮಿತಿ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಓರ್ವ ಸಮಾಜ ಸುಧಾರಕರಾಗಿ ಅವರನ್ನು ಕಂಡಾಗ ಅವರು ಒಂದು ಜಾತಿ, ಧರ್ಮದ ಗುರುವಲ್ಲ. ಅವರು ಲೋಕ ಗುರು. ಅವರು ಹೇಳಿದ ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎನ್ನುವುದು ಮನುಷ್ಯ ಧರ್ಮದ ಸಾರ. ಚಾತುರ್ವರ್ಣ ವ್ಯವಸ್ಥೆಯ ಕರಾಳ ಕತೆಯ ವಿರುದ್ಧದ ಹೋರಾಟವೇ ನಾರಾಯಣ ಗುರುಗಳ ಸಮಾಜ ಸುಧಾರಣೆ ಎಂದು ಹೇಳಿದರು.

ಅಜಲಾಪೂರ ಶ್ರೀ ಶಂಕರಲಿಂಗ ಶ್ರೀ ಗಳು ಸಾನ್ನಿಧ್ಯವಹಿಸಿದ್ದರು.

ಆರ್ಯ ಈಡಿಗ ಸಮಾಜದ ಜಿಲ್ಲಾಧ್ಯಕ್ಷರಾದ ಮಹೇಂದ್ರ ಅನಪೂರ ಅಧ್ಯಕ್ಷತೆವಹಿಸಿದ್ದರು.ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ಉತ್ತರಾದೇವಿ ಮಠಪತಿ, ರಾಜ್ಯ ಆರ್ಯ ಈಡಿಗ ಸಮಾಜದ ಮುಖಂಡರಾದ ನಾಗರಾಜಗೌಡ ಮಾನಸಗಲ್, ಆರ್ಯ ಈಡಿಗ ಸಮಾಜದ ಜಿಲ್ಲಾ ಉಪಾಧ್ಯಕ್ಷ ದೇವಪ್ಪಗೌಡ ರಾಚನಹಳ್ಳಿ, ಜಿಲ್ಲಾ ಕಾರ್ಯಾಧ್ಯಕ್ಷ ಸೂರ್ಯಕಾಂತಗೌಡ ಕಟ್ಟಿಮನಿ, ಆರ್ಯ ಈಡಿಗ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಗುಂಡಗುರ್ತಿ, ಜಿಲ್ಲಾ ಖಜಾಂಚಿ ವೆಂಕಟೇಶ ಬದ್ದೇಪಲ್ಲಿ, ಯುವ ಘಟಕ ಜಿಲ್ಲಾಧ್ಯಕ್ಷ ಬಾಲಾಜಿ ಪೊಲೀಸ್, ಯುವ ಘಟಕ ತಾಲೂಕು ಅಧ್ಯಕ್ಷ ರಾಘವೇಂದ್ರ ಕಲಾಲ ಸೈದಾಪುರ, ಪ್ರಮುಖರಾದ ನಗರಸಭೆ ಮಾಜಿ ಸದಸ್ಯರಾದ ಪ್ರಭಾವತಿ ಕಲಾಲ, ಮಲ್ಲಿಕಾರ್ಜುನ ಪೊಲೀಸ್, ಬಸವಲಿಂಗಪ್ಪ ಕಲಾಲ ಹಾಲಗೇರಾ, ವಕೀಲರಾದ ಬಸವರಾಜ ಕಲಾಲ, ಶರಣು ಕಲಾಲ ಮಾಲಹಳ್ಳಿ, ಪ್ರಕಾಶ ಬಳಿಚಕ್ರ, ಭೀಮಯ್ಯ ಹಳಿಗೇರಾ, ಶಾಂತಗೌಡ ಹೆಗ್ಗಣಗೇರಿ ಇತರರಿದ್ದರು.

ಸಿಎಂ ರಾಜೀನಾಮೆಗೆ ಒತ್ತಾಯ

ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಬೀದರ: ರಾಜ್ಯದಲ್ಲಿ ಕಾಂಗ್ರೆಸ್‌ಗರಿಂದ ಅವಮಾನ ಮಾಡಲಾಗುತ್ತಿದೆ. ಮುಡಾ ಅಕ್ರಮಗಳಿಗೆ ಸಂಬಂಧಿಸಿದಂತೆ ಸಂವಿಧಾನ ಬದ್ಧ ಅಧಿಕಾರ ಬಳಸಿ ರಾಜ್ಯಪಾಲರು ತನಿಖೆ ನಡೆಸಲು ಅನುಮತಿ ನೀಡಿದ್ದಾರೆ. ಅವರ ವಿರುದ್ಧವೇ ಪ್ರತಿಭಟನೆ ನಡೆಸುವ ಮೂಲಕ ಅವಮಾನ ಮಾಡಿದ್ದಾರೆ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಭಟನಾಕಾರರು ಕಿಡಿಕಾರಿದರು. ಅನುಭವಿ ರಾಜಕಾರಿಣಿ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಅಗೌರವ ತೋರುವ ಹೇಳಿಕೆ ನೀಡಿದರು.

ಪ್ರತಿಭಟನೆ ನಡೆಸುವ ಮೂಲಕ ದಲಿತ ಸಮುದಾಯಕ್ಕೆ ಮಾಡುವ ಅಪಮಾನ ಇದಾಗಿದೆ. ಸಿಎಂ ಸಿದ್ದರಾಮಯ್ಯ ಅವರು ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ರಾಜ್ಯಪಾಲರ ಮೇಲೆ ಗೂಬೆ ಕೂರಿಸುವ ಷಡ್ಯಂತ್ರ ಕಾಂಗ್ರೆಸ್ ಮಾಡುತ್ತಿದೆ. ತನಿಖೆಗೆ ಸಹಕರಿಸಿ ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ರಾಜ್ಯಪಾಲರಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಮುಖಾಂತರ ಸಲ್ಲಿಸಿದರು. ಪ್ರಾಸಿಕ್ಯೂಷನ್ ಅನುಮತಿ ನೀಡಿರುವುದು ಬಿಜೆಪಿ ಮುಖಂಡರು ಸ್ವಾಗತಿಸುತ್ತೇವೆ. ರಾಜ್ಯದಲ್ಲಿ ಅಶಾಂತಿ, ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿರುವ ಸರಕಾರವನ್ನು ವಜಾಗೊಳಿಸಬೇಕು ಎಂದು ರಾಜ್ಯಪಾಲರಿಗೆ ಬರೆದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್. ಔರಾದ ಶಾಸಕ ಪ್ರಭು ಚವ್ಹಾಣ. ಬೀದರ ದಕ್ಷಿಣ ಶಾಸಕ ಶೈಲೇಂದ್ರ ಬೆಲ್ದಾಳೆ. ಬಸವಕಲ್ಯಾಣ ಶಾಸಕ ಶರಣು ಸಲಗರ. ಹುಮನಾಬಾದ ಶಾಸಕ ಸಿದ್ದಲಿಂಗಪ್ಪ ಪಾಟೀಲ್. ಮುಖಂಡರಾದ ರಘುನಾಥ ಮಲ್ಕಾಪೂರೆ. ಈಶ್ವರಸಿಂಗ್ ಠಾಕೂರ್. ಸೇರಿದಂತೆ ಪಕ್ಷದ ಮುಖಂಡರು ಗಣ್ಯರು. ಪದಾಧಿಕಾರಿಗಳು ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

> **ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ವ್ಯಕ್ತಿಗಳ ವಿರುದ್ಧ ಹಾಗೂ ಪೂರ್ವ ನಿಯೋಜಿತ ಪ್ರತಿಭಟನೆ ನಡೆಸುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಬೇಕು. ರಾಜ್ಯದಲ್ಲಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ವಾಲ್ಮೀಕಿ ನಿಗಮದ ಹಣ ಕುರಿತು ಸಮಗ್ರ ತನಿಖೆಯಾಗಬೇಕು.**
> **-ಸೋಮನಾಥ ಪಾಟೀಲ್,** ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷ

ಅಕ್ರಮ ಅಕ್ಕಿ ಸಂಗ್ರಹಿಸಿರುವ ಮೇಲೆ ಕ್ರಮಕ್ಕೆ ಒತ್ತಾಯ

ಜಾಣ ಕುರಡರಂತಿರುವ ಅಧಿಕಾರಿಗಳು | ಪಡಿತರ ಸಾಗಣೆ ಅಧಿಕಾರಿಗಳ ಕೈವಾಡ

ನಮ್ಮ ವರದಿ **ಪರಿಣಾಮ**

ಸುರಪುರ: ನಗರದ ವಸತಿ ನಿಲಯಗಳಲ್ಲಿ ರಾಜಾರೋಷವಾಗಿ ಹಾಡು ಹಗಲೇ ವಸತಿ ನಿಲಯಗಳ ವಿದ್ಯಾರ್ಥಿಗಳ ಊಟಕ್ಕೆ ಬಳಸಬೇಕಾಗಿದ್ದ ಪಡಿತರ ಧಾನ್ಯಗಳಾದ ಅಕ್ಕಿ, ಬೇಳೆ ಸೇರಿದಂತೆ ಇನ್ನಿತರ ಪದಾರ್ಥಗಳನ್ನು ಕಳ್ಳ ಸಾಗಾಣಿಕೆ ಮಾಡಿ, ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಜಗ್ಗಜಾಹಿರವಾದರು ಸಹ ಅಧಿಕಾರಿಗಳು ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ ಸಾರ್ವಜನಿಕರು ಆಕ್ರೋಶಕ್ಕೆ ಕಾರಣವಾಗಿದೆ.

ಇಲ್ಲಿನ ಖಾಸಗಿ ಅನುದಾನಿತ ಸಂಸ್ಥೆಗೆ ಸೇರಿದ ವಸತಿ ನಿಲಯಗಳಲ್ಲಿ ಪಡಿತರ ದಾಸ್ತಾನು ಅಕ್ರಮ ಸಾಗಾಟ ನಡೆಯುತ್ತಿದ್ದರು. ಅಧಿಕಾರಿಗಳು ಕಂಡು ಕಾಣದಂತೆ ವರ್ತಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ.

ಅಕ್ಕಿ ಸಾಗಣೆ ಕ್ರಮಕ್ಕೆ ಒತ್ತಾಯ ಎನ್ನುವ ತಲೆಬರಹದಡಿ ವಿಶ್ವವಾಣಿ ಪತ್ರಿಕೆಯಲ್ಲಿ ಸುದ್ದಿಯನ್ನು ಪ್ರಕಟಿಸಲಾಗಿತ್ತು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಪ್ರತಿಕ್ರಿಯಿಸಲು ಕೇಳಿದಾಗ ಅವರು ಸಂಬಂಧಪಟ್ಟ ವಿದ್ಯಾಸಂಸ್ಥೆ ಮತ್ತು ವಸತಿ ನಿಲಯಗಳಲ್ಲಿ ನಡೆದ ಅಕ್ರಮದ ಕುರಿತು ತನಿಖೆ ನಡೆಸುವುದಾಗಿ ಹೇಳಿ ಮತ್ತು ಅಕ್ರಮ ನಡೆದು ವಾರಗಳೇ ಗತಿಸಿದರು ಇಲ್ಲಿಯವರೆಗೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ, ಮಾಹಿತಿ ಪಡೆಯಲು ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ ಈ ಎಲ್ಲ ಬೆಳವಣಿಗೆಗಳು ಅಕ್ಕಿ ಕಳ್ಳರ ಬೆಂಬಲಿಗೆ ಅಧಿಕಾರಿಗಳು ನಿಂತಿದ್ದಾರೆ ಎನ್ನುವ ಅನುಮಾನ ಸಹ ಕೇಳಿಬಂದಿದೆ.

ಅಕ್ರಮಕ್ಕೆ ಸಾಗಾಣಿಕೆಗೆ ಸಂಬಂಧಿಸಿದಂತೆ ಫೋಟೋಸ್, ವೀಡಿಯೋಸ್, ಕಳ್ಳ ಸಾಗಣಿಕೆಯಲ್ಲಿ ತೊಡಗಿದ್ದ ವಾಹನದ ನಂಬರ ಸೇರಿದಂತೆ ಅಗತ್ಯ ದಾಖಲೆಗಳಿದ್ದರೂ ಸಹ ತನಿಖೆಗೆ ಅಧಿಕಾರಿಗಳು ಹಿಂದೇಟು ಹಾಕುತ್ತಿರುವುದಾದರು ಏಕೆ... ? ಅಕ್ರಮದಲ್ಲಿ ಅಧಿಕಾರಿಗಳ ಶಾಮಿಲಾಗಿದ್ದಾರಾ ಎನ್ನುವ ಮುಂತಾದ ಪ್ರಶ್ನೆಗಳು ಕಾಡುತ್ತಿವೆ.

ದಲಿತ, ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸರಕಾರ ಊಟ, ವಸತಿ ವ್ಯವಸ್ಥೆ ಕಲ್ಪಿಸಿದೆ. ಆದರೆ ಧನದಾಹಿಗಳಿಂದ ವಿದ್ಯಾರ್ಥಿಗಳ ಹೊಟ್ಟೆ ಸೇರಬೇಕಾಗಿರುವ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ, ಸಂಬಂಧಪಟ್ಟ ಮೇಲಾಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಈಗಲಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು ಅಕ್ರಮದಲ್ಲಿ ಭಾಗಿಯಾದವರ ಮೇಲೆ ಕ್ರಮ ವಹಿಸುತ್ತಾರೆ ಎಂದು ಕಾದು ನೋಡಬೇಕಿದೆ.

ಅಕ್ರಮ ಪಡಿತರ ಸಾಗಾಟನೆ ಮಾಡುತ್ತಿರುವ ವಾಹನ

ಹಲವು ಸಮಸ್ಯೆಗಳ ನಡುವೆ ವಿದ್ಯಾರ್ಥಿಗಳ ವ್ಯಾಸಂಗ

ಬಡ ಮತ್ತು ದಲಿತ ವಿದ್ಯಾರ್ಥಿಗಳು ಹೆಚ್ಚಾಗಿ ವ್ಯಾಸಂಗ ಮಾಡುತ್ತಿರುವ ವಸತಿ ನಿಲಯಗಳಲ್ಲೆ ಹೆಚ್ಚುವ ಅಕ್ರಮಗಳು ನಡೆಯುತ್ತಿದ್ದು. ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಊಟ, ವಸತಿ ನಿಲಯಗಳಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ ಹೀಗೆ ಹತ್ತು ಹಲವು ಸಮಸ್ಯೆಗಳ ನಡುವೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಪರಿಸ್ಥಿತಿ ಎದುರಾಗಿದೆ.

ಅಕ್ಕಿ ಸಾಗಣೆ: ಕ್ರಮಕ್ಕೆ ಒತ್ತಾಯ
ಕಂಡೂ ಕಾಣದಂತೆ ವರ್ತಿಸುತ್ತಿರುವ ಅಧಿಕಾರಿಗಳು
ಸುರಪುರ: ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸರಕಾರ ಉಚಿತ ಶಿಕ್ಷಣದ ಜತೆಗೆ, ವಸತಿ, ಊಟದ ವ್ಯವಸ್ಥೆ ಕಲ್ಪಿಸಿದೆ ಆದರೆ ಅಧಿಕಾರಿಗಳ ಧನ ದಾಹದಿಂದ ವಿದ್ಯಾರ್ಥಿಗಳ ಹೊಟ್ಟೆ ಸೇರಬೇಕಾಗಿರುವ ಅಕ್ಕಿ, ಅಕ್ರಮವಾಗಿ ಕಾಳ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎನ್ನುವ ಆರೋಪ ಕೇಳಿ ಬಂದಿದೆ.
ನಗರದ ಲಕ್ಷ್ಮಿಪುರ ಸಮೀಪದಲ್ಲಿ ಟಾಟಾ ಎಸಿ ವಾಹನ ವಸತಿ ನಿಲಯಗಳಿಗೆ ಸೇರಿದೆ ಎನ್ನಲಾದ ಪಡಿತರ ಅಕ್ಕಿ ಸಾಗಾಟವಾಗುತ್ತಿರುವ ಖಚಿತ ಮಾಹಿತಿಯ ಮೇರೆಗೆ ಸ್ಥಳೀಯರು ಪೊಲೀಸ್ ಅಧಿಕಾರಿಗಳೂ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರು ಸಹ ಅಧಿಕಾರಿಗಳು ಸ್ಥಳಕ್ಕೆ ಬಾರದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ದೂರಿದರು.
ಜಿಲ್ಲೆಯಾದ್ಯಂತ ಪಡಿತರ ಅಕ್ರಮದ ಪ್ರಕರಣಗಳು ಆಗಾಗ ನಡೆಯುತ್ತಿದ್ದರು ಸಹ
ಅಕ್ರಮವಾಗಿ ಪಡಿತರ ಸಾಗಾಟ ಮಾಡುತ್ತಿದೆ ಎನ್ನಲಾದ ವಾಹನ ಮತ್ತು ಅಕ್ಕಿ ಮೂಟೆಗಳು
ಬಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಕಾರ ವಸತಿ ನಿಲಯಗಳಿಗೆ ಉಚಿತವಾಗಿ ಅಕ್ಕಿಯನ್ನು ನೀಡುತ್ತಿದೆ, ಆದರೆ ಸುರಪುರ ನಗರ ಮತ್ತು ತಾಲೂಕಿನಾದ್ಯಂತ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಶಾಮೀಲಾಗಿ ಅಕ್ರಮ ಅಕ್ಕಿ ಸಾಗಾಟಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ.

ಅಕ್ರಮ ಅಕ್ಕಿ ಸಾಗಾಣಿಕೆ ತಡೆಯುವಂತೆ ಒತ್ತಾಯಿಸಿ ವಿಶ್ವವಾಣಿ ಪತ್ರಿಕೆಯಲ್ಲಿ ಪ್ರಕಟಿಸಿರುವ ಸುದ್ದಿ

> **ವಸತಿ ನಿಲಯಗಳ ಪಡಿತರ ಸಾಗಾಟ ನಡೆದಿದೆ ಎನ್ನಲಾದ ಖಾಸಗಿ ಸಂಸ್ಥೆಯವರಿಗೆ ನೋಟೀಸ ನೀಡಿರುವೆ, ಮೇಲಾಧಿಕಾರಿಗಳ ಗಮನಕ್ಕೂ ತಂದಿರುವೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು.**
> **-ಡಾ. ಶೃತಿ ಎಂ,** ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಸುರಪುರ

ಅವಧಿಯೊಳಗೆ ಜಾನುವಾರು ಗಣತಿ ಕಾರ್ಯ ಯಶಸ್ವಿ

ಬೀದರ: 21ನೇ ಜಾನುವಾರು ಗಣತಿಯು ತಂತ್ರಜ್ಞಾನ ಮೊಬೈಲ್ ಆ್ಯಪ್ ಬಳಸಿ ಮಾಹಿತಿ ಕಲೆ ಹಾಕಲಾಗುತ್ತಿದೆ. ಬೀದರ ಜಿಲ್ಲೆಯಲ್ಲಿ ಒಟ್ಟು 650 ಹಳ್ಳಿಗಳಿದ್ದು, 186 ವಾರ್ಡಗಳಿವೆ. ಜಿಲ್ಲೆಯಲ್ಲಿ ಒಟ್ಟು ಕುಟುಂಬಗಳ ಸಂಖ್ಯೆ 348228 ಇರುತ್ತದೆ. ಜಿಲ್ಲೆಯಲ್ಲಿ ಒಟ್ಟು 76 ಎಣಿಕೆದಾರರು ಹಾಗೂ 16 ಮೇಲ್ವಿಚಾರಕ ಅಧಿಕಾರಿಗಳು ನಿಗದಿತ ಅವಧಿಯೊಳಗೆ ಗಣತಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ.ಗಿರೀಶ ಬದೋಲೆ ಹೇಳಿದರು.

ಜಿಲ್ಲಾ ಪಂಚಾಯತ್ ಬೀದರ ಹಾಗೂ ಪಶು ವೈದ್ಯ ಮತ್ತು ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಡಿಯಲ್ಲಿ ಹಮ್ಮಿಕೊಂಡಿದ್ದ, 21ನೇ ಜಾನುವಾರು ಗಣತಿ ಯ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತ ನಾಡಿದ ಅವರು, 21ನೇ ಜಾನುವಾರು ಗಣತಿ ಕಾರ್ಯಕ್ರಮವು ರಾಷ್ಟ್ರೀಯ ಪ್ರಮುಖ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರ ಮವು ಸೆಪ್ಟೆಂಬರ್ 2024ರ ಮಾಹೆಯಿಂದ ಡಿಸೆಂಬರ್ 2024ರ ವರೆಗೆ ಒಟ್ಟು4 ತಿಂಗಳ ಅವಧಿಯಲ್ಲಿ ಕೈಗೊಳ್ಳಬೇಕಾಗಿರುತ್ತದೆ.

ಜಾನುವಾರು ಗಣತಿಯ ಮುಖ್ಯ ಉದ್ದೇಶ ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ರೈತಾಪಿ ಸಮುದಾಯಕ್ಕೆ ಪಶು ಸಂಗೋಪನೆ ಒಂದು ಪ್ರಮುಖ ಚಟುವಟಿಕೆಯಾಗಿರುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿ ಪಶು ಸಂಪತ್ತು ಪ್ರಮುಖ ಪಾತ್ರವಹಿಸುತ್ತದೆ. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸರಕಾರದ ಪ್ರಗತಿ ಪರ ಕಾರ್ಯಕ್ರಮಗಳು ಮತ್ತು ಯೋಜನೆ ರೂಪಿಸಲು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬೀದರ ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ನರಸಪ್ಪ ಎ.ಡಿ., ರಾಯಚೂರು ಪಶು ಪಾಲನಾ ಇಲಾಖೆಯ ಜಂಟಿ ನಿರ್ದೇಶಕ (ರಾಜ್ಯ ವಲಯ) ಡಾ.ಕೃಷ್ಣಮೂರ್ತಿ, ಕರ್ನಾಟಕ ಪಶು ವೈದ್ಯರ ಸಂಘ ಬೆಂಗಳೂರಿನ ಅಧ್ಯಕ್ಷ ಡಾ.ಶಿವಶರಣಪ್ಪ ಏಲಗೋಡ, ಬಸವಕಲ್ಯಾಣ ಮುಖ್ಯ ಪಶು ವೈದ್ಯಾಧಿಕಾರಿ ಡಾ.ರವೀಂದ್ರನಾಥ ಜಿ, ಡಾ. ಜಕಿಯುದ್ದಿನ್, ಡಾ.ನಾಗರಾಜ ಕಾಂಗಳೆ ತಾಲೂ ಕಿನ ಪಶು ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

21ನೇ ಜಾನುವಾರು ಗಣತಿಯ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿದರು.

> **ಜಾನುವಾರು ಗಣತಿಯಲ್ಲಿ ವಿವಿಧ ತಳಿಗಳ ಸಾಕುಪ್ರಾಣಿಗಳಾದ ದನ, ಎಮ್ಮೆ, ಕುರಿ,ಮೇಕೆ, ಹಂದಿ, ಕುದುರೆ, ಒಂಟೆ ನಾಯಿ, ಇತ್ಯಾದಿ, ಕುಕ್ಕುಟಗಳಾದ ಕೋಳಿ,ಟರ್ಕಿ, ಬಾತುಕೋಳಿ, ಇತರೆ ಕೋಳಿಗಳ ಜತೆಗೆ ಪಶು ಪಾಲನಾ ವಲಯದಲ್ಲಿ ಉಪಯೋಗಿಸುವ ಯಂತ್ರೋಪಕರಣಗಳ ಬಗ್ಗೆ ಮತ್ತು ಮೀನುಗಾರಿಕೆ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಬೇಕಾಗಿರುತ್ತದೆ.**
> **-ಡಾ.ಗಿರೀಶ ಬದೋಲೆ,** ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ

ಆ್ಯಪ್ ಬಳಸಿಕೊಂಡು ಜಾನುವಾರು ಗಣತಿ

ಯಾದಗಿರಿ: ಆ್ಯಪ್ ಆಧರಿಸಿ ಜಾನುವಾರು ಗಣತಿ 21ನೇ ಜಾನುವಾರು ಗಣತಿಯು ಸೆಪ್ಟೆಂಬರ್ 1 ರಿಂದ ದೇಶಾದ್ಯಂತ ಆರಂಭಗೊಂಡು ಡಿಸೆಂಬರ್ 31ರ ವರೆಗೆ ಮುಕ್ತಾಯವಾಗಿದೆ. ಇದರ ಭಾಗವಾಗಿ ಪುಸ್ತಕದಲ್ಲಿ ಗಣತಿ ಮಾಹಿತಿ ನಮೂದಿಸುತ್ತಿದ್ದು, ಗಣತಿದಾರರು ಈ ಸಾರಿ ಮೊದಲ ಬಾರಿಗೆ ಸ್ಮಾರ್ಟ್ ಫೋನ್ ಬಳಸಿ ಮನೆ ಮನೆಗೆ ತೆರಳಿ ಗಣತಿಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಇದಕ್ಕೆ ಜಾನುವಾರು ಸಾಕಾಣಿಕೆದಾರರು ಮತ್ತು ಸಾರ್ವಜನಿಕರು ಗಣತಿದಾರರಿಗೆ ಸಂಪೂರ್ಣ ಸಹಕಾರ ನೀಡಿ ಗಣತಿ ಕಾರ್ಯಗಳಿಗೆ ಸಹಕರಿಸುವಂತೆ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕರು (ಆಡಳಿತ)ಡಾ.ರಾಜು.ಬಿ.ದೇಶಮುಖ ತಿಳಿಸಿದ್ದಾರೆ.ಇದಕ್ಕಾಗಿ ಕೇಂದ್ರ ಪಶು ಸಂಗೋಪನಾ ಇಲಾಖೆಯಿಂದ 21ನೇ ಲೈವ್ ಸ್ಟಾಕ್ ಸೆನ್ಸ್ ಎನ್ನುವ ಪ್ರತ್ಯೇಕ ಆ್ಯಪ್ ಅಭಿವೃದ್ಧಿಪಡಿಸಲಾಗಿ ದ್ದು, ಬಳಸುವ ಬಗ್ಗೆಯೂ ತರಬೇತಿ ನೀಡಲಾಗಿದೆ. ರಾಜ್ಯದ ಪಶುಸಂಗೋಪನಾ ಇಲಾಖೆಯೂ 4 ತಿಂಗಳ ಕಾಲ ನಡೆಯುವ ಬೃಹತ್ ಸಮೀಕ್ಷಾ ಕಾರ್ಯಕ್ರಮಕ್ಕೆ ಸಜ್ಜಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 3 ಜನ ಮಾಸ್ಟರ ಟ್ರೇನರಗಳು ಫೆಬ್ರವರಿ 12 ರಂದು ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದುಕೊಂಡಿದ್ದು, ಗಣತಿದಾರರಿಗೆ, ಮೇಲ್ವಿಚಾರಕರಿಗೆ ತರಬೇತಿಯನ್ನು ವಿವಿಧ ಹಂತಗಳಲ್ಲಿ ನೀಡಲಾಗುತ್ತಿದೆ. ಎಲ್ಲಾ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಜಿಲ್ಲಾ ಪಟ್ಟದಲ್ಲಿ ತರಬೇತಿಯನ್ನು ಪಶು ಆಸ್ಪತ್ರೆ, ತರಬೇತಿ ಕೋಣೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಬಾರಿ ಆ್ಯಪ್ ಮೂಲಕ ಮಾಹಿತಿ ನಮೂದಿಸಬಹುದು.

ಇಂದಿನಿಂದ ಸಾಮೂಹಿಕ ಲಕ್ಷ ಬಿಲ್ವಾರ್ಚನೆ

ಔರಾದ್: ಪವಿತ್ರ ಶ್ರಾವಣ ಮಾಸದ ನಿಮಿತ್ತವಾಗಿ ನಡೆದು ಕೊಂಡು ಬರುತ್ತಿರುವ ಶ್ರಾವಣ ಶಿವ ಸಂಚಾರ ಶ್ರೀ ಸಿದ್ಧಾಂತ ಶಿಖಾಮಣಿ ಅಭಿಯಾನ ನಿಮಿತ್ತ ಡಾ. ರಾಜಶೇಖರ ಶಿವಾಚಾರ್ಯಸ್ವಾಮಿ ಅವರಿಂದ ವಿಶ್ವಶಾಂತಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ಮಹಾ ಪ್ರವಚನ ಹಾಗೂ ಲಕ್ಷಬಿಲ್ವಾರ್ಚನೆ ನಡೆಯಲಿದೆ ಎಂದು ಸೇವಾ ಸಮಿತಿ ಮುಖಂಡರಾದ ಬಸವರಾಜ ದೇಶಮುಖ ಹಾಗೂ ಶರಣಪ್ಪ ಪಂಚಾಕ್ಷರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪವಿತ್ರ ಶ್ರಾವಣ ಮಾಸದ ನಿಮಿತ್ತ ಜಿಲ್ಲೆಯಾದ್ಯಂತ ನಡೆದು ಕೊಂಡು ಬರುತ್ತಿರುವ ಶ್ರೀ ಸಿದ್ಧಾಂತ ಶಿಖಾಮಣಿ ಅಭಿಯಾನದ ಹಿನ್ನೆಲೆ ಶಿವ ದರ್ಶನ ಧರ್ಮ ಸಂಚಾರ ಕೈಗೊಳ್ಳುವ ನಿರ್ಧಾರ ಮಾಡಲಾಗಿದ್ದು, ಈಗಾಗಲೇ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಅಭಿಯಾನ ನಡೆದುಕೊಂಡು ಬಂದಿದೆ, ಪಟ್ಟಣದ ಐತಿಹಾಸಿಕ ಉದ್ಭವ ಲಿಂಗ ಅಮರೇಶ್ವರ ದೇವಸ್ಥಾನದಲ್ಲಿ ಆ.23ರಂದು ಸಾಯಂಕಾಲ ಸಿದ್ಧಾಂತ ಶಿಖಾಮಣಿ ಶಿವದರ್ಶನ ಪ್ರವಚನ ನಡೆಯಲಿದೆ ಹಾಗೂ ಆ.24ರಂದು ಬೆಳಿಗ್ಗೆ 9:30 ಗಂಟೆಗೆ ಲಕ್ಷ ಬಿಲ್ವಾರ್ಚನೆ ನಡೆಯಲಿದೆ. ಸಿದ್ಧಾಂತ ಶಿಖಾಮಣಿ ಅಭಿಯಾನದ ಸ್ವಾಗತ ಸಿದ್ಧಾಂತ ಶಿಖಾಮ ಣಿಯ ಪಾರಾಯಣ, ಶಿವದರ್ಶನ ಪ್ರವಚನ, ಸಾಮೂಹಿಕ ಬಿಲ್ವಾ ರ್ಚನೆ ಇಷ್ಟಲಿಂಗ ಪೂಜೆ, ಲಿಂಗದೀಕ್ಷಾ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಪ್ರಯುಕ್ತ ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸೇವಾ ಸಮಿತಿ ಮುಖಂಡರಾದ ಬಸವರಾಜ ದೇಶಮುಖ ಹಾಗೂ ಶರಣಪ್ಪ ಪಂಚಾಕ್ಷರಿ ಮನವಿ ಮಾಡಿದ್ದಾರೆ.

ಪೌಷ್ಟಿಕ ಆಹಾರ ಆರೋಗ್ಯಕ್ಕೆ ಮುಖ್ಯ

ಶಹಾಪುರ: ಮಕ್ಕಳಲ್ಲಿ ಪೌಷ್ಟಿಕತೆ ಹೋಗಲಾಡಿಸಿ ತಾಯಿ ಮತ್ತು ಶಿಶು ಮರಣ ತಡೆಗಟ್ಟುವುದು ಪೋಷಣ್ ಮಾಸಾಚರಣೆ ಉದ್ದೇಶವಾಗಿದೆ ಎಂದು ಸಮುದಾಯ ಆರೋಗ್ಯ ಅಧಿಕಾರಿ ಡಾ.ಶರೀಫ ಹೇಳಿದರು.

ತಾಲೂಕಿನ ಗಂಗನಾಳ ಗ್ರಾಮದ ಅಂಗನವಾಡಿ ಕೇಂದ್ರ 1ರಲ್ಲಿ ಪೋಷಣ ಮಾಸ ಮಾತೃ ವಂದನಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಗರ್ಭಿಣಿ, ಬಾಣಂತಿಯರು, ಮಕ್ಕಳು ಸೇರಿದಂತೆ ಎಲ್ಲಾ ವರ್ಗದ ಜನರು ಪೌಷ್ಠಿಕವಾದ ಆಹಾರ ಸೇವನೆ ಮಾಡುವುದು ಅತಿ ಮುಖ್ಯವಾಗಿದೆ. ಗರ್ಭಿಣಿ ಮಹಿಳೆಯರು ಪೌಷ್ಠಿಕ ಆಹಾರ ಮೊಳಕೆ ಕಾಳು ಶೇಂಗಾ ಬೆಲ್ಲ ಸೇವಿಸಬೇಕು. ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯಯುತವಾಗಿರಲು ಸಮತೋಲನ ಆಹಾರ ಸೇವಿಸುವುದು ಅತಿ ಮುಖ್ಯ. ಸರಕಾರ ಗರ್ಭಿಣಿಯರು, ಬಾಣಂತಿಯರು, ಮಕ್ಕಳ ಬೆಳವಣಿಗೆಗೆ ಸಾಕಷ್ಟು ಪೌಷ್ಠಿಕ ಆಹಾರಗಳನ್ನು ಪೂರೈಸುತ್ತಿದೆ. ಗರ್ಭಿಣಿಯರು ಆರೋಗ್ಯದತ್ತ ವಿಶೇಷ ಮುತುವರ್ಜಿ ವಹಿಸಬೇಕು ಎಂದರು. ಗ್ರಾಮದ ಹಿರಿಯರಾದ ನಾಗಮ್ಮಾ ನಿಂಗಣಗೌಡ ಬಿರೆದಾರ, ಬಸಮ್ಮ ಮಲಯ್ಯಸ್ವಾಮಿ ಹಿರೇಮಠ ಉದ್ಘಾಟಿಸಿದರು.

ಇಂದು ಯಕ್ಷರಾತ್ರಿ

ಯಾದಗಿರಿ: ನಗರದ ಸರಕಾರಿ ಪದವಿ ಮಹಾವಿದ್ಯಾಲಯದ ಲಿಂಗೈಕ್ಯ ವಿಶ್ವನಾಥ್ ರೆಡ್ಡಿ ಮುದ್ನಾಳ ಸಭಾಂಗಣದಲ್ಲಿ ಶುಕ್ರವಾರ ಸಾಯಂಕಾಲ 7 ಗಂಟೆಗೆ ಮಹಾಗಣಪತಿ ಯಕ್ಷಗಾನ ಮಂಡಳಿ ಮಂದಾರ್ತಿ ಉಡುಪಿ ತಂಡದಿಂದ ಕಾಂತಾರ ಖ್ಯಾತಿಯ ಶಿವದೂತ ಪಂಜುರ್ಲಿ ಎಂಬ ಪುಣ್ಯಕತಾನಕ ಯಕ್ಷಗಾನ ಆಡಿಸುವ ಕಾರ್ಯಕ್ರಮ ಜರುಗಲಿದೆ.

ಹೆಡಗಿಮದ್ರಾ ಶ್ರೀ ಮಠದ ಪೀಠಾಧಿಪತಿಗಳಾದ ಪಂಡಿತಾರಾಧ್ಯ ಶಾಂತ ಮಲ್ಲಿಕಾರ್ಜುನ ಶಿವಾಚಾರ್ಯರು ಯಕ್ಷಗಾನ ಉದ್ಘಾಟಿಸಲ್ಲಿದ್ದಾರೆ. ಮುಖ್ಯ ಅತಿಥಿ ಯಾದಗಿರಿ ಶಾಸಕ ಚೆನ್ನಾರೆಡ್ಡಿ ಪಾಟೀಲ್, ತುನ್ನೂರ್, ಗುರುಮಟ್ಟಕಲ್ ಶಾಸಕ ಶರಣಗೌಡ ಕಂದಕೂರ, ಮಾಜಿ ಸಚಿವ ಎ.ಬಿ ಮಾಲಕ ರೆಡ್ಡಿ, ಮಾಜಿ ಶಾಸಕ ವೆಂಕಟರೆಡ್ಡಿ ಗೌಡ ಮುದ್ನಾಳ್, ಪತ್ರಕರ್ತ ಆನಂದ್ ಸೌದಿ, ದೇವೇಂದ್ರ ನಾದ, ಬಸುಗೌಡ ಬಿಳಾರ, ದಿನೇಶ್ ಕುಮಾರ್ ಜೈನ್, ಸುನಿಲ್ ಕುಮಾರ್ ಮೂಲಿಮನಿ, ಸ್ಯಾಮ್ಸನ್ ಮಾಳಿಕೇರಿ ಇರಲಿದ್ದಾರೆ ಎಂದು ಕಾರ್ಯಕ್ರಮದ ಆಯೋಜಕರು ಪ್ರಕಟಣೆ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿ ನಿಷೇಧ

ಕಾರವಾರ: ನಗರಸಭೆ ವ್ಯಾಪ್ತಿ ಯಲ್ಲಿರುವ ಸಾರ್ವಜನಿಕರಿಗೆ ಹಾಗೂ ಗಣೇಶ ವಿಗ್ರಹ ತಯಾರಕರಿಗೆ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಾಯ್ದೆಯ ನ್ವಯ ಗಣೇಶ ವಿಗ್ರಹ ತಯಾರಕರು ಪ್ಲಾಸ್ಟರ್ ಆಫ್ ಪ್ಯಾರಿಸ್ ವಿಗ್ರಹಗಳನ್ನು ತಯಾರಿಸದೇ ಕೇವಲ ಮಣ್ಣಿನ ವಿಗ್ರಹಗಳನ್ನು ಮಾತ್ರ ತಯಾರಿಸಿ ಪೂಜಿಸತಕ್ಕದ್ದು. ಹಾಗೂ ಗಣೇಶ ವಿಗ್ರಹಕ್ಕೆ ನೀರಿನ ಬಣ್ಣಗಳನ್ನು ಮಾತ್ರ ಉಪಯೋಗಿಸತಕ್ಕದ್ದು. ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸೂಚಿಸಿರುವ ಎಲ್ಲಾ ಷರತ್ತುಗಳನ್ನು ಪಾಲಿಸಿ ಭಕ್ತಿ ಭಾವದಿಂದ ಗಣೇಶ ಹಬ್ಬವನ್ನು ಆಚರಿಸಬೇಕಾಗಿ ನಗರಸಭೆಯ ಪೌರಾಯುಕ್ತರು ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿರುತ್ತಾರೆ.

ಜಮಾಬಂದಿ ಸಭೆ, ನರೇಗಾ ಅರಿವು ಸಂಪನ್ನ

ಕಾರವಾರ: ಹೊನ್ನಾವರ ತಾಲೂಕಿನ ಕೆಳಗಿನೂರು ಗ್ರಾಮ ಪಂಚಾಯತ್‌ನಲ್ಲಿ ಜಮಾಬಂಧಿ ಹಾಗೂ ನರೇಗಾ ಅರಿವು ಕಾರ್ಯಕ್ರಮವನ್ನು ತಾಲೂಕು ಪಂಚಾಯತ್ ನರೇಗಾ ಸಹಾಯಕ ನಿರ್ದೇಶ ಕಕೃಷ್ಣಾನಂದ ಕೆ. ಅವರ ನೇತೃತ್ವದಲ್ಲಿ ಜರುಗಿತು. ಅವರು ಬುಧವಾರ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಖರ್ಚು ವೆಚ್ಚಗಳ ಕುರಿತು ಮಾಹಿತಿ ಪಡೆದು ಕಾಮಗಾರಿಗೆ ಸಂಬಂಧಿಸಿದ ಕಡತಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ನಂತರ ಮುಗಳಿ ಗ್ರಾಮದಲ್ಲಿ ಸಂಜೀವಿನಿ ಒಕ್ಕೂಟದಡಿ ನಿರ್ಮಾಣವಾದ ಸಾಮೂದಾಯಿಕ ಕೋಳಿ ಶೆಡ್‌ಗೆ ಭೇಟಿ ನೀಡಿ ಫಲಾನುಭವಿಗಳ ಕಾರ್ಯವೈಖರಿ ಹಾಗೂ ಅಭಿವೃದ್ಧಿಯ ಬಗ್ಗೆ ವಿಚಾರಿಸಿದರು. ನರೇಗಾದಡಿ ಗುಣವಂತೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಗತಿಯಲ್ಲಿರುವ ಅಡುಗೆ ಕೋಣೆಕಾಮಗಾರಿ ಹಾಗೂ ತೋಟಗಾರಿಕಾ ಇಲಾಖೆಯಡಿ ಅಭಿವೃದ್ಧಿಪಡಿಸಿರುವ ಮಂಜುಗೌಡ ಅವರ ಅಪ್ಪೆಮಿಡಿತೋಟ ಹಾಗೂ ಅಡಿಕೆ ಬೆಳೆಯನ್ನು ಪರಿಶೀಲಿಸಿದರು. ಮುಗ್ವಾಗ್ರಾಮ ಪಂಚಾಯತ್ ಕಚೇರಿಯಲ್ಲಿ ಸಿಬ್ಬಂದಿ ಹಾಜರಾತಿ, ಕಾಮಗಾರಿ ಮಾಹಿತಿ ಪಡೆದು ನರೇಗಾದಡಿ ನಿರ್ಮಾಣವಾಗುತ್ತಿರುವ ಎನ್‌ಆರ್‌ಎಲ್‌ಎಮ್ ವರ್ಕ್ ಶೆಡ್ ಕಾಮಗಾರಿ ಪರಿಶೀಲನೆ ನಡೆಸಿದರು.

ಧರ್ಮದ ತತ್ವಕ್ಕೆ ಮಹಾ ಪುರುಷರ ದಾರಿ ಅನುಸರಿಸಿ

ಅಶೋಕೆಯಲ್ಲಿ ಆಶೀರ್ವಚನ ನೀಡಿದ ರಾಘವೇಶ್ವರ ಭಾರತೀ ಶ್ರೀ

> ಧರ್ಮದ ತತ್ವ ಗುಹೆಯೊಳಗೆ ಅಡಗಿಸಲ್ಪಟ್ಟಿದೆ. ಅದನ್ನು ತಿಳಿಯುವ ಸುಲಭ ದಾರಿಯೆಂದರೆ ಮಹಾಪುರುಷರು ನಡೆಯುವ ಹಾದಿ. ಮಹಾಪುರುಷರ ದಾರಿ ಇತರರಿಗೆ ರಾಜಮಾರ್ಗವಾಗುತ್ತದೆ. ಶ್ರೀರಾಮನಂಥ ಮಹಾಪುರುಷರು ನಡೆದ ದಾರಿಯನ್ನು ನೋಡಿದರೆ ನಾವು ಹೇಗೆ ಬದುಕಬೇಕು ಎನ್ನುವುದು ತಿಳಿಯುತ್ತದೆ.
> -ರಾಘವೇಶ್ವರ ಶ್ರೀ

ಗೋಕರ್ಣ: ಧರ್ಮದ ತತ್ವವನ್ನು ತಿಳಿಯಲು ಇರುವ ಸರಳ ಮಾರ್ಗವೆಂದರೆ, ಮಹಾಪುರುಷರ ದಾರಿಯನ್ನು ಅನುಸರಿಸುವುದು ಎಂದು ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ ನುಡಿದರು.

ಅಶೋಕೆಯ ಗುರುದೃಷ್ಟಿಯಲ್ಲಿ ಚಾತುರ್ಮಾಸ್ಯ ಕೈಗೊಂಡಿರುವ ಶ್ರೀಗಳು 33ನೇ ದಿನ 33ನೇ ಗುರುಗಳಾದ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳ ದಿನಚರಿಯ ಅನಾವರಣ ಸಮಾರಂಭದಲ್ಲಿ ಆಶೀರ್ವಚನ ನೀಡಿದರು. ಪರಾತ್ಪರ ಗುರುಗಳಾದ ಎಂಟನೇ ಶ್ರೀ ರಾಘವೇಶ್ವರರ ದಿನಚರಿ ಇಂದು ಅನಾವರಣಗೊಂಡಿದೆ. ಯಾವ ದಾರಿಯಲ್ಲಿ ನಾವು ಸಾಗಬೇಕು ಎಂಬ ಬಗ್ಗೆ ಜನಸಾಮಾನ್ಯರಿಗೆ ಗೊಂದಲಗಳು ಇವೆ. ಸ್ಮತಿ, ವೇದಗಳ ಮೂಲಕ ಇದನ್ನು ಕಂಡುಕೊಳ್ಳಲು ಹೊರಟರೆ ಅಲ್ಲೂ ಗೊಂದಲವಾಗಬಹುದು. ಮುನಿಗಳ ದಾರಿಯಲ್ಲಿ ಮುನ್ನಡೆಯೋಣ ಎಂದು ಕೊಂಡರೆ ಒಬ್ಬೊಬ್ಬರದ್ದು ಒಂದೊಂದು ದಾರಿ. ಇಲ್ಲೂ ದಾರಿ ಗೊಂದಲಮಯ ಎಂದು ಬಣ್ಣಿಸಿದರು.

ನಮ್ಮ ಪರಾತ್ಪರ ಗುರುಗಳು ನಡೆದ ದಾರಿ, ನಾವು ನಡೆಯಬೇಕಾದ ದಾರಿಯನ್ನು ಶ್ರೀಗಳ ದಿನಚರಿ ತೋರಿಸುತ್ತದೆ. ಇದು ಗುರು- ಶಿಷ್ಯರಿಗೆ ಮಾರ್ಗದರ್ಶನ ನೀಡುವ ಅಪೂರ್ವ ಇತಿಹಾಸ ಕಣಜ. ಹೋದ ದೃಷ್ಟಿಯನ್ನು ತಪಃಶಕ್ತಿಯಿಂದ ಮರಳಿ ಪಡೆದ ಮಹಾನುಭಾವರು ಅವರು. ಸಮಾಜಲ್ಲಿ ಯಾವುದೋ ಮೂಲೆಯಲ್ಲಿ ಕುರುಡು ಸ್ವಾಮಿ ಎಂಬ ಮಾತು ಕೇಳಿಬಂದ ಹಿನ್ನೆಲೆಯಲ್ಲಿ ಛಲದಿಂದ ಘೋರ ತಪಸ್ಸು ಮಾಡಿ ದೃಷ್ಟಿ ಪಡೆದುಕೊಂಡರು. ಇಂಥ ನಿದರ್ಶನ ಇತ್ತೀಚಿನ ದಿನಗಳಲ್ಲಿ ಬೇರೆಲ್ಲೂ ಸಿಗುವುದಿಲ್ಲ. ಇಲ್ಲಿಗೆ ಪೀಠಾಧಿಪತಿ ಗಳಾಗಿರುವವರು ಇಂದ್ರಿಯಗಳನ್ನು ಗೆದ್ದವರು, ವಶಪಡಿಸಿಕೊಂಡವರು ಎಂದು ಹೇಳಿದರು.

ಅವರ ಬದುಕಿನ ಅಂತ್ಯಕಾಲವನ್ನು ತಾವೇ ಕಂಡುಕೊಂಡ ಮಹಾತ್ಮ ಅಷ್ಟಮ ರಾಘವೇಶ್ವರರು. ಕಾಶಿಯಲ್ಲಿ ಮುಕ್ತಿ ಪಡೆಯುವ ಅಭಿಲಾಷೆ ಹೊಂದಿದ್ದರೂ, ಅಲ್ಲಿಗೆ ಹೋಗಲು ಸಮಯ, ಆರೋಗ್ಯ ಇಲ್ಲ ಎಂಬ ಕಾರಣಕ್ಕೆ ಗೋಕರ್ಣಕ್ಕೆ ಬಂದು ಮುಕ್ತಿ ಹೊಂದಿದರು ಎಂದು ತಿಳಿಸಿದರು.

ತಮ್ಮ ಪೀಠಸ್ವೀಕಾರದ ಸಂದರ್ಭವನ್ನು ನೆನೆಸಿಕೊಂಡ ಶ್ರೀಗಳು, ರಾಘವೇಶ್ವರಭಾರತಿಗಳ ಸಮಾಧಿ ಸನ್ನಿಧಿಯಿಂದ ಮೊದಲ ಸೂಚನೆ ಬಂದಿತ್ತು. ಅಂಥ ಜೀವಂತ ಸಮಾಧಿ ಅದು. ಇದನ್ನು ಶಿಷ್ಯರು ಆಸ್ಥೆಯಿಂದ ಅಧ್ಯಯನ ಮಾಡಬೇಕು. ಇಂದಿಗೂ ಇರುವ ಅಗಣಿತ ಮಹಿಮ, ಅಸಾಮಾನ್ಯ ತಪಸ್ವಿಯ ದಿನಚರಿ ಬಗ್ಗೆ ಸಮಾಜದಲ್ಲಿ ಚರ್ಚೆ ನಡೆಯಬೇಕು ಎಂದರು.

'ಕಾಲ' ಪ್ರವಚನ ಸರಣಿಯನ್ನು ಮುಂದುವರಿಸಿದ ಶ್ರೀಗಳು, ಸತ್ವಗುಣ ದೃಢತೆ ಹಾಗೂ ರಜೋಗುಣ ಜಡತೆಯ ಸಂಕೇತ. ಅಂಥ ದೃಢತೆಯ ಅಧಿಪತಿಯಾದ ಗುರುವಿನ ದೃಷ್ಟಿಯಿಂದ ಬಾಳು ಬಂಗಾರವಾಗುವುದು ಮಾತ್ರವಲ್ಲದೇ, ಮರಣದಲ್ಲೂ ಆತನಿಗೆ ಮುಕ್ತಿ ದೊರಕುತ್ತದೆ ಎಂದು ವಿವರಿಸಿದರು.

ರಾಜಪ್ರಶ್ನೆಗೂ ಜ್ಯೋತಿಷ ಮುಖ್ಯ. ಇದು ಕಾಲ ವಿಧಾಯಕ ಶಾಸ್ತ್ರ. ಉದಾಹರಣೆಗೆ ಯದ್ಧದಿಂದ ಹಿಡಿದು ಪ್ರತಿ ಪ್ರಮುಖ ನಿರ್ಧಾರ ಕೈಗೊಳ್ಳುವಾಗಲೂ ಜ್ಯೋತಿಷಿಗಳ ಸಲಹೆ ಪಡೆಯುವುದು ಅಗತ್ಯ ಎಂದರು. ಗುರು- ಶುಕ್ರ, ಬುಧನಂಥ ಶುಭಗ್ರಹಗಳು ಅಸ್ತಮ ಅಥವಾ ವೃದ್ಧ ಸ್ಥಿತಿಯಲ್ಲಿದ್ದಾಗ ದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆದ ಕಾರಣ ಶುಭದ ಬದಲು ಅಶುಭ ಫಲ ಹೆಚ್ಚಿತು. ಮೂರು ತಿಂಗಳ ಹಿಂದೆ ಈ ಚುನಾವಣೆ ನಡೆದಿದ್ದರೆ, ಫಲಿತಾಂಶ ಸಂಪೂರ್ಣ ಭಿನ್ನವಾಗಿರತ್ತಿತ್ತು ಎಂದು ಬಣ್ಣಿಸಿದರು.

ಅಷ್ಟಮ ರಾಘವೇಶ್ವರರ ದಿನಚರಿಯ ಅನಾವರಣವನ್ನು ಮುಂಬೈ ಐಐಟಿಯ ನಿವೃತ್ತ ಅಧಿಕಾರಿ ಎಲ್.ಜಿ.ಭಟ್ಟಗದ್ದೆ ನೆರವೇರಿಸಿದರು.

ವಿವಿವಿ ಗೌರವಾಧ್ಯಕ್ಷ ಡಿ.ಡಿ.ಶರ್ಮಾ, ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು, ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಮಂಜುನಾಥ್ ಸುವರ್ಣಗದ್ದೆ, ಕಾರ್ಯದರ್ಶಿ ಶ್ರೀಕಾಂತ ಪಂಡಿತ್, ಶ್ರೀಕಾರ್ಯದರ್ಶಿ ಜಿ.ಕೆ.ಮಧು, ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ, ಶ್ರೀಶ ಶಾಸ್ತ್ರಿ, ವಿವಿವಿ ಆಡಳಿತಾಧಿಕಾರಿ ಡಾ.ಪ್ರಸನ್ನ ಕುಮಾರ್ ಟಿ.ಜಿ, ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ಜಿ.ವಿ.ಹೆಗಡೆ ಮತ್ತಿತರರು ಉಪಸ್ಥಿತರಿದ್ದರು. ಎಸ್ .ಜಿ.ಭಟ್ ಕಬ್ಬಿನಗದ್ದೆ ಕಾರ್ಯಕ್ರಮ ನಿರೂಪಿಸಿದರು.

ಶಿರಸಿ ನಗರಸಭೆಗೆ ಶರ್ಮಿಳಾ ಅಧ್ಯಕ್ಷೆ ರಮಾಕಾಂತ ಉಪಾಧ್ಯಕ್ಷ

ಉಪಾಧ್ಯಕ್ಷರಾಗಿ ರಮಾಕಾಂತ ಭಟ್ | ಸ್ಪರ್ಧಿಸಿ ಸೋತ ಕಾಂಗ್ರೆಸ್

ಶಿರಸಿ ನಗರಸಭೆಯ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದ ಶರ್ಮಿಳಾ ಮಾದನಗೇರಿ, ರಮಾಕಾಂತ ಭಟ್ ಅವರನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿನಂದಿಸಿದರು.

ಶಿರಸಿ: ಇಲ್ಲಿನ ನಗರಸಭೆಯ ನೂತನ ಅಧ್ಯಕ್ಷರಾಗಿ ಶರ್ಮಿಳಾ ಮಾದನಗೇರಿ ಹಾಗೂ ಉಪಾಧ್ಯಕ್ಷರಾಗಿ ರಮಾಕಾಂತ ಭಟ್ ಆಯ್ಕೆಯಾಗಿದ್ದಾರೆ. ಇಬ್ಬರೂ ಬಿಜೆಪಿ ಸದಸ್ಯರಾಗಿದ್ದು, ನಗರಸಭೆಯ ಚುಕ್ಕಾಣಿಯನ್ನು ಉಳಿಸಿಕೊಳ್ಳಲು ಬಿಜೆಪಿ ಯಶಸ್ವಿಯಾಗಿದೆ.

ಬಿಜೆಪಿ ಸ್ಪಷ್ಟ ಬಹುಮತ ಹೊಂದಿರುವ ಶಿರಸಿ ನಗರಸಭೆಯ ಅಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ವರ್ಗ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ವರ್ಗ ಮೀಸಲಾತಿಯನ್ನು ರಾಜ್ಯ ಸರ್ಕಾರ ಘೋಷಣೆ ಮಾಡಿತ್ತು. ನಗರಸಭೆಯ ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಗುರವಾರ ನಗರಸಭೆಯ ಅಟಲ್ ಜೀ ಸಭಾಭವನದಲ್ಲಿ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ನಗರದ 4ನೇ ವಾರ್ಡನ ಸದಸ್ಯೆ ಬಿಜೆಪಿಯ ಶರ್ಮಿಳಾ ಮಾದನಗೇರಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ 28 ವಾರ್ಡ್‌ನ ಸದಸ್ಯ, ಬಿಜೆಪಿಯ ರಮಾಕಾಂತ ಭಟ್ಟ ಆಯ್ಕೆಯಾಗಿದ್ದಾರೆ.

ಇನ್ನು ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ವನಿತಾ ಶೆಟ್ಟಿ ಉಮೇದುವಾರಿಕೆ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ದಯಾನಂದ ನಾಯಕ ನಾಮಪತ್ರ ಸಲ್ಲಿಸಿದ್ದರು. ನಂತರ ಜರುಗಿದ ಚುನಾವಣೆಯಲ್ಲಿ ಶರ್ಮಿಳಾ ಮಾದನಗೇರಿ 19 ಮತಗಳನ್ನು ಹಾಗೂ ರಮಾಕಾಂತ ಭಟ್ 19 ಮತಗಳನ್ನು ಪಡೆದು ಆಯ್ಕೆಯಾದರು. ಅದೇ ರೀತಿ ಕಾಂಗ್ರೆಸ್‌ನ ವನಿತಾ ಶೆಟ್ಟಿ 12 ಹಾಗೂ ದಯಾನಂದ ನಾಯಕ 12 ಮತಗಳನ್ನು ಪಡೆದು ಪರಾಜಿತಗೊಂಡರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೂ ಮತದಾನದಲ್ಲಿ ಪಾಲ್ಗೊಂಡರು. ಬಳಿಕ ವಿಜೇತರಾದ ನೂತನ ಅಧ್ಯಕ್ಷ ಉಪಾಧ್ಯಕ್ಷರಿಗೆ ಶುಭ ಕೋರಿದರು. ಚುನಾವಣಾ ಅಧಿಕಾರಿಯಾಗಿ ಸಹಾಯಕ ಆಯುಕ್ತೆ ಕೆ.ವಿ.ಕಾವ್ಯಾರಾಣಿ ಜವಾಬ್ದಾರಿ ನಿರ್ವಹಿಸಿದರು. ಪೌರಾಯುಕ್ತ ಕಾಂತರಾಜು, ಇತರ ಸಿಬ್ಬಂದಿ ಇದ್ದರು.

ಮೂಲ ಸೌಕರ್ಯಕ್ಕೆ ಮೊದಲ ಆದ್ಯತೆ

ಇನ್ನು ಗೆಲುವಿನ ಘೋಷಣೆಯ ಬಳಿಕ ಬಿಜೆಪಿಯವರು ನಗರಸಭೆಯ ಆವರಣದಲ್ಲಿಯೇ ಪಟಾಕಿ ಸಿಡಿಸಿ ಸಂಭ್ರಮಿಸಿದರು. ನೂತನ ಪದಾಧಿಕಾರಿಗಳಿಗೆ ಹೂವಿನ ಹಾರ ಹಾಕಿ ಸನ್ಮಾನಿಸಿದರು. ಈ ವೇಳೆ ನೂತನ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ ಮಾತನಾಡಿ, ನಗರ ಪ್ರದೇಶಕ್ಕೆ ರಸ್ತೆ, ನೀರು ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಮೊದಲ ಆದ್ಯತೆ ನೀಡುತ್ತೇನೆ. ನಗರದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿದ್ದು, ಹಿರಿಯರ ಮತ್ತು ನಗರಸಭೆ ಸರ್ವ ಸದಸ್ಯರ ಮಾರ್ಗದರ್ಶನದ ಮೇರೆಗೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದರು. ರಮಾಕಾಂತ ಭಟ್ ಸಹ ಸಂಸದ ಕಾಗೇರಿ ಹಾಗೂ ಪಕ್ಷದ ವರಿಷ್ಠರಿಗೆ ಧನ್ಯವಾದ ತಿಳಿಸಿದರು.

> ಬೆಳೆಯುತ್ತಿರುವ ಶಿರಸಿಯ ಅಭಿವೃದ್ಧಿಗೆ ಸಂಸದನಾಗಿ ನನ್ನ ಸಹಕಾರ ಕೊಡುತ್ತೇನೆ. ನೂತನ ಅಧ್ಯಕ್ಷ, ಉಪಾಧ್ಯಕ್ಷರು ಶಿರಸಿ ನಗರದ ಅಭಿವೃದ್ಧಿಗೆ ಎಲ್ಲರ ಸಹಕಾರ ಪಡೆದು ಶ್ರಮಿಸಲಿ.
> -ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಗುಡ್ಡ ಕುಸಿತ ಕಂಡಲ್ಲಿ ತಕ್ಷಣ ಮಾಹಿತಿ ನೀಡಿ

ಕಾರವಾರ: ಮಳೆಗಾಲ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಗುಡ್ಡ ಕುಸಿತ ಪ್ರಕರಣಗಳು ಹೆಚ್ಚಾಗಿದ್ದು, ಗುಡ್ಡ ಕುಸಿತ ಲಕ್ಷಣಗಳ ಪರಿಶೀಲನೆ ಕುರಿತಂತೆ ತರಬೇತಿ ಪಡೆದ ಸ್ಪಾಟರ್ಸ್‌ಗಳು, ತಮ್ಮ ವ್ಯಾಪ್ತಿಯಲ್ಲಿ ಗುಡ್ಡ ಕುಸಿತ ಲಕ್ಷಣಗಳು ಕಂಡು ಬಂದಲ್ಲಿ, ತಕ್ಷಣ ಜಿಲ್ಲಾ ವಿಪತ್ತು ನಿರ್ವಹಣಾ ಕಂಟ್ರೋಲ್ ರೂಂ ಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ, ಜಿಲ್ಲೆಯಲ್ಲಿ ಗುಡ್ಡ ಕುಸಿತದಿಂದಾಗುವ ಅನಾಹುತಗಳ ತಡೆ ಕುರಿತ ತರಬೇತಿಗೆ ನಿಯೋಜಿಸಿರುವ ಸ್ಪಾಟರ್ಸ್‌ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇತ್ತೀಚೆಗೆ ಶಿರೂರುನಲ್ಲಿ ನಡೆದ ಗುಡ್ಡ ಕುಸಿತ ಸಂದರ್ಭದಲ್ಲಿ ಆದ ಅನಾಹುತವನ್ನು ಪ್ರತಿಯೊಬ್ಬರೂ ಗಮನಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಇಂತಹ ಅನಾಹುತಗಳು ಸಂಭವಿಸುವುದನ್ನು ತಪ್ಪಿಸಲು ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಸ್ಪಾಟರ್ಸ್‌ಗಳ ಕಾರ್ಯ ಅತ್ಯಂತ ಪ್ರಮುಖವಾಗಿದ್ದು, ಸೂಕ್ತ ಸಮಯದಲ್ಲಿ ಮುನ್ನೆಚ್ಚರಿಕೆಯ ಮಾಹಿತಿ ದೊರೆತಲ್ಲಿ, ಮಾನವ ಜೀವಹಾನಿಯಾಗುವುದನ್ನು ತಪ್ಪಿಸಲು ಸಾಧ್ಯವಾಗಲಿದೆ ಎಂದರು.

ಭಾರೀ ಮಳೆ, ಪ್ರವಾಹ, ಸೈಕ್ಲೂನ್ ಮುಂತಾದ ವಿಕೋಪಗಳ ಮಾಹಿತಿಗಳು ಸಾಕಷ್ಟು ಮುಂಚಿತವಾಗಿ ದೊರೆಯುತ್ತಿರುವ ಕಾರಣ ಇವುಗಳಿಂದ ಸಂಭವಿಸುವ ಹಾನಿಯನ್ನು ತಪ್ಪಿಸಲು ಸಾಧ್ಯವಿದೆ. ಆದರೆ ಗುಡ್ಡ ಕುಸಿತಗಳು ನಿಧಾನಗತಿಯಲ್ಲಿ ಆರಂಭಗೊಳ್ಳುವುದರಿಂದ ಇವುಗಳ ಬಗ್ಗೆ ನಿಖರ ಮಾಹಿತಿಯನ್ನು ಸಾಕಷ್ಟು ಮುಂಚಿತವಾಗಿ ಪಡೆಯುವ ನಿಟ್ಟಿನಲ್ಲಿ, ಜಿಲ್ಲೆಯಲ್ಲಿ ಈಗಾಗಲೇ ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆಯಿಂದ ಗುರುತಿಸಲಾಗಿರುವ 439 ಗುಡ್ಡ ಕುಸಿತ ಪ್ರದೇಶದ ವ್ಯಾಪ್ತಿಯಲ್ಲಿ ಅರಣ್ಯ, ಕಂದಾಯ, ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗುಡ್ಡ ಕುಸಿತ ಲಕ್ಷಣಗಳ ಬಗ್ಗೆ, ಭೂ ವಿಜ್ಞಾನಿಗಳ ಮೂಲಕ ತರಬೇತಿ ನೀಡಲಾಗುತ್ತಿದ್ದು, ಇದರಿಂದ ಮುಂದೆ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಗರಿಷ್ಠ ಮುನ್ನೆಚ್ಚರಿಕೆ ವಹಿಸಲು ಸಹಾಯವಾಗಲಿದೆ ಎಂದರು.

> ಗುಡ್ಡ ಕುಸಿತ ಲಕ್ಷಣಗಳು ಕಂಡು ಬಂದಲ್ಲಿ ಸ್ಪಾಟರ್ಸ್‌ಗಳು ಕೂಡಲೇ ಮಾಹಿತಿ ನೀಡಿದಲ್ಲಿ, ಆಯಾ ಪ್ರದೇಶದಲ್ಲಿ ವಾಹನ ಸಂಚಾರವನ್ನು ಇತರೇ ಬದಲೀ ಮಾರ್ಗಗಳ ಮೂಲಕ ಚಲಿಸಲು ಮತ್ತು ಆ ಪ್ರದೇಶದ ಸಾರ್ವಜನಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಹಾಗೂ ಜೀವಹಾನಿ ತಪ್ಪಿಸಲು ಸಾಧ್ಯವಾಗಲಿದೆ. ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಗುಡ್ಡ ಕುಸಿತದಿಂದ ಯಾವುದೇ ಅನಾಹುತಗಳಾಗದಂತೆ ಎಚ್ಚರ ವಹಿಸುವ ಮಹತ್ವದ ಜವಾಬ್ದಾರಿ ಸ್ಪಾಟರ್ಸ್‌ಗಳ ಮೇಲಿದೆ.
> -ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ

ಹೈದರಾಬಾದ್ ಜಿ.ಎಸ್.ಐ. ನ ಡೆಪ್ಯುಟಿ ಡೈರೆಕ್ಟರ್ ಜನರಲ್ ಮತ್ತು ಪ್ರಾದೇಶಿಕ ಮಿಷನ್ ಮುಖ್ಯಸ್ಥ ಕೆ.ವಿ. ಮಾರುತಿ ಮಾತನಾಡಿ, ಭೂ ಕುಸಿತ ಸ್ಥಳಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ಮುನ್ನೆಚ್ಚರಿಕೆ ನೀಡುವ ಕಾರ್ಯವನ್ನು ನೋಡಲ್ ಏಜೆನ್ಸಿಯಾಗಿ ಜಿ.ಐ.ಎಸ್ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ದೇಶದಾದ್ಯಂತ ಭೂ ಕುಸಿತ ಪ್ರದೇಶಗಳನ್ನು ವೀಕ್ಷಿಸಿ ಅವುಗಳನ್ನು ತೀವ್ರ, ಮಧ್ಯಮ ಮತ್ತು ಸಾಮಾನ್ಯ ಭೂ ಕುಸಿತ ಪ್ರದೇಶಗಳ ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಮತ್ತು ನಕ್ಷೆಯನ್ನು ನೀಡಲಾಗಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ವೈಜ್ಞಾನಿಕ ರೀತಿಯಲ್ಲಿ ಯೋಜನೆ ರೂಪಿಸಬೇಕು. ಅಭಿವೃದ್ಧಿ ಯೋಜನೆಗಳಿಗಾಗಿ ಗುಡ್ಡಗಳನ್ನು ಕಡಿಯುವುದು, ಸಾಂಪ್ರದಾಯಿಕ ನೀರಿನ ಹರಿವಿಗೆ ತಡೆ ಒಡ್ಡಿ ಕಟ್ಟಡಗಳ ನಿರ್ಮಾಣ, ಮರಗಳ ನಾಶ, ಅಸಮರ್ಪಕ ಡ್ರೈನೇಜ್ ಯೋಜನೆಗಳು, ಮುಂತಾದ ಕಾರಣಗಳಿಂದ ಭೂ ಕುಸಿತ ಸಂಭವಿಸಲಿದೆ. ಭೂ ಕುಸಿತಗಳು ತಕ್ಷಣದಲ್ಲಿ ಸಂಭವಿಸುವುದಿಲ್ಲ,ಕುಸಿತ ಸಂಭವಿಸುವ ಪೂರ್ವದಲ್ಲಿ ಆ ಭಾಗದಲ್ಲಿ ವಿವಿಧ ಬದಲಾವಣೆಗಳು ನಡೆಯುತ್ತವೆ. ಈ ಬದಲಾವಣೆಗಳನ್ನು ಗಮನಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದರಿಂದ ಅನಾಹುತಗಳಾಗುವುದನ್ನು ತಪ್ಪಿಸಬಹುದು. ಈ ಕಾರ್ಯದಲ್ಲಿ ಸ್ಪಾಟರ್ಸ್‌ಗಳ ಜವಾಬ್ದಾರಿ ಅತ್ಯಂತ ಪ್ರಮುಖವಾಗಿದೆ ಎಂದರು.

ಜಿ.ಎಸ್.ಐ. ನ ನಿರ್ದೇಶಕ ಡಾ.ಆರ್.ಸಜೀವ್, ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಕುಸಿತದಿಂದಾಗಬಹುದಾದ ಅನಾಹುತಗಳು, ಅವುಗಳನ್ನು ಎದುರಿಸಬೇಕಾದ ಸವಾಲುಗಳು ಮತ್ತು ಇವುಗಳನ್ನು ತಪ್ಪಿಸಲು ಸಮುದಾಯದ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪ್ರಕಾಶ್ ರಜಪೂತ್,ಹಾಗೂ ತರಬೇತಿಗೆ ನಿಯೋಜನೆಗೊಂಡಿದ್ದ ಅರಣ್ಯ, ಕಂದಾಯ, ಪೊಲೀಸ್ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ವೈಜ್ಞಾನಿಕ ಕಾಮಗಾರಿ ಸರಿಪಡಿಸಲು ಆಗ್ರಹ

ಹಾವೇರಿ: ಜಿಲ್ಲಾ ಕೇಂದ್ರ ಸ್ಥಳವಾದ ಹಾವೇರಿ ನಗರದಲ್ಲಿ ಮನೆ ಮನೆಗೆ ಗ್ಯಾಸ್ ವಿತರಿಸುವ ಪೈಪ್‌ಲೈನ್ ಕಾಮಗಾರಿಯನ್ನು ಚನ್ನೈ ಮೂಲದ ಎ.ಬಿ.ಪಿ ಪ್ರಥಮ ಸಿಟಿ ಗ್ಯಾಸ್ ಕಂಪನಿಯವರು ಕೈಗೆತ್ತಿಕೊಂಡಿದ್ದು, ಕಂಪನಿಯವರು ಗ್ಯಾಸ್ ಪೈಪಲೈನ ಅಳವಡಿಕೆಗೆ ನಗರದಲ್ಲಿನ ಹಳೆ ಪಿ.ಬಿ.ರಸ್ತೆಯನ್ನು ಅವೈಜ್ಞಾನಿಕವಾಗಿ ಅಗೆದು, ಸುಸ್ಥಿತಿಯಲ್ಲಿದ್ದ ಹೆದ್ದಾರಿಗೆ ಸಂಚಕಾರ ತಂದಿದ್ದು, ತಕ್ಷಣ ಕಂಪನಿಯ ಮೇಲೆ ಕ್ರಮಕೈಗೊಂಡು, ಅವರಿಂದಲೇ ರಸ್ತೆ ದುರಸ್ತಿಗೊಳಿಸುವಂತೆ ಜಯಕರ್ನಾಟಕ ಸಂಘಟನೆಯ ಜಿಲ್ಲಾ ಘಟಕದಿಂದ ಗುರುವಾರ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರಿಗೆ ಮನವಿ ಸಲ್ಲಿಸಿ, ಆಗ್ರಹಿಸಲಾಗಿದೆ. ಜಿಲ್ಲಾ ಅಧ್ಯಕ್ಷ ಸುಭಾಸ್ ಮಾತನಾಡಿ, ನಗರದ ಪಿ.ಬಿ ರಸ್ತೆ, ಮುನ್ಸಿಪಲ್ ಹೈಸ್ಕೂಲ್ ರಸ್ತೆ, ದೇವಗೇರಿ ರಸ್ತೆ, ವಿದ್ಯಾನಗರ ಸೇರಿದಂತೆ ಹಾವೇರಿ ತಾಲೂಕಿನ ವಿವಿಧ ಕಡೆಗಳಲ್ಲಿ ಗ್ಯಾಸ್‌ಪೈಪ್ ಲೈನ್ ಅಳವಡಿಕೆ ಕಾಮಗಾರಿಯನ್ನು ಚನ್ನೈ ಮೂಲದ ಎ.ಬಿ.ಪಿ ಪ್ರಥಮ ಸಿಟಿ ಗ್ಯಾಸ್ ಕಂಪನಿಯವರು ಕೈಗೆತ್ತಿಕೊಂಡಿದ್ದು, ಕಳೆದ 2 ವರ್ಷಗಳಿಂದ ಕಾಮಗಾರಿಯನ್ನು ಕೈಗೊಂಡಿದ್ದಾರೆ. ಪೈಪ್ ಲೈನ್ ಅಳವಡಿಸುವ ಸಿಬ್ಬಂದಿ ಅವೈಜ್ಞಾನಿಕವಾಗಿ ರಸ್ತೆಯನ್ನು ಅಗೆದು ಕಾಮಗಾರಿ ಮಾಡುತ್ತಿರುವ ಕಾರಣ ವಾಹನ ಸವಾರರು ಸಂಕಷ್ಟಕ್ಕೆ ನಿಲುಕಿದ್ದಾರೆ. ಪೈಪ್ ಹಾಕಿದ ಸ್ಥಳದಲ್ಲಿ ಮಣ್ಣು, ಜಲ್ಲಿ ಕಲ್ಲು ಹಾಕಿ ಹೋಗುತ್ತಿದ್ದಾರೆ. ಸರಿಯಾದ ಎಚ್ಚರಿಕೆ ಫಲಕಗಳನ್ನು ಹಾಕುತ್ತಿಲ್ಲ, ತಿಂಗಳು ಕಳೆದರೂ ರಸ್ತೆ ಸರಿಪಡಿಸುತ್ತಿಲ್ಲ. ಇದರಿಂದ ಮಳೆಬಂದ ವೇಳೆ ರಸ್ತೆಯ ಮೇಲೆ ನೀರು ಹರಿಯುವುದರಿಂದ ಕೈಗೊಂಡಿರುವ ಕಾಮಗಾರಿಯ ಗುಂಡಿಯಲ್ಲಿ ವಾಹನಗಳು, ಸವಾರರು ಸಿಲುಕಿ ಗುಂಡಿಯಿಂದ ಹೊರಬರಲು ಹರ ಸಾಹಸ ಪಡಬೇಕಾಗಿದೆ. ಈ ಬಗ್ಗೆ ಹಲವಾರು ಬಾರಿ ಸಾರ್ವಜನಿಕರು ಪಿ.ಡ.ಬ್ಲೂ.ಡಿ, ನಗರಸಭೆ ಅಧಿಕಾರಿಗಳಿಗೆ ಹೇಳಿ ದೂರು ನೀಡಿದರೇ ಅಧಿಕಾರಿಗಳು ಇಲ್ಲಿಯವರೆಗೆ ಸೌಜನ್ಯಕ್ಕಾದರೂ ಕಂಪನಿಯವರ ಮೇಲೆ ಯಾವುದೇ ಕ್ರಮ ತಗೆದುಕೊಂಡಿರುವುದಿಲ್ಲ ಎಂದು ತಿಳಿಸಿದರು.

ಶಿರೂರು ದುರಂತ; ಸಂತ್ರಸ್ತರಿಗೆ ಸಹಾಯ ನೀಡಿದ ಪ್ರಧಾನಿ

ಶಿರಸಿ: ಅಂಕೋಲಾ ತಾಲೂಕಿನ ಶಿರೂರಿನಲ್ಲಾದ ದುರಂತದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ವಿಷಾದ ವ್ಯಕ್ತಪಡಿಸಿ, ಸಂತ್ರಸ್ತರೊಂದಿಗೆ ನಾನಿದ್ದೇನೆ ಎಂದು ಹೇಳಿದ್ದಾರೆ.

ಈ ಕುರಿತು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಪತ್ರ ಬರೆದಿರುವ ಅವರು, 2024 ರ ಜುಲೈ 31 ರಂದು ಈ ಪ್ರದೇಶದಲ್ಲಿ ಭಾರಿ ಮಳೆಯ ನಂತರ ಕರ್ನಾಟಕದ ಶಿರೂರು, ಅಂಕೋಲಾ ತಾಲೂಕು, ಉತ್ತರ ಕನ್ನಡದ ಕುಟುಂಬಗಳಿಗೆ ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯ ಅಡಿಯಲ್ಲಿ ವಿಶೇಷ ಸಹಾಯವನ್ನು ಬಿಡುಗಡೆ ಮಾಡುವ ಕುರಿತು ನಿಮ್ಮ ಪತ್ರವನ್ನು ನಾನು ಸ್ವೀಕರಿಸಿದ್ದೇನೆ. ವಿಶೇಷ ನೆರವಿನ ರೂಪದಲ್ಲಿ ಪರಿಹಾರವನ್ನು ಮಂಜೂರು ಮಾಡಲಾಗಿದೆ. ನಮ್ಮ ಸರ್ಕಾರದಿಂದ ಸಾಧ್ಯವಿರುವ ಎಲ್ಲ ಬೆಂಬಲ, ಸಹಕಾರವನ್ನು ನೀಡುತ್ತೇನೆ ಎಂದು ಭರವಸೆ ನೀಡಿದ್ದಾರೆ.

ಧನ್ಯವಾದ ಸಲ್ಲಿಸಿದ ಕಾಗೇರಿ: ಪ್ರಧಾನಿ ನರೇಂದ್ರ ಮೋದಿ ಅವರು, ವಿಶೇಷ ನೆರವಿನ ರೂಪದಲ್ಲಿ ಶಿರೂರು ಸಂತ್ರಸ್ತರಿಗೆ ಮಂಜೂರು ಮಾಡಿರುವುದಕ್ಕೆ ಧನ್ಯವಾದ ಹೇಳುತ್ತೇನೆ. ನನ್ನ ಪತ್ರವನ್ನು ಶೀಘ್ರದಲ್ಲಿ ಪರಿಶೀಲಿಸಿ, ಸ್ಪಂದಿಸಿ ನಮ್ಮ ಕ್ಷೇತ್ರದ ಜನರ ಸಂಕಷ್ಟಕ್ಕೆ ಒದಗಿ ಬಂದಿದ್ದಾರೆ. ಸಂತ್ರಸ್ತರ ಕಷ್ಟವನ್ನು ಪರಿಹರಿಸಲು ಯಾವತ್ತೂ ನಾವು ಜತೆಗಿದ್ದೇವೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಸಿದ್ದಾರೆ.

ರಾಜ್ಯಪಾಲರ ವಿರುದ್ಧ ಕಾಂಗ್ರೆಸಿಗರ ವಿವಾದಾತ್ಮಕ ಹೇಳಿಕೆ ಹಿನ್ನೆಲೆ ಯಲ್ಲಿ ಕಾರವಾರ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಬಿಜೆಪಿಯಿಂದ ಗುರುವಾರ ಬೃಹತ್ ಪ್ರತಿಭಟನೆ ನಡೆಸಿ ಮನವಿ ನೀಡಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಜಿಲ್ಲಾಧ್ಯಕ್ಷ ಸೇರಿದಂತೆ ಅನೇಕ ಬಿಜೆಪಿ ಕಾರ್ಯಕರ್ತರಿದ್ದರು.

ಕಾಂಗ್ರೆಸ್ ನಾಯಕರ ಬಂಧಿಸಲು ಆಗ್ರಹ

ಹಾವೇರಿ: ಮುಡಾ ಹಗರಣ ವಿಚಾರವಾಗಿ ಸಿ.ಎಂ ಸಿದ್ಧರಾಮಯ್ಯ ಅವರ ಸರಕಾರಕ್ಕೆ ರಾಜ್ಯಪಾಲರು ಕಾನೂನು ಬದ್ಧವಾಗಿ ಪ್ರಾಸಿಕ್ಯೂಷನ್ ಆದೇಶ ನೀಡಿದ್ದಾರೆ. ಕಾನೂನು ಹೋರಾಟ ಮಾಡಬೇಕಾದ ಕಾಂಗ್ರೆಸ್ ನವರು ರಾಜ್ಯಪಾಲರ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿ ಕೆಲ ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ಅಪಮಾನದ ಹೇಳಿಕೆ ನೀಡಿದ್ದು ಖಂಡನೀಯ ತಕ್ಷಣವೇ ಅಂತವರ ಮೇಲೆ ಕೇಸ್ ದಾಖಲಿಸಿ ಬಂಧಿನ ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಪಕ್ಷದವರು ಬೃಹತ್ ಪ್ರತಿಭಟನೆ ನಡೆಸಿದರು.

ಗುರವಾರ ಕಾಂಗ್ರೆಸ್ ನವರ ದುರ್ವತನೆ, ದುರಾಡಳಿತ ವಿರುದ್ಧ ತಮಟೆ ಬಾರಿಸುವ ಮೂಲಕ ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಎಂ.ಜಿ. ರಸ್ತೆ ಮೂಲಕ ಹೊಸಮನಿ ಸಿದ್ದಪ್ಪ ಸರ್ಕಲ್ ಪಾದಯಾತ್ರೆ ಕೈಗೊಂಡು ಸಿದ್ದಪ್ಪ ವೃತ್ತದಲ್ಲಿ ಮಾನವ ಸರ್ಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ ರಾಜ್ಯಪಾಲರ ಮುಡಾ ಹಗರಣದ ಪ್ರಾಸಿಕ್ಯೂಷನ್ ಆದೇಶ ನೀಡಿದ ಕೂಡಲೇ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ನಾಯಕರುಗಳು ಹಾಗೂ ಬೆಂಬಲಿಗರು ಅತ್ಯಂತ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅದರಲ್ಲೂ ಅವರನ್ನು ವೈಯುಕ್ತಿಕವಾಗಿ ತೇಜೋವಧೆ ಮಾಡುತ್ತಿರುವುದು ಅತ್ಯಂತ ಖಂಡನೀಯ. ಕಾಂಗ್ರೆಸ್ ನವರು ಮೊದಲಿನಿಂದಲೂ ಸಾಂವಿಧಾನಿಕ ಹುದ್ದೆಗಳಲ್ಲಿರುವವರನ್ನು ಕಾಂಗ್ರೆಸ್ ಅತ್ಯಂತ ಹೀನಾಯವಾಗಿ ನಡೆಸಿಕೊಂಡು ಬಂದಿದೆ. ಅದೇ ಚಾಳಿಯನ್ನು ಮುಂದುವರೆಸಿದ್ದಾರೆ.

ಹಿಂದುಳಿದವರು ದಮನೀತರ ಪರವಾಗಿ ನಾವಿದ್ದೇವೆ ಎಂದು ಹೇಳಿ ಅವರ ಹೆಸರಲ್ಲಿ ಲೂಟಿ ಮಾಡುತ್ತಿದ್ದಾರೆ. ರಾಜ್ಯಪಾಲರ ವಿರುದ್ಧ ಪ್ರತಿಭಟನೆಗೆ ಇಳಿದು ಸಮಯದಲ್ಲಿ ಕಾಂಗ್ರೆಸ್ ಎಂ.ಎಲ್ .ಸಿ ಐವಾನ್ ಡಿಸೋಜಾ ಹೇಳಿಕೆ ದೇಶವೇ ತಲೆತಗ್ಗಿಸುವಂತಿದೆ ಬಾಂಗ್ಲಾ ದೇಶದ ಪ್ರಧಾನಮಂತ್ರಿ ಶೇಖ್ ಹಸೀನಾಗೆ ಬಂದ ಗತಿ ತಮಗೂ ಬರುತ್ತದೆ, ನಾವು ಕಾಂಗ್ರೆಸ್ಸಿಗರು ರಾಜಭವನಕ್ಕೆ ನುಗ್ಗಿ ತಮ್ಮನ್ನು ಓಡಿಸುವ ಕೆಲಸವನ್ನು ಮಾಡುತ್ತೇವೆ ಎಂದಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಅದಕ್ಕೆ ರಾಜ್ಯಪಾಲರೇ ಕಾರಣ ಎಂಬ ವಿವಾದಾತ್ಮಕ ಹೇಳಿಕೆ ನೀಡಿರುವ ಸಚಿವರಾದ ಜಮೀರ್ ಅಹಮದ್, ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಸಚಿವ ಕೃಷ್ಣಭೈರೇಗೌಡ, ದಿನೇಶ್ ಗುಂಡೂರಾವ್, ಶಾಸಕರಾದ ನಂಜೇಗೌಡ ಹಾಗೂ ಇನ್ನು ಅನೇಕ ಕಾಂಗ್ರೆಸ್ ಮುಖಂಡರ ವಿರುದ್ಧ ಜಾತಿ ನಿಂದನೆ ಹಾಗೂ ಗೂಂಡಾ ಕಾಯಿದೆಯಡಿ ತಕ್ಷಣ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಂತರ ಮಾತನಾಡಿದ ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರ ಹುದ್ದೆಯ ಘನತೆಯನ್ನು ಅರಿಯದ ಕಾಂಗ್ರೆಸ್ ನಾಯಕರುಗಳು ಅವರ ವಿರುದ್ಧ ಅವಹೇಳನಕಾರಿಯಾಗಿ ಟೀಕೆಗಳನ್ನು ಮಾಡುತ್ತಿದ್ದಾರೆ. ಹಾದಿ ಬೀದಿಯಲ್ಲಿ ಅವರ ಪ್ರತಿಕೃತಿಯನ್ನು ಸುಡುವಂತಹ ಹೀನಕೃತ್ಯಕ್ಕೆ ಇಳಿದಿದ್ದಾರೆ. ಮುಖ್ಯಮಂತ್ರಿಗಳ ಮೇಲೆ ಬಂದ ಆರೋಪಗಳ ಬಗ್ಗೆ ತನಿಖೆಗೆ ಆದೇಶಿಸುವುದು ರಾಜ್ಯಪಾಲರಿಗೆ ಸಂವಿಧಾನ ನೀಡಿರುವ ಅಧಿಕಾರವಾಗಿದೆ. ಇದು ಹಿಂದೆಯೂ ನಡೆದಿದೆ.

ಇತ್ತಿಚಿಗೆ ಕಾಂಗ್ರೆಸ್ ಸರ್ಕಾರದ ನಾಯಕರು ಪಾಕಿಸ್ತಾನ ಹಾಗೂ ಬಾಂಗ್ಲಾದೇಶವನ್ನು ಓಲೆಯಿಸುವ ರೀತಿಯಲ್ಲಿ ಮಾತನಾಡುತ್ತಿರುವುದು ದೇಶ ದ್ರೋಹಕ್ಕೆ ಸಮ ಎಂದರು.

ಮಾಜಿ ಶಾಸಕ ಶಿವರಾಜ ಸಜ್ಜನರ ಮಾತನಾಡಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಸಾಂವಿಧಾನಿಕ ವಿರೋಧ ಕಾರ್ಯಗಳು ಹೆಚ್ಚುತ್ತಿವೆ. ರಾಜ್ಯಪಾಲರ ಬಗ್ಗೆ ಬಾಯಿ ಬಿಗಿಡಿದು ಮಾತನಾಡುವುದನ್ನು ಕಲಿತುಕೊಳ್ಳಲಿ ಅವರ ಬಗ್ಗೆ ಹಗುರವಾಗಿ ಮಾತನಾಡಿದರನ್ನು ಕೂಡಲೇ ಜೈಲಿಗೆ ಕಳುಹಿಸಬೇಕು ಎಂದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಡಾ. ಬಸವರಾಜ ಕೇಲಗಾರ, ರಾಷ್ಟ್ರೀಯ ಪರಿಷತ್ ಸದಸ್ಯರಾದ ಮಂಜುನಾಥ ಓಲೇಕಾರ, ಬಿಜೆಪಿ ಮುಖಂಡ ಪರಮೇಶ್ವರಪ್ಪ ಮೇಗಳಮನಿ, ಭೋಜರಾಜ ಕರೂದಿ, ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಶೋಭಾ ನಿಸ್ಸಿಮಗೌಡ್ರ, ರಾಜ್ಯ ರೈತ್ ಮೋರ್ಚಾ ಕಾರ್ಯದರ್ಶಿ ಬಸವರಾಜ ಹಾದಿಮನಿ, ರಾಜ್ಯ ಅಲ್ಪಸಂಖ್ಯಾತ ಉಪಾಧ್ಯಕ್ಷ ಅಲ್ಲಬಕ್ಷ ತಿಮ್ಮಾಪುರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾ ನಂಜುಂಡೇಶ ಕಳ್ಳೇರ, ಡಾ. ಸಂತೋಷ ಆಲದಕಟ್ಟಿ, ಮಂಜುನಾಥ ಗಾಣ ಗೇರ, ರಾಜ್ಯದ ವಿವಿಧ ಮೋರ್ಚಾಗಳ ಸದಸ್ಯರು, ಜಿಲ್ಲಾ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ವಿಶ್ವವಾಣಿ ಪುಸ್ತಕದ
ಹೊಚ್ಚ ಹೊಸ ಪ್ರಕಟಣೆಗಳು
10% ರಿಯಾಯಿತಿ ದರದಲ್ಲಿ

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ.
ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್ ಗೆ ಶೇರ್ ಮಾಡಿ
63623 93966
ನಂ. 1687, ನಿಸರ್ಗ ಸೆರೆನಿಟಿ, ಕಾಂಪ್ಲೆಕ್ಸ್ ರೋಡ್, ರಾಘವೇಂದ್ರ ಸ್ವಾಮಿ ಮಠ ಸಮೀಪ, ಬೆಮೆಲ್ 5ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು - 560 098

ಸಮಾಚಾರ ಸಣ್ಣದಲ್ಲ

ಬಾಲಕರ ವ್ಹೀಲಿಂಗ್ ಶೋಕಿಗೆ ಅರ್ಚಕನ ಬಲಿ

ಕೋಲಾರ: ಬಂಗಾರಪೇಟೆಯಲ್ಲಿ ಇಬ್ಬರು ಅಪ್ರಾಪ್ತರ ವ್ಹೀಲಿಂಗ್ ಶೋಕಿಗೆ ಬಡಬ್ರಾಹ್ಮಣ ಬಲಿಯಾಗಿದ್ದು ಕುಟುಂಬ ಅನಾಥವಾಗಿದೆ. ಬಂಗಾರಪೇಟೆಯ ಗಾಂಧಿನಗರದ ಅರ್ಚಕ ಗೋಪಾಲರಾವ್ (56) ಮೃತರು. ಬಂಗಾರಪೇಟೆಯ ಸಂತೇಗೇಟ್ ಬಳಿ ಗುರುವಾರ ರಾತ್ರಿ 9 ಗಂಟೆಯಲ್ಲಿ ಹಿಂದಿನಿಂದ ಬೈಕ್ ಡಿಕ್ಕಿಯಾಗಿದ್ದು ಗಾಯಾಳುವನ್ನು ಸ್ಥಳೀಯ ಆಸ್ಪತ್ರೆಯಲ್ಲಿ ತೋರಿಸಿ ಕೋಲಾರದ ಜಿಲ್ಲಾಸ್ಪತ್ರೆಗೆ ಸಾಗಿಸುವಾಗ ಕೊನೆಯುಸಿರೆಳೆದ್ದಾನೆ.

ಕಲ್ಯಾಣ ಕರ್ನಾಟಕದಲ್ಲಿ ಉತ್ತಮ ಮಳೆ

ಕಲಬುರಗಿ: ಕಲ್ಯಾಣ ಕರ್ನಾಟಕದ ರಾಯಚೂರು, ಕಲಬುರಗಿ, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಗುರುವಾರ ಸಾಧಾರಣ ಮಳೆಯಾಗಿದೆ. ರಾಯಚೂರು ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಉತ್ತಮವಾಗಿ ಮಳೆಯಾಗಿದೆ. ರಾಯಚೂರು ತಾಲ್ಲೂಕಿನ ಬಿಚ್ಚಾಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿ.ಯದ್ಲಾಪುರು ಗ್ರಾಮದಲ್ಲಿ ಮಳೆಯ ಆರ್ಭಟಕ್ಕೆ ರಸ್ತೆ ಕೊಚ್ಚಿಹೋಗಿದೆ. ದೇವದುರ್ಗ, ಕವಿತಾಳ, ಮಾನ್ವಿ, ಹಟ್ಟಿ ಚಿನ್ನದಗಣಿ ಪ್ರದೇಶದಲ್ಲಿ ಮಳೆಯಾಗಿದೆ. ಯಾದಗಿರಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ನಿರಾಣಿ, ಜೊಲ್ಲೆ, ರೆಡ್ಡಿ, ಎಚ್‌ಡಿಕೆ ವಿರುದ್ಧ ಅನುಮತಿ ನೀಡದಿದ್ದರೆ ಕಾನೂನು ಹೋರಾಟ
ಸಿಎಂ ವಿರುದ್ಧ ರಾಜಕೀಯ ಷಡ್ಯಂತ್ರವೆಂದು ನ್ಯಾಯಾಲಯದಲ್ಲಿ ರೂಪಿಸುವ ಲೆಕ್ಕಾಚಾರ

ರಾಜ್ಯಪಾಲರನ್ನು ಇಕ್ಕಟ್ಟಿಗೆ ಸಿಕ್ಕಿಸಿದ ಸಂಪುಟ

ವಿಶ್ವವಾಣಿ ವಿಶೇಷ

ಬೆಂಗಳೂರು: ನಿರೀಕ್ಷೆಯಂತೆ ಸಚಿವ ಸಂಪುಟದಲ್ಲಿ ಬಿಜೆಪಿಯ ಮೂರು ಹಾಗೂ ಜೆಡಿಎಸ್‌ನ ಒಬ್ಬ ನಾಯಕರ ವಿರುದ್ಧ ಬಾಕಿಯಿರುವ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲರಿಗೆ ಸಲಹೆ ರೂಪದ ನಿರ್ಣಯವನ್ನು ಕೈಗೊಂಡಿದೆ. ಮೇಲ್ನೋಟಕ್ಕೆ, ಬಿಜೆಪಿ-ಜೆಡಿಎಸ್ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸುವ ತಂತ್ರವೆನಿಸಿದರೂ, ಸೂಕ್ಷ್ಮವಾಗಿ ಗಮನಿಸಿದರೆ ರಾಜ್ಯಪಾಲರು, ರಾಜಭವನವನ್ನೇ ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ, ಜನಾರ್ದನ ರೆಡ್ಡಿ ಹಾಗೂ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಬಾಕಿಯಿರುವ ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡುವಂತೆ ರಾಜ್ಯಪಾಲರಿಗೆ ಸಲಹೆ ನೀಡಲಾಗಿದೆ. ಸಂಪುಟದ ಈ ನಡೆಯಿಂದ ಇದೀಗ ರಾಜ್ಯಪಾಲರು ಇಕ್ಕಟ್ಟಿಗೆ ಸಿಲುಕಿದ್ದು, ಅನುಮತಿ ನೀಡಿದರೆ ಬಿಜೆಪಿ-ಜೆಡಿಎಸ್ ನಾಯಕರಿಗೆ ಸಮಸ್ಯೆಯಾಗುವ ಸಾಧ್ಯತೆಯಿದೆ. ಒಂದು ವೇಳೆ ನೀಡದಿದ್ದರೆ, ತನಿಖಾ ಸಂಸ್ಥೆಗಳಿಂದ ಬಂದಿರುವ ಮನವಿಗೆ ಅನುಮತಿ ನೀಡುವಂತೆ, ಸಂಪುಟವೇ ಸಲಹೆ ನೀಡಿದರೂ ಏಕೆ ನೀಡುತ್ತಿಲ್ಲ? ಎನ್ನುವ ಪ್ರಶ್ನೆ ಎತ್ತಲು ಆಡಳಿತ ಪಕ್ಷ ಸಿದ್ಧತೆ ನಡೆಸಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಾಸಿಕ್ಯೂಷನ್‌ಗೆ ತಡೆ ಹಾಗೂ ರದ್ದತಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಅರ್ಜಿ 29ಕ್ಕೆ ಹೈಕೋರ್ಟ್ ಮುಂದೆ ಬರಲಿದೆ. ಆ ವೇಳೆಗೆ ಈ ನಾಲ್ವರ ವಿರುದ್ಧ ಇರುವ ಆರೋಪಗಳಿಗೆ ಸಂಬಂಧಿಸಿದಂತೆ ಅಭಿಯೋಜನೆಗೆ ಅನುಮತಿ ನೀಡದಿದ್ದರೆ, ರಾಜ್ಯಪಾಲರ ನಡೆಯನ್ನು ಹೈಕೋರ್ಟ್‌ನಲ್ಲಿ ಪ್ರಸ್ತಾಪಿಸಬಹುದು. ಈ ವಿಷಯವನ್ನು ಮುಂದಿಟ್ಟುಕೊಂಡೇ, 'ದುರುದ್ದೇಶ ಪೂರ್ವಕವಾಗಿ' ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ ಎಂದು ವಾದಿಸುವ ಮೂಲಕ, 'ರಾಜಕೀಯ ದುರುದ್ದೇಶ' ಎನ್ನುವ ಅಂಶವನ್ನು ನ್ಯಾಯಾಲಯದ ಮುಂದೆ ಮಂಡಿಸಬಹುದು ಎನ್ನುವ ಲೆಕ್ಕಾಚಾರದಲ್ಲಿ ಸಚಿವ ಸಂಪುಟ ಈ ತೀರ್ಮಾನ ಕೈಗೊಂಡಿದೆ ಎನ್ನಲಾಗಿದೆ.

- ನಿರಾಣಿ, ಜೊಲ್ಲೆ, ಎಚ್‌ಡಿಕೆ, ಜನಾರ್ದನ ರೆಡ್ಡಿ ನೇರ ಭಾಗವಹಿಸಿರುವ ಆರೋಪಗಳಿದ್ದರೂ ಅವರ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಏಕೆ ನೀಡಿಲ್ಲ?
- ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲದಿದ್ದರೂ ಅಭಿಯೋಜನೆಗೆ ಅರ್ಜಿ ಸಲ್ಲಿಸಿದ ತಿಂಗಳೊಳಗೆ ಅನುಮತಿ ನೀಡಿದ್ದೇಕೆ?
- ತನಿಖೆಯೇ ಆರಂಭವಾಗದ ಮುಡಾ ಹಗರಣದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ, ಈಗಾಗಲೇ ವರದಿ ಸಲ್ಲಿಸಲು ಸಜ್ಜಾಗಿರುವ ಪ್ರಕರಣದಲ್ಲಿ ಮೌನಕ್ಕೆ ಕಾರಣವೇನು?
- ರಾಜಭವನದ ಅಧಿಕಾರವನ್ನು ಬಳಸಿಕೊಂಡು ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರಕಾರ ಪ್ಲಾನ್ ಮಾಡುತ್ತಿದೆ ಎನ್ನುವ ಆರೋಪ

ವಾದವೇನು?

ಒಂದು ವೇಳೆ 29ರೊಳಗೆ ಈ ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡದಿದ್ದರೆ, ಹೈಕೋರ್ಟ್ ಅರ್ಜಿ ವಿಚಾರಣೆ ವೇಳೆ, ಎನ್‌ಡಿಎ ಮೈತ್ರಿಕೂಟದ ನಾಯಕರ ವಿರುದ್ಧ ವರ್ಷದ ಹಿಂದೆಯೇ ಸರಕಾರಿ ತನಿಖಾ ಸಂಸ್ಥೆಗಳು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದ್ದರೂ ಅನುಮತಿಸಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ಖಾಸಗಿ ದೂರುದಾರರು ದೂರು ನೀಡಿದ ಬೆನ್ನಲ್ಲೇ, ಪರಿಶೀಲಿಸಲು ಸಮಯ ಪಡೆಯದೇ ಅಭಿಯೋಜನೆಗೆ ಅನುಮತಿ ನೀಡಿದ್ದಾರೆ. ಈ ರೀತಿ ತರಾತುರಿಯಲ್ಲಿ ಅನುಮತಿಸಿರುವುದನ್ನು ಗಮನಿಸಿದರೆ, ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ರೂಪಿಸಲು ರಾಜಭವನದ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎನ್ನುವ ಆರೋಪವನ್ನು ಹೋರಿಸಲು ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಪರ ವಕೀಲರಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠ	ಇಂದಿನಮಟ್ಟ	ಒಳಹರಿವು
ಕೆಆರ್‌ಎಸ್	124.80	123.68	8,122
ಕಬಿನಿ	2,284	2,282.28	2,966
ಹಾರಂಗಿ	2,869	2,857.66	1,272
ಹೇಮಾವತಿ	2,922	2,920.90	5,550
ತುಂಗಭದ್ರಾ	1,633	1,626.31	33,443
ಆಲಮಟ್ಟಿ	1,704.81	1,704.70	31,987
ನಾರಾಯಣಪುರ	1,615	1,614.48	34,476
ಲಿಂಗನಮಕ್ಕಿ	1,819.12	1,816.75	6,548

ಜೋಶಿ ಒಎಸ್‌ಡಿಯಾಗಿ ನಾರಾಯಣ ರಾಮಚಂದ್ರ ಗಂಭೀರ್ ನೇಮಕ

ಬೆಂಗಳೂರು: ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಅವರ ವಿಶೇಷ ಕರ್ತವ್ಯಾಧಿಕಾರಿ ಯಾಗಿ ನಾರಾಯಣ ರಾಮಚಂದ್ರ ಗಂಭೀರ್ ಅವರು ನೇಮಕವಾಗಿದ್ದಾರೆ. ಈ ಹಿಂದೆ ವಿವಿಧ ಕೇಂದ್ರ ಸಚಿವರೊಂದಿಗೆ ಕಾರ್ಯನಿರ್ವಹಿಸಿರುವ ನಾರಾಯಣ ಗಂಭೀರ್ ಅವರನ್ನು, ಜೋಶಿ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಕೇಂದ್ರ ಡಿಒಪಿಟಿ ನೇಮಿಸಿದೆ. ಅವರಿಗೆ ಇದೀ ಕೇಂದ್ರ ಸರಕಾರದ 13ನೇ ವೇತನ ಶ್ರೇಣಿ ನಿಗದಿಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ಸರ್ಕಾರ : ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ
"ಕಲ್ಯಾಣ ಸುರಕ್ಷಾ ಭವನ" ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ದೂರವಾಣಿ ಸಂಖ್ಯೆ: 080-29759983/8883, Email:kuwssb@gmail.com
ವೆಬ್‌ಸೈಟ್: ksuwssb.karnataka.gov.in
ಸಂಖ್ಯೆ: ಅಸಂಕಾ/ಟೆಂಡರ್/ಸ್ಮಾರ್ಟ್‌ಕಾರ್ಡ್/ಕ.ಪ್ರಾ&ಹಾ.ಪ್ರಾ/ಸಿಆರ್-03&05/2023-24 ದಿನಾಂಕ: 23.08.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು, ಇವರು ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್‌ಕಾರ್ಡ್ ಅನ್ನು ಮುದ್ರಿಸಿ ವಿತರಿಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಪ್ರಾದೇಶಿಕವಾರು (ಹಾಸನ ಪ್ರಾದೇಶಿಕ ಹಾಗೂ ಕಲಬುರಗಿ ಪ್ರಾದೇಶಿಕ) ಇ-ಆಡಳಿತ ಇಲಾಖೆಯ, ಇ-ಸಂಗ್ರಹಣಾ ವೇದಿಕೆಯ ಮುಖಾಂತರ 7 ದಿನಗಳ ಅಲ್ಪಾವಧಿಯ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್‌ಸಲ್ಲಿಸಲು ಕೊನೆಯ ದಿನಾಂಕ: **30.08.2024** ರ ಸಾಯಂಕಾಲ **5.30 ಗಂಟೆ** ಆಗಿರುತ್ತದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ-ಸಂಗ್ರಹಣಾ ವೇದಿಕೆಯ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ವಿ.ಸೂ: ಟೆಂಡರ್‌ದಾರು ಪ್ರಾದೇಶಿಕವಾರು ಪ್ರತ್ಯೇಕವಾಗಿ ಟೆಂಡರ್ ಸಲ್ಲಿಸುವುದು.

ಸಹಿ/- ಜಂಟಿ ಕಾರ್ಮಿಕ ಆಯುಕ್ತರು ಹಾಗೂ ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು
ವಾಸಾಸಂಇ/ವಾ.ಪ್ರ/1588/ಶಿರಡಿ ಸಾಯಿ/2024-25

ಮೈಸೂರು ಅರಮನೆ ಮಂಡಳಿ, ಮೈಸೂರು
Tender Notification No: EO/MPB/DD/AEE/ELEC/T.NO-02/2024-25, Date: 20-08-2024

ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ)
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಉಪ-ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ವಿದ್ಯುತ್ ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು ಮೊತ್ತ ರೂ.13.80 ಲಕ್ಷದ 02 ಸಂಖ್ಯೆ ದಸರಾ-2024ರ ಪೂರ್ವಭಾವಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು/ಏಜೆನ್ಸಿ/ತಯಾರಕರು/ಸಂಸ್ಥೆಯಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. **1)** ವಿದ್ಯುನ್ಮಾನ (ಇ-ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 03.09.2024 ಸಂಜೆ 6.00 ಗಂಟೆಯವರೆಗೆ. **2)** ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 05.09.2024 ಬೆಳಿಗ್ಗೆ 11.30 ಗಂಟೆಯ ನಂತರ **3)** ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 06.09.2024 ಬೆಳಿಗ್ಗೆ 11.00 ನಂತರ ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು. **4)** ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.8.30 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.5.50 ಲಕ್ಷಗಳು. ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ http://www.kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/- ಉಪನಿರ್ದೇಶಕರು
DIPR/DDMYS-453/KSMCA-302/2024-25

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಆನೇಕಲ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಜಿ.ಎಂ.ಎಫ್.ಸಿ.ಕೋರ್ಟ್ ಹತ್ತಿರ, ಅತ್ತಿಬೆಲೆ ರಸ್ತೆ, ಆನೇಕಲ್ ಟೌನ್, ಬೆಂಗಳೂರು-562106.
ದೂ: 080 27859232, ಇ-ಮೇಲ್: cotpanekal@rediffmail.com
ಸಂ: ಸಿಬ್ಬಂದಿ/ಸಿ.ಆರ್/5/2023-24 ದಿನಾಂಕ : 17.08.2024

ಮರು ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಅವಧಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆನೇಕಲ್ ತಾಲ್ಲೂಕು ಪಂಚಾಯಿತಿಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಬೆರಳಚ್ಚುಗಾರರು-02, ವಾಹನ ಚಾಲಕರು-01, ಗ್ರೂಪ್ 'ಡಿ'-03, ಭಾರೀ ವಾಹನ ಚಾಲಕ-1, ಸಹಾಯಕರು(ಕ್ಲೀನರ್)-1 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸೇವೆಯನ್ನು ಪಡೆಯಲು https://kppp.karnataka.gov.in ಮೂಲಕ ಈ ಹಿಂದೆ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ತಾಂತ್ರಿಕ ತೊಂದರೆಯಿಂದ ಟೆಂಡರ್ ತೆರೆಯಲು ಸಾಧ್ಯವಾಗದೇ ಇರುವುದರಿಂದ ತುರ್ತಾಗಿ ಮರುಟೆಂಡರ್ ಕರೆಯಲಾಗಿದೆ.

Calendar of Event

ಕ್ರ.ಸಂ	ವಿವರ	
1	ಟೆಂಡರ್ ಅರ್ಜಿಯನ್ನು ಸ್ವೀಕರಿಸುವ ಅಧಿಕಾರಿ	ಕಾರ್ಯನಿರ್ವಾಹಕ ಅಧಿಕಾರಿಗಳು ಆನೇಕಲ್ ತಾಲ್ಲೂಕು ಪಂಚಾಯಿತಿ
2	ಟೆಂಡರ್ ಅನುಮತಿ ಉಲ್ಲೇಖ ಸಂಖ್ಯೆ	ಆಡಳಿತ(3)ಸಿ.ಆರ್/34/2023-24 ದಿನಾಂಕ: 29.02.2024
3	ಟೆಂಡರ್ ಮೊತ್ತ	-
4	ಇ.ಎಂ.ಡಿ ನಿಗಧಿಪಡಿಸಿರುವ ಮೊತ್ತ	44,000/-
5	ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ	ದಿನಾಂಕ: 19.08.2024 ರಿಂದ
6	ಟೆಂಡರ್ ದಸ್ತಾವೇಜು ಲಭ್ಯವಾಗುವ ವೆಬ್ ಸೈಟ್ ವಿಳಾಸ	https://kppp.karnataka.gov.in
7	ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ	ದಿನಾಂಕ: 26.08.2024 ರಂದು
8	ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆದು ಪರಿಶೀಲಿಸುವ ಸ್ಥಳ, ದಿನಾಂಕ	ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ದಿನಾಂಕ:26.08.2024 ರಂದು (As per portal) (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ)
9	ಟೆಂಡರ್ ಆರ್ಥಿಕ ಲಕೋಟೆಗಳನ್ನು ತೆರೆದು ಪರಿಶೀಲಿಸುವ ಸ್ಥಳ, ದಿನಾಂಕ	ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ದಿನಾಂಕ:27.08.2024 ರಂದು (As per portal) (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ)
10	ಕಾರ್ಯಾದೇಶ ನೀಡುವುದು	ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ
11	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆ	ಕಾರ್ಯನಿರ್ವಾಹಕ ಅಧಿಕಾರಿ, ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ದೂರವಾಣಿ ಸಂಖ್ಯೆ:080-8971556270

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ, ಆನೇಕಲ್ ತಾಲ್ಲೂಕು ಪಂಚಾಯಿತಿ.
ವಾಸಾಸಂಇ/ವಾ.ಪ್ರ/1605/ಶಿರಡಿ ಸಾಯಿ/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001.
ದೂರವಾಣಿ :0836-2447090 ಇ-ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಇಡುಗಂಡು ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ **ಟೆಂಡರ್ ಪ್ರಕಟಣೆ ಸಂಖ್ಯೆ:763 ದಿನಾಂಕ: 20-08-2024.** ಚಿಕ್ಕೋಡಿ ಪಟ್ಟಣದ ಒಳಚರಂಡಿ ಯೋಜನೆಯ ಉಳಿತಾಯದಡಿಯಲ್ಲಿ ಚಿಕ್ಕೋಡಿ ಪಟ್ಟಣದಲ್ಲಿ ಬಿಟ್ಟು ಹೋದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು (ಇಡುಗಂಡು) **KUWSDB/2024-25/WS/WORK_INDENT244/CALL-3** ಹೆಚ್ಚಿನ ವಿವರಗಳಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾ/293/2023-24/ದೇಶಪಾಂಡೆಪಬ್ಲಿಸಿಟಿ

ಪುರಸಭಾ ಕಾರ್ಯಾಲಯ ಆನೇಕಲ್
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 562106
ದೂರವಾಣಿ ಸಂಖ್ಯೆ : 78-230092, 78-259225, Email :- itstaff_ulb_anekal@yahoo.com
ಸಂಖ್ಯೆ : ಪು.ಕಾ.ಆ/ಆಶಾ/ಸಿ.ಆರ್/06/2024-25 ದಿನಾಂಕ: 23.08.2024

ದರವಾರು ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ, ಆನೇಕಲ್ ಪುರಸಭಾ ವ್ಯಾಪ್ತಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ನ ಈ ಕೆಳಕಂಡ ಸಾಧನಗಳು ದುರಸ್ಥಿಯಾಗಿದೆ, ಸದರಿ ಸಾಧನ ಸಲಕರಣೆಗಳನ್ನು ದುರಸ್ಥಿ ಸರಿಪಡಿಸಲು ಟೆಂಡರ್ ಆಹ್ವಾನಿಸಬೇಕಾಗಿದ್ದು, ಎಸ್.ಆರ್ ದರ ಲಭ್ಯವಿಲ್ಲದ ಕಾರಣ ಅಂದಾಜು ಪಟ್ಟಿಯನ್ನು ತಯಾರಿಸಲು ದರಗಳನ್ನು ಆಸಕ್ತಿಯುಳ್ಳ ಸರಬರಾಜುದಾರರು/ಗುತ್ತಿಗೆದಾರರು/ಅಂಗಡಿ ಮಾಲೀಕರು ವಿವರಗಳನ್ನೊಳಗೊಂಡ ದರಗಳನ್ನು **ದಿನಾಂಕ: 31.08.2024** ರೊಳಗಾಗಿ ಸಲ್ಲಿಸಲು ದರಪಟ್ಟಿ ಆಹ್ವಾನಿಸಲಾಗಿದೆ.

ಕ್ರ.ಸಂ	ವಿವರ
1	ಸಿ.ಸಿ ಕ್ಯಾಮೆರ
2	ಕುಡಿಯುವ ನೀರಿನ ಫಿಲ್ಟರ್ ದುರಸ್ಥಿ
3	ಗ್ರ್ಯಾಮಂರ್ ದುರಸ್ಥಿ
4	ಸ್ಟೀಮ್ ದುರಸ್ಥಿ
5	ಪಾತ್ರೆ ತೊಳೆಯುವ ಹೀಟರ್ ದುರಸ್ಥಿ
6	ಎಕ್ಸಿಟ್ ಫ್ಯಾನ್ ದುರಸ್ಥಿ
7	ಸೊಳ್ಳೆ ಲೈಟ್ ದುರಸ್ಥಿ

ಸಹಿ/- ಆಡಳಿತಾಧಿಕಾರಿ ಪುರಸಭೆ ಆನೇಕಲ್
ಸಹಿ/- ಮುಖ್ಯಾಧಿಕಾರಿ ಪುರಸಭೆ ಆನೇಕಲ್
ವಾಸಾಸಂಇ/ವಾ.ಪ್ರ/1591/ಶಿರಡಿ ಸಾಯಿ/2024-25

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ, ಹೊಸನಗರ
Email;- moghhosanagara@gmail.com Ph: 08185-221202
ಸಂಖ್ಯೆ:ಟೆಂಡರ್ ಪ್ರಕಟಣೆ ಸಂಖ್ಯೆ/ಇಪ್ರೊ/ಟೆಂ:/01/24-25 ದಿ: 19.08.2024

ಹೊರ ಗುತ್ತಿಗೆ ನಾನ್ ಕ್ಲಿನಿಕಲ್ ಮತ್ತು ಗ್ರೂಪ್ 'ಡಿ' ಸೇವೆ ಸಂಬಂಧ ಇ-ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಹೊಸನಗರ, ಶಿವಮೊಗ್ಗ ಜಿಲ್ಲೆ. ಇಲ್ಲಿನ 2024-25 ನೇ ಸಾಲಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಗ್ರೂಪ್ "ಡಿ" ಮತ್ತು ನಾನ್ ಕ್ಲಿನಿಕಲ್ ಸ್ವಚ್ಚತಾ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಅಹ್ವಾನಿಸಿದ್ದು, ಬಿಡ್‌ದಾರರು ದಿನಾಂಕ: 26/08/2024 ರಂದು 5:00 ಸಂಜೆ ಕೊನೆಯ ದಿನಾಂಕ ಸೂಚಿಸಲಾಗಿದೆ. ಆಸಕ್ತ ಟೆಂಡರ್‌ದಾರರು ದಿನಾಂಕ: 19/08/2024 ನಂತರ ಇಲಾಖಾ ವೆಬ್ ಸೈಟ್ ಗೆ www.kppp.karnataka.gov.in ಲಾಗ್ ಆನ್ ಮಾಡತಕ್ಕದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 26/08/2024. ಇ-ಪೋರ್ಟಲ್‌ನಲ್ಲಿ ಸೂಚಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಇ-ಪೋರ್ಟಲ್ ನಲ್ಲಿ ಪಡೆಯತಕ್ಕದ್ದು ಇ-ಟೆಂಡರಿನೊಂದಿಗೆ ಪಾವತಿಸ (ಟೆಂಡರ್ ಮೊತ್ತ ರೂ.41 ಲಕ್ಷಕ್ಕೆ ಇ.ಎಂ.ಡಿ. 2.5%) ಬೇಕಾದ ಇ.ಎಂ.ಡಿ ಮೊತ್ತ ರೂ.102,500/- (ರೂಪಾಯಿ ಒಂದು ಲಕ್ಷದ ಎರಡು ಸಾವಿರದ ಐದನೂರು ಮಾತ್ರ) ಆಸಕ್ತ ಅರ್ಹ

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಹೊಸನಗರ ಶಿವಮೊಗ್ಗ ಜಿಲ್ಲೆ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/128/08/529

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ
ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
E-mail : ltstaff_ulb_hebbagodi@yahoo.com website : www.hebbagodicity.mrc.gov.in
ಸಂಖ್ಯೆ: ಹೆ.ನ.ಸ/ಆ.ಶಾ/ಟೆ.ಪ್ರ/-02/2024-25 ದಿನಾಂಕ: 22.08.2024

ಮರು ಟೆಂಡರ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆಗೆ 15ನೇ ಹಣಕಾಸು ಯೋಜನೆ ಮಿಲಿಯನ್ ಪ್ಲಸ್ ಸಿಟಿ ನಿಧಿಯಲ್ಲಿ 1 ಸಂಖ್ಯೆ 14 ಕ್ಯೂ.ಮೀ. ಸಾಮರ್ಥ್ಯದ ಕಾಂಪ್ಯಾಕ್ಟರ್ (ಮೊತ್ತ ರೂ. 40 ಲಕ್ಷಗಳು) ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಜಿ. 2 ದಸ್ತಾವೇಜಿನಂತೆ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30/08/2024 ರ ಸಂಜೆ 4.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 31/08/2024 ರಂದು ಸಂಜೆ 05:00 ಗಂಟೆಗೆ, ಹೆಚ್ಚಿನ ಮಾಹಿತಿಗೆ । ಯಾವುದೇ ರೀತಿ ಬದಲಾವಣೆ ತಿದ್ದುಪಡಿಯಿದ್ದಲ್ಲಿ (ಕೋರಿಜಂಡಮ್) **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಬಹುದಾಗಿದೆ.

ಕೊಟೇಶನ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ ನೈರ್ಮಲ್ಯ / ಸುರಕ್ಷತಾ ಸಾಮಗ್ರಿಗಳು ಮತ್ತು ಕ್ರಿಮಿನಾಶಕಗಳನ್ನು ಖರೀದಿಸಲು ಟೆಂಡರ್ ಕರೆಯಬೇಕಿದ್ದು, ಸದರಿ ಸಾಮಗ್ರಿಗಳ ದರ ನಿಗದಿಪಡಿಸಲು ಅಧಿಕೃತ ಸರಬರಾಜು ಸಂಸ್ಥೆಗಳಿಂದ ಕೊಟೇಷನ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಸೀಲು ಮಾಡಿದ ಲಕೋಟೆಯೊಂದಿಗೆ **ದಿನಾಂಕ: 30.08.2024 ರ ಸಂಜೆ 4.30 ಗಂಟೆಯೊಳಗೆ** ಸಲ್ಲಿಸಲು ಸೂಚಿಸಿದೆ. ಸುರಕ್ಷತಾ ಸಾಮಗ್ರಿಗಳು ಮತ್ತು ಕ್ರಿಮಿನಾಶಕಗಳ ವಿವರಗಳು ಹಾಗೂ ತಾಂತ್ರಿಕ ವಿವರಣೆಯನ್ನು ಕಛೇರಿಯಿಂದ ಪಡೆಯುವುದು.

ಸಹಿ/- ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ.
ವಾಸಸಂಇ/ವಾ.ಪ್ರ./1589/ಎಸ್‌ಎಸ್‌ಸಿ/2024-25

ಮಹಾ ಸಿಎಂಗೆ ರಕ್ತದಲ್ಲಿ ಪತ್ರ ಬರೆದ ಯುವಕ

ಬೆಳಗಾವಿ: ಭಾಷಾ ವಿಷಯದಲ್ಲಿ ಸದಾಕಾಲವೂ ಕನ್ನಡಿಗರ ವಿರೋಧಿ ನಡೆ ಹೊಂದಿರುವ ಮಹಾರಾಷ್ಟ್ರ ಮುಖ್ಯಮಂತ್ರಿಗೆ ಅವರದೇ ರಾಜ್ಯದ ಯುವಕನೋರ್ವ ತನ್ನ ಆಪ್ತ ಸ್ನೇಹಿತನಿಗೆ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವಂತೆ ರಕ್ತದಲ್ಲಿ ಕನ್ನಡ ಪತ್ರ ಬರೆಯುವ ಮೂಲಕ ಭಾಷಾ ಪ್ರೇಮ ಮೆರೆದಿದ್ದಾನೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಟಿಕೆಟ್ ಜ್ವರ ಜೋರಾಗಿದೆ. ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ಸೇರಿದಂತೆ ಅನೇಕ ಭಾಗಗಳಲ್ಲಿ ಕನ್ನಡ ಭಾಷಿಕ ಮತದಾರರೇ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ಗಡಿ ಭಾಗದ ಮಹಾರಾಷ್ಟ್ರ ಜನಪ್ರತಿನಿಧಿಗಳು ಸದ್ಯ ಕನ್ನಡಿಗರ ಮತ ಸೆಳೆಯಲು ಕಸರತ್ತು ಮಾಡುತ್ತಿದ್ದಾರೆ. ಈ ಮಧ್ಯೆ ಜತ್ತ ತಾಲೂಕಿನ ಬಿಳ್ಳೂರ ಗ್ರಾಮದ ಯುವಕ ಹಾಗೂ ತನ್ನ ಆಪ್ತ ಸ್ನೇಹಿತನಿಗೆ ಬಿಜೆಪಿ ಟಿಕೆಟ್ ನೀಡುವಂತೆ ಮಹಾರಾಷ್ಟ್ರ ಸಿಎಂಗೆ ಕನ್ನಡದಲ್ಲಿ ಪತ್ರ ಬರೆದಿದ್ದಾನೆ.

ಕನ್ನಡ ಭಾಷಾ ಪ್ರೇಮ ಮೆರೆದ ಯುವಕ ಬಿಜೆಪಿ ಪ್ರಚಾರ ಸಮಿತಿ ಅಧ್ಯಕ್ಷ ತಮ್ಮನಗೌಡ ಪಾಟೀಲ್‌ಗೆ ಬರುವ ವಿಧಾನಸಭೆ ಚುನಾವಣೆಯಲ್ಲಿ ಜತ್ತ ತಾಲೂಕಿನಿಂದ ಬಿಜೆಪಿ ಅಥವಾ ಮಿತ್ರಪಕ್ಷದಿಂದ ಟಿಕೆಟ್ ನೀಡಬೇಕೆಂದು ಪೀರ್ ಕೋಳಿ ರಕ್ತದಲ್ಲೇ ಪತ್ರ ಬರೆದಿದ್ದಾನೆ. ವಿಶೇಷ ಎಂದರೆ ಈ ಪತ್ರ ಕನ್ನಡದಲ್ಲಿದೆ. ಭಾಷಾ ವಿಷಯದಲ್ಲಿ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಯಾವತ್ತೂ ಕರ್ನಾಟಕ ವಿರೋಧಿ ನಡೆಯನ್ನೇ ಹೊಂದಿದವರು. ಆದರೆ ಈಗ ಸಿಎಂಗೆ ಕನ್ನಡದಲ್ಲಿ ಪತ್ರ ಬರೆಯುವ ಮೂಲಕ ಯುವಕ ಭಾಷಾ ಪ್ರೀತಿ ಮೆರೆದಿದ್ದಾನೆ. ಯುವಕ ಪೀರ್ ಕೋಳಿ ತನ್ನ ಕೃಷಿ ಕಾಯಕದೊಂದಿಗೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದು ರಾಜಕೀಯದಲ್ಲೂ ಗುರುತಿಸಿಕೊಂಡಿದ್ದಾನೆ. ಹಲವು ಬಾರಿ ಗಡಿಭಾಗದ ಸಮಸ್ಯೆ ಕುರಿತು ಹೋರಾಟಗಳ ಮೂಲಕ ಮಹಾರಾಷ್ಟ್ರ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತಾ ಬಂದಿದ್ದಾನೆ. ಮಹಾರಾಷ್ಟ್ರದ ಜತ್ತ ತಾಲೂಕಿನಲ್ಲಿ 'ಜತ್ ಕನ್ನಡಿಗರು' ಹೆಸರಿನ ಸಂಘಟನೆ ಸದಸ್ಯನಾಗಿ ಕನ್ನಡಪರ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾನೆ.

ಹರಿಹರ ತುಂಗಭದ್ರಾನದಿಯ ತಟದಲ್ಲಿರುವ ಶ್ರೀ ಗುರು ರಾಘವೇಂದ್ರ ಸ್ವಾಮಿಗಳವರ 353 ನೇ ಆರಾಧನಾ ಮಹೋತ್ಸವದಲ್ಲಿ ವೀರಶೈವ -ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳು ಭಾಗವಹಿಸಿದ್ದರು.

ಡಿಕೆಗೆ ಲೋಕಾ ಡ್ರಿಲ್

← ಮೊದಲಪುಟದಿಂದ

ಲೋಕಾಯುಕ್ತ ಅಧಿಕಾರಿಗಳು ಎರಡ್ಮೂರು ಗಂಟೆ ವಿಚಾರಣೆ ಮಾಡಿದರು. ಏನೇನೋ ಪ್ರಶ್ನೆ ಕೇಳಿ ಹಿಂಸೆ ಕೊಟ್ಟಿದ್ದಾರೆ. ಹಲವು ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಕೆಲ ಪ್ರಶ್ನೆಗಳಿಗೆ ದಾಖಲೆ ರೂಪದಲ್ಲಿ ಉತ್ತರಿಸುವುದಾಗಿ ತಿಳಿಸಿದ್ದೇನೆ. ವಿಚಾರಣೆಗೆ ಕರೆದಾಗ ಬರಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ. ಇವರಿಗಿಂತ (ಲೋಕಾಯುಕ್ತ ಇಲಾಖೆ) ಸಿಬಿಐನವರೇ ಪರವಾಗಿಲ್ಲ. ಏಕೆಂದರೆ ಆರೋಪ ಸಂಬಂಧ ಸಿಬಿಐ ಅಧಿಕಾರಿಗಳು ಒಂದು ದಿನವೂ ವಿಚಾರಣೆಗೆ ಕರೆದಿಲ್ಲ, ಪ್ರಶ್ನೆ ಕೇಳಿಲ್ಲ ಎಂದು ಪ್ರತಿಕ್ರಿಯಿಸಿದರು.

ಅಕ್ರಮ ಆಸ್ತಿ ಗಳಿಕೆ ಆರೋಪ ಸಂಬಂಧ ಡಿ.ಕೆ.ಶಿವಕುಮಾರ್ ಮನೆ ಹಾಗೂ ಕಚೇರಿಗಳ ಮೇಲೆ 2017ರಲ್ಲಿ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದರು. ಬಳಿಕ ಇ.ಡಿ.ಅಧಿಕಾರಿಗಳು ಬಂಧಿಸಿದ್ದರು. 2019ರಲ್ಲಿ ಇ.ಡಿ. ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಸಿಬಿಐ, ಭ್ರಷ್ಟಾಚಾರ ನಿಗ್ರಹ ಕಾಯಿದೆಯಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು. ಅಂದಿನ ರಾಜ್ಯ ಬಿಜೆಪಿ ಸರಕಾರ ಸಿಬಿಐಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬಳಿಕ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರವು ಸಿಬಿಐಗೆ ನೀಡಿದ್ದ ಅನುಮತಿ ರದ್ದುಪಡಿಸಿ ಆದೇಶಿಸಿತ್ತು.

ವರ್ಗಾವಣೆಯಾಗದ ಕೇಸ್‌ಫೈಲ್

ಡಿಕೆಶಿ ವಿರುದ್ಧ ಸಿಬಿಐಗೆ ನೀಡಿರುವ ಪ್ರಕರಣವನ್ನು ಹಿಂಪಡೆದು ಲೋಕಾಯುಕ್ತ ಸಂಸ್ಥೆಗೆ ತನಿಖೆ ನಡೆಸುವಂತೆ ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಸಿಬಿಐ ಕೋರ್ಟ್ ಮೆಟ್ಟಿಲೇರಿದೆ. ಮತ್ತೊಂದೆಡೆ ಲೋಕಾಯುಕ್ತ ಅಧಿಕಾರಿಗಳು, ಸಿಬಿಐನಿಂದ ಪ್ರಕರಣ ಕಡತ ವರ್ಗಾವಣೆ ಮಾಡುವಂತೆ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಮುಂದಿನ ವಾರದೊಳಗೆ ಈ ಬಗ್ಗೆ ಆದೇಶ ಹೊರಬೀಳುವ ಸಾಧ್ಯತೆಯಿದೆ.

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024-25/1525 ದಿನಾಂಕ:19.08.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022-23 ನೇ ಸಾಲಿನ ಆರ್.ಆಯ್.ಡಿ.ಎಫ್. ನಬಾರ್ಡ-28 ಯೋಜನೆಯಡಿಯಲ್ಲಿ ಈ ಕಚೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 1525 ದಿನಾಂಕ: 19.08.2024 ರಂತೆ ರೂ. 155.397 ಲಕ್ಷಗಳ ಒಟ್ಟು 3 ಕಾಮಗಾರಿಗಳು ಹಾಗೂ ರೂ. 160.592 ಲಕ್ಷಗಳ 1 ಕಾಮಗಾರಿ ಒಟ್ಟು 4 ಕಾಮಗಾರಿಗಳನ್ನು ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka. gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/186/ಕೆಎಸ್‌ಎಂಸಿಎ/2024-25

ಮುಷ್ಕರ ಕೈಬಿಟ್ಟ ಕಿರಿಯ ವೈದ್ಯರು

ಹುಬ್ಬಳ್ಳಿ: ಸರ್ಕಾರ ಸ್ನಾತಕ ವೈದ್ಯರ ಶಿಷ್ಯವೇತನ ಹೆಚ್ಚಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕ ಸ್ನಾತಕ ವೈದ್ಯರ ಸಂಘದ (ಕೆಆರ್‌ಡಿ) ನೇತೃತ್ವದಲ್ಲಿ ಕಿಮ್ಸ್‌ನಲ್ಲಿ ಕಿರಿಯ ವೈದ್ಯರು ಕಳೆದ 10 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಗುರುವಾರ ಕೈಬಿಟ್ಟಿದ್ದಾರೆ.

ತುರ್ತು ವೈದ್ಯಕೀಯ ಸೇವೆಗಳನ್ನು ಹೊರತುಪಡಿಸಿ ಹೊರರೋಗಿಗಳ ವಿಭಾಗ ಸೇರಿದಂತೆ ಎಲ್ಲ ವಿಭಾಗಗಳ ಸೇವೆಗಳನ್ನು ಸ್ಥಗಿತಗೊಳಿಸಲಾಗಿತ್ತು. 500ಕ್ಕೂ ಹೆಚ್ಚು ಕಿರಿಯ ವೈದ್ಯರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಕಿಮ್ಸ್ ಕಿರಿಯ ವೈದ್ಯರ ಸಂಘದ ಅಧ್ಯಕ್ಷ ಡಾ.ಸುಹಾಸ ಎಸ್.ಟಿ ಮಾತನಾಡಿ, ಸ್ನಾತಕ ವೈದ್ಯರ ಶಿಷ್ಯವೇತನವನ್ನು ಶೇ 25ರಷ್ಟು ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿರುವುದು ಸ್ವಾಗತಾರ್ಹ. ಇನ್ನು ಮುಂದೆ ಇಂತಹ ಮುಷ್ಕರಕ್ಕೆ ಆಸ್ಪದ ಕೊಡದಂತೆ ಕಾಲಕಾಲಕ್ಕೆ ಶಿಷ್ಯವೇತನ ಹೆಚ್ಚಳ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕೆಲಸ ಸ್ಥಳದಲ್ಲಿ ವೈದ್ಯರಿಗೆ ರಕ್ಷಣೆಗೆ ಒದಗಿಸಬೇಕು. ಬೇರೆ ರಾಜ್ಯಗಳ ವೈದ್ಯಕೀಯ ಕೋರ್ಸ್‌ಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹೆಚ್ಚು ಶುಲ್ಕ ಇದ್ದು, ಅದನ್ನು ಕಡಿಮೆ ಮಾಡಬೇಕು. ಈ ಬೇಡಿಕೆಗಳ ಈಡೇರಿಕೆ ಕುರಿತು ಮೌಖಿಕವಾಗಿ ಭರವಸೆ ನೀಡಲಾಗಿದೆ. ಕೂಡಲೇ ಇವುಗಳನ್ನು ಈಡೇರಿಸಬೇಕು ಎಂದು ಡಾ. ಸುಹಾಸ್ ಆಗ್ರಹಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ರಾಯಚೂರು - 584 101.
(ಹಳೆ ಜಿಲ್ಲಾ ಆಸ್ಪತ್ರೆ ಅವರಣ, ಏಕಮಿನಾರ್ ಮಸೀದ್ ಹಿಂದುಗಡೆ)
ಇ ಮೇಲ್: dhoraichur@gmail.com. ದೂರವಾಣಿ: 08532-226020
ಸಂಖ್ಯೆ: ಜಿ.ಆ&ಕು.ಕ.ಸ.ಅ/ಎನ್.ಹೆಚ್.ಎಂ/ಗು-ವಾ.ಟೆಂ//2024-25 ದಿನಾಂಕ:14.08.2024.

ಅಲ್ಪಾವಧಿ ಟೆಂಡರ್

ರಾಯಚೂರು ಜಿಲ್ಲೆಗೆ 15ನೇ ಹಣಕಾಸು ಯೋಜನೆ ಅಡಿಯಲ್ಲಿ 42 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 6 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಡಯಾಗ್ನಾಸ್ಟಿಕ್ ಇಕ್ವಿಪ್ಮೆಂಟ್ಸ್ ಪೂರೈಕೆ ಬಗ್ಗೆ.
1) ಟೆಂಡರ್‌ಉಲ್ಲೇಖ ಸಂಖ್ಯೆ ಮತ್ತು ದಿನಾಂಕ: DHFWS/2024-25/IND0874 ದಿನಾಂಕ: 14.08.2024 2) ಟೆಂಡರ್ ಪ್ರಾರಂಭ ದಿನಾಂಕ: 14.08.2024 **3) ಟೆಂಡರ್ ಸಲ್ಲಿಸಲುಕೊನೆಯ ದಿನಾಂಕ ಮತ್ತು ಸಮಯ:** 29.08.2024 17:00 ಗಂಟೆಗೆ **4) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ:** 31.08.2024 11:00 ಗಂಟೆಗೆ **5) ಆರ್ಥಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ:** 5.09.2024 11:00 ಗಂಟೆಗೆ **6) ಸಂವಹನಕ್ಕಾಗಿ ವಿಳಾಸ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಏಕ್. ಮಿನಾರ್‌ರೋಡ್, ರಾಯಚೂರು -584101. **7) ಅಂದಾಜು ವೆಚ್ಚ:** ರೂ- 1,36,97,400/- **8)** ಇ.ಎಂ.ಡಿ **ಮೊತ್ತ:** ರೂ. 2,05,461/- ಹೆಚ್ಚಿನ ಮಾಹಿತಿಗಾಗಿ ಸೇವಾ ಪೂರೈಕೆದಾರರು ವೆಬ್ ಸೈಟ್ http://kppp.karnataka.gov.in.ಪೋರ್ಟಲ್ ನಲ್ಲಿ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಯಚೂರು
DIP/RCR/259/KSMC&A/258/2024-25

ನದಿಗಳು ಕಲುಷಿತ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ, ರಾಜ್ಯದ 10 ಪ್ರಮುಖ ನದಿಗಳು ಕಲುಷಿತಗೊಂಡಿವೆ. ನಗರ ಮತ್ತು ಪಟ್ಟಣ ಪ್ರದೇಶಗಳ ಒಳಚರಂಡಿ ನೀರು ಹಾಗೂ ಆಯಾ ಜಲಾನಯನ ಪ್ರದೇಶಗಳಲ್ಲಿನ ಕೈಗಾರಿಕೆಗಳ ತ್ಯಾಜ್ಯಗಳು ನೇರವಾಗಿ ನದಿಯೊಡಲು ಸೇರುತ್ತಿರುವುದರಿಂದ ಕಲುಷಿತಗೊಂಡಿವೆ ಎಂದು ವರದಿ ಸ್ಪಷ್ಟಪಡಿಸಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಮಾಣಪತ್ರ ಸಲ್ಲಿಸಿದೆ.

ಟ್ವೀಟೂ-ಖಾರಾ

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸಿದ್ಧಕರ್ಮಿ ಸಿದ್ದರಾಮಯ್ಯನವರೇ, ನಿಮ್ಮ ವಿರುದ್ಧ ಬಂದ ಮುಡಾ ಕೊಚ್ಚೆಯ ಗಮನ ಬೇರೆಡೆ ಸೆಳೆಯುವ ನಿಮ್ಮ ಹುನ್ನಾರ ನನಗೆ ಅರ್ಥವಾಗುತ್ತದೆ. ಹೇಗಾದರೂ ಅಧಿಕಾರದಲ್ಲೇ ಉಳಿದು ಲೂಟಿ ಹೊಡೆಯಬೇಕೆನ್ನುವ ನಿಮ್ಮ ಧನದಾಹದ ಹಪಾಹಪಿಯನ್ನೂ ಅರ್ಥಮಾಡಿಕೊಳ್ಳಬಲ್ಲೆ...ನಿಮ್ಮ ಪಟಾಲಂ ಹೆಲಿಕಾಪ್ಟರ್‌ನಲ್ಲಿ ಕದ್ದು ಸಾಗಿಸಿದ ಮುಡಾ ದಾಖಲೆಗಳು ಸುಳ್ಳಾ..? ಕಪ್ಪುಚುಕ್ಕೆಯನ್ನು ವೈಟ್ನರ್ ಅಳಿಸೀತಾ ಸಿದ್ದರಾಮಯ್ಯನವರೇ..?

ಹುಸೇನ್ ಮಾಣಿಕ್, ಬೆಂಗಳೂರು

ಇಡೀ ಕರ್ನಾಟಕಕ್ಕೆ ಗೊತ್ತು, ಸಿದ್ದರಾಮಯ್ಯ ಏನು ನೀವು ಏನು ಅಂತ. ನಿಮ್ಮ ಬಂಡಲ್ ಮಾತು ಯಾರೂ ನಂಬಲು ಸಾಧ್ಯವಿಲ್ಲ.

ಸಮಾಚಾರ ಸಣ್ಣದಲ್ಲ

ಬಿರುಸಿನ ಮಳೆ; ಉರುಳಿದ ಬಂಡೆಗಳು

ಸಕಲೇಶಪುರ: ಕಳೆದ ಎರಡು ದಿನಗಳಿಂದ ಚಾರ್ಮಾಡಿ ಘಾಟ್ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಅಲ್ಲಲ್ಲಿ ಸಣ್ಣ ಸಣ್ಣ ಗುಡ್ಡಗಳು ಕುಸಿಯುತ್ತಿವೆ., ಗುಡ್ಡ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಘಾಟ್ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಚಿಕ್ಕಮಗಳೂರು-ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಚಾರ್ಮಾಡಿ ಘಾಟ್ ಮಾರ್ಗ ಇದಾಗಿದ್ದು, 8 ಮತ್ತು 9ನೇ ತಿರುವಿನಲ್ಲಿ ಗುಡ್ಡಗಳು ಕುಸಿದಿವೆ ಎನ್ನಲಾಗಿದೆ, ನಿರಂತರ ಮಳೆಯಿಂದಾಗಿ ರಸ್ತೆಯಲ್ಲಿ ರಭಸದಿಂದ ನೀರು ಹರಿಯುತ್ತಿದೆ. ಮಳೆ ನೀರಿನ ಜೊತೆ ಕಲ್ಲುಗಳು ರಸ್ತೆಗೆ ತೇಲಿ ಬಂದಿದ್ದು ಭೂಕುಸಿತ ಮತ್ತು ವಾಹನಗಳ ಸಂಚಾರ ಸಮಸ್ಯೆ ಭೀತಿ ತಲೆದೋರಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳ' ತಂಡ ಪ್ರದೇಶಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಆದರೆ ಗುಡ್ಡ ಕುಸಿತಗಳಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆ ಇಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



ಸಿಲಿಂಡರ್ ಸ್ಫೋಟ; ವ್ಯಕ್ತಿ ಸಾವು

ಚಿಕ್ಕೋಡಿ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸದಲಗಾದ ಮನೆಯಲ್ಲಿ ಅಡುಗೆ ಅನಿಲದ ಸಿಲಿಂಡರ್ ಸ್ಫೋಟಗೊಂಡು ವ್ಯಕ್ತಿಯೊಬ್ಬರು ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಬುಧವಾರ ಸಂಜೆ ಸಂಭವಿಸಿದೆ. ಕೂಲಿ ಕೆಲಸಕ್ಕಾಗಿ ಬಂದು ಸದಲಗಾದಲ್ಲಿ ನೆಲೆಸಿದ್ದ ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಸೂರ್ಯಕಾಂತ ಸೆಳಕೆ(55) ಮೃತ ದುರ್ದೈವಿ. ಇನ್ನೋರ್ವ ಕಾರ್ಮಿಕ ಜ್ಞಾನೋದಯ ಗಂಭೀರವಾಗಿ ಗಾಯಗೊಂಡಿದ್ದು ಚಿಕ್ಕೋಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಿಲಿಂಡರ್ ಸ್ಫೋಟದ ತೀವ್ರತೆಗೆ ಪಕ್ಕದ ಮನೆಯ ಗೋಡೆಗಳು ಧ್ವಂಸಗೊಂಡಿದ್ದು, ಗೋಡೆ ಕೆಳಗೆ ಸಿಲುಕಿದ ಇಬ್ಬರು ಮಕ್ಕಳಿಗೆ ಸಣ್ಣಪುಟ್ಟ ಗಾಯವಾಗಿದೆ. ಸ್ಥಳೀಯ ಆಸ್ಪತ್ರೆಯಲ್ಲಿ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಸದಲಗಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

10 ರು. ಆಮಿಷ: ಬಾಲಕಿಗೆ ಲೈಂಗಿಕ ಕಿರುಕುಳ

ಬೆಳಗಾವಿ: ಹತ್ತು ರು. ಆಮಿಷವೊಡ್ಡಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಘಟನೆ ಜಿಲ್ಲೆಯ ನಿಪ್ಪಾಣಿಯಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಆಸಿಫ್ ಬಾಗವಾನ ಎಂಬ ವಿಕೃತಕಾಮಿ ಐದು ದಿನಗಳ ಹಿಂದೆ ಈ ಬಾಲಕಿಗೆ 10 ರುಪಾಯಿ ಆಸೆ ತೋರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂದು ದೂರಲಾಗಿದೆ. ನಿಪ್ಪಾಣಿಯ ಬಾದಲ್ ಫ್ಲ್ಯಾಟ್ ನಲ್ಲಿ ಈ ಘಟನೆ ನಡೆದಿದ್ದು, ಬಾಲಕಿಯ ಅಂಗಾಂಗ ಮುಟ್ಟಿದಾಗ ಪಾಲಕರಿಗೆ ಆಕೆ ತಿಳಿಸಿದ್ದಾಳೆ. ಬಳಿಕ ಕಾಮುಕ ಆಸಿಫ್‌ನನ್ನು ಪಾಲಕರು ಥಳಿಸಿದ್ದಾರೆ. ಈ ಕುರಿತು ಬುಧವಾರ ದಿ. ನಿಪ್ಪಾಣಿ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

{ **ಮುರುಗೇಶ್ ನಿರಾಣಿ** } ಮಾಜಿ ಸಚಿವ

ಈ ಹಿಂದಿನ ಬಿಜೆಪಿ ಸರಕಾರದಲ್ಲಿ ನಾನು ಕೈಗಾರಿಕಾ ಸಚಿವನಾಗಿದ್ದಾಗ ಹಗರಣ ನಡೆದಿದೆ ಎಂದು ನನ್ನ ವಿರುದ್ಧ ಮಾಡಿರುವ ಆರೋಪಗಳಲ್ಲಿ ಹುರುಳಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ.ಆದರೂ ಕಾಂಗ್ರೆಸ್ ನಾಯಕರು ನನ್ನ ಹೆಸರು ಪ್ರಸ್ತಾಪಿಸಿ ತೇಜೋವಧೆಗೆ ಪ್ರಯತ್ನಿಸುತ್ತಿದ್ದಾರೆ. ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ.

ಈ ಹಿಂದೆ ಭಾರಿ ವಿವಾದಕ್ಕೆ ಕಾರಣವಾಗಿದ್ದ ಜಿಂದಾಲ್ ಭೂಹಂಚಿಕೆ ವಿವಾದ
ಬೆಂಗಳೂರಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಭೂಮಿ ಬಿಟ್ಟುಕೊಡುವವರಿಗೆ ಬಂಪರ್

ಜಿಂದಾಲ್ ಭೂಮಿ ಕ್ರಯಕ್ಕೆ ರಾಜ್ಯ ಸರಕಾರದ ಒಪ್ಪಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲವರ್ಷದ ಹಿಂದೆ ತೀವ್ರ ವಿವಾದಕ್ಕೆ ಕಾರಣವಾಗಿದ್ದ ಜಿಂದಾಲ್ ಭೂಹಂಚಿಕೆ ವಿವಾದ ಕೊನೆಗೂ ಅಂತ್ಯವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರ ಜಿಂದಾಲ್‌ಗೆ ಶುದ್ಧ ಕ್ರಯಪತ್ರ ಮಾಡಿಕೊಳ್ಳಲು ಅನುಮೋದನೆ ನೀಡಿದೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದ್ದು, ಸುಮಾರು 3667 ಎಕರೆ ಜಮೀನಿಗೆ ಪ್ರತಿ ಎಕರೆಗೆ 1.22 ಲಕ್ಷ ರು.ನಂತೆ ಕ್ರಯ ಮಾಡಿಕೊಡಲು ಒಪ್ಪಿಗೆ ನೀಡಲಾಗಿದೆ. ಈ ಹಿಂದೆ ಈ ಜಮೀನು ಹಸ್ತಾಂತರಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಆದರೀಗ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ತೋರಣಗಲ್ಲು, ಕುರೇಕುಪ್ಪೆ ಗ್ರಾಮದಲ್ಲಿ ಎರಡು ಸಾವಿರ ಎಕರೆ, ಯರಬನಹಳ್ಳಿ ಗ್ರಾಮದಲ್ಲಿ 1666.73 ಎಕರೆ ಸೇರಿದಂತೆ ಒಟ್ಟು 3667.31 ಎಕರೆ ಜಮೀನನ್ನು ಶುದ್ಧ ಕ್ರಯಪತ್ರ ಮಾಡಿಕೊಡಲು ಒಪ್ಪಿಗೆ ನೀಡಲಾಗಿದೆ.

ಇನ್ನು, ಬೆಂಗಳೂರನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಭೂಮಿ ಬಿಟ್ಟುಕೊಡುವ ಮಾಲೀಕರು ಒಪ್ಪುವ ಪರಿಹಾರ ಮೊತ್ತವನ್ನು ಸರಕಾರ ನಿಗದಿಪಡಿಸಲು ಒಪ್ಪಿಗೆ ನೀಡಲಾಗಿದೆ. ಈ ಮೂಲಕ ರಸ್ತೆ ವಿಸ್ತರಣೆ, ಮೂಲ ಸವಲತ್ತು ಅಭಿವೃದ್ಧಿ ಸೇರಿ ಇನ್ನಿತರ ಕೆಲಸಗಳಿಗೆ ಎದುರಾಗಿದ್ದ ಅಡಚಣೆಯನ್ನೂ ನಿವಾರಿಸಿದೆ.

ಮಾರ್ಗಸೂಚಿ ಪ್ರಕಟಣೆಗೆ ಸಂಪುಟ ಅಸ್ತು

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು ಯೋಜನೆಯಲ್ಲಿ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತದೆ. ಈ ಪ್ರಕ್ರಿಯೆಗಳಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರಡಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮಾರ್ಗಸೂಚಿಗಳನ್ವಯ ಸಾರ್ವಜನಿಕರಿಗೆ ಭೂ ಪರಿಹಾರ ನೀಡಲು ಮಾರ್ಗಸೂಚಿ ಪ್ರಕಟಿಸುವುದಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದು ವಿವರಿಸಿದರು.

ಕೃಷಿ ಜಮೀನು, ಭೂಪರಿವರ್ತಿತವಾದರೂ ಅಭಿವೃದ್ಧಿ ಹೊಂದದಿರುವ ಹಾಗೂ ಅಭಿವೃದ್ಧಿ ಹೊಂದಿದ ಭೂಮಿ ಎಂದು ಮೂರು ವರ್ಗಗಳಲ್ಲಿ ವಿಂಗಡಿಸಿ ಪರಿಹಾರ ನಿಗದಿಪಡಿಸಲಾಗುತ್ತಿತ್ತು. ಆದರೆ ಮೊದಲ ಎರಡು ವರ್ಗಗಳ ಭೂಮಿ ಮಾಲೀಕರು ಕಡಿಮೆ ದರವೆಂದು ಹಿಂಜರಿಯುತ್ತಿದ್ದ ಕಾರಣ ಬೇಕಾದ ಭೂಮಿ ಲಭ್ಯವಾಗದೆ ಅಭಿವೃದ್ಧಿ ಕುಂಠಿತವಾಗುತ್ತಿತ್ತು. ಆದರೀಗ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕ್ರಮವಹಿಸಲಾಗಿದೆ.

ಸಂಪುಟದ ಇತರ ಪ್ರಮುಖ ತೀರ್ಮಾನ

- 592 ಅಂಗನವಾಡಿ ನಿರ್ಮಾಣಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 85 ಕೋಟಿ ರೂ. ನೀಡಲು ಒಪ್ಪಿಗೆ.
- ಕಾಲೇಜು ಶಿಕ್ಷಣ ಇಲಾಖೆ ಬೋಧಕ ಸಿಬ್ಬಂದಿ ವರ್ಗಾವಣೆ ನಿಯಮಕ್ಕೆ ಒಪ್ಪಿಗೆ.
- ಮಾನ್ವಿ ತಾಲೂಕಿನ ಚಿಕ್ಕಲಪರ್ವಿ ಗ್ರಾಮದಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣಕ್ಕೆ 397.50 ಕೋಟಿ
- ಕೈಗಾರಿಕೆ ಇಲಾಖೆ ನೇಮಕ ನಿಯಮ ತಿದ್ದುಪಡಿಗೆ ಅನುಮೋದನೆ
- ತೆರಿಗೆ ಪಾಲಿಗಾಗಿ ಕೇಂದ್ರ ಹಣಕಾಸು ಆಯೋಗಕ್ಕೆ ಮನವಿ ಪತ್ರ ಸಲ್ಲಿಸಲು ಒಪ್ಪಿಗೆ
- ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಯಕ್ಷಮತೆ ಹೆಚ್ಚಿಸಲು ರ್‍ಯಾಂಪ್ ಕಾರ್ಯಕ್ರಮದಲ್ಲಿ ಕೇಂದ್ರದ 118 ಕೋಟಿ ಹಾಗೂ ರಾಜ್ಯದ 29.25 ಕೋಟಿ ರು. ವೆಚ್ಚದಲ್ಲಿ ಅನುಷ್ಠಾನ
- ಆಯುಷ್ಮಾನ್ ಭಾರತ್ ಎಲ್ಲ ಉಪಕ್ರಮಗಳ ಅನುಷ್ಠಾನಕ್ಕೆ ಡಿಜಿಟಲ್ ಕರ್ನಾಟಕ ಡಿಜಿಟಲ್ ಹೆಲ್ತ್ ಸೊಸೈಟಿ ಸ್ಥಾಪನೆ.
- ಕೇಂದ್ರ ಭೂಸಾರಿಗೆ ಇಲಾಖೆ ಸಹಯೋಗದೊಂದಿಗೆ ರಸ್ತೆ ಮೂಲ ಸೌಕರ್ಯ ನಿಧಿ ಯೋಜನೆಗೆ ಅನುಮೋದನೆಗೊಂಡ 1385 ಕೋಟಿ ರು. ಕಾಮಗಾರಿಗೆ ಆಡಳಿತಾತ್ಮಕ ಒಪ್ಪಿಗೆ.
- ಹೊಂಬೆಳಕು ಯೋಜನೆಯಲ್ಲಿ 50 ಗ್ರಾಮ ಪಂಚಾಯಿತಿಗಳಲ್ಲಿ ಸೋಲಾರ್ ಬೀದಿದೀಪ ಅಳವಡಿಕೆಗೆ 25 ಕೋಟಿ

ಪರಿಷ್ಕೃತ ಮಾರ್ಗಸೂಚಿಯಲ್ಲಿ ಏನಿದೆ?

- ಕೃಷಿ ಭೂಮಿಯಾಗಿದ್ದಲ್ಲಿ ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸಲು ತಗಲುವ ಶುಲ್ಕ, ಅಭಿವೃದ್ಧಿ ಶುಲ್ಕ ಇನ್ನಿತರ ಶಾಸನಾತ್ಮಕ ಶುಲ್ಕಗಳನ್ನು ಪಾವತಿಸಿಕೊಂಡು ಈ ಭೂಮಿಗೆ ಅಭಿವೃದ್ಧಿ ಹೊಂದಿದ ವಸತಿ ಉದ್ದೇಶದ ದರದಲ್ಲಿ ಟಿಡಿಆರ್ ನೀಡುವುದು.
- ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲಾದ ಭೂಮಿಯು ವಸತಿ ಉದ್ದೇಶಕ್ಕೆ ಪರಿವರ್ತನೆಯಾಗಿದ್ದಲ್ಲಿ ಅಭಿವೃದ್ಧಿ ಇನ್ನಿತರ ಶಾಸನಾತ್ಮಕ ಶುಲ್ಕಗಳನ್ನು ಪಾಲಿಕೆ ಪಾವತಿಸಿ, ಅಭಿವೃದ್ಧಿ ಹೊಂದಿದ ವಸತಿ ಉದ್ದೇಶದ ದರ ನೀಡಬೇಕು.
- ನೇರವಾಗಿ ಬಿಬಿಎಂಪಿಯಿಂದ ಎ ಖಾತಾ ನೀಡಿರುವ ಪ್ರಕರಣಗಳಲ್ಲಿ ಅಭಿವೃದ್ಧಿ ಹೊಂದಿದ ದರ ನೀಡಬೇಕು.
- ಸಂಗ್ರಹಿಸಿದ ಶುಲ್ಕಗಳನ್ನು ಕಂದಾಯ ಇಲಾಖೆ ಸೇರಿ ಆಯಾ ಇಲಾಖೆ, ಸಂಸ್ಥೆ, ಪ್ರಾಧಿಕಾರಗಳಿಗೆ ಏಳು ದಿನದೊಳಗೆ ಪಾವತಿಸಬೇಕು.

ಹುಲಗಬಾಳ ತಾಂಡಾದ ಜನರಿಗೆ ಸಂಕಷ್ಟ, ಸೇತುವೆ ಮರುನಿರ್ಮಾಣಕ್ಕೆ ಆಗ್ರಹ

ಮಳೆಗೆ ತುಂಬಿ ಹರಿದ ಹಳ್ಳ ಕೊಚ್ಚಿಹೋದ ಸೇತುವೆ

ವಿಜಯಪುರ: ಜಿಲ್ಲೆಯ ವಿವಿಧ ಭಾಗಗಳಲ್ಲಿ ಬುಧವಾರ ತಡರಾತ್ರಿ ಹಾಗೂ ಗುರುವಾರ ಸಂಜೆ ಸುರಿದ ಧಾರಾಕಾರ ಮಳೆಗೆ ಕೆರೆ, ಹಳ್ಳ-ಕೊಳ್ಳಗಳು ತುಂಬಿ ಹರಿದಿದ್ದು, ಅಲ್ಲಲ್ಲಿ ಸೇತುವೆ ಹಾನಿ, ಬೆಳೆಹಾನಿ ಸಂಭವಿಸಿದೆ.

ಮಳೆಗೆ ಕೊಚ್ಚಿಹೋದ ಸೇತುವೆ : ಮುದ್ದೇಬಿಹಾಳ ತಾಲೂಕಿನ ಅಡವಿ ಹುಲಗಬಾಳ ಗ್ರಾಮದ ಹೊರಭಾಗದ ಸೇತುವೆ ತೀವ್ರ ಮಳೆಗೆ ಕೊಚ್ಚಿ ಹೋಗಿದೆ. ಇದರಿಂದ ಅಡವಿ ಹುಲಗಬಾಳ ಗ್ರಾಮದಿಂದ ಅಡವಿ ಹುಲಗಬಾಳ ತಾಂಡಾಗೆ ಸಂಪರ್ಕ ಕಲ್ಪಿಸುವ ರಸ್ತೆ ಬಂದ್ ಆಗಿದೆ. ಈ ಹಿಂದೆ ಎರಡು ಬಾರಿ ಕೊಚ್ಚಿಹೋಗಿದ್ದ ಸೇತುವೆ ಮತ್ತೇ ಈಗ ನೀರು ಪಾಲಾಗಿದೆ.

ಸೇತುವೆ ಕೊಚ್ಚಿಕೊಂಡು ಹೋದ ಪರಿಣಾಮ ಅಡವಿ ಹುಲಗಬಾಳ ತಾಂಡಾದ ಜನರು ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಕೂಡಲೇ ಗುಣಮಟ್ಟದ ಕಾಮಗಾರಿಯಿಂದ ಸೇತುವೆ ನಿರ್ಮಾಣಕ್ಕೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅಪಾರ ದ್ರಾಕ್ಷಿಬೆಳೆ ಹಾನಿ: ಬುಧವಾರ ತಡರಾತ್ರಿ ಸುರಿದ ಭಾರಿ ಮಳೆಗೆ ವಿಜಯಪುರ ತಾಲೂಕಿನ ಲೋಗಾಂವಿ ಗ್ರಾಮದಲ್ಲಿ ಅಪಾರ ಪ್ರಮಾಣದ ದ್ರಾಕ್ಷಿ ಬೆಳೆಗೆ ಹಾನಿಯಾಗಿದೆ. ರೈತ ರಾಜು ಹುನ್ನೂರ ಎಂಬುವವರಿಗೆ ಸೇರಿದ ದ್ರಾಕ್ಷಿತೋಟದಲ್ಲಿ ಭಾರಿ ಮಳೆಗೆ ದ್ರಾಕ್ಷಿ ಬೆಳೆಯ ಕಂಬಗಳು ಹಾಗೂ ದ್ರಾಕ್ಷಿಬೆಳೆ ಸಂಪೂರ್ಣ ನೆಲಕಚ್ಚಿವೆ. ಇದರಿಂದ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಬೆಳೆದ ದ್ರಾಕ್ಷಿ ಹಾನಿಯಾಗಿದ್ದು, ಸರ್ಕಾರ ಸೂಕ್ತ ಪರಿಹಾರ ನೀಡಬೇಕೆಂದು ರೈತ ಮನವಿ ಮಾಡಿದ್ದಾರೆ.

ಕುಪಕಡ್ಡಿ ಹಳ್ಳ ತುಂಬಿ ವಿದ್ಯಾರ್ಥಿಗಳು ಪರದಾಟ

ಎರಡು ದಿನಗಳ ಮಳೆಗೆ ವಿಜಯಪುರ ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಕುಪಕಡ್ಡಿ ಗ್ರಾಮದ ಹಳ್ಳ ತುಂಬಿ ಹರಿಯುತ್ತಿದ್ದು, ವಿದ್ಯಾರ್ಥಿಗಳು ಅನಿವಾರ್ಯವಾಗಿ ಹಳ್ಳದಾಟಿ ಅಪಾಯದ ನಡಿಗೆಯಲ್ಲೇ ಶಾಲೆಗೆ ಹೋಗಿ ಬರಬೇಕಾಗಿದೆ. ಗುರುವಾರ ಸಂಜೆ ಶಾಲೆ ಬಿಟ್ಟ ನಂತರ ತುಂಬಿ ಹರಿಯುವ ಹಳ್ಳದಾಟಲು ವಿದ್ಯಾರ್ಥಿಗಳು ಪರದಾಡಬೇಕಾಯಿತು. ಈ ವೇಳೆ ಕುಪಕಡ್ಡಿ ಆರ್.ಎಂ.ಎಸ್.ಎ ಸರ್ಕಾರಿ ಪ್ರೌಢಶಾಲೆಯ ಪ್ರಾಂಶುಪಾಲ ಎನ್.ಪಿ. ಹೊನ್ನಕಟ್ಟಿ, ಎಸ್‌ಡಿಎಂಸಿ ಅಧ್ಯಕ್ಷ ಚನ್ನಗೊಂಡಪ್ಪ ಬಿರಾದಾರ್ ಕಾಳಜಿಯಿಂದ ಶಾಲ ಮಕ್ಕಳನ್ನು ಸುರಕ್ಷಿತವಾಗಿ, ಜಾಗೃತಿಯಿಂದ ಹರಿವ ಹಳ್ಳ ದಾಟಿಸಿ ಕರ್ತವ್ಯಪ್ರಜ್ಞೆ ಮೆರೆದರು.

ರಾಯಚೂರು ಜಿಲ್ಲೆಯಲ್ಲಿ ಮಳೆಯ ಆರ್ಭಟ

ಕೊಚ್ಚಿಹೋದ ಮುಖ್ಯರಸ್ತೆ, ಜನ ಸಂಚಾರಕ್ಕೆ ತೊಂದರೆ

ರಾಯಚೂರು: ತಾಲೂಕಿನ ಬಿಚ್ಚಾಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬಿ.ಯದ್ಲಾಪುರು ಗ್ರಾಮದಲ್ಲಿ ಮಳೆಯ ಆರ್ಭಟಕ್ಕೆ ರಸ್ತೆ ಕೊಚ್ಚಿಹೋಗಿ ಸಂಪೂರ್ಣವಾಗಿ ಸಂಪರ್ಕ ಕಡಿತಗೊಂಡಿದೆ, ಹಿಂದಿನ ಸಲ ಕೂಡ ಮಳೆಗೆ ಈ ರಸ್ತೆ ಕೊಚ್ಚಿ ಹೋಗಿದ್ದು, ಈವರೆಗೆ ಅಧಿಕಾರಿಗಳು ಮತ್ತು ಗ್ರಾಮೀಣ ಶಾಸಕರು ತಿರುಗಿ ನೋಡಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ರಸ್ತೆ ದುರಸ್ತಿಯಾಗದೆ ದಿನನಿತ್ಯ ಮಕ್ಕಳು ಶಾಲೆಗೆ ಹೋಗಲು ಮತ್ತು ಸಾರ್ವಜನಿಕರಿಗೆ ಓಡಾಡಲು ದುಸ್ತರವಾಗಿದೆ. ರಸ್ತೆ ಸಂಪೂರ್ಣವಾಗಿ ಕೊಚ್ಚಿ ಹೋಗಿದ್ದರಿಂದ ರಸ್ತೆ ಬಂದ್ ಹಾಗಿದೆ. ಗ್ರಾಮದಿಂದ ನಿತ್ಯ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ರಸ್ತೆ ಮುಖಾಂತರ ಶಾಲೆ, ಕಾಲೇಜುಗಳಿಗೆ ಹೋಗುತ್ತಾರೆ. ಸಾರ್ವಜನಿಕರು ನಿತ್ಯ ಇದೇ ರಸ್ತೆ ಮೂಲಕ ಗಿಲ್ಲೇಸೂಗುರು, ರಾಯಚೂರು, ಮಂತ್ರಾಲಯ ಕಡೆ ಕೆಲಸ ಕಾರ್ಯಗಳ ಓಡಾಡುತ್ತಾರೆ. ತಕ್ಷಣವೇ ರಸ್ತೆ ದುರಸ್ತಿ ಮಾಡುವಂತೆ ಗ್ರಾಮಸ್ಥ ಆಗ್ರಹಿಸಿದ್ದಾರೆ.

ಸರಕಾರ ತಪ್ಪುದಾರಿಗೆ ಇಳಿದರೆ ರಾಜ್ಯಪಾಲರ ಕ್ರಮ

ತುಮಕೂರು: ಆಡಳಿತಾತ್ಮಕ ಸರಕಾರ ತಪ್ಪುದಾರಿಗೆ ಇಳಿದಾಗ ರಾಜ್ಯಪಾಲರು ಕಾನೂನಾತ್ಮಕ ಕಾರ್ಯಾಚರಣೆ ಮಾಡುತ್ತಾರೆ. ಕರ್ಮಕಾಂಡವನ್ನು ಮುಚ್ಚಿಕೊಳ್ಳಲು ರಾಜ್ಯಪಾಲರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುವುದನ್ನು ಕಾಂಗ್ರೆಸ್ ನಾಯಕರು ನಿಲ್ಲಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಎಚ್ಚರಿಕೆ ಕೊಟ್ಟಿದ್ದಾರೆ.

ರಾಜ್ಯಪಾಲರ ವಿರುದ್ಧ ರಾಜ್ಯ ಕಾಂಗ್ರೆಸ್ ನಾಯಕರು ಅತ್ಯಂತ ಹೀನಾಯವಾಗಿ ವರ್ತಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಸದಾನಂದಗೌಡ, ಕಾಂಗ್ರೆಸ್‌ನವರು ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಿದರೆ ಕೇಂದ್ರ ಸರ್ಕಾರ ಖಂಡಿತವಾಗಿಯೂ ಕ್ರಮಕ್ಕೆ ಆಲೋಚನೆ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ಡಿಕೆಶಿ ಸೂಚನೆ ನೀಡಲಿ: ರಾಜ್ಯಪಾಲರ ವಿರುದ್ಧ ಹೀನಾಯವಾಗಿ ನಡೆದುಕೊಳ್ಳುತ್ತಿರುವ ಕಾಂಗ್ರೆಸ್‌ನವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಾಯಿ ಮುಚ್ಚಲು ಹೇಳಬೇಕು. ಸಂವಿಧಾನ ವಿರೋಧಿ, ದೇಶವಿರೋಧಿ ಹೇಳಿಕೆ ನೀಡುತ್ತಿರುವ ಕಾಂಗ್ರೆಸ್ಸಿಗರ ವಿರುದ್ಧ ದೇಶದ್ರೋಹಿ ಪ್ರಕರಣ ದಾಖಲಿಸಿ ಬಂಧಿಸಬೇಕೆಂದು ಗೃಹ ಸಚಿವ ಡಾ.ಪರಮೇಶ್ವರ್‌ಗೆ ಅವರು ಒತ್ತಾಯಿಸಿದರು.

ಸಿಎಂ ರಾಜೀನಾಮೆ ನೀಡಲಿ

ಮುಡಾ ಹಗರಣ ಸಂಬಂಧ ರಾಜ್ಯಪಾಲರು ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ಏಕಾಏಕಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಿಲ್ಲ, ಅದಕ್ಕೂ ಮೊದಲು ಸರ್ಕಾರಕ್ಕೆ ನೋಟಿಸ್ ನೀಡಿ, ಪ್ರಕರಣದ ಬಗ್ಗೆ ಉತ್ತರ ನೀಡಲು ಹೇಳಿದ್ದರು. ಆದರೆ, ಡಿಸಿಎಂ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ರಾಜ್ಯಪಾಲರ ನೋಟೀಸ್ ವಾಪಸ್ ಪಡೆಯುವಂತೆ ಒತ್ತಾಯಿಸುವ ನಿರ್ಣಯ ಕೈಗೊಂಡಿತು.

ಶ್ರೀವತ್ಸ ಮುಡಾ ಸೈಟ್ ಫಲಾನುಭವಿ : ಕೆಪಿಸಿಸಿ ವಕ್ತಾರ ಲಕ್ಷ್ಮಣ್

ಶಾಸಕ ಶ್ರೀವತ್ಸ ಸ್ಪಷ್ಟನೆಗೆ ಕಾಂಗ್ರೆಸ್ ಆಗ್ರಹ

ಮೈಸೂರು: ಶಾಸಕ ಶ್ರೀವತ್ಸ ಅವರು ಬಿ.ಎಸ್ ಯಡಿಯೂರಪ್ಪ ಸಿಎಂ ಆಗಿದ್ದಾಗ ಜಿ-ಕೆಟಗರಿ ಸೈಟ್ ಪಡೆದಿದ್ದಾರೆ. ಈ ಬಗ್ಗೆ ಅವರು ಸ್ಪಷ್ಟನೆ ನೀಡಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದರು. ಜಿ ಕೆಟಗರಿ ಸೈಟ್ ಪಡೆಯಬೇಕಾದರೆ ಸಾಂವಿಧಾನಿಕ ಹುದ್ದೆಯಲ್ಲಿರಬೇಕು. ಆದರೆ, ಯಡಿಯೂರಪ್ಪ ಸಿಎಂ ಆಗಿದ್ದಾಗ ಬಿಜೆಪಿ ಶಾಸಕ ಶ್ರೀವತ್ಸ ಜಿ ಕ್ಯಾಟಗರಿ ಸೈಟ್ ಪಡೆದಿದ್ದಾರೆ. ಒಬ್ಬ ಬಿಜೆಪಿ ಕಾರ್ಯಕರ್ತ ಹೇಗೆ ಸೈಟ್ ಪಡೆಯಲು ಸಾಧ್ಯ ಸ್ಪಷ್ಟನೆ ನೀಡಲಿ ಎಂದು ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು..



ಕಾರ್ಯಕರ್ತರಿಂದಲೇ ಮಾಹಿತಿ

ಶ್ರೀವತ್ಸ ಮುಡಾ ಸೈಟ್ ಪಡೆದುಕೊಂಡ ಬಗ್ಗೆ ಬಿಜೆಪಿ ಕಾರ್ಯಕರ್ತರೇ ಮಾಹಿತಿ ನೀಡಿದ್ದಾರೆ. ಆದರೆ ಶ್ರೀವತ್ಸ ಮಾತ್ರ ಸಿದ್ದರಾಮಯ್ಯ, ಕಾಂಗ್ರೆಸ್ಸಿಗರನ್ನು ಬೈಯ್ಯಬಹುದೇ ಎಂದು ವಾಗ್ದಾಳಿ ನಡೆಸಿದರು.

ನನಗೆ ಲೀಗಲ್ ನೋಟಿಸ್ ಕೊಟ್ಟಿದ್ದಾರೆ. ಮಾನನಷ್ಟ ಮೊಕದ್ದಮೆಯನ್ನೇ ಎದುರಿಸುತ್ತೇನೆ. ಇನ್ನು ನೋಟಿಸ್ ಗೆ ಹೆದರುತ್ತೀನೆಯೇ..? ನಾನು ರಾಷ್ಟ್ರೀಯ ಪಕ್ಷದ ಮಾಧ್ಯಮ ವಕ್ತಾರ. ಆರೋಪಗಳು ಬಂದಾಗ ಮಾತನಾಡುವುದೇ ನಮ್ಮ ಕೆಲಸ. ಸಿದ್ದರಾಮಯ್ಯ ಹಾಗೂ ಅವರ ಕುಟುಂಬದ ವಿರುದ್ಧ ಬಾಯಿಗೆ ಬಂದಹಾಗೆ ಮಾತನಾಡಿದರೂ, ಸುಮ್ಮನಿರಬೇಕೇ? ನಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹಾಕಿ. ನಾವು ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕುತ್ತೇವೆ ಎಂದು ಲಕ್ಷ್ಮಣ್ ಎಚ್ಚರಿಕೆ ನೀಡಿದರು.

ವೈಟ್ನರ್ ಆರೋಪಕ್ಕೆ ತಿರುಗೇಟು

ಈ ಕುರಿತು ಪ್ರತಿಕ್ರಿಯಿಸಿದ ಲಕ್ಷ್ಮಣ್, ಸಿದ್ದರಾಮಯ್ಯನವರ ಪತ್ನಿ 2014ರಲ್ಲಿ ಮುಡಾ ಆಯುಕ್ತರಿಗೆ ಪತ್ರ ಬರೆದು ಸೂಕ್ತ ಬದಲಿ ನಿವೇಶನ ಕೊಡುವಂತೆ ಕೋರಿದ್ದಾರೆ. ವೈಟ್ನರ್ ಕುರಿತು ಕೆಲವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಇದರ ಹಿಂದೆ ಏನಿದೆ ಅಂತ ಮೊದಲು ನೋಡಿ. ದೇವನೂರು 3ನೇ ಹಂತದಲ್ಲಿ ಅಥವಾ ಬೇರೆ ಕಡೆ ಸಮಾನಾಂತರ ಬಡಾವಣೆಯಲ್ಲಿ ನಿವೇಶನ ಕೊಡಿ ಅಂತ ಬರೆದಿದ್ದಾರೆ. ಇದು ತಪ್ಪಾಗಿದ್ದಕ್ಕೆ ವೈಟ್ನರ್ ಹಾಕಿದ್ದಾರೆ. ಅದನ್ನೇ ದೊಡ್ಡದು ಮಾಡಬೇಕಿಲ್ಲ ಎಂದು ಕಿಡಿಕಾರಿದರು. ಈ ಪತ್ರಕ್ಕೆ ಸ್ಪಂದಿಸದಿದ್ದ ಕಾರಣ ಮತ್ತೆ 2021ರಲ್ಲೂ ಅವರು ಮತ್ತೊಂದು ಪತ್ರ ಬರೆದಿದ್ದಾರೆ. ಈ ಮನವಿ ಆಧಾರ ಮೇಲೆ ನಿವೇಶನ ಹಂಚಿಕೆ ಮಾಡಿದ್ದಾರೆ. 50:50 ಅನುಪಾತದ ಮೇಲೆ ನಿವೇಶನ ಹಂಚಿಕೆ ಮಾಡಿದ್ದಾರೆ. ವೈಟ್ನರ್ ಬಗ್ಗೆ ನೀವೇ ಊಹೆ ಮಾಡಿಕೊಂಡರೆ ಹೇಗೆ ಎಂದರು.

- ಸಾಂವಿಧಾನಿಕ ಹುದ್ದೆಯಲ್ಲಿರದೆ ನಿವೇಶನ ಪಡೆದ ಶ್ರೀವತ್ಸ
- ಬಿಜೆಪಿ ಕಾರ್ಯಕರ್ತರಿಂದಲೇ ಮಾಹಿತಿ-ಲಕ್ಷ್ಮಣ್
- ಕಾನೂನು ನೋಟಿಸ್ ಎದುರಿಸಲು ಸಿದ್ಧ- ಎಚ್ಚರಿಕೆ
- ಸಿದ್ದರಾಮಯ್ಯ ವಿರುದ್ಧ ಮನಬಂದಂತೆ ಮಾತನಾಡಿದರೆ ಸುಮ್ಮನಿರಬೇಕೇ..?

ಮಂತ್ರಾಲಯದಲ್ಲಿ ಮಹಾರಥೋತ್ಸವ ಜೈಕಾರಗಳ ಮಧ್ಯೆ ಸಂಭ್ರಮ

ಯದುವೀರ ಒಡೆಯರ್‌ಗೆ ಶ್ರೀರಾಘವೇಂದ್ರ ಅನುಗ್ರಹ ಪ್ರಶಸ್ತಿ: ಶ್ರೀಗಳಿಂದ ಪ್ರದಾನ

ರಾಯಚೂರು: ಮಂತ್ರಾಲಯ ಶ್ರೀ ಗುರು ರಾಯರ 543 ನೇ ಆರಾಧನಾ ಮಹೋತ್ಸವದ ಉತ್ತರಾಧನೆ ಅಂಗವಾಗಿ ಜೈಕಾರಗಳ ಮಧ್ಯೆ ಮಹಾರಥೋತ್ಸವ ವಿಜೃಂಭಣೆ ಯಿಂದ ಜರುಗಿತು.

ಪ್ರಹ್ಲಾದರಾಜ ಉತ್ಸವ ಮೂರ್ತಿಯನ್ನು ರಥವೇರಿಸಿದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ರಥೋತ್ಸವಕ್ಕೆ ಚಾಲನೆ ನೀಡಿದರು. ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಭಕ್ತಜನರು ಜಯಘೋಷ ಮೊಳಗಿಸಿದರು. ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು.

ನಾಡಿನಲ್ಲಿ ಶಾಂತಿ, ಸಮೃದ್ಧಿ: ಶ್ರೀಮಠದ ರಾಜಬೀದಿಯಲ್ಲಿ ಮಹಾರಥೋತ್ಸವ ಸಡಗರ ಮನೆ ಮಾಡಿತ್ತು. ವಸಂತೋತ್ಸವದ ಅಂಗವಾಗಿ ಬಣ್ಣ ಎರಚುವ ಮೂಲಕ ಶ್ರೀಗಳು ಸಂತಸ ಹಂಚಿಕೊಂಡರು. ರಥೋತ್ಸವ ಉದ್ದೇಶಿಸಿ ಆಶೀರ್ವಚನ ನೀಡಿದ ಶ್ರೀ ಸುಭುದೇಂದ್ರ ತೀರ್ಥ ಶ್ರೀಪಾದಂಗಳವರು ಭಕ್ತರ ಕಾಮಧೇನು ಶ್ರೀ ರಾಯರು ಭಕ್ತರ ಇಷ್ಟಾರ್ಥ ಪೂರೈಸುತ್ತಿದ್ದು ನಾಡಿನಲ್ಲಿ ಶಾಂತಿ, ಸಮೃದ್ಧಿ ಕರುಣಿಸಲಿದ್ದಾರೆ. ಸಂಕಷ್ಟಗಳು ದೂರವಾಗಿ ಶಾಂತಿ- ನೆಮ್ಮದಿ ಹಾಗೂ ಸೌಹಾರ್ದಯತೆಯಿಂದ ಜೀವನ ನಡೆಸಲು ಶ್ರೀ ಗುರುರಾಯರು ಪ್ರೇರಣೆಯಾಗಿದ್ದಾರೆ ಎಂದರು.



ಮೈಸೂರು ರಾಜವಂಶಸ್ಥ ಮತ್ತು ಬಿಜೆಪಿ ಸಂಸದ ಯದುವೀರ ಒಡೆಯರ್‌ಗೆ ಸುಬುಧೇಂದ್ರ ಶ್ರೀಗಳು ರಾಘವೇಂದ್ರ ಅನುಗ್ರಹ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಇದೇ ಸಂದರ್ಭದಲ್ಲಿ ಶ್ರೀಮಠದಿಂದ ನೀಡಲಾಗುವ ಶ್ರೀ ರಾಘವೇಂದ್ರ ಅನುಗ್ರಹ ಪ್ರಶಸ್ತಿಯನ್ನು ಮೈಸೂರು ಸಂಸದ ಯದುವೀರ ಒಡೆಯರ್‌ಗೆ ಶ್ರೀಗಳು ಪ್ರದಾನ ಮಾಡಿದರು. ಮಠದ ಆಡಳಿತಾಧಿಕಾರಿಗಳು, ವ್ಯವಸ್ಥಾಪಕರು, ಪಂಡಿತರು, ಸಂಸ್ಕೃತ ವಿದ್ಯಾಪೀಠದ ಪ್ರಾಧ್ಯಾಪಕರು, ವಿವಿಧೆಡೆಯಿಂದ ಆಗಮಿಸಿದ ಪಂಡಿತರು ಹಾಗೂ ಅಪಾರ ಭಕ್ತಸಾಗರ ರಥೋತ್ಸವದಲ್ಲಿ ಭಾಗಿಯಾದರು.

ಈ ಮೂಲಕ ಕಳೆದ ಮೂರು ದಿನಗಳಿಂದ ಮಂತ್ರಾಲಯದಲ್ಲಿ ನಡೆದ ಮಧ್ಯಾರಾಧನೆಗೆ ಗುರುವಾರ ವೈಭವದಿಂದ ಮುಕ್ತಾಯಗೊಂಡಿದೆ. ಅದೇ ರೀತಿ ನಾಡಿನ ಎಲ್ಲ ರಾಘವೇಂದ್ರ ಸ್ವಾಮಿಗಳ ದೇವಸ್ಥಾನಗಳಲ್ಲೂ ಮೂರು ದಿನಗಳ ಕಾಲ ನಡೆದ ಆರಾಧನೆಯಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು.

ಐವಾನ್ ಡಿಸೋಜ ಮನೆ ಮೇಲೆ ಕಲ್ಲುತೂರಾಟ

ಮಂಗಳೂರು: ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳದಿದ್ದರೆ ಬಾಂಗ್ಲಾದಲ್ಲಿ ಆದ ಸ್ಥಿತಿ ರಾಜ್ಯಪಾಲರಿಗೆ ಆಗಲಿದೆ ಎಂಬ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ಐವಾನ್ ಡಿಸೋಜಾ ಮನೆ ಮೇಲೆ ದುಷ್ಕರ್ಮಿಗಳ ತಂಡವೊಂದು ಕಲ್ಲುತೂರಾಟ ನಡೆಸಿದೆ. ಮಂಗಳೂರಿನ ವೆಲೆನ್ಸಿಯಾದಲ್ಲಿರುವ ಡಿಸೋಜ ಅವರ ಮನೆಗೆ ಕಿಡಿಗೇಡಿಗಳ ತಂಡ ಬುಧವಾರ ರಾತ್ರಿ ಏಕಾಏಕಿ ಕಲ್ಲು ತೂರಾಟ ನಡೆಸಿ , ಘೋಷಣೆ ಕೂಗಿ ಪರಾರಿಯಾಗಿದೆ. ದುಷ್ಕರ್ಮಿಗಳು ಹೆಲ್ಮೆಟ್ ಧರಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಘಟನೆ ನಡೆದಾಗ ಡಿಸೋಜ ಮನೆಯಲ್ಲಿರಲಿಲ್ಲ. ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ತೆರಳಿದ್ದರು. ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿದ್ದನ್ನು ಖಂಡಿಸಿ, ಕಾಂಗ್ರೆಸ್ ನೇತೃತ್ವದಲ್ಲಿ ನಗರದಲ್ಲಿ ಈಚೆಗೆ ಪ್ರತಿಭಟನೆ ನಡೆದ ವೇಳೆ ಮಾತನಾಡಿದ್ದ ಐವಾನ್ ಡಿಸೋಜ, ರಾಷ್ಟ್ರಪತಿಯವರು ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳದ್ದರೆ ಬಾಂಗ್ಲಾದಲ್ಲಿ ಆದ ಸ್ಥಿತಿ ರಾಜ್ಯಪಾಲರಿಗೂ ಆಗಲಿದೆ' ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಬಿಜೆಪಿಯಿಂದ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು.

ಮುಡಾ ಪ್ರಕರಣ: ಸಂಪುಟದ ನಿರ್ಣಯಕ್ಕೆ ಆಕ್ಷೇಪ | ಎಚ್‌ಡಿಕೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ಒತ್ತಾಯ

ರಾಜ್ಯ ಸರಕಾರದ ಅಮಾನತಿಗೆ ವಿಶ್ವನಾಥ್ ಆಗ್ರಹ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಗಂಭೀರವಾದ ಆರೋಪ ಕೇಳಿಬಂದಿದ್ದು ಸರಕಾರವನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಿ ಎಂದು ರಾಜ್ಯಪಾಲರಿಗೆ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸಲಹೆ ನೀಡಿದರು.

ಮುಡಾ ಹಗರಣ ಗಬ್ಬೆದ್ದು ನಾರುತ್ತಿದೆ. ಸ್ವತಃ ಸಿಎಂ ಸಿದ್ದರಾಮಯ್ಯ ಮೇಲೆ ಆಪಾದನೆ ಕೇಳಿ ಬಂದಿದೆ. ರಾಜ್ಯ ಪಾಲರು ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿದ್ದರು. ಸಂಪುಟ ಸಭೆ ಕರೆದು ಪ್ರಾಸಿಕ್ಯೂಷನ್ ವಿರುದ್ಧ ನಿರ್ಣಯ ಕೈಗೊಂಡಿದ್ದು ಯಾಕೆ? ವಾಲ್ಮೀಕಿ ಹಗರಣದಲ್ಲಿ ಏನಾಗಿದೆ ಎಂದು ಎಲ್ಲರಿಗೂ ಗೊತ್ತಿದೆ. ಮುಡಾ ಪ್ರಕರಣದಲ್ಲಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧವೇ ಆರೋಪ ಕೇಳಿ ಬಂದಿದೆ. ಆದ್ದರಿಂದ ಸರ್ಕಾರವನ್ನು ಅಮಾನತ್ತಿನಲ್ಲಿಡಿ ಎಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಕಾನೂನಿನ ಮುಂದೆ ಎಲ್ಲರೂ ಸಮಾನ

ಈ ಹಿಂದೆ, ವೀರೇಂದ್ರ ಪಾಟೀಲ್ ಸರ್ಕಾರವನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಲಾಗಿತ್ತು. ನಂತರ ನಡೆದ ಚುನಾವಣೆಯಲ್ಲಿ ಬಂಗಾರಪ್ಪ ಸಿಎಂ ಆದರು. ಕಾನೂನಿನ ಮುಂದೆ ಎಲ್ಲರೂ ಸಮಾನರು. ಸಿದ್ದರಾಮಯ್ಯ, ಕುಮಾರಸ್ವಾಮಿ, ನನಗೆ ಎಲ್ಲರಿಗೂ ಒಂದೇ ಕಾನೂನು ಅನ್ವಯ. ಸಿದ್ದರಾಮಯ್ಯ ಪ್ರಕರಣದಲ್ಲಿ ಇನ್ನಷ್ಟೇ ತನಿಖೆ ಆಗಬೇಕಿದೆ. ಆದರೆ, ಕುಮಾರಸ್ವಾಮಿ ಪ್ರಕರಣದಲ್ಲಿ ತನಿಖೆ ಆಗಿ ವರದಿ ಬಂದಿದೆ. ಕುಮಾರಸ್ವಾಮಿ ಅವರ ವಿರುದ್ಧವು ಪ್ರಾಸಿಕ್ಯೂಷನ್ ಗೆ ಅನುಮತಿ ಕೊಡದೆ ಯಾಕೆ ಇಟ್ಟುಕೊಂಡಿದ್ದೀರಾ ಎಂದು ಎಚ್. ವಿಶ್ವನಾಥ್ ಪ್ರಶ್ನಿಸಿದರು.

ರಾಜ್ಯಪಾಲರನ್ನು ನಿಂದಿಸುವುದು ಸರಿಯಲ್ಲ

ಮುಡಾ ಹಗರಣದ ಬಗ್ಗೆ ಪರ-ವಿರೋಧ ಚರ್ಚೆ ಆಗುತ್ತಿದೆ. ರಾಷ್ಟ್ರದಲ್ಲಿ ರಾಜ್ಯದ ಮಾನ ಹರಾಜಾಗುತ್ತಿದೆ. ಮಹಾರಾಜರ ಕಾಲದಿಂದ ಕಾಪಾಡಿಕೊಂಡು ಬಂದ ಶ್ರೀಗಂಧದ ವಾಸನೆ ಈಗ ದುರ್ನಾತ ಬೀರುತ್ತಿದೆ. ಕಾಂಗ್ರೆಸ್ ನಾಯಕರು ರಾಜ್ಯಪಾಲರನ್ನು ಕೆಟ್ಟಭಾಷೆಯಲ್ಲಿ ಹೀಗಳೆಯುವುದು ಗೌರವ ತರುವುದಿಲ್ಲ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಸಿಎಂ ಸಿದ್ದರಾಮಯ್ಯ ಮಾತನಾಡುತ್ತಿರುವ ಭಾಷೆ ಸರಿಯಿಲ್ಲ ಎಂದು ಅವರು ಕಿಡಿಕಾರಿದರು.

ದಾಖಲೆ ತಿದ್ದುವ ಕೆಲಸ

ಸಿದ್ದರಾಮಯ್ಯ ಕೈಕೆಳಗೆ ದಾಖಲೆ ತಿದ್ದುವ ಕೆಲಸ ನಡೆಯುತ್ತಿದೆ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೆಲಿಕಾಪ್ಟರ್‌ನಲ್ಲಿ ಬಂದು ದಾಖಲೆಗಳನ್ನು ಹೊತ್ತೊಯ್ದರು, ಇದು ಕಳ್ಳತನ. ಸಿಎಂ ಪತ್ನಿಗೆ ಸಂಬಂಧಪಟ್ಟ ದಾಖಲೆಗಳಿಗೆ ವೈಟ್ನರ್ ಹಾಕಲಾಗುತ್ತಿದೆ. ರಾಜ್ಯದಲ್ಲಿ ಯಾವಾಗಲೂ ಇಂತಹ ಪ್ರಕರಣ ನಡೆದಿರಲಿಲ್ಲ. ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ರನ್ನು ಒಳಗೆ ಹಾಕಬೇಕಿತ್ತು. ನಿಮಗೆ ಬೇಕಾದವರು ಎಂದು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಿಎಂ ವಿರುದ್ಧ ವಿಶ್ವನಾಥ್ ಹರಿಹಾಯ್ದರು.

ಭದ್ರಾವತಿ ಶಾಸಕರ ಪುತ್ರನ ಹತ್ಯೆಗೆ ಸಂಚು

ಭದ್ರಾವತಿ: ಕಾಂಗ್ರೆಸ್ ಶಾಸಕ ಬಿ.ಕೆ.ಸಂಗಮೇಶ್ವರ ಅವರ ಪುತ್ರ ಬಿ.ಎಸ್. ಬಸವೇಶ್ ಹತ್ಯೆಗೆ ಜೈಲಿನಿಂದಲೇ ಸಂಚು ರೂಪಿಸಿದ್ದ ಆಘಾತಕಾರಿ ಸುದ್ದಿ ಬೆಳಕಿಗೆ ಬಂದಿದೆ. ಪ್ರಕರಣವೊಂದರಲ್ಲಿ ಜೈಲಿನಲ್ಲಿರುವ ಡಿಚ್ಚಿ ಮುಬಾರಕ್ ಎಂಬಾತ ಬಸವೇಶ್ ಹತ್ಯೆಗೆ ಸುಪಾರಿ ನೀಡಿದ್ದು, ಭದ್ರಾವತಿಯ ಗಾಂಧಿ ಸರ್ಕಲ್‌ನಲ್ಲಿ ಕೊಲೆ ಮಾಡಲು ಸೂಚಿಸಿದ್ದ ಎಂದು ತಿಳಿದುಬಂದಿದೆ. ಅಲ್ಲದೇ ಹತ್ಯೆಗೆ ಚಾಕು ಖರೀದಿಸಿದ್ದ ಮುಬಾರಕ್, ಕೃತ್ಯಕ್ಕೆ ಕಾರು, ನಾಲ್ವರನ್ನು ಕಳುಹಿಸಿದ್ದ ಎನ್ನುವ ಮಾಹಿತಿಯೂ ಪೊಲೀಸರಿಗೆ ಲಭ್ಯವಾಗಿದೆ.

ಗುತ್ತಿಗೆದಾರನಿಂದ ಮಾಹಿತಿ ಬಹಿರಂಗ : ಬಸವೇಶನನ್ನು ಕೊಲೆ ಮಾಡುವ ಬಗ್ಗೆ ಮುಬಾರಕ್, ಗುತ್ತಿಗೆದಾರ ಸುನೀಲ್‌ಗೆ ಹೇಳಿದ್ದ. ಸುನೀಲ್ ಪೊಲೀಸರಿಗೆ ಮಾಹಿತಿ ನೀಡಿ, ದೂರು ಸಲ್ಲಿಸಿದ್ದ.ಹಳೇ ನಗರ ಠಾಣೆಯ ಪೊಲೀಸರು ಎಫ್‌ಐಆರ್ ದಾಖಲು ಮಾಡಿಕೊಂಡಿದ್ದು, ತನಿಖೆ ಕೈಗೊಂಡಿದ್ದಾರೆ. ಡಿಚ್ಚಿ ಮುಬಾರಕ್‌ನಿಂದ ಹತ್ಯೆ ಸುಪಾರಿ ಪಡೆದುಕೊಂಡಿದ್ದ ಟಿಪ್ಪು ಮತ್ತು ಇತರ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಟಿಪ್ಪುನನ್ನು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ರಸ್ತೆ ರಂಪಾಟಕ್ಕೆ ನಿಯಂತ್ರಣ ಅಗತ್ಯ

ವೈಯಕ್ತಿಕ ಮಟ್ಟದಲ್ಲಿ ಕಿರಿಕಿರಿ ಮಾಡಿಕೊಂಡು ಜಗಳವಾಡುತ್ತಿದ್ದವರು ಎಲ್ಲರೆದುರು ಜಗಳವಾಡತೊಡಗಿದಾಗ ಬೀದಿ ರಂಪ, ಹಾದಿ ರಂಪ ಮಾಡಿದರೆಂದು ಹೇಳುವುದು ರೂಢಿ. ಆದರೆ ಇಂಗ್ಲಿಷಿನ 'ರೋಡ್‌ರೇಜ್' ಪದಕ್ಕೆ ಇದನ್ನು ಪರ್ಯಾಯವಾಗಿ ಬಳಸಿದರೆ ವಾಹನ ಸವಾರರ ರಂಪಾಟ ಇದೀಗ ಕೊಲೆ ಮಾಡುವಷ್ಟರ ಮಟ್ಟಿಗೆ ಹೋಗಿರುವುದು ಕಳವಳದ ವಿಚಾರ. ಬೆಂಗಳೂರಿನ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ಇಳಿಸಂಜೆ ತನ್ನ ಕಾರಿಗೆ ಬೈಕ್ ತಾಗಿದ್ದಕ್ಕೆ ಕೋಪಗೊಂಡ ಚಾಲಕ ಕಾರನ್ನು ಡಿಕ್ಕಿ ಹೊಡೆಸಿ ಡೆಲಿವರಿ ಬಾಯ್‌ಯಾಗಿದ್ದ ಬೈಕ್ ಸವಾರನನ್ನು ಕೊಲೆ ಮಾಡಿರುವ ಘಟನೆ ನಡೆದಿದೆ. ಇದೇ ದಿನ ಸರ್ಜಾಪುರ ರಸ್ತೆಯಲ್ಲಿ ಸಣ್ಣ ಮಗುವಿನೊಂದಿಗೆ ಕಾರಿನಲ್ಲಿ ಹೋಗುತ್ತಿದ್ದ ಕುಟುಂಬವನ್ನು ತಡೆದ ಕಾರು ಚಾಲಕನೊಬ್ಬ ಕ್ಷುಲ್ಲಕ ಕಾರಣಕ್ಕಾಗಿ ಕಾರಿನ ಮುಂಭಾಗದ ಗಾಜು ಒಡೆಯಲು ಮುಂದಾದ ಘಟನೆ ವೈರಲ್ ಆಗಿದೆ. ರಾಜ್ಯದಲ್ಲಿ, ರಾಷ್ಟ್ರದಲ್ಲಿ ಪ್ರತಿದಿನವೂ ರಸ್ತೆ ರಂಪಾಟದ ನೂರಾರು ಘಟನೆಗಳು ನಡೆಯುತ್ತಲೇ ಇವೆ. ವಾಹನ ಚಾಲನೆ ಮಾಡುವ ಪ್ರತಿಯೊಬ್ಬ ವ್ಯಕ್ತಿಗೂ ಒಂದಲ್ಲ ಒಂದು ದಿನ, ರಂಪಾಟದ ಕಹಿ ಅನುಭವ ಆಗಿಯೇ ತೀರುತ್ತದೆ. ಯಾರೋ ಓವರ್‌ಟೇಕ್ ಮಾಡಿದರು, ಓವರ್‌ಟೇಕ್ ಮಾಡಲು ಸೈಡ್ ಕೊಡಲಿಲ್ಲ, ಇನ್ನಾರೋ ಹಿಂಬದಿಯಿಂದ ಹಾರ್ನ್ ಮಾಡಿದರು, ಸಿಗ್ನಲ್‌ನಲ್ಲಿ ಅಡ್ಡ ಬಂದರು, ಅತಿ ವೇಗ ಅಥವಾ ನಿಧಾನವಾಗಿ ಹೋಗುತ್ತಿದ್ದರು, ಗಾಡಿ ಟಚ್ ಮಾಡಿದರು ಹೀಗೆ ವಾಹನ ಸವಾರರ ಮಧ್ಯೆ ಬೆಂಕಿ ಹತ್ತಿಕೊಳ್ಳಲು ನಿರ್ದಿಷ್ಟ ಕಾರಣಗಳು ಬೇಕಿಲ್ಲ. ಕೆಲವೊಮ್ಮೆ ಇವು ಉದ್ದೇಶಪೂರ್ವಕವೂ ಇರುತ್ತವೆ. ಅನುಭವಿ ಚಾಲಕರು, ಮಾಲೀಕರು ಇಂತಹ ಘಟನೆಗಳು ನಡೆದಾಗ ಸಿಟ್ಟಿನಿಂದ ಮುನ್ನುಗ್ಗುವ ವ್ಯಕ್ತಿಯನ್ನು ಸಮಾಧಾನಿಸಿ ಕಳುಹಿಸುತ್ತಾರೆ. ಅನಿವಾರ್ಯವಾದಾಗ ಪೊಲೀಸರನ್ನು ಕರೆಸಿ ಪ್ರಕರಣ ಇತ್ಯರ್ಥ ಮಾಡಿಕೊಳ್ಳುತ್ತಾರೆ. ಸ್ವಲ್ಪ ತಾಳ್ಮೆ ವಹಿಸಿ, ವಿವೇಕ, ಬಳಸಿದರೆ ಇಂತಹ ಪ್ರಕರಣಗಳನ್ನು ವಿಕೋಪಕ್ಕೆ ಹೋಗದಂತೆ ತಡೆಯಬಹುದು. ಇಲ್ಲದೇ ಹೋದರೆ ಪ್ರಕರಣ ಕೊಲೆ ತನಕವೂ ಮುಂದುವರಿಯಬಹುದು. ನಮ್ಮಲ್ಲಿ ಚಾಲಕರ ಪರವಾನಗಿ ಪತ್ರ ನೀಡಲು ವಾಹನ ಹೇಗೆ ಚಲಾಯಿಸಬೇಕೆನ್ನುವುದಷ್ಟೇ ಮುಖ್ಯವಾಗುತ್ತದೆ. ಚಲಾಯಿಸುವವರ ವರ್ತನೆ ಹೇಗಿರಬೇಕೆಂದು ಎಲ್ಲೂ ಹೇಳುವುದಿಲ್ಲ. ಸಣ್ಣದಾಗಿ ಕೆಮ್ಮಿದರೂ ಮುಖ ಸಿಂಡರಿಸುವ ಯುವ ಪೀಳಿಗೆಗೆ ತಾಳ್ಮೆ,ಸಂಯಮದ ಶಿಕ್ಷಣ ಕಲಿಸದೇ ಹೋದರೆ ಇಂತಹ ಅನಾಹುತಗಳು ನಿತ್ಯದ ಘಟನೆಗಳಾಗಬಹುದು. ಮನೆಯಲ್ಲಿ ಹಿರಿಯರು ಹೇಳುವ 'ಜಾಗ್ರತೆ, ಹುಶಾರು' ಎಂಬ ಪದದ ಹಿಂದೆ, ವಾಹನ ಮಾತ್ರವಲ್ಲ, ನಮ್ಮ ನಿಯಂತ್ರಣವೂ ತಪ್ಪದಿರಲಿ ಎಂಬ ಕಳಕಳಿ ಇರುತ್ತದೆ. ರಸ್ತೆಗೆ ಇಳಿದವರಿಗೆ ವಾಹನದ ಜತೆ ಸ್ವನಿಯಂತ್ರಣವೂ ಅಗತ್ಯ.

ಸೊಂಪಾದಕೀಯ

ಈ ಬಂಧನ...

ರಾಜ್ಯ ರಾಜಕಾರಣದಲ್ಲಿ ಈಗ ಎಲ್ಲೆಡೆ ಬಂಧನದ್ದೇ ಭೀತಿ, ಬಂಧನದ್ದೇ ಮಾತು. ಇದು 'ಬಂಧನ' ಸಿನಿಮಾಗೆ ಸಂಬಂಧಪಟ್ಟ ಸುದ್ದಿಯಲ್ಲ. ಆದರೆ ಸಿನಿಮಾ ಅಲ್ಲದಿದ್ದರೂ ರಾಜಕಾರಣದ ಅಖಾಡದಲ್ಲಿ ನಡೆಯುತ್ತಿರುವ ಬೃಹನ್ನಾಟಕ ಇದು. ಸಿಎಂ ಸಿದ್ದರಾಮಯ್ಯ ಮತ್ತು ಕೇಂದ್ರ ಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನಡುವೆ ನಡೆಯುತ್ತಿರುವ ಬಂಧನದ ಜಟಾಪಟಿ ಇದು. ಮುಡಾ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ಸೆರೆಯಾದೆನು ಸೆರೆಯಾದೆನು' ಎಂದು ಹಾಡುತ್ತಿದ್ದರೆ, ಅತ್ತ ಗಣಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿಯವರಿಗೆ ಕೂಡ ಬಂಧನ ಭೀತಿ ಶುರುವಾಗಿದೆ. ಕುಮಾರಸ್ವಾಮಿ ಪ್ರಾಸಿಕ್ಯೂಶನ್‌ಗೆ ಅನುಮತಿ ಕೋರಿ ಲೋಕಾಯುಕ್ತ ಎಸ್‌ಐಟಿ ಅಧಿಕಾರಿಗಳು ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಿದ ಬೆನ್ನಲ್ಲೇ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಪರಸ್ಪರ ಕೆಸರೆರಚಾಟದಲ್ಲಿ ತೊಡಗಿವೆ. 'ನನ್ನನ್ನು ಬಂಧಿಸಲು ನೂರು ಜನ ಸಿದ್ದರಾಮಯ್ಯ ಬರಬೇಕು' ಅಂತ ಕುಮಾರಸ್ವಾಮಿ ಮಾತಾಡಿದ್ದರೆ, 'ಕುಮಾರಸ್ವಾಮಿಯನ್ನು ಬಂಧಿಸಲು ಸಿದ್ದರಾಮಯ್ಯ ಯಾಕೆ ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಸಾಕು' ಎಂದು ಮುಖ್ಯಮಂತ್ರಿಗಳು ತಿರುಗೇಟು ನೀಡಿದ್ದಾರೆ. 'ಸಿದ್ದರಾಮಯ್ಯ ಅವರ ಮನೆಯಲ್ಲಿ ಅದ್ಯಾರೋ ಡಿವೈಎಸ್ಪಿ, ಕುಮಾರಸ್ವಾಮಿಯನ್ನು ಕರೆಸಿ ಬಂಧಿಸುವ ಜವಾಬ್ದಾರಿ ನನಗೆ ಕೊಡಿ ಎಂದು ಹೇಳುತ್ತಾನಂತೆ. ನನ್ನನ್ನು ಕರೆಸುವ ತಾಕತ್ತಿದ್ದರೆ ಕರೆಸಲಿ ನೋಡೋಣ. ಸಿದ್ದರಾಮಯ್ಯ ಮನೆಯಲ್ಲಿ ಆಗುವುದೆಲ್ಲ ನನಗೆ ಗೊತ್ತಾಗುತ್ತದೆ' ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಹಾಗಾಗಿ ಸದ್ಯಕ್ಕೆ ಕುಮಾರಸ್ವಾಮಿ ಅವರನ್ನು ಸಿದ್ದರಾಮಯ್ಯ ಅವರ ಪರ್ಸನಲ್ ಹೋಂ ಮಿನಿಸ್ಟರ್ ಎಂದು ಕರೆಯಬಹುದೇ ಎಂಬುದು ಕುಹಕಿಗಳು ಕೇಳುತ್ತಿರುವ ಪ್ರಶ್ನೆ. ರಾಜ್ಯ ಸರಕಾರದ ಕಾನೂನುಬಾಹಿರ ಕೃತ್ಯಗಳ ಬಗ್ಗೆ ತಾವು ಪ್ರಶ್ನೆ ಮಾಡುತ್ತಿರುವುದರಿಂದ ಅದನ್ನು ಸಹಿಸಲಾಗದೆ ತಮ್ಮ ವಿರುದ್ಧ ಸರಕಾರ ದೊಡ್ಡಮಟ್ಟದ ಒಳಸಂಚು ನಡೆಸಿದೆ ಅನ್ನೋದು ಕುಮಾರಸ್ವಾಮಿಯವರ ಆಪಾದನೆ. ಆದರೆ ಗಣಿ ಹಗರಣದ ತನಿಖೆಗೆ ಅನುಮತಿ ಕೋರಿದ ಪತ್ರ ರಾಜ್ಯಪಾಲರ ಟೇಬಲ್ ತಲುಪುತ್ತಿದ್ದಂತೆ ಕುಮಾರಣ್ಣನ ಆತಂಕ ಮಿತಿ ಮೀರಿದೆ ಅನ್ನೋದು ಕಾಂಗ್ರೆಸ್‌ನ ಪ್ರತಿಪಾದನೆ. ಸದ್ಯಕ್ಕೆ ಯಾರು ಉಪ್ಪು ತಿಂದಿದ್ದಾರೆ, ಯಾರು ನೀರು ಕುಡಿಯಲಿದ್ದಾರೆ ಅನ್ನೋ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.

ಸಂಪಾದಕರ ಸದ್ಯಶೋಧನೆ

ಬದುಕಿನಲ್ಲಿ ಕಲಿತ ಪಾಠ

ಇನ್ಫೋಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ಎನ್.ಆರ್.ನಾರಾಯಣ ಮೂರ್ತಿ ಅವರು ಸಂದರ್ಶನವೊಂದರಲ್ಲಿ ತಾವು ಬದುಕಿನಲ್ಲಿ ಕಲಿತ ಪಾಠದ ಬಗ್ಗೆ ವಿವರಿಸಿದ್ದಾರೆ. ನನ್ನ ಬದುಕನ್ನು ಬದಲಿಸಿದ ಬಹುದೊಡ್ಡ ಪಾಠ ಮರೆಯಲಾಗದು ಎಂದು ಅವರು ಹೇಳಿದ್ದಾರೆ. ಅದನ್ನು ಅವರೇ ಹೀಗೆ ಹೇಳಿದ್ದಾರೆ- ಅದು ನಡೆದಿದ್ದು ಭಾರತದಲ್ಲಲ್ಲ, ಫ್ರಾನ್ಸಿನಲ್ಲಿ. ಗೊಂದಲಗ್ರಸ್ತ ಎಡಪಂಥೀಯನಾಗಿದ್ದ ನಾನು ದೃಢತ್ವ ಮತ್ತು ಸಹಾನುಭೂತಿಯುಳ್ಳ ಉದ್ಯಮಿಯಾಗಿ ಅಲ್ಲಿ ಬದಲಾದೆ. ಪ್ಯಾರಿಸಿನಲ್ಲಿದ್ದ ಒಂದು ಕಂಪನಿಯ ಉದ್ಯೋಗಿಯಾಗಿ ಹೋದ ಮೇಲೆಯೇ ನನ್ನೊಳಗಿನ ವಾಣಿಜ್ಯೋದ್ಯಮಿ ಜಾಗೃತನಾದ. 70ರ ದಶಕದ ಆದಿಯಲ್ಲಿ ನಡೆದ ಮೂರು ಘಟನೆಗಳ ತರುವಾಯ ಅದು ನನ್ನ ಬದುಕಿನ ಧಾತುವಾಗಿ ಹೋಯ್ತು. ಉತ್ತಮ ಆದಾಯ ತಂದುಕೊಡುವ ಉದ್ಯೋಗ ಸೃಷ್ಟಿಯಿಂದ ಮಾತ್ರ ಭಾರತದ ಬಡತನ ನೀಗಿಸುವುದು ಸಾಧ್ಯ. ಇಂಥ ಉದ್ಯೋಗ ಸೃಷ್ಟಿಯನ್ನು ಮಾಡಬಲ್ಲವರು ಖಾಸಗಿ ವಲಯದ ವಾಣಿಜ್ಯೋದ್ಯಮಿಗಳು. ಅವರು ತಮ್ಮ ಪರಿಕಲ್ಪನೆಗಳನ್ನು ಮಾರುಕಟ್ಟೆಯೋಗ್ಯ ಉತ್ಪಾದನೆ ಇಲ್ಲವೇ ಸೇವೆಯ ರೂಪದಲ್ಲಿ ಪ್ರಸ್ತುತಪಡಿಸಬಲ್ಲರು. ಈ ರೀತಿಯಲ್ಲಿ ಉದ್ಯಮಿಗಳು ಸಂಪತ್ತನ್ನು ಸಂಪಾದಿಸುತ್ತಾರೆ ಮತ್ತು ಜನರಿಗೆ ಉದ್ಯೋಗಗಳನ್ನು ಸೃಷ್ಟಿಸುತ್ತಾರೆ. ಸರಕಾರದಿಂದ ಉದ್ಯೋಗಸೃಷ್ಟಿ ಸಾಧ್ಯವಿಲ್ಲದ ಕೆಲಸ. ಉದ್ಯಮಶೀಲರಿಗೆ ಉದ್ಯೋಗಸೃಷ್ಟಿಗೆ ಅವಕಾಶವಾಗುವಂತೆ ಪೂರಕ ಪ್ರೋತ್ಸಾಹದಾಯಕ ವಾತಾವರಣ ನಿರ್ಮಾಣ ಮಾಡಬೇಕಾದದ್ದು ಸರಕಾರದ ಹೊಣೆ. ಉದ್ಯಮಶೀಲರು ಯಶಸ್ವಿಯಾಗುವ ಹಾದಿಯಲ್ಲಿ ಎದುರಾಗುವ ತೊಂದರೆಗಳನ್ನು ನಿವಾರಿಸಬೇಕಾದದ್ದು ಕೂಡ ಸರಕಾರದ ಹೊಣೆ. ಪ್ಯಾರಿಸ್‌ನಲ್ಲಿ ಉದ್ಯೋಗಿಯಾಗಿದ್ದ ಕಾಲಘಟ್ಟದಲ್ಲಿ ವಾರಾಂತ್ಯದ ವಿರಾಮದಲ್ಲಿ ಪರಿಣತರೊಂದಿಗೆ ಚರ್ಚಿಸುವಾಗ ಇವೆಲ್ಲವನ್ನೂ ಕಲಿಯುವುದು ಸಾಧ್ಯವಾಯಿತು. ಎಡಪಂಥ, ಬಲಪಂಥ, ನಡುಪಂಥಗಳ ಮಿತ್ರರೊಂದಿಗೆ ನಡೆಯುತ್ತಿದ್ದ ಲೆಫ್ಟ್ ಬ್ಯಾಂಕ್ ಕೆಫೆ ಮೀಟಿಂಗುಗಳಲ್ಲಿ ಹಲವು ಹೊಸ ಹೊಳಹುಗಳು ಸಿಕ್ಕವು. ಆಯಾ ದಿನದ ಸಾಮಾಜಿಕ ಸಂಗತಿಗಳ ಚರ್ಚೆಗಳಿಗೆ ಲೆಫ್ಟ್ ಬ್ಯಾಂಕ್ ಕೆಫೆ ಖ್ಯಾತವಾಗಿತ್ತು. ಅಲ್ಲೆಲ್ಲ ಯುವಕರ ದಂಡೇ ಸೇರಿರುತ್ತಿತ್ತು. ಜನಸಾಮಾನ್ಯನಿಗೆ ಉತ್ತಮ ವರಮಾನ ಸಿಗುವಂತೆ ಮಾಡುವಲ್ಲಿ ದೇಶದ ಉದ್ಯೋಗ ಸಮಸ್ಯೆ ಮತ್ತು ಬಡತನವನ್ನು ನೀಗಿಸುವಲ್ಲಿ, ಸಂಪತ್ತನ್ನು ಗಳಿಸುವಲ್ಲಿ ಪಶ್ಚಿಮದ ದೇಶಗಳು ಹೇಗೆ ಮುಕ್ತಮಾರುಕಟ್ಟೆ ತತ್ವವನ್ನು ಅಳವಡಿಸಿಕೊಂಡಿವೆ ಎಂಬುದನ್ನು ಅಧ್ಯಯನ ಮಾಡಿದ ನಾನು ಅದರಿಂದ ತುಂಬಾ ಪ್ರಭಾವಿತನಾದೆ. ಅಲ್ಲಿನ ಮೂಲಭೂತ ಸೌಕರ್ಯ, ಶುಚಿತ್ವ, ಪ್ರಾಮಾಣಿಕತೆ, ಆರೋಗ್ಯ ರಕ್ಷಣೆ, ವಸತಿ ವ್ಯವಸ್ಥೆ ಮತ್ತು ಪೌಷ್ಟಿಕತೆಯ ಕುರಿತಾದ ಕಾಳಜಿ ಇವೆಲ್ಲವನ್ನೂ ಕಂಡು ನಾನು ದಂಗಾಗಿದ್ದೆ. ನೆಹರು ಪ್ರಣೀತ ಸಮಾಜವಾದದ ತಳಪಾಯದಲ್ಲಿ ನಾನು ಕಟ್ಟಿಕೊಂಡಿದ್ದ ನಂಬಿಕೆಗಳು ನಿಧಾನವಾಗಿ ಅಲುಗಾಡತೊಡಗಿದವು. ನಾನು ಗೊಂದಲದಲ್ಲಿ ಬಿದ್ದೆ. ಪಾಶ್ಚಾತ್ಯ ಐರೋಪ್ಯ ರಾಷ್ಟ್ರಗಳಂತೆ ನಮ್ಮ ದೇಶ ಬದಲಾಗುವುದು ಯಾವಾಗ ಎಂಬುದೇ ನನ್ನೊಳಗಿದ್ದ ಗೊಂದಲ. ಅಕ್ಕಪಕ್ಕದ ಐರೋಪ್ಯ ರಾಷ್ಟ್ರಗಳಿಗೆ ಭೇಟಿ ಕೊಟ್ಟಾಗ ಆದ ಅನುಭವಗಳು ಮತ್ತು ಪ್ಯಾರಿಸ್‌ನಿಂದ ಮೈಸೂರಿನತ್ತ ಪ್ರಯಾಣ ಬೆಳೆಸಿದಾಗ ಆದ ಅನುಭವಗಳು ನನ್ನ ಪರಿಕಲ್ಪನೆಗಳಿಗೆ ಬಲ ತುಂಬಿದವು. ಎಪ್ಪತ್ತರ ದಶಕದಲ್ಲಿ ನಾನು ಪೂರ್ವ ಮತ್ತು ಪಶ್ಚಿಮ ಯುರೋಪ್, ಮಧ್ಯಪ್ರಾಚ್ಯ, ಇಸ್ರೇಲ್, ಇರಾಕ್, ಇರಾನ್, ಸೋವಿಯತ್ ಒಕ್ಕೂಟ ಹೀಗೆ ಹಲವೆಡೆ ಪ್ರಯಾಣ ಮಾಡಿ ಬಂದೆ. ನನ್ನದಲ್ಲದ ತಪ್ಪಿಗೆ ಸರ್ಬಿಯಾದ ಒಂದು ಪ್ರದೇಶದಲ್ಲಿ ಪೊಲೀಸರೊಂದಿಗೆ ನಡೆದ ಒಂದು ಅಹಿತಕರ ಘಟನೆ ನನ್ನನ್ನು ಬದಲಿಸಿತು. ಗೊಂದಲದಲ್ಲಿದ್ದ ಎಡಪಂಥೀಯನಾಗಿದ್ದ ನಾನು ಕರುಣಾಮಯಿ ಬಂಡವಾಳಶಾಹಿಯಾಗಿ ಬದಲಾದೆ. ಅಲ್ಲಿನ ಪೊಲೀಸರಿಗೆ ನಾನು ಋಣಿ.

ದಿನವೊಂದಕ್ಕೆ 25 ತಾಸು, ತಪ್ಪುವುದೇ ಜಗತ್ತಿನ ತ್ರಾಸು?

ಶಿಶಿರ ಕಾಲ

ಶಿಶಿರ್ ಹೆಗಡೆ
shishirh@gmail.com

ಇಲ್ಲಿ ತ್ರಾಸು ಎಂದರೆ ತಕ್ಕಡಿ, ಸಮತೋಲನ ಎಂದರ್ಥ. ಚಂದ್ರ ಭೂಮಿಯಿಂದ ನಿಧಾನವಾಗಿ ದೂರ ಸರಿಯುತ್ತಿದ್ದಾನೆ, ಪರಿಣಾಮ ಭೂಮಿಯ ದಿನ ಲಂಬಿಸಿ 24ರ ಬದಲಿಗೆ 25 ಗಂಟೆಯಾಗಲಿದೆ. ಹೀಗೊಂದು ಸುದ್ದಿ ಕೆಲ ದಿನಗಳ ಹಿಂದೆ 'ವಿಶ್ವವಾಣಿ'ಯಲ್ಲಿ ಪ್ರಕಟವಾಗಿತ್ತು. ನಂತರ ಉಳಿದ ಕೆಲವು ಸುದ್ದಿವಾಹಿನಿಗಳಲ್ಲಿಯೂ ಅದು ಕಾರ್ಯಕ್ರಮವಾಗಿ ಬಿತ್ತರಗೊಂಡು ಸಾರ್ವಜನಿಕ ನ್ಯಾಯಾಲಯವಾದ ಸೋಷಿಯಲ್ ಮೀಡಿಯಾದಲ್ಲಿಯೂ ಇದರ ಕುರಿತು ಚರ್ಚೆಗಳು ನಡೆದವು. ಕೆಲವರು, ಮಿಕ್ಕಿದ 1 ಗಂಟೆ ಏನು ಮಾಡಬಹುದು ಎಂದು ತಲೆಕೆಡಿಸಿಕೊಂಡರೆ, ಇನ್ನು ಕೆಲವರು ಚಂದ್ರ ಭೂಮಿಯಿಂದ ದೂರವಾದರೆ ನಮ್ಮ ದಿನವೇಕೆ ಉದ್ದವಾಗಬೇಕು ಎಂದು ತಮ್ಮೆಲ್ಲ ಶಿಕ್ಷಣವನ್ನು, ವಿಜ್ಞಾನವನ್ನು ಒರೆಗೆ ಹಚ್ಚಿ ಚರ್ಚಿಸಿದರು. ಒಮ್ಮಿಂದೊಮ್ಮೆಲೇ ಪ್ರತಿದಿನ ಒಂದು ಗಂಟೆ ಹೆಚ್ಚಿಗೆ ಸಿಕ್ಕಿಬಿಟ್ಟರೆ ಎಂಬ ಕಲ್ಪನೆ ಮಜವಾಗಿದೆ. ಇನ್ನಷ್ಟು ಬಾರಿ 'ಸ್ನೂಜ್' ಒತ್ತಿ ಒಂದು ಗಂಟೆ ಜಾಸ್ತಿ ನಿದ್ರಿಸಬಹುದು ಎಂದು ಕೆಲವರು, ಜಿಮ್ಮಿಗೆ ಹೋಗಬಹುದು, ಹವ್ಯಾಸಕ್ಕೆ, ಜಾಸ್ತಿ ದುಡಿಯಬಹುದು ಇತ್ಯಾದಿ ಒಬ್ಬೊಬ್ಬರದು ಒಂದೊಂದು ಉತ್ತರ. ನನ್ನ ಅಜ್ಜಿಗೆ ಕೇಳಿದಾಗ, ಇನ್ನೊಂದು ಧಾರಾವಾಹಿ ಹೆಚ್ಚಿಗೆ ನೋಡಬಹುದು ಎಂದರು. ಒಟ್ಟಾರೆ ಯಾರು ಏನೇ ಹೇಳಲಿ, ನಮಗೆ ಇನ್ನೊಂದು ತಾಸು ಹೆಚ್ಚಿಗೆ ಸಿಕ್ಕರೆ ಬಹುತೇಕರು ಅದನ್ನು ಮೊಬೈಲ್ ಉಜ್ಜಿಯೇ ಕಳೆಯುತ್ತಾರೆ. ಬಿಡಿ.

ಇಂಥ ಕೆಲವು ವಿಚಿತ್ರವೆನಿಸುವ, ನಮ್ಮ ಗಮನವನ್ನು ಆ ಕ್ಷಣಕ್ಕೆ ಸೆಳೆಯುವ, ಬಾಹ್ಯಾಕಾಶಕ್ಕೆ ಸಂಬಂಧಿಸಿದ ವಿಷಯಗಳು ಆಗೀಗ ಕೇಳಿಬರುತ್ತಲೇ ಇರುತ್ತವೆ. ಎರಡು ದಶಕದ ಹಿಂದೆ 'ತರಂಗ' ಪತ್ರಿಕೆಯಲ್ಲಿ ಪ್ರಕಟಗೊಂಡ, ಇಂಥದ್ದೇ ಒಂದಿಷ್ಟು ಸುದ್ದಿಗಳನ್ನೊಳಗೊಂಡ 'ಪ್ರಳಯವಾಗಿಬಿಡುತ್ತದೆ' ಎಂಬ ವರದಿ ಅಂದು ಸಂಚಲನ ಮೂಡಿಸಿತ್ತು. ಇವತ್ತಷ್ಟೇ ಇನ್ನೊಂದು ಸುದ್ದಿ ಬಂದಿದೆ. ಭೂಮಿಯ ಅಂತರಾಳದಲ್ಲಿ ಲಾವಾ ಇದೆಯಲ್ಲ, Inner Core- ಅದು ಕಳೆದ ಹದಿನಾಲ್ಕು ವರ್ಷದಿಂದ ವಿನಾಕಾರಣ ಗಣನೀಯವಾಗಿ ನಿಧಾನಕ್ಕೆ ಚಲಿಸುತ್ತಿದೆಯಂತೆ. ಆ ಕರಗಿದ ಲಾವಾ ಇರುವುದು ಮೇಲ್ಮೈ ಇಂದ ಸುಮಾರು ಐದು ಸಾವಿರ ಕಿಲೋಮೀಟರ್ ಒಳಕ್ಕೆ. ಇಂಥ ಅದೆಷ್ಟೋ ಚಿಕ್ಕಪುಟ್ಟವೆನಿಸುವ ವ್ಯತ್ಯಾಸ ಸುದ್ದಿಯಾದಾಗ ಅದರ ದೂರಗಾಮಿ ಪರಿಣಾಮವನ್ನು ಗ್ರಹಿಸಿ, ಅದನ್ನು ಪ್ರಳಯಕ್ಕೆ, ಭೂಮಿಯ ಸರ್ವನಾಶಕ್ಕೆ ಕಟ್ಟಿ ವಿಮರ್ಶಿಸುವುದು ಇತ್ತೀಚಿನ ಟ್ರೆಂಡ್. ಇದು ರುಚಿಸುವುದು ಇಂಥ ಸಾಧ್ಯತೆಯ ಭಯ ಎಲ್ಲರಲ್ಲೂ ಇರುವುದರಿಂದ. ಅದು ರೋಚಕತೆಯ ಗುಟ್ಟು. ಆ ಕಾರಣಕ್ಕೇ ಅಂದು ತರಂಗ ಪತ್ರಿಕೆಯ ಫೋಟೋ ಕಾಪಿಗಳು ಬ್ಲಾಕ್‌ನಲ್ಲಿ 100 ರುಪಾಯಿಗೆ ಮಾರಾಟವಾಗಿದ್ದವು. ಇದೆಲ್ಲ 'butterfly effect' ವಿಶ್ಲೇಷಣೆಗಳು. ಬ್ರೆಜಿಲ್ಲಿನ ಪಾತರಗಿತ್ತಿ ತಪ್ಪಾಗಿ ಹಾರಿ ಕೂತರೆ ಜಗತ್ತೇ ಸರ್ವನಾಶವಾಗಲಿದೆ ಎಂಬ ಕಲ್ಪಿತ ವಾದ.

ಈ 'ಪ್ರಳಯವಾಗುತ್ತದೆ' ಎಂಬುದನ್ನು ತೀರಾ ಗಂಭೀರವಾಗಿ ಪರಿಗಣಿಸುವ ಕೆಲವು ಕಲ್ಟ್- ಧರ್ಮಪಂಥಗಳು ಇಂದಿಗೂ ಇವೆ. 1996ರಲ್ಲಿ Heaven's Gate ಎಂಬ ಅಮೆರಿಕನ್ ಕ್ರಿಶ್ಚಿಯನ್ ಕಲ್ಟ್ ಗುಂಪು, 'ಪ್ರಳಯವಾಗಲಿದೆ, ಇದರಿಂದ ಬದುಕುಳಿಯಬೇಕೆಂದರೆ 29 ಸೆಪ್ಟೆಂಬರ್ 1996ರ ಒಳಗಡೆ ದೇಹತ್ಯಾಗ ಮಾಡಬೇಕು. ಹಾಗಾದಲ್ಲಿ ಪ್ರಳಯ ಮುಗಿದ ತಕ್ಷಣ ಅವರೆಲ್ಲರೂ ಮರುಹುಟ್ಟು ಪಡೆಯಲಿದ್ದಾರೆ' ಎಂದು ನಂಬಿಸಿತ್ತು (ಅವರ ವೆಬ್‌ಸೈಟ್ ಒಮ್ಮೆ ನೋಡಿ: https://www.heavensgate.com/). ಅಮೆರಿಕದಲ್ಲಿ ಆ ದಿನ 39 ಮಂದಿ ಸುಶಿಕ್ಷಿತರು ಇದನ್ನು ನಂಬಿ ಆತ್ಮಹತ್ಯೆ ಮಾಡಿಕೊಂಡರು! Branch Davidians ಎಂಬ ಗುಂಪಿನವರಂತೂ- ಅವರು ಪ್ರಳಯ ಎಂದು ಆತ್ಮಹತ್ಯೆಗೆ ಪ್ರಚೋದಿಸುತ್ತಿದ್ದಾರೆ ಎಂದು ಬಂಧಿಸಲು ಮುಂದಾದಾಗ 76 ಜನ ಕಾಡಿನ ಮಧ್ಯೆ ಬೆಂಕಿ ಹಚ್ಚಿಕೊಂಡು ಪ್ರಾಣ ಬಿಟ್ಟರು. ಅಮೆರಿಕದಲ್ಲಷ್ಟೇ ಅಲ್ಲ, ಪೂರ್ವದ ಜಪಾನಿನಲ್ಲೂ ಇಂಥ ಘಟನೆ ನಡೆದಿದೆ. ಪ್ರಳಯವಾಗುತ್ತದೆ ಎಂದು ಟೋಕಿಯೋದ ಮೆಟ್ರೋ ರೈಲಿನಲ್ಲಿ ವಿಷಾನಿಲ ಬಿಟ್ಟ ಗುಂಪು ಅಂದು 13 ಜನರ ಸಾವಿಗೆ, ಸಾವಿರಾರು ಜನರ ಅಸ್ವಸ್ಥತೆಗೆ ಕಾರಣವಾಗಿತ್ತು. ಪ್ರಳಯಕ್ಕೆ ಅಂಜಿ ತೀರಾ ಅತಿಯೆನಿಸುವ, ಗುಂಪಿನಲ್ಲಿ ಮಾಡಿಕೊಂಡ ಶತಮೂರ್ಖತನದ ನಡೆಗಳು ಇತಿಹಾಸದಲ್ಲಿ ಸಾಕ್ಷಿವೆ.

ಒಟ್ಟಿನಲ್ಲಿ ಪ್ರಳಯವಾಗುತ್ತದೆ, ಅಥವಾ ಬಾಹ್ಯಾಕಾಶದ ಅನಂತ ಸಾಧ್ಯತೆಯಲ್ಲಿ ಒಂದು ಬದಲಾವಣೆ ನಮ್ಮ ಬದುಕನ್ನು ಶಾಶ್ವತ ಬದಲಿಸಿಬಿಡುತ್ತದೆ ಎಂಬ ಅನುಮಾನ, ವಿಚಾರಗಳು ಇಂದು ನಿನ್ನೆಯದಲ್ಲ. ಇಂಥದ್ದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದು ಇಲ್ಲಿನ ಪ್ರಶ್ನೆ. ಕಲ್ಪನೆ ಸೃಷ್ಟಿಸುವ ಆಕರ್ಷಕ ಅನುಭವ ಒಂದು ಕಡೆ. ಆದರೆ ನಿಜವಾಗಿಯೂ ಇವುಗಳ ಪರಿಣಾಮಗಳೇನು? ಬದಲಾವಣೆಯಾಗುತ್ತಿರುವುದಂತೂ ನಿಜ. ಭೂಮಿಯ ಅಂತರಾಳ ನಿಧಾನವಾಗಿರುವುದು, ಚಂದ್ರ ನಮ್ಮಿಂದ ದೂರವಾಗುತ್ತಿರುವುದು, ಸೂರ್ಯನಿಗೂ ಕೊನೆಯಿದೆ, ಅವನೂ ಒಂದು ದಿನ ಸಾಯುತ್ತಾನೆ, ಸಾಯುವಾಗ ನಮ್ಮನ್ನೆಲ್ಲ ತಿಂದೇ ಹೋಗುವುದು ಇವೆಲ್ಲವೂ ನಿಜ.

ನಾವು ಮನುಷ್ಯರು ಎಲ್ಲಿಂದ ಬಂದವರು? ಈ ಭೂಮಿಯಲ್ಲಿ ಜೀವೋದ್ಭವ, ನಂತರದ ವಿಕಾಸ ಯಾವ ಉದ್ದೇಶಕ್ಕಾಯಿತು? ಇವಕ್ಕೆಲ್ಲ ಪ್ರೇರಣೆಯೇನು? ಅಸಲಿಗೆ ಜೀವಿಗಳಲ್ಲಿ ಬದುಕಬೇಕೆಂಬ ಉತ್ಕಟತೆ ಹೇಗೆ ಬಂತು? ಮನುಷ್ಯರಾದ ನಾವೇಕೆ ಈ ರೂಪದಲ್ಲೇ ಇದ್ದೇವೆ? ಮನುಷ್ಯರಲ್ಲೇಕೆ ಅನ್ಯ ರೂಪಗಳಿಲ್ಲ, ಏಕರೂಪವೇಕೆ? ನಾವು ಹೇಗೆ ಇಂದಿನ ಆಧುನಿಕ ಜಗತ್ತಿನವರೆಗೆ ಬಂದು ತಲುಪಿದೆವು? ನಮ್ಮಷ್ಟೇ ಬುದ್ಧಿವಂತನಾಗಿರುವ ಇನ್ನೊಂದು ಪ್ರಾಣಿ ಏಕೆ ಇಲ್ಲಿ ಅಸ್ತಿತ್ವದಲ್ಲಿಲ್ಲ? ವೈರಸ್‌ನಿಂದ ಆರಂಭವಾದ ಜೀವ ಅಸಂಖ್ಯ ಜೀವಿಗಳಾದವು ಎಂದಾದರೆ ಮನುಷ್ಯರೆಲ್ಲರ ಪ್ರಮಾಣಗಳು ಒಂದೇ ಏಕೆ? ನಮ್ಮ ದೇವಸ್ಥಾನಗಳಲ್ಲಿ ಕೆತ್ತನೆಯಾಗಿರುವ ನಾಗ, ಶಾರ್ದೂಲಗಳು ಒಂದು ಕಾಲದಲ್ಲಿ ನಮ್ಮಷ್ಟೇ, ಅಥವಾ ನಮಗಿಂತ ಬುದ್ಧಿವಂತರಿದ್ದವಾ? ಅವುಗಳಿಗೆ ನಮಗಿಲ್ಲದ ಶಕ್ತಿಯಿತ್ತಾ? ಹಾಗಾದರೆ ಹೇಗೆ ಅವೆಲ್ಲವನ್ನು ಸೋಲಿಸಿ ನಾವಷ್ಟೇ ಉಳಿದುಕೊಂಡುಬಿಟ್ಟೆವು? ನಾವು ಉಳಿದದ್ದಾ ಅಥವಾ ಅವರೇ ನಮಗೆ ಭೂಮಿ ಬಿಟ್ಟುಕೊಟ್ಟು ಹೋದದ್ದಾ? ಯಾವ ಪ್ರಶ್ನೆಯೂ ಅಪ್ರಸ್ತುತ, ನಾನ್ಸೆನ್ಸ್ ಅಲ್ಲ.

ಭೂಮಿ, ಸೌರವ್ಯೂಹ ಹುಟ್ಟಿದ್ದು 460 ಕೋಟಿ ವರ್ಷದ ಹಿಂದೆ. ಸುಮಾರು 380 ಕೋಟಿ ವರ್ಷದ ಹಿಂದೆ ನೀರು ದ್ರವರೂಪಕ್ಕೆ ಬರುವಷ್ಟು ತಣ್ಣಗಾಗಿ ಸಮುದ್ರಗಳ ಉಗಮ ಶುರುವಾಯಿತು. ಅಷ್ಟೊಂದು ಪ್ರಮಾಣದಲ್ಲಿ ಭೂಮಿಯಲ್ಲೇ ಏಕಿಷ್ಟು ನೀರು? ಭೂಮಿಯಂತೆ ಚಂದ್ರನಲ್ಲೇಕೆ ಇವೆಲ್ಲ ಸಂಭವಿಸಿಲ್ಲ ಇವೆಲ್ಲ ಏತನ್ಮಧ್ಯೆ ಪ್ರಶ್ನೆಗಳು. ನೀರು ಯಥೇಚ್ಚ ದ್ರವರೂಪದಲ್ಲಿ ಲಭ್ಯವಾದಾಗ ಅಲ್ಲಿ ಜೀವಿ, ಏಕಕೋಶ ಜೀವಿ ಹುಟ್ಟಲಿಕ್ಕೆ ಇನ್ನೊಂದು 30 ಕೋಟಿ ವರ್ಷ ಬೇಕಾಯಿತು. ಮೊದಲ ವೈರಸ್‌ನಿಂದ ಬ್ಯಾಕ್ಟೀರಿಯಾ ಹುಟ್ಟಿ, ವಿಕಾಸವಾಗುತ್ತ ಎರಡು ಕಾಲಿನಲ್ಲಿ ನಡೆಯುವ ಹೋಮೋ ಸೇಪಿಯನ್ ಆಗಲಿಕ್ಕೆ ತಗುಲಿದ್ದು 350 ಕೋಟಿ ವರ್ಷ. ಅಂದಿನ ಹೋಮೋ ಸೇಪಿಯನ್‌ನಿಂದ ಇಂದಿನ ಆಧುನಿಕ ಮನುಷ್ಯನವರೆಗೆ ಬಂದು ತಲುಪಲು ನಾವು ತೆಗೆದುಕೊಂಡದ್ದು 'ಕೇವಲ' 3 ಲಕ್ಷ ವರ್ಷ. ಗುಂಪಿನಲ್ಲಿ ಬೇಟೆಯಾಡುವುದರಿಂದ ಆರಂಭಿಸಿ ಸಂವಹನಕ್ಕೆ ಮಾತಿನ ಬಳಕೆ, ಭಾಷೆಯ ಹುಟ್ಟು, ಕೃಷಿ, ನಂತರದಲ್ಲಿ ಹಲವು ನಾಗರಿಕತೆಗಳ ಹುಟ್ಟು, ಸಾವು, ಮರುಹುಟ್ಟು, ಯುದ್ಧಗಳು, ವೇದ, ತಾಳೆಗರಿ, ಪುಸ್ತಕ, ವಾಸ್ತುಶಿಲ್ಪ, ಪಿರಮಿಡ್, ಕೈಲಾಸ ದೇವಸ್ಥಾನ, ರೋಮ್, ರಾಮ್, ನಳಂದಾ, ಪರಕೀಯರ ದಾಳಿ, ಸ್ವಾತಂತ್ರ್ಯ ಹೋರಾಟ- ಅಬ್ಬಾ, ಅದೆಂಥಾ ಪ್ರಯಾಣ! ಅನನ್ಯ. ಅದು ಬಿಡಿ, ಇಂದು ನೆಲೆನಿಂತಿರುವ ಬಹುತೇಕ ನಗರಗಳು, ಅಲ್ಲಿನ ಎತ್ತೆತ್ತರದ ಕಟ್ಟಡಗಳು, ಝಗಮಗಿಸುವ ದೀಪಾಲಂಕೃತ ಬೀದಿಗಳು, ವಿಮಾನ, ಕಾರು, ವಾಹನಗಳು ಇವೆಲ್ಲವಂತೂ ಕೆಲವೇ ನೂರು ವರ್ಷಗಳಲ್ಲಿ ತಯಾರಾದವು. ನಮ್ಮ ಬದುಕಿನ ದೆಸೆಯನ್ನೇ ಬದಲಿಸಿದ ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್ ಇವೆಲ್ಲ ಕೆಲವೇ ದಶಕಗಳ ಹಿಂದಿನವು! ಈಗಂತೂ ಪ್ರತಿ ದಶಕ ಕಳೆಯುವುದರೊಳಗೆ ಬದುಕು ಸಂಪೂರ್ಣ ಬದಲಾಗುತ್ತಿದೆ, ವೇಗ ಹೆಚ್ಚುತ್ತಿದೆ.

ನಾವಿರುವ ಭೂಮಿಗೂ ಅಂತ್ಯವಿದೆ. ಅಂತ್ಯವೆಂದರೆ ಭೂಮಿಗಲ್ಲ, ನಮಗೆ ಈ ಭೂಮಿಯಲ್ಲಿ ಸುಮಾರು 1-2 ನೂರು ಕೋಟಿ ವರ್ಷ ಬದುಕುವ ವಾತಾವರಣ ಇರುವ ಸಾಧ್ಯತೆಯಿದೆ. ಅದಾದ ನಂತರ ಸೂರ್ಯ ಹಿಗ್ಗಿ, ಭೂಮಿಯ ಮೇಲೆ ಅಂದಾಜಿಸಲಾಗದ ವಿಕೋಪಗಳು ನಡೆದು ಕೊನೆಗೊಂದು ದಿನ ಸೂರ್ಯನೇ ಭೂಮಿಯನ್ನು ನುಂಗಲಿದ್ದಾನೆ. ಮುಂದೊಂದು ದಿನ ನಮ್ಮ ಗ್ಯಾಲಕ್ಸಿ ಇನ್ನೊಂದು ಗ್ಯಾಲಕ್ಸಿಗೆ ಡಿಕ್ಕಿಹೊಡೆಯಲಿದೆ. ಆದರೆ ಅದೆಲ್ಲದಕ್ಕಿಂತ ಮೊದಲು ವಾಸಯೋಗ್ಯವಾಗಿರುವ ಭೂಮಿಯ ಆಯಸ್ಸು ಎರಡಲ್ಲ, ಒಂದೇ ಕೋಟಿ ವರ್ಷವೆಂದಿಟ್ಟುಕೊಳ್ಳೋಣ. ಅದು ಮನುಷ್ಯ ಸಂತತಿಯ ಗರಿಷ್ಠ ಆಯಸ್ಸು. ಅಷ್ಟರೊಳಗೆ ನಾವೇ ವಾತಾವರಣ ಹದಗೆಡಿಸಿಕೊಂಡರೆ, ಅಥವಾ ಕ್ಷುದ್ರಗ್ರಹ ಬಂದಪ್ಪಳಿಸಿದರೆ, ಅಥವಾ ಯಾವುದೋ ಒಂದೆರಡು ಜ್ವಾಲಾಮುಖಿಗಳು ಬಾಯಿತೆರೆದುಕೊಂಡರೆ ಅದರಿಂದಾಗುವ ನಾಶದಿಂದ ಮೊದಲೇ ಸರ್ವನಾಶವಾಗಬಹುದು. ಜ್ವಾಲಾಮುಖಿಯಿಂದಲೇ ಡೈನಸಾರಸ್ ಆದಿಯಾಗಿ ಶೇ. 80 ಜೀವಿಗಳು 200 ಕೋಟಿ ವರ್ಷದ ಹಿಂದೆ ನಾಶವಾಗಿದ್ದವು. ಇರಲಿ, ಅದ್ಯಾವುದೂ ಸಂಭವಿಸಲಿಕ್ಕಿಲ್ಲ ಎಂದೇ ಇಟ್ಟುಕೊಂಡಲ್ಲಿ ಮುಂದಿರುವುದು ನೂರು ಕೋಟಿ ವರ್ಷ.

ನೂರು ಕೋಟಿ ವರ್ಷವೆಂದರೆ ನೂರು ಕೋಟಿ ರುಪಾಯಿ ಎಂಬಂತೆ ತಾತ್ಸಾರ ಮಾಡುವಂತಿಲ್ಲ, ಅದೊಂದು ಬಹುದೀರ್ಘಕಾಲ. ನಾವು ಮನುಷ್ಯ ಇತಿಹಾಸವನ್ನು ಯಾವತ್ತೂ ಶತಮಾನಗಳಲ್ಲಿ, ಸಾವಿರ ವರ್ಷದ ಲೆಕ್ಕದಲ್ಲಿ ನೋಡುತ್ತೇವೆ, ವಿಕಾಸವಾದವನ್ನು ಕೆಲವು ಲಕ್ಷ ವರ್ಷಗಳಲ್ಲಿ. ನೂರು ಕೋಟಿ ಎಂದರೆ ಹತ್ತು ಸಾವಿರ ಲಕ್ಷ ವರ್ಷ. ಶೂನ್ಯದಿಂದ ಜೀವಿಯ ಉಗಮವಾಗಿ ಅದು ಮನುಷ್ಯನವರೆಗೆ ರೂಪಾಂತರವಾಗಲು ಬೇಕಾಗಿರುವ 350 ಕೋಟಿ ವರ್ಷ ತಗುಲಿರಬಹುದು. ಆದರೆ ಮಂಗನಿಂದ ಮನುಷ್ಯನಾಗಿ ರೂಪಾಂತರವಾಗಲು ತಲುಪಿರುವ ಲೆಕ್ಕ 80 ಲಕ್ಷ ವರ್ಷ ಮಾತ್ರ. ಅದು ಮಂಗನಿಂದ ಇಂದಿನ ಮನುಷ್ಯನಾಗಲು ನಾವು ತೆಗೆದುಕೊಂಡ ಸಮಯ. ಈಗ ತಾಂತ್ರಿಕತೆ ಇತ್ಯಾದಿ ಬೆಳೆದಿದೆ, ಬದುಕೇ ಬದಲಾಗಿದೆ. ಹೀಗಿರುವಾಗ ಮನುಷ್ಯ ಇಲ್ಲಿಂದ ಮುಂದೆ ರೂಪಾಂತರವಾಗದೇ ಇರುತ್ತಾನೆಯೇ? ಜೀವಿ ಸಂಕೀರ್ಣವಾಗುತ್ತಿದ್ದಂತೆ, ಜತೆಯಲ್ಲಿ ಬದುಕುವ ರೀತಿ ಬದಲಿಸಿಕೊಂಡಂತೆ ವಿಕಸನವಾಗುವ, ಹೊಂದಿಕೊಳ್ಳುವ ವೇಗ ಕೂಡ ಇನ್ನಷ್ಟು ಹೆಚ್ಚೆಚ್ಚು. ಅಷ್ಟೇ ಅಲ್ಲ, ಹತ್ತುಸಾವಿರ ಲಕ್ಷ ವರ್ಷವೆಂದರೆ ಇಂದಿರುವ ಹಾವು, ಹರಣಿ, ಅಥವಾ ಮಂಗ, ಗೊರಿಲ್ಲಾ ಮೊದಲಾದವುಗಳೇ ಬದುಕಿ ವಿಕಾಸನವಾಗುತ್ತ ಹೋದರೆ ಅವು ಮುಂದೊಂದು ದಿನ ನಮಗಿಂತ ಬುದ್ಧಿವಂತ ಪ್ರಾಣಿಯಾಗಿ ಹೊರಹೊಮ್ಮಬಹುದು. ಆ ಪ್ರಭೇದ- species ಬೇರೆಯದೇ ರೂಪದ್ದಿರಬಹುದು. 80 ಲಕ್ಷ ವರ್ಷದಲ್ಲಿ ಮಂಗನಿಂದ ಮನುಷ್ಯರಾಗಿದ್ದೇವೆ ಎಂದರೆ ಇನ್ನುಳಿದ ಹತ್ತು ಸಾವಿರ ಲಕ್ಷ ವರ್ಷದಲ್ಲಿ ನಾವು ಮನುಷ್ಯರು ಇಂದಿನ ಮನುಷ್ಯರಂತೆಯೇ ಉಳಿದುಬಿಡುತ್ತೇವೆಯೇ? ನಾವೂ ವಿಕಾಸವಾಗುತ್ತಿದ್ದೇವೆ, ನಮ್ಮ ಮಿದುಳು ಚಿಕ್ಕದಾಗುತ್ತಿದೆ ಇತ್ಯಾದಿ ನಾವು ಗ್ರಹಿಸಿದ್ದೇವೆ. ಅಷ್ಟೇ ಅಲ್ಲ, ನಾವಿಂದು ಭೂಮಿಯ ಎಲ್ಲ ಭಾಗದಲ್ಲೂ ನೆಲೆಸಿದ್ದೇವೆ. ಅಲ್ಲಿನ ವಾತಾವರಣ ಬೇರೆ ಬೇರೆ. ಅಂತೆಯೇ ಮುಂದಿನ ದಿನಗಳಲ್ಲಿ ಒಂದೊಂದು ಜಾಗದಲ್ಲಿ ಒಂದೊಂದು ವೈಪರೀತ್ಯಗಳು ಹೆಚ್ಚಲಿವೆ. ಅದಕ್ಕನುಗುಣವಾಗಿ ಆಯಾ ಜಾಗದಲ್ಲಿ ವಿಕಾಸವಾಗುತ್ತ ಹೋದಲ್ಲಿ, ಅಥವಾ ಇಂದಿನಂತೆ ಮನುಷ್ಯನ ಅಂತಾರಾಷ್ಟ್ರೀಯ ವಲಸಾ ಕ್ರಮ ಮುಂದುವರಿದಲ್ಲಿ ಮನುಷ್ಯರಲ್ಲಿಯೇ ಸಾವಿರಾರು, ಅಥವಾ ಹತ್ತಾರು ಹೊಸ ನಮೂನೆಯ ಮನುಷ್ಯರು ಇನ್ನೊಂದು 20-30 ಲಕ್ಷ ವರ್ಷದಲ್ಲಿ ಬರಬಹುದು. ಆಗ ಅವರುಗಳ ನಡುವೆಯೇ ಯುದ್ಧ, ಪೈಪೋಟಿ ನಡೆಯಬಹುದು, ಅಥವಾ ಅನಿವಾರ್ಯ ಸ್ನೇಹ ಬೆಳೆದು ಒಂದೊಂದು ವರ್ಗ ಒಂದೊಂದು ದೇಶ, ಖಂಡ ತಮ್ಮದೆಂದು ಆವರಿಸಿಕೊಳ್ಳಬಹುದು. ಅವುಗಳ ನಡುವೆ ವ್ಯಾಪಾರ, ವ್ಯವಹಾರ, ತಾಂತ್ರಿಕ ಮಾಹಿತಿಗಳ ವಿನಿಮಯ ನಡೆಯಬಹುದು. ಈಗಾಗಲೇ ಅಸಂಖ್ಯ ಸಂಕೀರ್ಣ ಜೀವಿಗಳು ಭೂಮಿಯಲ್ಲಿವೆ. ಅವು ಇನ್ನಿರುವ ಕಾಲದಲ್ಲಿ ಏನು ಬೇಕಾದರೂ ಬದಲಾವಣೆಯಾಗಿ ಹೊಸ ಜೀವ ಪ್ರಭೇದಗಳು ಹುಟ್ಟಿಕೊಳ್ಳಬಹುದು. ಈ ಕಲ್ಪನೆಗೆ ಮಿತಿಯೇ ಇಲ್ಲ. ಏಕೆಂದರೆ ಅಷ್ಟೊಂದು ಸಾಧ್ಯತೆಗಳು.

ಇದೆಲ್ಲದರ ನಡುವೆ ಚಂದ್ರ ನಮ್ಮಿಂದ ದೂರ ಹೋಗುವುದು, ಭೂಮಿಯ ಅಂತರಾಳದ ಚಲನೆ ಇತ್ಯಾದಿ ವಿಷಯಗಳು. ಇವೆಲ್ಲವೂ ನಮ್ಮ ಅಂಕುಶಕ್ಕೆ ಮೀರಿದ ಅಸಂಖ್ಯ ಸಾಧ್ಯತೆಗಳು. ಇವುಗಳನ್ನು ಅಲಕ್ಷಿಸಬೇಕೇ? ಅಲಕ್ಷಿಸುವ ಅಗತ್ಯವಿಲ್ಲ ಆದರೆ ಗ್ರಹಿಸಬೇಕಾದದ್ದು ಅತ್ಯಗತ್ಯ. ಅವು ದೀರ್ಘಕಾಲದ ಬದಲಾವಣೆಗಳು. ಅವೆಷ್ಟು ನಿಧಾನ ಎಂದರೆ ಪ್ರಕೃತಿಯಲ್ಲಿ ಅವಕ್ಕೆ ಒಗ್ಗಿಕೊಳ್ಳುವಷ್ಟು, ನಮ್ಮನ್ನು ನಾವೇ ಅಚಿಂತ್ಯ ಬದಲಿಸಿಕೊಳ್ಳುವಷ್ಟು ಸಮಯವೂ ನಮಗಿರುತ್ತದೆ. ಭೂಮಿಯ ದಿನ 25 ಗಂಟೆಯಾಗುತ್ತದೆ ಎಂದರೆ ಅದೇನು ನಾಳೆ ಬೆಳಗ್ಗೆಯಿಂದ ಜಾರಿಯಾಗಿಬಿಡಲಿಕ್ಕೆ ಯಾವುದೇ ಕಾನೂನೋ ಅಥವಾ ನೋಟು ಅಮಾನ್ಯೀಕರಣವೋ ಅಲ್ಲ. 1.7 ಮಿಲಿ ಸೆಕೆಂಡ್‌ನಷ್ಟು ದಿನ ದೀರ್ಘವಾಗಲು ಒಂದು ಶತಮಾನ ಬೇಕು. 460 ಕೋಟಿ ವರ್ಷದ ಹಿಂದೆ, ಜೀವ ಉಗಮವೇ ಆಗದಿರುವಾಗ ಭೂಮಿಯ ಒಂದು ದಿನ 6 ಗಂಟೆ ಇತ್ತು. ಜೀವ ವಿಕಾಸವಾಗುವಾಗ ಕೂಡ ಈ ವೇಗ ತಗ್ಗುತ್ತಲೇ ಇತ್ತು, ಭೂಮಿಯಲ್ಲಿ ದಿನ ದೀರ್ಘವಾಗುತ್ತಲೇ ಇತ್ತು. ವಿಕಾಸವಾಗುತ್ತ ಅದರ ಜತೆಯಲ್ಲಿಯೇ ಇಂದಿನ 24 ಗಂಟೆಗೆ ದಿನ ಎಂಬುದಕ್ಕೆ ಒಗ್ಗಿಕೊಂಡಿಲ್ಲವೇ ಹಾಗಾದರೆ? ಹಾಗೆಯೆ ದಿನಕ್ಕೆ 25 ಗಂಟೆಯಾದಾಗಲೂ. ದಿನಕ್ಕೆ 25 ಗಂಟೆ ಎಂದರೆ ಅದೊಂದೇ ಬದಲಾಗಿರುವುದಿಲ್ಲ, ಅದರ ಜತೆಯಲ್ಲಿ ಭೂಮಿಯೂ, ವಾತಾವರಣವೂ, ಋತುಮಾನವೂ ಎಲ್ಲವೂ ಬದಲಾಗಿರುತ್ತವೆ. ಅದಕ್ಕೆ ತಕ್ಕ ಮಾರ್ಪಾಡು ಕೂಡ ನಮ್ಮಲ್ಲಿ ಆಗಿರುತ್ತದೆ. ಆಗ ನಾವು ಇಂದಿನ ಮನುಷ್ಯರಾಗಿರುವುದಿಲ್ಲ. ಇಂದಿನ ಯಾವ ಭಾಷೆ, ಧರ್ಮ, ಕಾನೂನು, ಕಟ್ಟಡ, ನಗರ, ಊರು, ದೇಶ, ಲೈನ್ ಆಫ್ ಕಂಟ್ರೋಲ್, ಸಂಸ್ಕೃತಿ, ರೂಪ, ಸೆಕ್ಸ್, ಅಣೆಕಟ್ಟು, ರಸ್ತೆಗಳು, ನಾವಿಂದು ಬರೆಯುವ ಲೇಖನ, ಲೇಖನದ ಮೂಲಕ ಏನೋ ಒಂದು ಹೇಳುವ ಪದ್ಧತಿ, ಪತ್ರಿಕೆಗಳು, ಇಂದಿನ ಮೀಡಿಯಾ, ತಂತ್ರಾಂಶ, ಸರಕಾರಿ ಪದ್ಧತಿ, ನರೇಂದ್ರ ಮೋದಿ, ಟ್ರಂಪ್, ಬಿಜೆಪಿ, ಕಾಂಗ್ರೆಸ್, ಆಡಳಿತ ಇವು ಯಾವುವೂ ಇರುವುದಿಲ್ಲ. ಈ ದೀರ್ಘ ಕಾಲ ಮಾಪಕದಲ್ಲಿ ಇದನ್ನೆಲ್ಲ ನೋಡುವಾಗ ಭಾಷೆ ನಶಿಸುತ್ತಿದೆ, ಸಂಸ್ಕೃತಿ ಹಾಳಾಗುತ್ತಿದೆ, ರಾಜಕಾರಣ ಹದಗೆಡುತ್ತಿದೆ, ಧರ್ಮಗಳು, ಆಚರಣೆಗಳು ಕೊನೆಯಾಗುತ್ತಿವೆ ಎಂಬಿತ್ಯಾದಿ ಪುಕಾರುಗಳು ಅರ್ಥವನ್ನೇ ಕಳೆದುಕೊಂಡುಬಿಡುತ್ತವೆ. ಏಕೆಂದರೆ ಇವೆಲ್ಲ ಬದಲಾವಣೆಯ ಅಗಾಧತೆಯಲ್ಲಿ ನಗಣ್ಯ. ಬದಲಾವಣೆ ಎಂದಿಗೂ ನಿರಂತರ.

ಕಳೆದ ಇನ್ನೂರೇ ವರ್ಷದಲ್ಲಿ ಜಗತ್ತನ್ನು ನಾವು ಸಂಪೂರ್ಣ ಹದಗೆಡಿಸಿದ್ದೇವೆ. ಪ್ರಪಂಚವನ್ನು ಪ್ಲಾಸ್ಟಿಕ್‌ನಿಂದ ತುಂಬಿದ್ದೇವೆ, ನಮಗೇ ವಿಷವಾಗುವ ರಾಸಾಯನಿಕವನ್ನು ಬೇರಿನ್ನೊಂದು ಉದ್ದೇಶಕ್ಕೆ ಕಂಡುಹಿಡಿದು ಈಗ ನಾವು ಬಳಸುವ ನೀರು, ಗಾಳಿಗೇ ವಿಷ ಸುರಿದುಕೊಂಡಿದ್ದೇವೆ. ರಾಸಾಯನಿಕಗಳು ಹೊಟ್ಟೆ ಸೇರಿ, ಕೂದಲ ಅಂಚಿನವರೆಗೂ ತಲುಪಿ ಆಗಿದೆ, ಪ್ಲಾಸ್ಟಿಕ್ ಸೂಕ್ಷ್ಮ ಕಣಗಳು ಇಂದು ಭ್ರೂಣದಲ್ಲಿರುವ ಶಿಶುವಿನಲ್ಲಿ ಕಾಣಿಸಿಕೊಂಡಿವೆ. ಇದೆಲ್ಲದರ ಜತೆಯಲ್ಲಿ ಸಾಂಕ್ರಾಮಿಕದಿಂದಾಗಿ ನಾವು ಮನುಷ್ಯರು ಅದೆಷ್ಟು ಸೂಕ್ಷ್ಮ, ಭೇದ್ಯ (vulnerable) ಎಂಬ ಅರಿವಾಗಿದೆ. ಜತೆಯಲ್ಲಿ ಆಹಾರ ಒದಗಿಸುವ ಭೂಮಿಯ ಮೇಲ್ಮಣ್ಣು ಅನಾಚಾರ ಎಬ್ಬಿಸಿ ಆಗಿದೆ. ಇವೆಲ್ಲವೂ ಕೆಲವೇ ಶತಮಾನದಲ್ಲಿ ಸಾಧ್ಯವಾಗಿ ನಡೆದವು. ಹೀಗಾಗಿ ಸದ್ಯ ನಾವು ಯೋಚಿಸಬೇಕಾದದ್ದು ಮುಂದಿನ ನೂರಿನ್ನೂರು ವರ್ಷದ ನಂತರ ಏನೆಂಬುದರ ಬಗ್ಗೆ ಮಾತ್ರ. ಅದಾದ ಮೇಲೆ, ಅದು ಕಳೆದರಷ್ಟೇ ಮುಂದಿನ ಹತ್ತು ಸಾವಿರ ಲಕ್ಷ ವರ್ಷವಲ್ಲವೇ? ಈಗ ಹೇಳಿ- ಚಂದ್ರ ಭೂಮಿಯಿಂದ ದೂರ ಹೋಗಿ ದಿನಕ್ಕೆ 25 ಗಂಟೆಯಾದರೆ ಎಂಬಿತ್ಯಾದಿ ಸಹಜ, ವಿಲಂಬಿತ ಬದಲಾವಣೆಗೆ ತಲೆ ಕೆಡಿಸಿಕೊಳ್ಳಬೇಕೇ? ಜಂಗಮಕ್ಕಳಿವುಂಟು ಎನ್ನುವುದೊಂದೇ ಇಲ್ಲಿನ ಸತ್ಯ. ಅಷ್ಟೇ ತಿಳಿದಿದ್ದರೆ ಸದ್ಯಕ್ಕೆ ಸಾಕು.

ಪೌಷ್ಟಿಕಾಂಶದ ಭದ್ರತೆಗಾಗಿ ವಿಶಿಷ್ಟ ಕ್ರಮ

ಅನ್ನಸೂಕ್ತ

ಸಂಜೀವ್ ಚೋಪ್ರಾ
vveditoped@gmail.com

ಉತ್ತರ ಪ್ರದೇಶದ ಗಾಜಿಯಾಬಾದ್‌ನ ಪ್ರತಾಪ್ ವಿಹಾರ್ ಬ್ಲಾಕ್‌ನಲ್ಲಿ ನ್ಯಾಯಬೆಲೆ ಅಂಗಡಿ ಡೀಲರ್ ಆಗಿರುವ ಚಮನ್ ಪ್ರಕಾಶ್ ಕಳೆದ 11 ವರ್ಷಗಳಿಂದ ಆಹಾರ ಧಾನ್ಯಗಳನ್ನು ವಿತರಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ಇವರು ಏಕೈಕ ಡೀಲರ್ ಆಗಿದ್ದು, ಬರೋಬ್ಬರಿ 1,500 ಮನೆಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಚಮನ್ ತಮ್ಮ ನಿಸ್ವಾರ್ಥ ಸೇವೆಯಿಂದಲೇ ಈ ಭಾಗದಲ್ಲಿ ಖ್ಯಾತಿ ಹೊಂದಿದ್ದಾರೆ. ಅದರಲ್ಲೂ ವಿಶೇಷವಾಗಿ, ಕೋವಿಡ್ ಸಂದರ್ಭದಲ್ಲಿ ಇವರು ಅಲ್ಲಿನ ಜನರಿಗೆ ಆಸರೆಯಾಗಿ ನಿಂತು, ಅವರಿಗೆ ಅಗತ್ಯವಿರುವ ಪಡಿತರವನ್ನು ಸತತವಾಗಿ ಪೂರೈಸುತ್ತಿದ್ದರು. ಅಂದಿನಿಂದ ಇವರ ಖ್ಯಾತಿ ಉತ್ತುಂಗಕ್ಕೇರಿ, ಆ ಭಾಗದಲ್ಲಿ ವಿಶ್ವಾಸಾರ್ಹ ವ್ಯಕ್ತಿಯಾಗಿ ಬೆಳೆದರು.

ಆಹಾರಧಾನ್ಯ ವಿತರಣಾ ಏಜೆಂಟ್‌ಗಳಾಗಿ ದೇಶವ್ಯಾಪಿ ಕಾರ್ಯನಿರ್ವಹಿಸುವ 5.3 ಲಕ್ಷ ಡೀಲರ್‌ಗಳಲ್ಲಿ ಚಮನ್ ಪ್ರಕಾಶ್ ಕೂಡ ಒಬ್ಬರು. ಈ ಡೀಲರ್‌ಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಮೂಲಕ 80 ಕೋಟಿಗೂ ಹೆಚ್ಚು ಜನರಿಗೆ ಆಹಾರ ಭದ್ರತೆ ಒದಗಿಸುತ್ತಿದ್ದಾರೆ. ಇವರ ನ್ಯಾಯಬೆಲೆ ಅಂಗಡಿಗಳು ರಾಜ್ಯ ಸರಕಾರಗಳಿಂದ ಲೈಸೆನ್ಸ್ ಪಡೆದಿದ್ದು, ಅವುಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತವೆ ಮತ್ತು ಪ್ರತಿ ಕ್ವಿಂಟಾಲ್ ವಹಿವಾಟಿನ ಆಧಾರದ ಮೇಲೆ ಡೀಲರ್ ಮಾರ್ಜಿನ್ ಮೂಲಕ ಪರಿಹಾರವನ್ನು ಪಡೆಯುತ್ತವೆ. ಪ್ರತಿ ತಿಂಗಳು 7ರಿಂದ 10 ದಿನದ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರಧಾನ್ಯ ವಿತರಣೆಯಾಗುತ್ತದೆ. ಉಳಿದ ದಿನಗಳಲ್ಲಿ ಈ ಅಂಗಡಿಗಳು ಕಡಿಮೆ ಬಳಕೆಯಾಗುತ್ತವೆ. ಹೀಗಾಗಿ ವಿತರಕರಿಗೆ ಯಾವುದೇ ಹೆಚ್ಚುವರಿ ಆದಾಯವನ್ನು ಒದಗಿಸುವುದಿಲ್ಲ. ಇದು ಈ ವಿತರಣಾ ಜಾಲದ ಆರ್ಥಿಕ ಕಾರ್ಯಸಾಧ್ಯತೆ ಮತ್ತು ಸುಸ್ಥಿರತೆಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ.

ಕಳೆದ ಒಂದು ದಶಕದಲ್ಲಿ ನ್ಯಾಯಬೆಲೆ ಅಂಗಡಿಗಳ ಆಧುನೀಕರಣಕ್ಕಾಗಿ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಈ ಅಂಗಡಿಗಳಲ್ಲಿ ಇಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್ (ಇ-ಪಿಒಎಸ್) ಸಾಧನಗಳನ್ನು ಇನ್‌ಸ್ಟಾಲ್ ಮಾಡಲಾಗಿದೆ. ಈಗ ಶೇ.100ರಷ್ಟು ವಹಿವಾಟುಗಳನ್ನು ಬಯೋಮೆಟ್ರಿಕ್ ಆಧರಿತ ಆಧಾರ್ ಕಾರ್ಡ್ ಮೂಲಕ ದೃಢೀಕರಿಸಲಾಗಿದೆ. ಆಹಾರ ಧಾನ್ಯಗಳ ಸರಿಯಾದ ತೂಕವನ್ನು ಖಾತ್ರಿಪಡಿಸಿಕೊಳ್ಳಲು ಇ-ಪಿಒಎಸ್ ಸಾಧನಗಳನ್ನು ಇಲೆಕ್ಟ್ರಾನಿಕ್ ತೂಕದ ಮಾಪಕಗಳೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಮತ್ತು 2024ರ ಅಂತ್ಯದ ವೇಳೆಗೆ ಇದು ಪೂರ್ಣಗೊಳ್ಳಲಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಮಾದರಿ ನ್ಯಾಯಬೆಲೆ ಅಂಗಡಿಗಳನ್ನು ಅಭಿವೃದ್ಧಿಪಡಿಸಲು ರಾಜ್ಯಗಳನ್ನು ಪ್ರೋತ್ಸಾಹಿಸಲಾಗಿದೆ. ಫಲಾನುಭವಿಗಳಿಗೆ ಕಾಯುವಕೋಣೆ, ಆಸನದ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ. ಅಂಗಡಿಗಳ ವಿತರಕರಿಗೆ ಹೆಚ್ಚುವರಿ ಆದಾಯದ ಸ್ಟ್ರೀಮ್‌ಗಳನ್ನು ರಚಿಸಲು ಸಾಮಾನ್ಯ ಸೇವಾ ಕೇಂದ್ರ ಸೇವೆಗಳು ಮತ್ತು ಬಿಜಿನೆಸ್ ಕರೆಸ್ಪಾಂಡೆಂಟ್ ಸೇವೆಗಳಂಥ ಹೆಚ್ಚುವರಿ ಸೇವೆಗಳನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಒದಗಿಸಲು ರಾಜ್ಯ ಸರಕಾರಗಳಿಗೆ ಅಧಿಕಾರ ನೀಡಲಾಗಿದೆ.

ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಡಿಜಿಟಲ್ ವಾಣಿಜ್ಯಕ್ಕಾಗಿ ಓಪನ್ ನೆಟ್‌ವರ್ಕ್‌ನಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೊಡಗಿಸುವುದಕ್ಕಾಗಿ ಈ ವರ್ಷದ ಜನವರಿಯಲ್ಲಿ ಪೈಲಟ್ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಇದು ಈ ಅಂಗಡಿಗಳ ಗ್ರಾಹಕರ ನೆಲೆಯನ್ನು ವಿಸ್ತರಿಸುವ ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಆದಾಗ್ಯೂ, ಈ ಅಂಗಡಿಗಳ ಆರ್ಥಿಕ ಸುಸ್ಥಿರತೆಯು, ವಿತರಕರು ಮತ್ತು ಸರಕಾರಕ್ಕೆ ಸಮಾನ ಕಾಳಜಿಯ ಕ್ಷೇತ್ರವಾಗಿ ಉಳಿದಿದೆ.

ಫಲಾನುಭವಿಗಳ ಪೌಷ್ಟಿಕಾಂಶದ ಭದ್ರತೆಯು ಮತ್ತೊಂದು ಪ್ರಮುಖ ಸವಾಲಾಗಿದೆ. ಪ್ರಸ್ತುತ ಇಲಾಖೆಯು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಶಕ್ತಿ-ಸಮೃದ್ಧ ಧಾನ್ಯಗಳನ್ನು (ಅಕ್ಕಿ ಮತ್ತು ಗೋಧಿ) ಮಾತ್ರ ಒದಗಿಸುತ್ತದೆ. ಆದರೆ ಜನಸಂಖ್ಯೆಯ ಗಮನಾರ್ಹ ಭಾಗವು ಪೌಷ್ಟಿಕಾಂಶದ ಕೊರತೆಯನ್ನು ಎದುರಿಸುತ್ತಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯು ನಮ್ಮ ಜನರಲ್ಲಿ ಕಾಣಬರುವ ರಕ್ತಹೀನತೆಯ ಪ್ರಮಾಣದ ಅಂಕಿ-ಅಂಶಗಳನ್ನು ನೀಡಿದೆ. 6ರಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ ಶೇ.67.1ರಷ್ಟು, ಅಂದರೆ ಅತಿಹೆಚ್ಚು ರಕ್ತಹೀನತೆಯ ಪ್ರಮಾಣವಿದೆ. 15ರಿಂದ 49 ವರ್ಷ ವಯಸ್ಸಿನ ಮಹಿಳೆಯರಲ್ಲಿ ಶೇ.57ರಷ್ಟು, ಪುರುಷರಲ್ಲಿ ಶೇ.25ರಷ್ಟು ರಕ್ತಹೀನತೆ ಕಾಣಿಸಿಕೊಂಡಿದೆ. ಇದರ ಜತೆಗೆ, 5 ವರ್ಷದೊಳಗಿನ ಮಕ್ಕಳಲ್ಲಿ ಕುಂಠಿತ ಬೆಳವಣಿಗೆ, ಕ್ಷೀಣತೆ ಮತ್ತು ಕಡಿಮೆ ತೂಕದ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಹೀಗಾಗಿ, ನ್ಯಾಯಬೆಲೆ ಅಂಗಡಿಗಳ ಡೀಲರ್‌ಗಳಿಗೆ ಆದಾಯದ ಅವಕಾಶಗಳನ್ನು ಹೆಚ್ಚಿಸುವುದರ ಜತೆಗೆ, ಜನಸಂಖ್ಯೆಯ ಆಹಾರ ವೈವಿಧ್ಯೀಕರಣದ ಮೂಲಕ ಪೌಷ್ಟಿಕಾಂಶದ ಫಲಿತಾಂಶಗಳನ್ನು ಸುಧಾರಿಸುವ ಸಮಗ್ರ ವಿಧಾನ ಅಗತ್ಯವಾಗಿದೆ. ಈ ಎರಡು ಸವಾಲುಗಳನ್ನು ಎದುರಿಸಲು ಇಲಾಖೆಯು 60 ನ್ಯಾಯಬೆಲೆ ಅಂಗಡಿಗಳನ್ನು 'ಜನಪೋಷಣ ಕೇಂದ್ರಗಳಾಗಿ' ಪರಿವರ್ತಿಸಲು ಪೈಲಟ್ ಯೋಜನೆಯನ್ನು ಪ್ರಾರಂಭಿಸಿದೆ. ಘಾಜಿಯಾಬಾದ್, ಜೈಪುರ, ಅಹಮದಾಬಾದ್ ಮತ್ತು ಹೈದರಾಬಾದ್‌ನಲ್ಲಿ ಇಂಥ ತಲಾ 15 ಕೇಂದ್ರಗಳಿವೆ. ಇವು ಮುಕ್ತ ಮಾರುಕಟ್ಟೆಗೆ ಹೋಲಿಸಿದಾಗ, ರಾಗಿ, ಬೇಳೆ-ಕಾಳು, ಖಾದ್ಯತೈಲ ಮತ್ತು ಸೋಯಾಬೀನ್‌ನಂಥ ವಿವಿಧ ಪೋಷಕಾಂಶದ ವಸ್ತುಗಳನ್ನು ಕಡಿಮೆ ಬೆಲೆಗೆ ನೀಡುತ್ತವೆ. ಜನಪೋಷಣ ಕೇಂದ್ರಗಳು ಡೀಲರ್‌ಗಳಿಗೆ ಹೆಚ್ಚುವರಿ ಆದಾಯದ ಮೂಲಗಳನ್ನು ಮತ್ತು ಉತ್ತಮ ಮಾರ್ಜಿನ್‌ಗಳನ್ನು ಒದಗಿಸುವುದರ ಜತೆ ಜತೆಗೆ, ಫಲಾನುಭವಿಗಳು ಮತ್ತು ಸ್ಥಳೀಯ ಜನಸಂಖ್ಯೆಯಲ್ಲಿನ ಪೌಷ್ಟಿಕಾಂಶದ ಕೊರತೆಯನ್ನು ನಿವಾರಿಸುವ ಗುರಿಯನ್ನೂ ಹೊಂದಿವೆ.

ನ್ಯಾಯಬೆಲೆ ಅಂಗಡಿಗಳನ್ನು ನಾಲ್ಕು ಬಹುಮುಖ್ಯ ಅಂಶಗಳ ಆಧಾರದ ಮೇಲೆ ಜನಪೋಷಣ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಅವೆಂದರೆ: 1) ನ್ಯಾಯಬೆಲೆ ಅಂಗಡಿಗಳ ವಿತರಕರಿಗೆ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ. 2) ಸರಕುಪಟ್ಟಿ ಹಣಕಾಸು ಮೂಲಕ ನ್ಯಾಯಬೆಲೆ ಅಂಗಡಿಗಳ ಡೀಲರ್‌ಗಳಿಗೆ ಕಾರ್ಯೋಪಯೋಗಿ ಬಂಡವಾಳದ ಲಭ್ಯತೆ. 3) 'ಬಿ-ಟು-ಬಿ' ಅಗ್ರಿಗೇಟರ್‌ಗಳ ಮೂಲಕ ಮಾರುಕಟ್ಟೆ ಸಂಪರ್ಕಗಳು. 4) ಪೌಷ್ಟಿಕಾಂಶದ ಪ್ರಚಾರ ಸಾಕ್ಷರತೆ.

ನ್ಯಾಯಬೆಲೆ ಅಂಗಡಿಗಳ ವಿತರಕರ ಸಾಮರ್ಥ್ಯವನ್ನು ಹೆಚ್ಚಿಸಲು, ಕೌಶಲಾಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ರಾಷ್ಟ್ರೀಯ ಉದ್ಯಮಶೀಲತೆ ಮತ್ತು ಸಣ್ಣ ವ್ಯಾಪಾರ ಅಭಿವೃದ್ಧಿ ಸಂಸ್ಥೆಯೊಂದಿಗೆ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ತಿಳಿವಳಿಕೆ ಒಪ್ಪಂದಕ್ಕೆ (ಎಂಒಯು) ಸಹಿಹಾಕಿದೆ. ಈ ಪಾಲುದಾರಿಕೆಯಲ್ಲಿ ಆರ್ಥಿಕ ಸಾಕ್ಷರತೆ, ಡಿಜಿಟಲ್ ಸಾಕ್ಷರತೆ, ಪೌಷ್ಟಿಕಾಂಶದ ಸಾಕ್ಷರತೆ ಮತ್ತು ವ್ಯಾಪಾರ ನಿರ್ವಹಣೆಯ ಮೇಲೆ ಕೇಂದ್ರೀಕರಿಸಿದ ಕೌಶಲಾಭಿವೃದ್ಧಿ ಕಾರ್ಯಕ್ರಮಗಳನ್ನು ಒದಗಿಸುವ ಗುರಿ ಹೊಂದಲಾಗಿದೆ. ಪ್ರಾಯೋಗಿಕ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿತರಕರ ತರಬೇತಿ ಕಾರ್ಯಾಗಾರಗಳನ್ನು 2024ರ ಮೇ ಮತ್ತು ಜೂನ್‌ನಲ್ಲಿ ಎರಡು ತಂಡಗಳಲ್ಲಿ ನಡೆಸಲಾಯಿತು.

ಹೆಚ್ಚುವರಿಯಾಗಿ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಕೈಜೋಡಿಸಿ 'ಎಫ್‌ಪಿಎಸ್-ಸಹಾಯ್' ಸಾಧನವನ್ನು ರಚಿಸಲು ಮತ್ತೊಂದು ತಿಳಿವಳಿಕೆ ಒಪ್ಪಂದವನ್ನು ಕಾರ್ಯಗತಗೊಳಿಸಿದೆ; ಇದು ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ಡೀಲರ್‌ಗಳಿಗೆ, ಪಿಡಿಎಸ್ ಅಲ್ಲದ ಸರಕುಗಳನ್ನು ಖರೀದಿಸಲು ಇನ್‌ವಾಯ್ಸ್‌ಗಳಿಗೆ ಹಣಕಾಸು ಒದಗಿಸಲು ಅನುವುಮಾಡಿಕೊಡುತ್ತದೆ. ನ್ಯಾಯಬೆಲೆ ಅಂಗಡಿಯ ಡೀಲರ್‌ಗಳಿಗೆ ಪೂರೈಕೆ ಸರಪಳಿ ಸಂಪರ್ಕಗಳನ್ನು ಸ್ಥಾಪಿಸಲು ಸಹಾಯಮಾಡುವ ಈ ಪ್ಲಾಟ್‌ಫಾರ್ಮ್ ಸೇರಲು ಪ್ರಮುಖ 'ಬಿ-ಟು-ಬಿ' ಅಗ್ರಿಗೇಟರ್‌ಗಳನ್ನು ಆಹ್ವಾನಿಸಲಾಗಿದೆ. ಒಟ್ಟಾರೆ ಹೇಳುವುದಾದರೆ, ಈ ನಾಲ್ಕು ಸ್ತಂಭಗಳ ಮೂಲಕ ಇಲಾಖೆಯು ಸುಸ್ಥಿರ ಮಾದರಿಯ ಅಡಿಪಾಯವನ್ನು ಹಾಕುತ್ತಿದ್ದು, ಅದು ವಿತರಕರಿಗೆ ಮತ್ತು ಅವರು ಸೇವೆ ಸಲ್ಲಿಸುವ ಸಮುದಾಯಗಳಿಗೆ ಹೆಚ್ಚು ಪ್ರಯೋಜನ ನೀಡುತ್ತದೆ. ಇವೆಲ್ಲದರೊಂದಿಗೆ, ಚಮನ್ ಪ್ರಕಾಶ್ ಅವರ ವೃತ್ತಿಪರ ಜೀವನವು ಉತ್ತುಂಗಕ್ಕೇರಿದೆ. ಅವರ ಕೊಡುಗೆಗಳನ್ನು ಉನ್ನತ ಮಟ್ಟಕ್ಕೇರಿಸುವಲ್ಲಿ, ಅವರ ಆದಾಯವನ್ನು ಹೆಚ್ಚಿಸುವಲ್ಲಿ ಹಾಗೂ ಜನರ ಆರೋಗ್ಯವನ್ನು ಸುಧಾರಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಬೆಳವಣಿಗೆಯು ಅವರ ಜೀವನೋಪಾಯವನ್ನು ಹೆಚ್ಚಿಸುತ್ತದೆ. ಹಾಗೆಯೇ, ಭಾರತದಾದ್ಯಂತ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಉತ್ತೇಜಿಸುವಲ್ಲಿನ ನ್ಯಾಯಬೆಲೆ ಅಂಗಡಿಗಳ ಪಾತ್ರವನ್ನು ಬಲಪಡಿಸುತ್ತದೆ.

(ಲೇಖಕರು ಕಾರ್ಯದರ್ಶಿಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ, ಭಾರತ ಸರಕಾರ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದೌರ್ಜನ್ಯಕ್ಕೆ ಕೊನೆಯಿಲ್ಲವೇ?

ಕೋಲ್ಕತ್ತಾದ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣವನ್ನು ವಿರೋಧಿಸಿ ದೇಶಾದ್ಯಂತ ವೈದ್ಯಕೀಯ ವಿದ್ಯಾರ್ಥಿಗಳಿಂದ ಪ್ರತಿಭಟನೆ ನಡೆಯುತ್ತಿದ್ದು, ಇದರ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಪಶ್ಚಿಮ ಬಂಗಾಳ ಸರಕಾರಕ್ಕೆ ಛೀಮಾರಿ ಹಾಕಿದೆ.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ಮತ್ತು ಸಣ್ಣ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಕೊಲೆ ಮುಂತಾದ ಹೀನಾಯ ಕೃತ್ಯಗಳ ಸಂಖ್ಯೆ ಏರುಗತಿಯಲ್ಲಿರುವುದು ಕಳವಳಕಾರಿಯಾಗಿದೆ. ಕಳೆದ ಜುಲೈನಲ್ಲಿ ಆಂಧ್ರಪ್ರದೇಶದಲ್ಲಿ 12-13 ವರ್ಷದ ಮೂವರು ಶಾಲಾಬಾಲಕರು 3 ವರ್ಷದ ಶಾಲಾಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿ ಕೊಂದ ಪ್ರಕರಣ ಇಡೀ ದೇಶವನ್ನೇ ತಲ್ಲಣಗೊಳಿಸಿತು. ಉತ್ತರ ಪ್ರದೇಶದ ಮೊರಾದಾಬಾದ್‌ನ ಖಾಸಗಿ ಆಸ್ಪತ್ರೆಯೊಂದರ ನರ್ಸ್ ಮೇಲೆ ಅದೇ ಆಸ್ಪತ್ರೆಯ ವೈದ್ಯನೊಬ್ಬ ಅತ್ಯಾಚಾರ ಎಸಗಿರುವ ಪ್ರಕರಣ ವರದಿಯಾಗಿದೆ. ತೀರಾ ಇತ್ತೀಚೆಗೆ ಬೆಂಗಳೂರಿನ ಕೋರಮಂಗಲದಲ್ಲಿ ರಾತ್ರಿ ಪಾರ್ಟಿ ಮುಗಿಸಿ ಮನೆಗೆ ತೆರಳುತ್ತಿದ್ದ ಪದವಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರವಾಗಿದ್ದು, ಈ ಸಂಬಂಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ವಿಚಾರಣೆಗೊಳಪಡಿಸಿ ಶಿಕ್ಷೆ ನೀಡುವ 'ಪೋಕ್ಸೊ' ಕಾಯ್ದೆ ಅನೇಕ ರಾಜ್ಯಗಳಲ್ಲಿ ಜಾರಿಯಲ್ಲಿದ್ದರೂ ಮಕ್ಕಳ ಮೇಲಿನ ಇಂಥ ದೌರ್ಜನ್ಯಗಳು ನಿಲ್ಲುತ್ತಿಲ್ಲ. ಇಂದು ಸಾಮಾಜಿಕ ಜಾಲತಾಣಗಳಲ್ಲಿ ಎಗ್ಗಿಲ್ಲದೆ ಹರಿದಾಡುವ ಅಶ್ಲೀಲ ವಿಡಿಯೋ, ಸಾಹಿತ್ಯ ಮುಂತಾದವುಗಳಿಂದ ಯುವಪೀಳಿಗೆಯ ಮನಸ್ಸು ವಿಕೃತಗೊಳ್ಳುತ್ತಿದೆ, ಸಮಾಜದ ಸ್ವಾಸ್ಥ್ಯ ಹದಗೆಡುತ್ತಿದೆ. ಹದಿಹರೆಯದವರು, ಶಾಲಾ ವಿದ್ಯಾರ್ಥಿಗಳು ಇಂದು ಘೋರ ಅಪರಾಧ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಿರುವುದು ಯುವ ಜನಾಂಗದ ಭವಿಷ್ಯದ ಮೇಲೆ ಕರಿನೆರಳು ಬೀಳುವಂತೆ ಮಾಡಿದೆ. ಪಟ್ಟಣ-ನಗರಗಳಲ್ಲಿನ ಅನೇಕ ಯುವಕ-ಯುವತಿಯರು ಆಧುನಿಕ ಜೀವನಶೈಲಿಗೆ ಮಾರುಹೋಗಿ, ಬಾರ್-ಪಬ್ ಸಂಸ್ಕೃತಿಗೆ ದಾಸರಾಗಿ, ಸ್ವಯಂನಿಯಂತ್ರಣ ಕಳೆದುಕೊಂಡು ಹುಚ್ಚಾಪಟ್ಟೆ ತಿರುಗಾಡುತ್ತಾ ಆಪತ್ತುಗಳಿಗೆ ಈಡಾಗುತ್ತಿರುವುದನ್ನೂ ಇಲ್ಲಿ ಉಲ್ಲೇಖಿಸಬೇಕು. ಆಳುಗ ವ್ಯವಸ್ಥೆಗಳು ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದಲ್ಲಿ ಮುಂಬರುವ ದಿನಗಳು ಅತ್ಯಂತ ಆತಂಕಕಾರಿಯಾಗಬಹುದು.

- ಕೆ.ವಿ.ವಾಸು, ಮೈಸೂರು

ಕಹಿಸತ್ಯದ ಅನಾವರಣ

'ಇವರ ಮನ ಬಾಂಗ್ಲಾ ಹಿಂದೂಗಳಿಗೆ ಮಿಡಿಯಲಿಲ್ಲ' ಎಂಬ ಲೇಖನ (ವಿಶ್ವವಾಣಿ ಆ.22) ಒಂದಷ್ಟು ಕಹಿಸತ್ಯಗಳನ್ನು ಅನಾವರಣಗೊಳಿಸಿದೆ. ಜತೆಗೆ, ಕೆಲವರ ಸೋಗಲಾಡಿತನವನ್ನೂ ಬಯಲುಮಾಡಿದೆ. ಇಂಥ ಬರಹಗಳು ಹೆಚ್ಚೆಚ್ಚು ಮೂಡಿಬರಲಿ.

- ರಾಘವೇಂದ್ರ ಎಸ್.ಎಂ., ಶಿವಮೊಗ್ಗ

ಭಟ್ಟರ್ ಸ್ಕಾಚ್

• **ವಿ.ಪಿ.ನಾರಾಯಣಮೂರ್ತಿ, ಬೆಂಗಳೂರು**
ಭಟ್ರೇ, ಭಯೋತ್ಪಾದಕರ ಜತೆ ಬಾಳುವುದು ಕಷ್ಟವಲ್ವಾ?
– ಹೆಂಡತಿಯ ಜತೆ ಬಾಳ್ತಿರುವ ನಂತರವೂ ಈ ಪ್ರಶ್ನೆಯಾ?!

• **ರತ್ನಾಕರ ಶೆಟ್ಟಿ, ಧಾರವಾಡ**
ಭಟ್ರೇ, ಅವಳು ಕಣ್ಣನ್ನೆ ಮಾಡುತ್ತಾಳೆ, ನಾನು ಏನೆಂದು ಭಾವಿಸಬೇಕು?
– ಅಷ್ಟು ಗೊತ್ತಾಗೊಲ್ವಾ... ಇನ್ನು ಕ್ಲಬ್ ಹೌಸ್‌ನಲ್ಲಿ ಬಂದು ಆನ್ಸರ್ ಮಾಡಬೇಕಾ?!

• **ಸತೀಶ್ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಮಿಣಿ ಬಂದ ಹುಡುಗನಿಗೆ ದೇಶ ಕಾಣೋಲ್ಲ ಅಂತಾರಲ್ಲ?
– ಅದಕ್ಕಂತ ಈ ಗಾದೆಯ ಮುಂದುವರಿದ ಭಾಗ ನೀನಿನ್ನೂ ಕೇಳಿಲ್ಲ...ಛೇ!

• **ಶಾರದಾ ದೇಶಪಾಂಡೆ, ಬೆಂಗಳೂರು**
ಭಟ್ರೇ, ಗಂಡಸರು ಕಟ್ಟಿಕೊಂಡವಳನ್ನು ಮಾತ್ರ ಪ್ರೀತಿಸುತ್ತಾರಾ?
– ಪ್ಯೂರ್ ಪ್ರೀತಿಯನ್ನು ಹೆಂಡತಿಗೆ ಕೊಟ್ಟು, ಕೆಟ್ಟ ಕಾಮವನ್ನು ಬೇರೆಯವರಿಗೆ ಕೊಡ್ತಾರೆ!

• **ವಿ. ಹೇಮಂತ ಕುಮಾರ್, ಬೆಂಗಳೂರು**
ಭಟ್ರೇ, ಬದುಕುವುದಕ್ಕಾಗಿ ಊಟ ಮಾಡಬೇಕೋ, ಊಟ ಮಾಡುವುದಕ್ಕಾಗಿ ಬದುಕಬೇಕೋ?
– ಏನೇ ಮಾಡಿದರೂ ಬೊಜ್ಜು ಮಾತ್ರ ಕಟ್ಟಿಟ್ಟ ಬುತ್ತಿ!

• **ಸತೀಶ ಎಲ್.ವಿ. (ಇಮೇಲ್ ಮೂಲಕ)**
ಭಟ್ರೇ, ಪಕ್ಕದಮನೆ ಆಂಟಿ ಚೆಂದವಾಗಿ ಕಾಣಲು ಕಾರಣವೇನು?
– ದೂರದ ಆಂಟಿ, ಕಣ್ಣಿಗೆ ಬ್ಯೂಟಿ!

• **ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮನ್ನು ನೋಡಿದ್ರೆ, ಮಾತು ಕೇಳಿದ್ರೆ ಒಳ್ಳೆಯವರು ಅಂತ ಅನಿಸುತ್ತದೆಯಲ್ಲ?
– ಅವು ಬರೀ ಸ್ಯಾಂಪಲ್ ಅಷ್ಟೇ!

• **ಅಕ್ಷಯ್, ಬಿಡದಿ**
ಹೆಂಡತಿಯನ್ನು ಎಷ್ಟು ಹೊಗಳಬೇಕು, ಭಟ್ರೇ?
– ಹೆಚ್ಚು ನೆಮ್ಮದಿ ಬೇಕು ಎಂದಾದರೆ ಹೆಚ್ಚು ಹೊಗಳಬೇಕು!

• **ರಾಘವ ಬಾಗಿ, ಹುಬ್ಬಳ್ಳಿ**
ಭಟ್ರೇ, ಗಡ್ಡ ಬಿಟ್ಟವರು ಜ್ಞಾನಿಗಳು ಅಂತಾರಲ್ಲ?
– ಹಾಗಾದರೆ ಡಿಕೆಶಿ ಜ್ಞಾನಿಗಳು ಅಂತೀಯಾ?!

• **ಸುಭಾಷ್ ಮುರುಳಿ, ಬೆಂಗಳೂರು**
ಭಟ್ರೇ, ಆಕೆ ಫೋನಿನಲ್ಲೂ ಕಿಸ್ ಕೊಡೋಲ್ಲ ಅಂತಾಳಲ್ಲ?
– ಡೈರೆಕ್ಟಾಗಿ ಕೊಡುವ ಅವಕಾಶ ಕಳೆದುಕೊಳ್ಳುವುದು ಬೇಡ ಎಂದು ಅಂದುಕೊಂಡಿರಬೇಕು!

ಕಾಡುಶುಂಠಿಯ ರಸ ಕುಡಿದ ಹಸು!

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ನಮ್ಮ ಹಳ್ಳಿಮನೆಯ ಅಂಗಳದಿಂದಾಚೆಗೆ ಕಾಲಿಟ್ಟರೆ, ನಾನಾ ರೀತಿಯ ಗಿಡ, ಬಳ್ಳಿ, ಪೊದೆ, ಮರಗಳ ಮೆರವಣಿಗೆ! ಮನೆ ಎದುರಿನ ಹಟ್ಟಿ ಕೊಟ್ಟಿಗೆಯನ್ನು ದಾಟಿ, ಹಕ್ಕಲಿನತ್ತ ಸಾಗುವ ದಾರಿಯನ್ನು ಹಿಡಿದರೆ, ಮೊದಲಿಗೆ ಚಿಕ್ಕದೊಂದು ತೋಡು ಅಡ್ಡಹಾಯುತ್ತದೆ. ಆ ತೋಡಿನುದ್ದಕ್ಕೂ ಪೊದೆಗಳ ರೀತಿ ಬೆಳೆದ ಹಲವಾರು ಗಿಡಗಳು; ಅವುಗಳ ನಡುವೆ ಶುಂಠಿಯನ್ನು ಹೋಲುವ ಗಿಡಗಳ ಪೊದೆಗಳು ದಂಡಿಯಾಗಿ ಬೆಳೆದಿರುತ್ತವೆ. ಮಳೆ ಬಂದ ನಂತರದಂತೂ, ಅವುಗಳ ದಟ್ಟಣೆಗೆ ಎಣೆಯೇ ಇಲ್ಲ. ಇದೇ ಕಾಡುಶುಂಠಿ. ಇದರ ಗಡ್ಡೆಯನ್ನು, ಎಲೆಯನ್ನು ಔಷಧವಾಗಿ ಬಳಸುವುದುಂಟು ಎಂದು ನಮ್ಮ ಅಮ್ಮಮ್ಮ ಆಗಾಗ ಹೇಳುತ್ತಿದ್ದರಾದರೂ, ಅದರ ಪ್ರಯೋಗ ಹೇಗೆ ಎಂಬುದನ್ನು ಕಣ್ಣಾರೆ ಕಾಣಲು ಸಾಕಷ್ಟು ಸಮಯ ಕಾಯಬೇಕಾಯಿತು.

ಆ ವಿಚಾರ ಹೇಳುವ ಮೊದಲು, ಕಾಡುಶುಂಠಿ ಗಿಡಗಳ ಸಣ್ಣ ವಿವರ ನೀಡುವುದು ಅಗತ್ಯ ಎನಿಸುತ್ತದೆ. ಈಗಿನ ನಗರದ ಜನರು ಶುಂಠಿಯನ್ನು ಕಂಡಿದ್ದರೂ, ಶುಂಠಿ ಗಿಡವನ್ನು ನೋಡಿರುವ ಸಾಧ್ಯತೆ ಕಡಿಮೆ. ನೆಗಡಿ, ಗಂಟಲುನೋವು, ಜ್ವರ, ಅಜೀರ್ಣ, ಉರಿಯೂತ (ಇನ್‌ಫ್ಲಮೇಷನ್) ಕಡಿಮೆ ಮಾಡಲು ಶುಂಠಿಯ ಬಳಕೆ ಇರುವುದರಿಂದ ಮತ್ತು ಕೆಲವು ಅಡುಗೆಗಳಿಗೆ ಶುಂಠಿಯನ್ನು ದಂಡಿಯಾಗಿ ಬಳಸುವುದರಿಂದಾಗಿ, ಶುಂಠಿ ಕೃಷಿ ಇಂದು ಉತ್ಕರ್ಷವನ್ನು ಪಡೆದಿದೆ ಎನ್ನಬಹುದು. ಕುರುಚಲು ಕಾಡನ್ನು, ಕೆಲವೆಡೆ ಕಾಡು ಪ್ರದೇಶವನ್ನು ಸವರಿ, ನೆಲವನ್ನು ಬುಲ್‌ಡೋಜರ್‌ನಿಂದ ಹದಗೊಳಿಸಿ, ಅಪಾರ ಪ್ರಮಾಣದ ರಾಸಾಯನಿಕ ಮತ್ತು ಕ್ರಿಮಿನಾಶಕ ಬಳಸಿ ಶುಂಠಿ ಬೆಳೆಸುವ ಪದ್ಧತಿಯನ್ನು ನಮ್ಮ ಕೆಲವು ಕೃಷಿಕರು ರೂಢಿಸಿಕೊಂಡಿರುವುದರಿಂದ, ಈಗಿನ ಶುಂಠಿ ಕೃಷಿಯು ಕೆಲವೊಮ್ಮೆ, ಪರಿಸರ ವಿರೋಧಿಯೂ ಹೌದು. ಆ ವಿಚಾರ ಅಲ್ಲಿರಲಿ; ನಮ್ಮೂರಲ್ಲಿ ಹಿಂದೆ ಬತ್ತದ ಗದ್ದೆಗಳ ಒಂದು ಮೂಲೆಯಲ್ಲಿ ಶುಂಠಿ ಬೆಳೆಸುವ ಪರಿಪಾಠ ಇತ್ತು. ಆದ್ದರಿಂದ ಹದವಾದ ಹಸಿರಿನ ತೆಳು ಎಲೆಯ ಶುಂಠಿ ಗಿಡಗಳು ನಮಗೆಲ್ಲಾ ಮೊದಲಿನಿಂದಲೂ ಪರಿಚಿತ. ಪಾತಿ ಮಾಡಿ ಶುಂಠಿ ನೆಡುವ ಕೃಷಿಕರು, ಅದನ್ನು ಒಂದು ವಾಣಿಜ್ಯ ಬೆಳೆಯಾಗಿ ಗುರುತಿಸಿಕೊಂಡಿದ್ದರು. ಜತೆಗೆ, ಮನೆ ಹತ್ತಿರದ ತೆಂಗಿನ ಕಟ್ಟೆಯಲ್ಲಿ ನಾಲ್ಕಾರು ಶುಂಠಿ ಹಲ್ಲೆಯನ್ನು ನೆಟ್ಟು, ಗಿಡ ಬೆಳೆಸುವ ಪರಿಪಾಠ. ಯಾರಿಗಾದರೂ ಅಜೀರ್ಣವಾದಾಗ, ಗಂಟಲು ನೋವು ಬಂದಾಗ, ಶುಂಠಿ ತಂಬುಳಿ ಅಥವಾ ಕಷಾಯ ಮಾಡಲು, ಮನೆ ಎದುರಿನ ತೆಂಗಿನ ಕಟ್ಟೆಯಲ್ಲಿದ್ದ ಗಿಡವನ್ನು ಕಿತ್ತು, ಬೇರಿನ ಸ್ವರೂಪದ ಹಲ್ಲೆಯನ್ನು ಜಜ್ಜಿ, ಉಪಯೋಗಿಸುವ ಪದ್ಧತಿ ತೀರಾ ಸಾಮಾನ್ಯ. ಆದ್ದರಿಂದ ನಮ್ಮ ಹಳ್ಳಿಯಲ್ಲಿ ದೊರಕುತ್ತಿದ್ದ ಅಂದಿನ ಶುಂಠಿಯು, ಪೂರ್ಣ ಸಾವಯವ, ರಾಸಾಯನಿಕ ಮುಕ್ತ ಎಂದು ಧೈರ್ಯವಾಗಿ ಹೇಳಬಹುದಿತ್ತು.

ತೆಳುಹಸಿರು ಬಣ್ಣದ ತೆಳ್ಳನೆಯ ಎಲೆಯ ಶುಂಠಿಗಿಡದ ಮತ್ತೊಂದು ರೂಪವೇ ಕಾಡುಶುಂಠಿ ಎನ್ನಬಹುದು. ತುಸು ಅಗಲವಾದ, ದಟ್ಟ ಹಸಿರು ಬಣ್ಣದ ಎಲೆಗಳನ್ನು ಹೊಂದಿದ್ದ ಈ ಕಾಡುಶುಂಠಿಯು ಇನ್ನೂ ಎತ್ತರ ಬೆಳೆಯುತ್ತದೆ. ಶುಂಠಿಗಿಡವು ಒಂದೆರಡು ಅಡಿ ಎತ್ತರವಾಗಿದ್ದರೆ, ಕಾಡುಶುಂಠಿಯು ನಾಲ್ಕು ಅಡಿ ಎತ್ತರ ಬೆಳೆಯಬಲ್ಲದು. ಸಾಮಾನ್ಯವಾಗಿ ನೀರು ಹರಿಯುವ ಪುಟ್ಟ ತೋಡುಗಳ ಪಕ್ಕದಲ್ಲಿ, ಹೆಚ್ಚು ನೆರಳಿರುವ ಕಡೆ ಕಾಡುಶುಂಠಿಯ ಪೊದೆಗಳನ್ನು ಕಾಣಬಹುದು.

ಅದರ ಔಷಧೀಯ ಗುಣಗಳ ಬಗ್ಗೆ ಕೇಳಿದ್ದರೂ, ಒಮ್ಮೆ ಅದನ್ನು ನೋಡುವ ಅವಕಾಶ ದೊರಕಿತು.

ನಮ್ಮ ಮನೆ ಎದುರಿನ ಹಟ್ಟಿಕೊಟ್ಟಿಗೆಯಲ್ಲಿ ನಾಲ್ಕಾರು 'ಬಾಲ್' ಗಂಟಿ ಇದ್ದವು. ಅವೆಲ್ಲವೂ ಮಲೆನಾಡು ಗಿಡ್ಡ ತಳಿಯವು; ಅವುಗಳ ಪಕ್ಕದಲ್ಲೇ ಒಂದು ಜೊತೆ ಕೋಣಗಳೂ ಇದ್ದವು! ಮಲೆನಾಡು ಗಿಡ್ಡ ನಿಮಗೆ ಗೊತ್ತಲ್ಲ– ಚಿಕ್ಕ ಗಾತ್ರದ, ಸಾಕಷ್ಟು ಗಟ್ಟಿಮುಟ್ಟಾದ ಜಾನುವಾರು. ಅವುಗಳ ಪೈಕಿ ಒಂದು ಹಸು ಎಷ್ಟು ಗಿಡ್ಡಕ್ಕಿತ್ತೆಂದರೆ, ಅದನ್ನು ಕರು ಎಂದರೂ ಹೌದು ಎನ್ನುವಷ್ಟು ಪುಟ್ಟ ಹಸು. ಎರಡು ವರ್ಷಗಳಿಗೊಮ್ಮೆ ಅದು ಕರು ಹಾಕುತ್ತಿತ್ತು; ಆದರೆ ಅದರಿಂದ ಕರೆಯುವ ಹಾಲು ಅರ್ಧ ಲೀಟರ್‌ಗಿಂತ ಕಡಿಮೆ! 'ಒಂದು ಲೋಟ ಮಾತ್ರ ಹಾಲು ಕೊಡುವ ಹಸು ಇದು!' ಎಂದು ನಮ್ಮ ಮನೆಯವರು ಅದನ್ನು ತಮಾಷೆ ಮಾಡುತ್ತಿದ್ದುದುಂಟು. ಮಳೆ ಇರಲಿ, ಚಳಿ ಇರಲಿ, ಬೇಸಗೆಯೇ ಆಗಲಿ, ನಮ್ಮ ಮನೆಯ ಎಲ್ಲಾ ಗಂಟಿಗಳು, ಕೊಟ್ಟಿಗೆ ಹಿಂದಿನ ಓಣಿಯಲ್ಲಿ ಸಾಗಿ, ದರೆ ಹತ್ತಿ, ಹಕ್ಕಲಿನ ಮೂಲಕ ಸಾಗುವ ದಾರಿಯಲ್ಲಿ ಒಂದೆರಡು ಕಿ.ಮೀ. ನಡೆದು, ಗುಡ್ಡದ ಮೂಲೆ ಮೂಲೆಗಳಲ್ಲಿ ಅಲೆದಾಡಿ, ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವು. ಅವುಗಳನ್ನು ಮೇಯಿಸುವುದು ಮನೆಯ ಒಬ್ಬರು ಸದಸ್ಯರ ಕೆಲಸ; ಆ ಕೆಲಸವನ್ನು 'ಗಂಟಿ ಮೇಯಿಸುವುದು' ಎಂದು ಕೆಲವು ಬಾರಿ ಹಾಸ್ಯದಿಂದ, ಇನ್ನು ಕೆಲವು ಬಾರಿ ಉಪೇಕ್ಷೆಯಿಂದ ಕರೆಯುತ್ತಿದ್ದುದುಂಟು. 'ಗಂಟಿ ಮೇಯಿಸುವ ಗಂಡು' ಎಂದರೆ ತೀರಾ ಸಸಾರದ ಹುಡುಗ ಅಥವಾ ವ್ಯಕ್ತಿ ಎಂದೇ ಅರ್ಥ! ರಜಾ ದಿನಗಳಲ್ಲಿ ನಾನೂ 'ಗಂಟಿ ಮೇಯಿಸುವ' ಕೆಲಸ ಮಾಡಿದ್ದುಂಟು!

ಬಿಸಿಲು, ಮಳೆ ಎನ್ನದೇ ಪ್ರತಿದಿನ ಹಾಡಿ ಗುಡ್ಡಗಳಲ್ಲಿ ಮೇವು ಅರಸುವ ನಮ್ಮ ಹಳ್ಳಿಯ ಜಾನುವಾರುಗಳಿಗೆ, ಕಾಯಿಲೆ ಕಡಿಮೆ. ನಿರಂತರ ನಡಿಗೆಯಿಂದಲೋ, ಕಾಡಿನ ಮೂಲೆ ಮೂಲೆಗಳಲ್ಲಿ ಬೆಳೆದ ಹಸಿರು ಎಲೆ, ಬಳ್ಳಿ ಮೊದಲಾದವುಗಳನ್ನು ತಿಂದಿದ್ದುದರಿಂದಲೋ, ಹುಟ್ಟುಗುಣದಿಂದಲೋ ಏನೋ, ಮಲೆನಾಡು ಗಿಡ್ಡ ತಳಿಗೆ ರೋಗ ಬರುವುದೇ ಅಪರೂಪ. ಇಡೀ ದಿನ ಮಳೆ ಸುರಿದಾಗಲೂ, ಗುಡ್ಡದ ಮೂಲೆಯಲ್ಲಿ ಮೆಂದು ವಾಪಸು ಬಂದು ಹಟ್ಟಿಯನ್ನು ಸೇರಿದವೆಂದರೆ, ಕೆಲವೇ ನಿಮಿಷದಲ್ಲಿ ಸಹಜ ಸ್ಥಿತಿಗೆ ಬಂದು, ಮೆಲುಕು ಹಾಕುತ್ತಾ ನೆಮ್ಮದಿಯಿಂದ ಕಾಲ ಕಳೆಯುವ ಅಪರೂಪದ ತಳಿ ಅದು.

ಆದರೂ, ಒಮ್ಮೊಮ್ಮೆ ಅವಕ್ಕೆ ಬೇಧಿ ಮೊದಲಾದ ಕಾಯಿಲೆ ಬರುತ್ತಿತ್ತು. ಏನಾದರೂ ಸೋಂಕುಂಟಾಗಿ, ಬೇಧಿ ಮಾಡತೊಡಗಿದವೆಂದರೆ, ಮನೆಯವರಿಗೂ ತುಸು ಚಿಂತೆ. ನಮ್ಮ ಮನೆಯ ಸುತ್ತಮುತ್ತಲಿನ ಹತ್ತೆಂಟು ಕಿ.ಮೀ. ಫಾಸಲೆಯಲ್ಲಿ ಜಾನುವಾರುಗಳ ಆಸ್ಪತ್ರೆ ಎಂಬುದಿರಲಿಲ್ಲ! ಜಾನುವಾರುಗಳಿಗೆ ಹೋಗಲಿ, ಮನುಷ್ಯರಿಗೆ ರೋಗ ಬಂದರೂ, ಹತ್ತಿರದಲ್ಲಿ ಕ್ಲಿನಿಕ್ ಇಲ್ಲದ ದಿನಗಳು ಅವು! ಸರಕಾರ ನಡೆಸುತ್ತಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರ 8 ಕಿ.ಮೀ. ದೂರದಲ್ಲಿತ್ತು! ಇನ್ನು ಹಸುಗಳಿಗೆ ಕಾಯಿಲೆಯಾದರೆ ಆಸ್ಪತ್ರೆ ಎಲ್ಲಿಂದ ಬರಬೇಕು? ಯಾವುದೇ ಕೋಣ ಅಥವಾ ಹಸುವಿಗೆ ಕಾಯಿಲೆಯಾದರೆ, ನಮ್ಮ ಹಳ್ಳಿಯಲ್ಲೇ ಇದ್ದ ಪಾಯ್ಕ ನಾಯ್ಕ ಎಂಬುವವನಿಗೆ ಬುಲಾವ್ ಹೋಗುತ್ತಿತ್ತು. ನಮ್ಮ ಮನೆಯಿಂದ 1 ಕಿ.ಮೀ. ದೂರದಲ್ಲಿ, ಒಂದೆರಡು ಗುಡ್ಡಗಳಿಂದಾಚೆ ಆತನ ಮನೆಯಿತ್ತು. ನಮ್ಮ ಮನೆಯ ಒಂದು ಕರೆಯುವ ಹಸುವಿಗೆ ಒಮ್ಮೆ ಬೇಧಿ ವಕ್ಕರಿಸಿತು. ಅವನಿಗೆ ಹೇಳಿ ಕಳಿಸಲಾಯಿತು; ಮರುದಿನ ಬೆಳಗ್ಗೆ ಬೇಗನೆ ಪಾಯ್ಕ ನಾಯ್ಕ ಬಂದ. 'ದೆನಿಗೆ ಎಂತ ಆಯ್ತ್? ಬೇಧಿಯಾ? ಈಗಲೇ ಔಷಧ ಕೊಡ್ತೆ, ನೀವು ಮಂಡೆಬಿಸಿ ಮಾಡಬೇಡಿ' ಎಂದು ಸಕಾರಾತ್ಮಕ ಮಾತುಗಳ ಮೂಲಕ, ಮನೆಯವರಿಗೆ ಧೈರ್ಯ ತುಂಬುವಂಥ ಚಟುವಟಿಕೆಯ ವ್ಯಕ್ತಿ ಆತ.

'ಹ್ವಾಯ್, ಕಾಡುಶುಂಠಿ ಗಿಡ ಎಲ್ಲಿತ್ತೆ?' ಎಂದು ವಿಚಾರಿಸಿ, ತೋಟದ ಒಂದು ಮೂಲೆಯಲ್ಲಿ ಬೆಳೆದ ಕಾಡುಶುಂಠಿಯ ಪೊದೆಗಳತ್ತ ಸಾಗುತ್ತಿದ್ದ. ಒಂದು ಕಬ್ಬಿಣದ ಸೈಂಗೋಲ್ ಬಳಸಿ, ಆ ಪೊದೆಯ ಬುಡವನ್ನು ನಿಧಾನವಾಗಿ ಬಿಡಿಸಿ, ಕಾಡುಶುಂಠಿಯ

(ಸಾಂದರ್ಭಿಕ ಚಿತ್ರ)

ನಾಲ್ಕೆಂಟು ಹಲ್ಲೆಗಳನ್ನು ಸಂಗ್ರಹಿಸಿ, ಅವನೇ ನೀರಿನಲ್ಲಿ ಚೆನ್ನಾಗಿ ತೊಳೆಯುತ್ತಿದ್ದ. ಕಾಡುಶುಂಠಿಯ ಗಡ್ಡೆಗಳನ್ನು ಚೆನ್ನಾಗಿ ಜಜ್ಜಿ, ಅದಕ್ಕೊಂದಿಷ್ಟು ಕಾಡು ಜೀರಿಗೆಯನ್ನೋ ಮತ್ತೇನನ್ನೋ ಸೇರಿಸಿ, ಒಂದೆರಡು ಲೀಟರ್ ದ್ರಾವಣ ಮಾಡುತ್ತಿದ್ದ. ಹಸಿರು ಬಣ್ಣದ ಆ ದ್ರಾವಣವೇ ಅಂದಿನ ದಿವ್ಯೌಷಧ.

'ಹ್ವಾಯ್ ಒಂದು ಬಾಟಲಿ ಇತ್ತಾ?' ಎಂದು ಮುಂಗೈ ತೋರಿಸಿ ಕೇಳುತ್ತಿದ್ದ. ತಕ್ಷಣ ಮನೆಯವರು ಒಂದು ಖಾಲಿ ಬಿಯರ್ ಬಾಟಲಿಯನ್ನು ಕೊಡುತ್ತಿದ್ದರು. ಇಂಥ ಸಂದರ್ಭಗಳಿಗೆಂದೇ ಒಂದು ಬಾಟಲಿ ಮನೆಯಲ್ಲಿರುತ್ತಿತ್ತು! ಕಾಡುಶುಂಠಿಯನ್ನು ಜಜ್ಜಿದ ದ್ರಾವಣವನ್ನು ಸೋಸಿ, ಅದನ್ನು ಬಾಟಲಿಗೆ ತುಂಬಿ, ಬಿದಿರಿನ ಅಂಗೈ ಉದ್ದದ ಪರಿಕರದ ಮೂಲಕ, ಒಂದು ಬಾಟಲಿ ದ್ರಾವಣವನ್ನು ಹಸುವಿಗೆ ಕುಡಿಸುತ್ತಿದ್ದ. ಸಾಮಾನ್ಯವಾಗಿ ಪಾಯ್ಕ ನಾಯ್ಕ ಔಷಧ ಕುಡಿಸಿದ ಎಂದರೆ, ಒಂದೆರಡು ದಿನಗಳಲ್ಲಿ ಹಸು ಹುಷಾರಾಗುತ್ತಿತ್ತು. ಕಾಡುಶುಂಠಿ, ಕಾಡು ಜೀರಿಗೆ, ಮೆಣಸಿನ ಕಾಳು ಮೊದಲಾದವುಗಳೇ ಆತನ ಬತ್ತಳಿಕೆಯಲ್ಲಿದ್ದ ಅಸ್ತ್ರಗಳು. ಜಾನುವಾರುಗಳಿಗೆ ಥಂಡಿ ಉಂಟಾದರೆ, ಒಮ್ಮೊಮ್ಮೆ ಒಂದು ಲೋಟದಷ್ಟು ಮಿಡಿ ಉಪ್ಪಿನಕಾಯಿ ರಸವನ್ನು ಕುಡಿಸುತ್ತಿದ್ದುದೂ ಉಂಟು! ಆ ರೀತಿಯ ಉತ್ತಮ ಮಿಡಿ ಉಪ್ಪಿನಕಾಯಿ ರಸವನ್ನು ಒದಗಿಸುವುದು ಜಾನುವಾರು ಇದ್ದ ಮನೆಯವರ ಕೆಲಸ. ಪಾಯ್ಕ ನಾಯ್ಕನ ಪಾರಂಪರಿಕ ಜ್ಞಾನದಲ್ಲಿ ಇನ್ನೂ ಕೆಲವು ಎಲೆಗಳ ಔಷಧಗಳಿದ್ದರೂ ಇರಬಹುದೇನೋ, ಆದರೆ ಅದರ ಮಾಹಿತಿ ತಿಳಿಯುವ ಅವಕಾಶ ನನಗೆ ದೊರಕಿಲ್ಲ. ಜಾನುವಾರುಗಳಿಗೆ ಎಲೆಗಳ ರಸವನ್ನು, ಕಾಡುಶುಂಠಿ ಮೊದಲಾದ ಬೇರುಗಳ ರಸವನ್ನು ತಯಾರಿಸಿ ಕುಡಿಸಿ, ಅವುಗಳ ಕಾಯಿಲೆ ಗುಣ ಮಾಡುತ್ತಿದ್ದ ಪಾಯ್ಕ ನಾಯ್ಕ, ಅದಕ್ಕಾಗಿ ಪಡೆಯುತ್ತಿದ್ದ ಗೌರವಧನ ಅತ್ಯಲ್ಪ ಎಂದರೆ ಅತ್ಯಲ್ಪ. ಪಾಯ್ಕ ನಾಯ್ಕನಂಥವರು, ತಮ್ಮ ಸೇವೆಯನ್ನು ಹಣದ ರೂಪದಲ್ಲಿ ಅಳೆಯುವುದನ್ನು ಇಷ್ಟಪಡುತ್ತಿರಲಿಲ್ಲ, ಬಯಸುತ್ತಲೂ ಇರಲಿಲ್ಲ. ಜಾನುವಾರುಗಳಿಗೆ ತನ್ನ ಕೈಲಾದಷ್ಟು ಔಷಧ ಕೊಡುವುದು ತನ್ನ ಕರ್ತವ್ಯ ಎಂದು ತಿಳಿದಿದ್ದ ಪರಂಪರೆಗೆ ಸೇರಿದ ವ್ಯಕ್ತಿ ಆತ.

ಪಾಯ್ಕ ನಾಯ್ಕನಂಥವರ ಪಾರಂಪರಿಕ ಜ್ಞಾನವು ಕ್ರಮೇಣ ಹಿನ್ನೆಲೆಗೆ ಸರಿಯುವಂಥ ಒಂದು ಬೆಳವಣಿಗೆ ನಮ್ಮ ಹಳ್ಳಿಯಲ್ಲಿ 1980ರ ದಶಕದಲ್ಲಿ ಆಯಿತು. ಅದೇ, ಸರಕಾರ ಪ್ರಾಯೋಜಿತ 'ಕೃತಕ ಗರ್ಭಧಾರಣೆ ಕೇಂದ್ರ'ಗಳ ಆರಂಭ. ನಿಧಾನವಾಗಿ ನಮ್ಮೂರಿನ ಸುತ್ತಮುತ್ತ ಅಲ್ಲಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಕೃತಕ ಗರ್ಭಧಾರಣೆ ಕೇಂದ್ರಗಳು ಆರಂಭಗೊಂಡವು; ವೈದ್ಯರು ಮತ್ತು ಸಹಾಯಕರು ಹಳ್ಳಿಮೂಲೆಯ ಮನೆಗಳಿಗೆ ಬಂದು, ನಾಟಿ ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡತೊಡಗಿದರು ಮತ್ತು ಜತೆಯಲ್ಲೇ, ಜಾನುವಾರುಗಳಿಗೆ ಅನಾರೋಗ್ಯ ಉಂಟಾದಾಗ, ಔಷಧವನ್ನೂ ಕೊಡಲು ಆರಂಭಿಸಿದರು. ಪಾರಂಪರಿಕ ಜ್ಞಾನದಿಂದ, ಕಾಡುಶುಂಠಿ ಮತ್ತು ಇತರ ಗಿಡಗಳ ರಸವನ್ನು ಬಳಸಿ ಜಾನುವಾರುಗಳಿಗೆ ಔಷಧ ನೀಡುತ್ತಿದ್ದ ಪಾಯ್ಕ ನಾಯ್ಕನಂಥವರ ಕೌಶಲ ಪ್ರಯೋಗದ ಅವಕಾಶ ಕಡಿಮೆಯಾಗುತ್ತಾ ಬಂತು.

ನಾಲ್ಕೆಂಟು ವರ್ಷಗಳಲ್ಲಿ, ನಮ್ಮೂರಲ್ಲಿ ಮಲೆನಾಡು ಗಿಡ್ಡ ತಳಿಯ ಹಸು, ಎತ್ತುಗಳು ಕಣ್ಮರೆಯಾಗುವ ಸನ್ನಿವೇಶ ಎದುರಾಯಿತು. ವಿದೇಶ ತಳಿಗಳಾದ ಜರ್ಸಿ ಮೊದಲಾದವುಗಳು ದಿನಕ್ಕೆ 10–20 ಲೀಟರ್ ಹಾಲು ಕೊಡುತ್ತವೆಂದು ಗೊತ್ತಾದಾಗ, ಜನರು ಸಾಲ ಮಾಡಿ ಹಸು ಖರೀದಿಸಲು ಆರಂಭಿಸಿದರು. ದೊಡ್ಡ ದೊಡ್ಡ ಹಸುಗಳನ್ನು ಖರೀದಿಸಲು ಬ್ಯಾಂಕ್‌ಗಳಲ್ಲೂ ಸಾಲ ಸಿಗುವಂತಾಯಿತು ಮತ್ತು ಅದು ಬ್ಯಾಂಕಿನವರಿಗೆ ಆದ್ಯತೆಯ ವಿಷಯವಾಯಿತು. ದೊಡ್ಡ ಹಸುಗಳನ್ನು ಕಟ್ಟಲು ತುಸು ಆಧುನಿಕ ಕೊಟ್ಟಿಗೆಗಳನ್ನು ನಿರ್ಮಿಸಲಾಯಿತು; ಅದಕ್ಕೂ ಬ್ಯಾಂಕುಗಳು ಸಾಲ ನೀಡಿದವು. ಜನರು ಪ್ರತಿದಿನ ಡೈರಿಗೆ ಹಾಲು ಮಾರಲು ಆರಂಭಿಸಿದರು. ಕಾಡು ಗುಡ್ಡಗಳಿಂದ ತುಂಬಿರುವ ನಮ್ಮೂರಿನಲ್ಲಿ, ಹೈನುಗಾರಿಕೆಯು ಕೃಷಿಕರಿಗೆ ಆರ್ಥಿಕ ಚಟುವಟಿಕೆಯ ಭಾಗವಾಗಿ ಬೆಳೆಯತೊಡಗಿತು. ಮಲೆನಾಡು ಗಿಡ್ಡ ತಳಿಗಳಿಗೂ ಕೃತಕ ಗರ್ಭಧಾರಣೆ ಮಾಡಿಸಿದಾಗ, ವಿದೇಶಿ ತಳಿಯ ಸಂಕರದ ದೊಡ್ಡ ಗಾತ್ರದ ಕರುಗಳನ್ನು ಪಡೆದರು. ಹೆಣ್ಣು ಕರುಗಳಿಗೆ ಮಾತ್ರ ಬೆಲೆ, ಗಂಡು ಕರುಗಳಿಗೆ ನಿರ್ಲಕ್ಷ್ಯ! ಕ್ರಮೇಣ ಮಲೆನಾಡು ಗಿಡ್ಡ ತಳಿಯ ಕರುಗಳೇ ಕಡಿಮೆಯಾದವು. ಕಾಡುಶುಂಠಿಯ ರಸ ಕುಡಿದು ಕಾಯಿಲೆ ವಾಸಿ ಮಾಡಿಕೊಳ್ಳಬಲ್ಲ ತಳಿಯ ಹಸುಗಳು ಈಗ ನಮ್ಮೂರಲ್ಲಿ ಇಲ್ಲ. ಈಗ ಜಾನುವಾರುಗಳಿಗೆ ಕಾಯಿಲೆಯಾದರೆ, ಅಂಗಡಿಯಿಂದ ತರುವ ಮಾತ್ರೆ, ಇಂಜೆಕ್ಷನ್ ಬೇಕೇಬೇಕು.

ಸುದ್ದಿಗಿಷ್ಟು ಒಗ್ಗರಣೆ
ಯಗಟಿ ರಘು ನಾಡಿಗ್

• **ಬಿಜೆಪಿ, ಆರೆಸ್ಸೆಸ್‌ನಿಂದ ರಾಜಭವನದ ದುರ್ಬಳಕೆ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಾಗ್ದಾಳಿ**
– ಈ ವಾಗ್ದಾಳಿ ಕೇಳಿಸಿಕೊಂಡ 'ಕೇಶವಕೃಪಾ'ಪೋಷಿತರೊಬ್ಬರು, 'ಬಳಕೆ ಮತ್ತು ದುರ್ಬಳಕೆ ಒಂದೇ ನಾಣ್ಯದ ಎರಡು ಮುಖಗಳು ಕಣ್ರೀ' ಎಂದು ಕಿಸಕ್ಕನೆ ನಕ್ಕು ಶಂಕರಪುರಂ ಬ್ರಾಹ್ಮಣರ ಕಾಫಿ ಬಾರ್‌ನಲ್ಲಿ ಮೆದುವಡೆಯನ್ನು ಮೆಲುಕುಹಾಕಿದರಂತೆ!

• **ಗವರ್ನರ್‌ಗೆ 'ಝಡ್' ಶ್ರೇಣಿ ಭದ್ರತೆ, ರಾಜಭವನಕ್ಕೆ ಸರ್ಪಗಾವಲು: ಸುದ್ದಿ ಶೀರ್ಷಿಕೆ**
– ಹಾಗೆಂದ ಮಾತ್ರಕ್ಕೆ 'ರಾಜಭವನಕ್ಕೆ ಸರ್ಪಸುತ್ತು' ಎನ್ನಲಾಗದು!!

• **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸುರಂಗರಸ್ತೆ ಯೋಜನೆಯ ವರದಿ ಸಿದ್ಧಪಡಿಸಲು 9 ಕೋಟಿ ರುಪಾಯಿ ವೆಚ್ಚ ಮಾಡುತ್ತಿದೆ; ಆದರೆ ಇದು ಸಮಗ್ರ ಸಂಚಾರ ಯೋಜನೆಯನ್ನು ಒಳಗೊಂಡಿಲ್ಲ: ಬಿಜೆಪಿ ಸಂಸದ ಪಿ.ಸಿ. ಮೋಹನ್**
– ಅದು ಒತ್ತಟ್ಟಿಗಿರಲಿ ಸರ್. ಸುರಂಗರಸ್ತೆಯ ಯೋಜನಾ ವರದಿ ಸಿದ್ಧಪಡಿಸುವುದಕ್ಕೇ 9 ಕೋಟಿ ರುಪಾಯಿ ಖರ್ಚಾಗುತ್ತೆ ಅಂದ್ರೆ, ಇನ್ನು ಸುರಂಗರಸ್ತೆ ಸಿದ್ಧವಾಗೋಕೆ ಎಷ್ಟು ಖರ್ಚಾಗಬಹುದು? ಎಂಬುದು ಬಡ ಬೋರೇಗೌಡನ ಪ್ರಶ್ನೆ!!

• **ಅಮೆರಿಕದ ಓಕ್‌ಲ್ಯಾಂಡ್‌ನಲ್ಲಿ, ಚಿಕಿತ್ಸೆಗೆಂದು ಬಂದ ಹೆಣ್ಣು ಮಕ್ಕಳ ನಗ್ನ–ಅರೆನಗ್ನ ವಿಡಿಯೋ ಚಿತ್ರೀಕರಿಸುತ್ತಿದ್ದ ಭಾರತ ಮೂಲದ ವೈದ್ಯನ ಬಂಧನ: ಸುದ್ದಿ**
– ಇಂಥ ದುರುಳರನ್ನು, ಮೂರು ನದಿಗಳು ಸೇರೋ ಜಾಗಕ್ಕೆ ಕರೆದುಕೊಂಡು ಹೋಗಿ ನೀರಿನಲ್ಲಿ ಮೂರು ಸಲ ಮುಳುಗಿಸಬೇಕು, ಎರಡೇ ಸಲ ಹೊರಕ್ಕೆ ತೆಗೆಯಬೇಕು!!

• **ಸಾಯಿ ಮಿನರಲ್ಸ್‌ನ ಅನುಮತಿ ಪತ್ರದಲ್ಲಿರೋದು ನನ್ನ ಹಸ್ತಾಕ್ಷರವಲ್ಲ; ಅಕ್ರಮ ಗಣಿಯಲ್ಲಿ ನನ್ನ ಪಾತ್ರವಿಲ್ಲ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಮರ್ಥನೆ**
– ಇದನ್ನು ಕೇಳಿದಾಗ ನಿಮ್ಮ ಮನದಲ್ಲಿ ಮೂಡುವ ಕಟ್ಟಕಡೆಯ ಪ್ರಶ್ನೆ– 'ಹೀಗೂ ಉಂಟೇ?!'

• **ಗಂಡನಿಂದ ತಿಂಗಳಿಗೆ ಬರೋಬ್ಬರಿ 6 ಲಕ್ಷ ರುಪಾಯಿ ಜೀವನಾಂಶ ಕೇಳಿದ ವಿಚ್ಛೇದಿತ ಮಹಿಳೆಗೆ ಹೈಕೋರ್ಟ್ ಛೀಮಾರಿ: ಸುದ್ದಿ**
– ವಿಚ್ಛೇದನಕ್ಕೂ ಮುಂಚೆ ಗಂಡನಿಗೆ ಆಕೆ ಅದಿನ್ಯಾವ ಮಟ್ಟಿಗೆ ಕಾಟ ಕೊಟ್ಟಿರಬೇಕು!

• **ಕಮಲಾ ಹ್ಯಾರಿಸ್ ಅವರ ಅಧ್ಯಕ್ಷಗಿರಿಗೆ ಅಮೆರಿಕ ಸಜ್ಜಾಗಿದೆ; ಚುನಾಯಿತರಾದ ಬಳಿಕ ಅವರು ಅಮೆರಿಕನ್ನರಿಗಾಗಿ ಸಮರ್ಥವಾಗಿ ಹೋರಾಡುತ್ತಾರೆ: ಅಮೆರಿಕದ ಮಾಜಿ ಅಧ್ಯಕ್ಷ 'ಬರಾಕ್' ಒಬಾಮ ಹೇಳಿಕೆ**
– ''ಮತ್ತೊಂದ್ ಕಿತ ಅಮೆರಿಕದ ಅಧ್ಯಕ್ಷಗಿರಿಗೆ ಬರಾನ ಅಂದ್ರೆ, 'ಬರಾಕ್' ಬಿಡ್ತಿಲ್ಲ...'' ಎಂದು ಕಮಲಾ ಹ್ಯಾರಿಸ್ ಅವರ ಎದುರಾಳಿ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ಗೊಣಗಿಕೊಂಡಿದ್ದು ಇನ್ನೂ ಸುದ್ದಿಯಾಗಿಲ್ಲ!!

ಸಮಕಾಲೀನ ಯುಗಧರ್ಮದ ಸುತ್ತಮುತ್ತ...

21ನೇ ಶತಮಾನದ ಈ ಕಾಲಘಟ್ಟದ ಮುಖ್ಯ ಪ್ರೇರಣೆ ಮಾರುಕಟ್ಟೆ ಕೇಂದ್ರಿತ ಜಾಗತೀಕರಣ. ಇದರ ಕೇಂದ್ರಬಿಂದು ಅಮೆರಿಕ. ಏಕೆಂದರೆ ಅದು ಜಾಗತಿಕ ವ್ಯಾಪಾರದ ಕೇಂದ್ರ. ಸಹಜವಾಗಿ ಅಮೆರಿಕ ಮತ್ತು ಭಾರತದ ಜನರ ನಡುವಿನ ಸಂಪರ್ಕ ಕೂಡ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಹಾಗಾಗಿ ನಮ್ಮ ಮೇಲೆ ಇಂದು ಅತಿಹೆಚ್ಚು ಪ್ರಭಾವ ಬೀರಿರುವುದು ಅಮೆರಿಕ ಮತ್ತು ಜಾಗತೀಕರಣ.

ಸಕಾಲಿಕ
ಪ್ರೊ. ಆರ್.ಜಿ.ಹೆಗಡೆ
vveditoped@gmail.com

ಯುಗಧರ್ಮ' ಎಂದರೆ, ಒಂದು ಕಾಲದ ರಾಜಕೀಯ, ಧಾರ್ಮಿಕ, ಆರ್ಥಿಕ ಇತ್ಯಾದಿ ಶಕ್ತಿಗಳು ಒಟ್ಟಾಗಿ ಸೇರಿ ಜನಜೀವನವನ್ನು ಪ್ರಭಾವಿಸಿದ ಹಿನ್ನೆಲೆಯಲ್ಲಿ ಸೃಷ್ಟಿಯಾಗುವ ಒಂದು ಸಾಮಾಜಿಕ ಮನಸ್ಥಿತಿ ಅಥವಾ ಮನೋಗುಣ. ಈ ಮನೋಗುಣವು ಹಿಂದಿನ ಯುಗಕ್ಕೆ ವಿರೋಧವಾಗಿ ಬರಬಹುದು, ಒತ್ತಾಸೆಯಾಗಿ ನಿಲ್ಲಬಹುದು ಅಥವಾ ಭಿನ್ನವಾಗಿ, ವಿಶಿಷ್ಟವಾಗಿಯೂ ಇರಬಹುದು. ಅದೆಲ್ಲ ಆಯಾ ಕಾಲವನ್ನು ಪ್ರಭಾವಿಸಿದ ಶಕ್ತಿಗಳನ್ನು ಅವಲಂಬಿಸಿರುವಂಥದ್ದು. ಉದಾಹರಣೆಗೆ, ಭಾರತದಲ್ಲಿ ಭಕ್ತಿ ಚಳವಳಿ ಹುಟ್ಟಿಕೊಂಡಿದ್ದು ಇಸ್ಲಾಂ ಸಾಮ್ರಾಜ್ಯಕ್ಕೆ ವಿರುದ್ಧವಾದ ಪ್ರತಿಕ್ರಿಯೆಯಾಗಿ. ಆ ಯುಗದಲ್ಲಿ ಧರ್ಮಸುಧಾರಕರು, ಹೊಸ ಧರ್ಮಸ್ಥಾಪಕರು ಮುಂದೆ ಬಂದರು. ಧರ್ಮದ ಮೂಲಕ ರಾಷ್ಟ್ರೀಯತೆಯನ್ನು ಕಟ್ಟಲು ಯತ್ನಿಸಿದ ಚಳವಳಿ ಅದು. ಮಹಾತ್ಮ ಗಾಂಧಿಯವರಿಂದಾಗಿ ಆ ಯುಗದಲ್ಲಿ ದೇಶದಲ್ಲಿ ಒಂದು ರೀತಿಯ ಮನೋಭೂಮಿಕೆ ಸೃಷ್ಟಿಯಾಯಿತು, ಅವರು ಹೋದ ನಂತರ ಇನ್ನೊಂದು ಮನಸ್ಥಿತಿ ಬಂತು. ಇಂಥ ಒಂದೊಂದು ಕಾಲದ ಮಾನಸಿಕತೆಯನ್ನು 'ಯುಗಧರ್ಮ' ಎನ್ನಬಹುದು. ನಮ್ಮ ಈ ಯುಗಕ್ಕೂ (21ನೇ ಶತಮಾನದ ಆದಿಭಾಗ) ಒಂದು ಯುಗಧರ್ಮವಿದೆ. ಅದನ್ನು ಗುರುತಿಸುವಲ್ಲಿನ ಯತ್ನವೇ ಈ ಬರವಣಿಗೆ.

21ನೇ ಶತಮಾನದ ಈ ಕಾಲಘಟ್ಟದ ಮುಖ್ಯ ಪ್ರೇರಣೆ ಜಾಗತೀಕರಣ, ಅದರಲ್ಲೂ ಮಾರುಕಟ್ಟೆ ಕೇಂದ್ರಿತ ಜಾಗತೀಕರಣ. ಇದರ ಕೇಂದ್ರ ಅಮೆರಿಕ. ಏಕೆಂದರೆ ಅದು ಜಾಗತಿಕ ವ್ಯಾಪಾರದ ಕೇಂದ್ರ. ಸಹಜವಾಗಿ ಅಮೆರಿಕ ಮತ್ತು ಭಾರತದ ಜನರ ನಡುವಿನ ಸಂಪರ್ಕ ಕೂಡ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಹಾಗಾಗಿ ನಮ್ಮ ಮೇಲೆ ಇಂದು ಅತಿಹೆಚ್ಚು ಪ್ರಭಾವ ಬೀರಿರುವುದು ಅಮೆರಿಕ ಮತ್ತು ಜಾಗತೀಕರಣ. ಸ್ವಾರಸ್ಯವೆಂದರೆ, ಈ ಜಾಗತೀಕರಣ ಆರಂಭವಾಗುವ ಮೊದಲು ಸುಮಾರು 50 ವರ್ಷ ಕಾಲ ಭಾರತದ ಮೇಲೆ ದಟ್ಟವಾದ ಸಮಾಜವಾದಿ (ಸೋವಿಯತ್ ಒಕ್ಕೂಟ) ಪ್ರಭಾವವಿತ್ತು.

ನಮ್ಮ ಕೈಗಾರಿಕೀಕರಣ, ಶಿಕ್ಷಣ ಎಲ್ಲವೂ 'ಸಮಾಜವಾದಿ' ಮಾದರಿಯಲ್ಲಿದ್ದವು. ಅಂದರೆ ಎಲ್ಲವನ್ನೂ ಸರಕಾರಗಳೇ ನಡೆಸುತ್ತಿದ್ದವು. ಹಾಗಾಗಿ 80ರ ದಶಕದ ಕೊನೆಯಲ್ಲಿ ಸೋವಿಯತ್ ಒಕ್ಕೂಟ, ಹಾಗೆಯೇ ಭಾರತ ಕೂಡ ಆರ್ಥಿಕ ದುಸ್ಥಿತಿಯಲ್ಲಿದ್ದವು (ಅದೇ ದಾರಿಯಲ್ಲಿ ಮುಂದುವರಿದ ಸೋವಿಯತ್ ಒಕ್ಕೂಟ ಕುಸಿದುಹೋಯಿತು, ಬಿಡಿ). ಆಗ ನಾವು ಅನಿವಾರ್ಯವಾಗಿ ಆಯ್ದುಕೊಂಡಿದ್ದು ಜಾಗತೀಕರಣ. ಅದು ದೇಶದ ಒಂದು ವರ್ಗಕ್ಕೆ ಭಾರಿ ಪ್ರಮಾಣದಲ್ಲಿ ಅವಕಾಶಗಳನ್ನು ಒದಗಿಸಿತು, ಅಂದರೆ ದೇಶದ ಇನ್ನೊಂದು ವರ್ಗದ 'ಕಂಫರ್ಟ್ ಝೋನ್' ಅನ್ನು ಅದು ಅಲುಗಾಡಿಸಿಬಿಟ್ಟಿತು. ಭಾರತದ ರಾಜಕೀಯದಲ್ಲಿ 'ಉಳ್ಳವರು' ಮತ್ತು 'ಇರದವರ' ನಡುವಿನ 'ವರ್ಗಸಂಘರ್ಷ' ತೀವ್ರವಾಗಿದ್ದು ಆಗಲೇ; ಅದು ಇನ್ನೂ ನಡೆದೇ ಇದೆ ಎನ್ನಿ. ನಮ್ಮ ರಾಜಕೀಯವು ತೀವ್ರವಾಗಿ, ಸ್ಪಷ್ಟವಾಗಿ 'ಎಡ–ಬಲ'ಗಳ ನಡುವೆ ಒಡೆದುಕೊಂಡಿರುವ ಕಾರಣವಿದು. ಸಮಾಜವಾದವು ಅಷ್ಟು ಬೇಗ, ಸುಲಭವಾಗಿ ನಮ್ಮನ್ನು ಬಿಡುತ್ತಿಲ್ಲ. ಹಾಗಾಗಿ ದೇಶದ ಒಂದು ವರ್ಗವು ಹಿಮ್ಮುಖವಾಗಿ ಚಲಿಸಿ ಸಮಾಜವಾದಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಯತ್ನಿಸುತ್ತಿದ್ದರೆ, ಇನ್ನೊಂದು ವರ್ಗವು ಮುಂದೆ ಹೋಗಿ ಜಾಗತಿಕ ಗುಣಮಟ್ಟದ ಅಭಿವೃದ್ಧಿಯನ್ನು, 'ಸುಖ'ಗಳನ್ನು ಪಡೆಯಲು ಬಯಸುತ್ತಿದೆ. ಜಾಗತೀಕರಣ ಈ ವರ್ಗದ



ಕನಸಿನ ಸಾಮ್ರಾಜ್ಯ. ಪರಿಣಾಮವಾಗಿ ನಮ್ಮ ರಾಜಕೀಯವು ಜಾಗತೀಕರಣದ ಪರ ಮತ್ತು ವಿರೋಧಿ ಗುಂಪುಗಳ ನಡುವೆ ಒಡೆದುಕೊಂಡಿದೆ. ಜಾಗತೀಕರಣವನ್ನು ಬೆಂಬಲಿಸುವ ರಾಜಕೀಯದಲ್ಲಿ ಬಿಜೆಪಿ (ಬಲಪಂಥೀಯ) ಮತ್ತು ಮಿತ್ರಪಕ್ಷಗಳು ತೊಡಗಿಕೊಂಡಿದ್ದರೆ, ಮೊದಮೊದಲು ಸಂದಿಗ್ಧದಲ್ಲಿದ್ದ ಕಾಂಗ್ರೆಸ್ ಈಗ (ಅನಿವಾರ್ಯವಾಗಿ?) ತೀವ್ರ ಎಡಪಕ್ಷವಾಗಿ, ಅಂದರೆ ಒಟ್ಟಾರೆಯಾಗಿ (ತಾನೇ ಆರಂಭಿಸಿದ) ಜಾಗತೀಕರಣದ ಆಶಯಗಳಿಗೆ ವಿರೋಧಿಯಂತೆ ವರ್ತಿಸುತ್ತಿದೆ. ಪ್ರಾದೇಶಿಕ ಪಕ್ಷಗಳು ತಂತಮ್ಮ ರಾಜ್ಯದ, ಪ್ರದೇಶದ ಅನಿವಾರ್ಯತೆ ನೋಡಿಕೊಂಡು ಆಚೆ–ಈಚೆ ಸರಿದಿವೆ, ಸರಿಯುತ್ತಿವೆ. ಹೆಚ್ಚು ಹೆಚ್ಚು ಜನ ಸಬಲರಾಗುತ್ತ, 'ಅಭಿವೃದ್ಧಿ' ಮತ್ತು 'ಸುಖ'ವನ್ನು ಬಯಸುತ್ತ ಹೋದಂತೆ ಬಿಜೆಪಿ ಬೆಳೆಯುತ್ತಿದೆ. ತನ್ನನ್ನು ಬೆಂಬಲಿಸುವ ಮಧ್ಯಮ ವರ್ಗದ ವಿರೋಧ ಕಟ್ಟಿಕೊಳ್ಳದಿದ್ದರೆ, ವಿಶ್ವಾಸ ಇಟ್ಟುಕೊಂಡರೆ, ಅದು ಸುದೀರ್ಘ ಕಾಲ ದೇಶದ ರಾಜಕೀಯದಲ್ಲಿರಲಿದೆ. ಏಕೆಂದರೆ, ಅದು ದೇಶದ ಒಂದು ಬೃಹತ್ ವರ್ಗದ ಮನಸ್ಥಿತಿಯನ್ನು ಪ್ರತಿನಿಧಿಸುತ್ತಿದೆ. ಕಾಂಗ್ರೆಸ್ ಒಂದೊಮ್ಮೆ ಇದೇ ವೇಗದಲ್ಲಿ 'ಎಡ'ಮಾರ್ಗದಲ್ಲೇ ಸಾಗಿದರೆ ಪ್ರಮುಖ ಪಕ್ಷವಾಗಿ ಉಳಿದುಕೊಳ್ಳುತ್ತದೆ; ಆದರೆ ಹೆಚ್ಚು ಕಡಿಮೆ ಅದೇ 'ಸಮಾಜವಾದಿ' ಮನಸ್ಥಿತಿ ಹೊಂದಿರುವ ಪ್ರಾದೇಶಿಕ ಪಕ್ಷಗಳು (ತಮಿಳುನಾಡು ಬಿಟ್ಟು) ನಾಶವಾಗಲಿವೆ. ಎಡ–ಬಲಗಳ ನಡುವಿನ ಈ ಯುದ್ಧವೇ ವರ್ತಮಾನದಲ್ಲಿ ದೇಶದ ದಿನಚರಿಯಾಗಿಬಿಟ್ಟಿದೆ; ಶಿಕ್ಷಣ, ಸಾಹಿತ್ಯ, ಪತ್ರಿಕೋದ್ಯಮ, ಕೃಷಿ, ಪರಿಸರ ಹೀಗೆ ಬಹುತೇಕ ಕ್ಷೇತ್ರಗಳಲ್ಲಿ ಅನುದಿನ ನಡೆಯುತ್ತಿರುವ ಸಂಘರ್ಷದ ಕಾರಣ ಇದು. 'ಸಾಮಾಜಿಕ ನ್ಯಾಯ' ಮತ್ತು 'ಸಂವಿಧಾನದ ರಕ್ಷಣೆ' ಎಂಬ ಶಬ್ದಗಳು ವಿರುದ್ಧಾರ್ಥಕ ಶಬ್ದಗಳಾಗಿ ಮಾರ್ಪಟ್ಟಿರುವ ಕಾರಣ ಇದು; 'ಅಭಿವೃದ್ಧಿ' ಮತ್ತು 'ಬೆಳವಣಿಗೆ' ಎಂಬ ಶಬ್ದಗಳಿಗೂ ಈ ಗ್ರಹಿಕೆ ಅನ್ವಯಿಸುತ್ತದೆ.

ಆದರೆ ಇಲ್ಲಿಯೂ ಕೆಲವು ಸಮಸ್ಯೆಗಳಿವೆ. ಕೆಲವೊಮ್ಮೆ ಪಕ್ಷಗಳಿಗೆ ದೈನಂದಿನ ಆಚರಣೆಯಲ್ಲಿ 'ಎಡ' ಮತ್ತು 'ಬಲ'ಗಳಿಗಿಂತ ಪಕ್ಷ ರಾಜಕೀಯವೇ ಮಿಗಿಲಾಗಿ, ತತ್ವಗಳು ತೋರಿಕೆಯ ಮಾತುಗಳಾಗಿಬಿಟ್ಟಿವೆ. ಅವು ಜನರನ್ನು ಮೋಸಗೊಳಿಸುವ, ಅಧಿಕಾರವನ್ನು ಪಡೆಯುವ ಮತ್ತು ಉಳಿಸಿಕೊಳ್ಳುವ 'ಜನಪ್ರಿಯ ರಾಜಕೀಯ'ದ ತಂತ್ರಗಳೂ ಆಗಿಬಿಟ್ಟಿವೆ. ತತ್ವ–ಸಿದ್ಧಾಂತಗಳು ಜನರ ಕಣ್ಣಿಗೆ ಮಣ್ಣೆರಚುವ ಸುಳ್ಳುಗಳಾಗಿ ಬದಲಾಗಿರುವುದು ಸಮಕಾಲೀನ ಸಮಾಜದ ದೊಡ್ಡ ದುರಂತ. 'ಎಡ' ಮತ್ತು 'ಬಲ' ಈ ಎರಡೂ ಬಣಗಳು ನಮ್ಮ ಸಮಾಜವನ್ನು ತೀವ್ರವಾಗಿ ಒಡೆದುಬಿಟ್ಟಿವೆ. ತಮ್ಮ ಬಣ ಸೋತರೆ ಭವಿಷ್ಯವೇ ಅಂಧಕಾರಕ್ಕೆ ಜಾರುತ್ತದೆ ಎಂದು ಅವು ಜನಸಾಮಾನ್ಯರನ್ನು ನಂಬಿಸಿ ಭಯ ಸೃಷ್ಟಿಸಿಬಿಟ್ಟಿವೆ. ಪ್ರತಿಯೊಬ್ಬ ವ್ಯಕ್ತಿಯನ್ನೂ ರಾಜಕೀಯದಲ್ಲಿ ತೊಡಗಿಸಿ 'ಹೋರಾಟಕ್ಕೆ' ಅಣಿಯಾಗಿಸಿಬಿಟ್ಟಿವೆ. ಹೀಗಾಗಿ 'ರಾಜಕೀಯ'ವೇ ಜನಜೀವನದ ಕೇಂದ್ರಬಿಂದುವಾಗಿಬಿಟ್ಟಿದೆ. ಮಾಧ್ಯಮಗಳು ವರದಿ ಮಾಡುವುದು ರಾಜಕೀಯವನ್ನು ಮಾತ್ರ. ಗಮನಿಸಬೇಕು, ಹಲವು ಶತಮಾನಗಳ ಕಾಲ ನಮ್ಮ ಸಮಾಜವು ರಾಜಕೀಯ–ಕೇಂದ್ರಿತವಾಗಿರಲಿಲ್ಲ, ಧರ್ಮಕೇಂದ್ರಿತವಾಗಿತ್ತು, ಸಂಪ್ರದಾಯಕೇಂದ್ರಿತವಾಗಿತ್ತು.

ನಮ್ಮ ಯುಗದ ಎರಡನೆಯ ಮಹತ್ವದ ಪ್ರೇರಣೆ 'ಹಿಂದುತ್ವ'ದ ಮರುಹುಟ್ಟು ಹಾಗೂ ವ್ಯಾಪಕ ಬೆಳವಣಿಗೆ. ಇದು ನೆಹರು–ಪ್ರಣೀತ 'ಜಾತ್ಯತೀತತೆ'ಗೆ ಪ್ರತಿಕ್ರಿಯೆಯಾಗಿ ಹುಟ್ಟಿದ್ದು ಎಂಬುದು ಸ್ಪಷ್ಟ. ಈ ವರ್ಗವು 'ಜಾತ್ಯತೀತತೆ'ಯನ್ನು, ಅಲ್ಪಸಂಖ್ಯಾತರ ತುಷ್ಟೀಕರಣದ ರಾಜಕೀಯವಾಗಿ ನೋಡುತ್ತದೆ. ಆರ್ಥಿಕವಾಗಿ ಪಾಶ್ಚಾತ್ಯೀಕರಣಗೊಂಡ ಹಿಂದೂ ಮಧ್ಯಮವರ್ಗವೇ ಈ ವಾದದ ಪ್ರಮುಖ ವಕ್ತಾರ ಮತ್ತು 'ಹಿಂದುತ್ವ'ವೇ ಬಿಜೆಪಿಯ ಭಾರಿ ಬೆಳವಣಿಗೆಯ ಹಿಂದಿರುವ ಕಾರಣ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲೂ ಇದ್ದ 'ಹಿಂದುತ್ವ'ಕ್ಕೆ ಕೆಲವು ಜನಪ್ರಿಯ ಅಂಶಗಳನ್ನು ಲಗತ್ತಿಸಿ ಮಾರ್ಪಡಿಸಿ, ಅದರ ಹೊಸ ಅವತಾರವನ್ನು ದೇಶದ ಮುಂದಿಟ್ಟು ಭಾರಿ ಪ್ರಮಾಣದಲ್ಲಿ ಬೆಳೆಸಿದವರು ಬಿಜೆಪಿಯ ನಾಯಕ ಎಲ್.ಕೆ. ಆಡ್ವಾಣಿ. ಅವರು ಕೈಗೊಂಡ ರಥಯಾತ್ರೆಯು ದೇಶದ ಇತಿಹಾಸಕ್ಕೆ ಭಾರಿ ತಿರುವು ನೀಡಿದ ಒಂದು ಘಟನೆ. ಈ ಹಿಂದುತ್ವದ ಪ್ರಮುಖ ವಾದಗಳೆಂದರೆ– ದೇಶದಲ್ಲಿರುವವರೆಲ್ಲರೂ ಹಿಂದೂಗಳು, ಶ್ರೀರಾಮ ಹಿಂದೂ ಸಾಂಸ್ಕೃತಿಕತೆಯ ಸಂಕೇತ, ಅಲ್ಪಸಂಖ್ಯಾತರಿಗೆ ವಿಶೇಷವಾಗಿ ಮುಸ್ಲಿಂ ಸಮುದಾಯಕ್ಕೆ ಇಲ್ಲಿಯವರೆಗೆ ನೀಡಲಾದ ಎಲ್ಲ ವಿಶೇಷ ಸವಲತ್ತುಗಳು ರದ್ದಾಗಬೇಕು, 370ನೇ ವಿಧಿ ಮತ್ತು ತ್ರಿವಳಿ ತಲಾಕ್ ರದ್ದಾಗಬೇಕು (ಆಗಿವೆ), ಸಿಎಎ ಜಾರಿಗೆ ಬರಬೇಕು (ಬಂದಿದೆ), ಏಕರೂಪ ನಾಗರಿಕ ಸಂಹಿತೆ, ವಕ್ಫ್ ಬೋರ್ಡ್ ಬದಲಾವಣೆ ಜಾರಿಗೆ ಬರಬೇಕು.

ಆಡ್ವಾಣಿ ನಂತರ, ಹಿಂದುತ್ವವನ್ನು ಆಧರಿಸಿದ ಸಾಂಸ್ಕೃತಿಕ ರಾಜಕೀಯವನ್ನು, ದಕ್ಷ ಆಡಳಿತ, ಅಭಿವೃದ್ಧಿಯ ರಾಜಕೀಯ ಮತ್ತು 'ಆಕ್ರಮಣಕಾರಿ ರಾಷ್ಟ್ರೀಯತೆ'ಯೊಂದಿಗೆ ಸೇರಿಸಿ, ದೇಶದ ಬಹುಸಂಖ್ಯಾತರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಸಂವಹಿಸಿರುವ ಪ್ರಧಾನಿ ಮೋದಿಯವರು ಈಗಾಗಲೇ ಮೂರು ಲೋಕಸಭಾ ಚುನಾವಣೆಗಳನ್ನು ಗೆದ್ದಿದ್ದಾರೆ. ಸ್ವಾರಸ್ಯವೆಂದರೆ, ಇಲ್ಲಿ ಬಿಜೆಪಿಯನ್ನು ಬೆಂಬಲಿಸಿದ ವರ್ಗವೇ ಜಾಗತೀಕರಣವನ್ನು ಬೆಂಬಲಿಸುವ ವರ್ಗವೂ ಹೌದು. ಇಲ್ಲಿ ಕಾಂಗ್ರೆಸ್ ಮತ್ತು ಅದರ ಒಕ್ಕೂಟವನ್ನು ಬೆಂಬಲಿಸಿದ ವರ್ಗಗಳೇ ಹೆಚ್ಚುಕಡಿಮೆ ಅಲ್ಲಿ ಸಮಾಜವಾದವನ್ನು ಬೆಂಬಲಿಸುತ್ತಿರುವುದು. ಯುಗಧರ್ಮದ ಮೇಲಿನ ಮೂರನೆಯ ಬಲವಾದ ಪ್ರಭಾವ ತಂತ್ರಜ್ಞಾನದ್ದು, ಗೂಗಲ್–ಮೊಬೈಲ್–ಅಂತರ್ಜಾಲಕ್ಕೆ ಸಂಬಂಧಿಸಿದ್ದು. ತ್ರಿವಿಕ್ರಮನ ಬೇತಾಳದಂತೆ ಎಲ್ಲರ ಹೆಗಲಿಗೇರಿರುವ 3 ಸಮಕಾಲೀನ ಪ್ರಭಾವಗಳಿವು. ಈಗಿನ ಜಗತ್ತಿನ ಅಂತಿಮಸತ್ಯ 'ಗೂಗಲ್'. ನಾವು ಜಗತ್ತನ್ನು ನೋಡುವ ದೃಷ್ಟಿಕೋನ ವನ್ನು ಸೃಷ್ಟಿಸುತ್ತಿದೆ ಗೂಗಲ್. ಹಾಗೆಯೇ, ಮೊಬೈಲ್ ಮತ್ತು ಅಂತರ್ಜಾಲ, ಸಾವಿರಾರು ವರ್ಷಗಳಿಂದ ಬಂದ ನಮ್ಮ ಜೀವನವಿಧಾನವನ್ನೇ ತಲೆಕೆಳಗು ಮಾಡಿವೆ, ನಮ್ಮ ಮೌಲ್ಯಗಳ ವ್ಯವಸ್ಥೆಗಳನ್ನು ಕಿತ್ತುಹಾಕಿವೆ. ಬಹುಶಃ ನಮ್ಮ ಸಂಸ್ಕೃತಿಗಳನ್ನು, ವೈವಿಧ್ಯಗಳನ್ನು, ಸಭ್ಯತೆಗಳನ್ನೂ ಇವು ನಾಶಮಾಡಿವೆ. ಇಂದು ನಮ್ಮ ಜ್ಞಾನ ಮತ್ತು ಮನರಂಜನೆ ಎರಡರ ಮೂಲಗಳೂ ಇವೇ. ಓದುವುದಕ್ಕಿಂತ, ಕೇಳುವುದಕ್ಕಿಂತ 'ನೋಡುವುದು' ಹೆಚ್ಚಿನದು ಎಂಬ ಭಾವನೆಯನ್ನು ನಮ್ಮ ತಲೆಯೊಳಗೆ ತುಂಬಿರುವ ಇವು ನಮ್ಮ ಕಲೆ ಮತ್ತು ಸಾಹಿತ್ಯಕ್ಕೆ ಒದಗಿರುವ ದೊಡ್ಡ ಸವಾಲುಗಳು. ಹಾಗಾಗಿ ನಾವಿಂದು ಹಾಡನ್ನು ಕೇಳುವುದಿಲ್ಲ, ನೋಡುತ್ತೇವೆ. ದೃಶ್ಯಕ್ಕೇ ಮಹತ್ವ, ಅದೂ ಅಬ್ಬರದ ದೃಶ್ಯಮಹತ್ವ. ಈ ಕಾರಣದಿಂದಾಗಿಯೇ ಇಂದು 'ಓದುವ ಸಾಹಿತ್ಯ' ಮಂಕಾಗಿರುವುದು, ಸಾಹಿತಿಯು ಸಾಮಾಜಿಕ ಜೀವನದ ಕೇಂದ್ರಬಿಂದು ಎನ್ನುವ ಸ್ಥಾನದಿಂದ ಹೊರಬಂದಿರುವುದು.

ರಾಜಕೀಯವೇ ಕೇಂದ್ರವಸ್ತುವಾಗಿ ಉಳಿದೆಲ್ಲವೂ ಅಮುಖ್ಯ ಎನಿಸಿರುವುದು ನಮ್ಮ ಕಾಲದ ವಿಶಿಷ್ಟ ಬೆಳವಣಿಗೆ. ಮತ್ತೆ, ರಾಜಕೀಯದತ್ತ ಮಧ್ಯಮ ವರ್ಗದ 'ಅಲರ್ಜಿ' ಬೆಳೆಯುತ್ತಿರುವುದೂ ಇದರ ಜತೆಯೇ ನಡೆಯುತ್ತಿರುವ ವಿಚಿತ್ರ ಬೆಳವಣಿಗೆ!

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಶಿಕ್ಷಣ ಸಮಾಲೋಚಕರು)



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಒಂದು ಮೊಟ್ಟೆಯ (ಪಫ್ಸ್) ಕಥೆ!

ಮೇಲಿನ ಶೀರ್ಷಿಕೆ ನೋಡಿದ ನೀವು, ''ಇದು ರಾಜ್ ಬಿ.ಶೆಟ್ಟಿಯವರ ಅಭಿನಯ ಮತ್ತು ನಿರ್ದೇಶನದ 'ಒಂದು ಮೊಟ್ಟೆಯ ಕಥೆ' ಚಲನಚಿತ್ರದ ಕುರಿತಾಗಿ ಕಲಹಪ್ರಿಯ ನಾರದರು ಹಂಚಿಕೊಳ್ಳುತ್ತಿರುವ ಹಸಿಸುದ್ದಿ'' ಎಂದು ಭಾವಿಸಿರಬಹುದು. ಆದರೆ ವಿಷಯ ಅದರ ಕುರಿತಾದುದಲ್ಲ, ಇದು ಆಂಧ್ರಪ್ರದೇಶದಿಂದ ಹಾರಿಬಂದಿರುವ 'ಬಿಸಿಸುದ್ದಿ'. ವೈ.ಎಸ್. ಜಗನ್‌ಮೋಹನ್ ರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯಮಂತ್ರಿ ಗದ್ದುಗೆಯಲ್ಲಿ ದರ್ಬಾರು ಮಾಡುತ್ತಿದ್ದಾಗಿನ

ಕಥೆಯಿದು. ತಮ್ಮ ಐದು ವರ್ಷಗಳ ಅಧಿಕಾರಾವಧಿಯಲ್ಲಿ 'ಮೊಟ್ಟೆ ಪಫ್ಸ್' ತಿನ್ನಲಿಕ್ಕಾಗಿಯೇ ಮುಖ್ಯಮಂತ್ರಿಗಳ ಕಚೇರಿಯಿಂದ ಬರೋಬ್ಬರಿ 3.6 ಕೋಟಿ ರುಪಾಯಿಗಳನ್ನು ಅವರು ಪೀಕಿಸಿದ್ದಾರೆ ಎಂಬ ವದಂತಿ ಹರಿದಾಡುತ್ತಿರುವುದು ಸೀಸವನ್ನು ಕಾಯಿಸಿ ಕಿವಿಯಲ್ಲಿ ಸುರಿದಂತಾಗಿದೆ ನಾರದರಿಗೆ. ಅಷ್ಟಕ್ಕೂ ಹೀಗೆಂದು ಆರೋಪಿಸಿರುವುದು ಅಲ್ಲಿನ ಖಾಸಗಿ ವಾಹಿನಿಯೊಂದರ ಪತ್ರಕರ್ತೆ. 'ಜಗನ್ ಅವರು ಸರಕಾರದ ಹಣವನ್ನು ಹೀಗೆ ಬೇಕಾಬಿಟ್ಟಿಯಾಗಿ ಖರ್ಚುಮಾಡಿದ್ದಕ್ಕೆ ಟಿಡಿಪಿ–ಜನಸೇನಾ–ಬಿಜೆಪಿ ಮೈತ್ರಿ ಸರಕಾರವು ತನಿಖೆಗೆ ಮುಂದಾಗಿದೆ' ಎಂದು ಆಕೆ 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಒಂದೆರಡು ಸಾಲು ವಗಾಯಿಸ್ದೇ ವಗಾಯಿಸ್ದು, ತಡಬಡಾಯಿಸಿಕೊಂಡು ಮೇಲೆದ್ದ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು 'ನಾನವನಲ್ಲ, ನಾನವನಲ್ಲ' ಎಂಬ ಶೈಲಿಯಲ್ಲಿ ಅಡ್ಡಡ್ಡಲಾಗಿ ತಲೆಯಾಡಿಸಿ, ಈ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದೆಯಂತೆ. ಜತೆಗೆ, 'ವದಂತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ, ತಪ್ಪುಮಾಹಿತಿಯನ್ನೇ ಹೀಗೆ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವುದು ನೈಜ ಪತ್ರಿಕೋದ್ಯಮಕ್ಕೆ ಮಾಡಿರುವ ಅಪಚಾರ' ಎಂದು ಬುದ್ಧಿವಾದವನ್ನೂ ಹೇಳಿದೆಯಂತೆ!

ಬಿಹಾರದಲ್ಲಿ ಕೂತಿದ್ದೇ ಈ ಬೆಳವಣಿಗೆಯನ್ನು ಗಮನಿಸಿದ ಘಟಾನುಘಟಿ ಪುಢಾರಿಯೊಬ್ಬರು ವರ್ಷಗಳ ಹಿಂದೆ ತಾವು ಜಾನುವಾರುಗಳಿಗೆ ಮೀಸಲಾದ ಟನ್‌ಗಟ್ಟಲೆ ಮೇವನ್ನು 'ಗುಳುಂ' ಮಾಡಿ ಜೀರ್ಣಿಸಿಕೊಂಡ ಘಟನೆಯನ್ನು ಮೆಲುಕುಹಾಕುತ್ತಲೇ, ಜಗನ್‌ಮೋಹನ್ ರೆಡ್ಡಿಯವರಿಗೆ ಫೋನ್ ಹಚ್ಚಿ, 'ರೆಡ್ಡಿಗಾರು, ಡೋಂಟ್‌ವರಿ ಮಾಡ್ಕೋಬೇಡಿ; ರಾಜಕೀಯ ಅಂದ ಮೇಲೆ ಇಂಥ ಆರೋಪಗಳೆಲ್ಲಾ ಕಾಮನ್ನು. ಇದಕ್ಕೆಲ್ಲಾ ಅಂಜಬಾರದು' ಎಂದು ದೊಡ್ಡಣ್ಣನಂತೆ ಅಭಯ ನೀಡಿ, ಬಾಯಲಿದ್ದ ತಾಂಬೂಲವನ್ನು ಪಕ್ಕದಲ್ಲಿ 'ಪಿಚಕ್' ಎಂದು ಉಗಿದರಂತೆ!

ಮೂಗು ತೂರಿಸದಿರಿ...

ವಿವಾಹಿತೆ ಎಂದು ಗೊತ್ತಿದ್ದರೂ ಮಹಿಳೆಯೊಬ್ಬಳ ಹಿಂದೆ ಬಿದ್ದು ಮಾತಾಡಿಸಲು ಹಾತೊರೆಯುತ್ತಿದ್ದ ಬೆಂಗಳೂರಿನ ಪಂತರಪಾಳ್ಯದ ಆಟೋ ಚಾಲಕನೊಬ್ಬ ಅದಕ್ಕೆ ತಕ್ಕ ಪ್ರತಿಫಲ ಸ್ವೀಕರಿಸಿದ 'ಕ್ರೈಮ್‌ಸುದ್ದಿ'ಯನ್ನು ಈಗಾಗಲೇ ಓದಿದ್ದೀರಿ. ಈ ಘಟನೆಗೂ ಮುನ್ನ ಆಕೆಯ ಅಣ್ಣ ಸದರಿ ಆಟೋ ಚಾಲಕನಿಗೆ 'ಬ್ಯಾಡಾ ಕಣ್ ಮಗಾ, ಆಕೆಗೆ ಮದುವೆಯಾಗ್ಯತೆ. ಗಂಡ–ಹೆಂಡ್ರು ಮಧ್ಯೆ ಮೂಗು ತೂರ್ಸಕ್ಕೆ ಹೋಗ್ ಬ್ಯಾಡಾ..' ಅಂತ ಪರಿಪರಿಯಾಗಿ ಬುದ್ಧಿ ಹೇಳಿದ್ದನಂತೆ, ಮಹಿಳೆಯ ಪತಿಯೂ ಆ ಚಾಲಕನಿಗೆ ಯಥೋಚಿತವಾಗಿ ಎಚ್ಚರಿಸಿದ್ದರಂತೆ. ಇಷ್ಟಾಗಿಯೂ, 'ಡರ್' ಹಿಂದಿ ಸಿನಿಮಾದ ಶಾರುಖ್ ಖಾನ್ ಸ್ಟೈಲ್‌ನಲ್ಲಿ 'ತೂ ಹೈ ಮೇರಿ ಕಿ.. ಕಿ...ಕಿ... ಕಿರಣ್' ಎಂದು ಪೀಡಿಸೋ ಹಾಗೆ ಆ ಆಟೋಚಾಲಕ ಬೆನ್ನತ್ತಿದ್ದಕ್ಕೆ ಆಕೆಯ ಅಣ್ಣ ಮತ್ತು ಪತಿಯಿಂದ ಇರಿತಕ್ಕೆ ಒಳಗಾಗಬೇಕಾಗಿ ಬಂತು. ಇರಿದವರು ಪರಾರಿಯಾಗಿದ್ದೂ ಆಯ್ತು. ವ್ಯಕ್ತಿಯೊಬ್ಬರು ತಮಗೆ ಸಂಬಂಧವಿರದ ವಿಷಯದಲ್ಲಿ ಮಧ್ಯೆ ಪ್ರವೇಶಿಸಲು ಬಂದಾಗ Please don't poke your dirty nose ಎಂದು ಎದುರಿಗಿರುವವರು ಎಚ್ಚರಿಸುವುದಿದೆ. ಇಂಥ ಎಚ್ಚರಿಕೆಯಲ್ಲಿರುವ ಘಾಟು ಮೂಗಿಗೆ ಅಡರುತ್ತಿದ್ದಂತೆ ಅಪಾಯವನ್ನು ಗ್ರಹಿಸಿ ಹಿಂದೆ ಸರಿಯದಿದ್ದರೆ ಮುಂದೇನಾಗುತ್ತೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ಸಮಾಚಾರ ಸಣ್ಣದಲ್ಲ

ಬಾಂಬ್ ಕರೆ: ವಿಮಾನ ತುರ್ತು ಭೂಸ್ಪರ್ಶ

ತಿರುವನಂತಪುರಂ: ಮುಂಬೈನಿಂದ ಗುರುವಾರ ನಸುಕಿನ 5.45ಕ್ಕೆ ಹೊರಟು ತಿರುವನಂತಪುರಕ್ಕೆ ಸಾಗುತ್ತಿದ್ದ ಏರ್ ಇಂಡಿಯ ವಿಮಾನಕ್ಕೆ ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ ತಿರುವನಂತಪುರದಲ್ಲಿ ವಿಮಾನ(ಸಂಖ್ಯೆ 657) ತುರ್ತು ಭೂಸ್ಪರ್ಶ ಮಾಡಲಾಗಿದೆ. ಪ್ರಯಾಣಿಕರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಬಳಿಕ ವಿಮಾನ ತಪಾಸಣೆ ನಡೆಸಲಾಗಿದ್ದು, ಹುಸಿ ಬೆದರಿಕೆ ಕರೆ ಎಂಬುದು ದೃಢಪಟ್ಟಿದೆ. 135 ಪ್ರಯಾಣಿಕರಿದ್ದ ವಿಮಾನ ತಿರುವನಂತಪುರದಲ್ಲಿ ಬೆಳಗ್ಗೆ 8.10ಕ್ಕೆ ಇಳಿಯಬೇಕಿತ್ತು. ಅದಕ್ಕೂ ಮೊದಲೇ ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ಪೈಲಟ್ ತಕ್ಷಣ ಏರ್ ಟ್ರಾಫಿಕ್ ಕಂಟ್ರೋಲ್ ಸಂಪರ್ಕಿಸಿ 8 ಗಂಟೆಗೆ ಸುರಕ್ಷಿತ ಲ್ಯಾಂಡಿಂಗ್ ಪ್ರಕ್ರಿಯೆ ಪೂರ್ಣಗೊಳಿಸಿದರು.

ಗೌರಿ ಹತ್ಯೆ ಆರೋಪಿ ಜಾಮೀನಿಗಿಲ್ಲ ತಡೆ

ದೆಹಲಿ: ಪತ್ರಕರ್ತೆ-ಸಾಮಾಜಿಕ ಕಾರ್ಯಕರ್ತೆ ಗೌರಿ ಲಂಕೇಶ್‌ರನ್ನು 2017ರಲ್ಲಿ ಕೊಲೆ ಮಾಡಿದ ಪ್ರಕರಣದ ಆರೋಪಿ ಮೋಹನ್ ಎನ್.ನಾಯಕ್‌ಗೆ ಕರ್ನಾಟಕ ಹೈಕೋರ್ಟ್ ನೀಡಿರುವ ಜಾಮೀನು

ರದ್ದು ಕೋರಿ ಸಂತ್ರಸ್ತೆಯ ಸಹೋದರಿ ಕವಿತಾ ಲಂಕೇಶ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾ ಗೊಳಿಸಿದೆ. ನ್ಯಾ.ಬೇಲಾ ಎಂ.ತ್ರಿವೇದಿ ಮತ್ತು ನ್ಯಾ.ಸತೀಶ್ ಚಂದ್ರ ಶರ್ಮಾ ಅವರ ದ್ವಿಸದಸ್ಯ ಪೀಠ ಮೋಹನ್ ನಾಯಕ್‌ಗೆ ನೀಡಿದ್ದ ಜಾಮೀನು ರದ್ದುಗೊಳಿಸಲು ನಿರಾಕರಿಸಿದೆ. ಜಾಮೀನು ಕ್ರಮಬದ್ಧ. ಹೈಕೋರ್ಟ್ ಜಾಮೀನು ವಿಚಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ವಿಚಾರಣಾ ಕೋರ್ಟ್ ಶೀಘ್ರ ವಿಚಾರಣೆ ಮುಕ್ತಾಯಗೊಳಿಸಬೇಕು ಎಂದು ಹೇಳಿದೆ.ವಿಚಾರಣೆಗೆ ಆರೋಪಿ ಸಹಕರಿಸದಿದ್ದರೆ, ವಿಚಾರಣೆ ಅನಾವಶ್ಯಕ ಮುಂದೂಡಿಕೆ ಆಗುತ್ತಿದ್ದರೆ, ಆಗ ಜಾಮೀನು ರದ್ದುಕೋರಿ ಅರ್ಜಿ ಸಲ್ಲಿಸಬಹುದು ಎಂದು ಪೀಠ ಹೇಳಿದೆ.

75 ವರ್ಷಕ್ಕೆ ನಿವೃತ್ತಿಯಾಗಿ ಮೋದಿಗೆ ಸ್ವಾಮಿ ಆಗ್ರಹ

ದೆಹಲಿ: ಕೇಂದ್ರದ ಮಾಜಿ ಸಚಿವ, ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಹೊಸ ರಾಗ ತೆಗೆದಿದ್ದಾರೆ. ತಮ್ಮದೇ ಪಕ್ಷದ ನಾಯಕ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮತ್ತೆ ದಾಳಿ ಆರಂಭಿಸಿದ್ದಾರೆ. 'ಮೋದಿ 75 ವರ್ಷವಾದ ಬಳಿಕ ರಾಜಕೀಯ ನಿವೃತ್ತಿ ಘೋಷಿಸದೇ ಇದ್ದರೆ ಬೇರೆ ವಿಧಾನ ಮೂಲಕ ಅವರನ್ನು ಪ್ರಧಾನಿ ಹುದ್ದೆಯಿಂದ ಕೆಳಗಿಳಿಸಲಾಗುವುದು' ಎಂದು ಸು.ಸ್ವಾಮಿ 'ಎಕ್ಸ್' ಖಾತೆಯಲ್ಲಿ ವರಾತ ತೆಗೆದಿದ್ದಾರೆ. 'ಆರ್‌ಎಸ್ಎಸ್ ಪ್ರಚಾರಕರ ಸಂಸ್ಕಾರಕ್ಕೆ ಮೋದಿ ಬದ್ಧರಾಗಬೇಕು. ಸಂಘದ ಮಾರ್ಗದರ್ಶನ ಮಂಡಳಿಯ ನೀತಿಯಂತೆ 75ನೇ ಜನ್ಮದಿನ ಬಳಿಕ ರಾಜಕೀಯ ನಿವೃತ್ತಿ ಘೋಷಿಸದಿದ್ದರೆ ಬೇರೆ ಮಾರ್ಗಗಳಿಂದ ಅವರನ್ನು ಕೆಳಗಿಳಿಸಲಾಗುವುದು' ಎಂದು ಎಚ್ಚರಿಕೆ ಸಂದೇಶ ನೀಡಿದ್ದಾರೆ. ಹಿಂದೆಯೂ ಹಲವು ಬಾರಿ ಮೋದಿ ವಿರುದ್ಧ ಮಾತನಾಡಿದ್ದ ಸು.ಸ್ವಾಮಿ, 'ಬಾಂಗ್ಲಾ ಬಿಕ್ಕಟ್ಟು ಸಂದರ್ಭ ಮುಸ್ಲಿಮರು ಶೇಖ್ ಹಸೀನಾರನ್ನು ದೇಶ ಬಿಟ್ಟು ಓಡಿಸಿದಾಗ ಇಲ್ಲಿ ಮೋದಿ ನಡುಗುತ್ತಿದ್ದರು' ಎಂದು ಅಣಕವಾಡಿದ್ದರು.

ಬೆಂಗಳೂರು ಸೇರಿ7 ನಗರಕ್ಕೆ ₹2500ಕೋಟಿ

ದೆಹಲಿ: ಬೆಂಗಳೂರು, ಮುಂಬೈ, ಚೆನ್ನೈ ಸೇರಿ ದೇಶದ 7 ಮಹಾನಗರಗಳಲ್ಲಿ ಪ್ರವಾಹ ನಿಯಂತ್ರಣ ಮತ್ತು ಜಲಮೂಲ ಸಂರಕ್ಷಣೆಗಾಗಿ ಕೇಂದ್ರ ಸರಕಾರ 2500 ಕೋಟಿ ರು. ವ್ಯಯಿಸಲಿದೆ ಎಂದು ಕೇಂದ್ರ ಸರಕಾರದ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಂದಿನ 2 ವರ್ಷಗಳಲ್ಲಿ ಮುಂಬೈ, ಚೆನ್ನೈ, ಕೋಲ್ಕತ್ತ ಮಹಾನಗರಗಳಿಗೆ ತಲಾ 500 ಕೋಟಿ ರು.ಗಳಂತೆ ಹಾಗೂ ಬೆಂಗಳೂರು, ಅಹಮದಾಬಾದ್, ಹೈದ್ರಾಬಾದ್ ಮತ್ತು ಪುಣೆ ಮಹಾನಗರಗಳಿಗೆ ತಲಾ 250 ಕೋಟಿ ರು.ಗಳಂತೆ ನೆರವು ಹಂಚಿಕೆ ಮಾಡಲಾಗಿದೆ. ನಗರೀಕರಣದಿಂದ ನದಿ-ಕೆರೆ ಪ್ರದೇಶಗಳ ಅತಿಕ್ರಮಣ, ಚರಂಡಿಯಲ್ಲಿ ತ್ಯಾಜ್ಯ ಶೇಖರಣೆ ಯಿಂದ ಮಳೆಯಾದಾಗ ಪ್ರವಾಹ ಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗಾಗಿ ಜಲಮೂಲಗಳನ್ನು ಆದ್ಯತೆಯಾಗಿಸುವ ಮೊದಲ ಪ್ರವಾಹ ನಿಯಂತ್ರಣ ಕ್ರಮಗಳನ್ನು ಇತ್ತೀಚೆಗೆ ಅನುಮೋ ದಿಸಲಾಗಿದೆ. ಸಂಭಾವ್ಯ ಪ್ರವಾಹ ಸ್ಥಿತಿಯ ಮುನ್ಸೂಚನೆ ನೀಡುವ ವ್ಯವಸ್ಥೆಯೂ ಈ ಕ್ರಮದ ಭಾಗವಾಗಲಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ ಕೃಷ್ಣ ಎಸ್.ವತ್ಸ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಲ್‌ಖೈದಾ ಜಾಲ: 14 ಶಂಕಿತರು ವಶಕ್ಕೆ

ದೆಹಲಿ: ದೇಶದ ವಿವಿಧ ರಾಜ್ಯಗಳಲ್ಲಿ ಹರಡಿಕೊಂಡಿರುವ ಅಂತಾರಾಷ್ಟ್ರೀಯ ಉಗ್ರ ಸಂಘಟನೆ 'ಅಲ್ ಖೈದಾ'ದ ಜಾಲವನ್ನು ದೆಹಲಿ ಪೊಲೀಸರು ಭೇದಿಸಿದ್ದಾರೆ. ಉತ್ತರ ಪ್ರದೇಶ, ಜಾರ್ಖಂಡ್, ರಾಜಸ್ಥಾನದಿಂದ 14 ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ. ಗುಪ್ತಚರ ಮಾಹಿತಿ ಆಧರಿಸಿ ಆಯಾ ರಾಜ್ಯಗಳ ಪೊಲೀಸರ ಜತೆಗೂಡಿ ಜಂಟಿ ಕಾರ್ಯಾಚರಣೆ ನಡೆಸಿರುವ ದೆಹಲಿ ಪೊಲೀಸರು, ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಬಳಕೆ ತರಬೇತಿ ಪಡೆಯುತ್ತಿದ್ದ 6 ಮಂದಿ ರಾಜಸ್ಥಾನದ ಭಿವಾಡಿಯಿಂದ ಹಾಗೂ 8 ಜನರನ್ನು ಜಾರ್ಖಂಡ್ ಮತ್ತು ಉತ್ತರ ಪ್ರದೇಶದಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಜಾಲದ ನೇತೃತ್ವ ವಹಿಸಿದ್ದ ರಾಂಚಿ ಜಾರ್ಖಂಡ್‌ನ ಡಾ. ಇಶ್ತಿಯಾಕ್ ಎಂಬಾತನನ್ನು ತೀವ್ರ ವಿಚಾರಣೆಗೆ ಒಳಪಡಿಸಿ ಸಂಚಿನ ಮಾಹಿತಿ ಕಲೆಹಾಕಲಾಗುತ್ತಿದೆ. 'ಖಿಲಾಫತ್' ಘೋಷಣೆಗಾಗಿ ಮತ್ತು ದೇಶದೊಳಗೆ ಭಾರೀ ಉಗ್ರ ಕೃತ್ಯಗಳನ್ನು ನಡೆಸಲು ಈ ಜಾಲದ ಸದಸ್ಯರು ಸಿದ್ಧರಾಗಿದ್ದರು ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

ತನಿಖಾ ವರದಿ ಮೂಲಕ ದೃಢಪಡಿಸಿದ ಸಿಬಿಐ | ಆರೋಪಿ ಸಂಜಯ್ ರೇಗೆ ಸೈಕೋ ಅನಾಲಿಸಿಸ್ ಪರೀಕ್ಷೆ

ಕೋಲ್ಕತ್ತ ವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ

ಕೋಲ್ಕತ್ತ: ನಗರದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ನಸುಕಿನಲ್ಲಿ ಕಿರಿಯ ವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ. ಅತ್ಯಾಚಾರ ಮತ್ತು ಕೊಲೆ ಕೃತ್ಯ ಒಬ್ಬನೇ ವ್ಯಕ್ತಿಯ ಕೃತ್ಯ ಎಂದು ಸಿಬಿಐ ತನಿಖಾ ವರದಿಯಲ್ಲಿ ಹೇಳಲಾಗಿದೆ.

ಪ್ರಕರಣದಲ್ಲಿ ಕೋಲ್ಕತ್ತ ನಗರ ಪೊಲೀಸರಿಗೆ ನಾಗರಿಕ ಸಹಾಯಕನಾಗಿ ಸೇವೆ ಸಲ್ಲಿಸುತ್ತಿದ್ದ ಸಂಜೋಯ್ ರೇ ಎಂಬಾತನನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಈತ ಮಾತ್ರ ಭಾಗಿಯಾಗಿದ್ದಾನೆ ಎಂದು ಸಿಬಿಐ ವರದಿಯಲ್ಲಿ ಹೇಳಿದೆ. ಡಿಎನ್‌ಎ ವರದಿಯಲ್ಲಿಯೂ ಒಬ್ಬನೇ ವ್ಯಕ್ತಿಯ ಕೈವಾಡವಿದೆ ಎಂದು ಹೇಳಲಾಗಿದೆ. ಆ.8ರ ರಾತ್ರಿಪಾಳಿಯಲ್ಲಿ ಆಸ್ಪತ್ರೆಯ ಎದೆಗೂಡು ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದ ಕಿರಿಯ ವೈದ್ಯೆ ಇದ್ದ ಕಟ್ಟಡದ ವಿಭಾಗಕ್ಕೆ ಸಂಜಯ್ ರೇ ಒಬ್ಬನೇ ರಾತ್ರಿ ಪ್ರವೇಶಿಸುತ್ತಿರುವುದು ಸಿಸಿಟಿವಿ ದೃಶ್ಯಾವಳಿಗಳಲ್ಲೂ ಸೆರೆಯಾಗಿದೆ. ಅವುಗಳನ್ನೂ ಸಿಬಿಐ ಪರಿಶೀಲಿಸಿ ವರದಿ ಸಿದ್ಧಪಡಿಸಿದೆ ಎಂದು ಇಂಡಿಯ ಟುಡೇ ಗುರುವಾರ ವರದಿ ಮಾಡಿದೆ. ಹಾಗಿದ್ದೂ, ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಬೇರೆಯವರೂ ಭಾಗಿಯಾಗಿರಬಹುದಾದ ಶಂಕೆ ಇಟ್ಟುಕೊಂಡೇ ಬೇರೊಂದು ಕೋನದಲ್ಲಿ ನಡೆಸುತ್ತಿದ್ದ ತನಿಖೆಯನ್ನು ಸಿಬಿಐ ಇನ್ನೂ ಮುಕ್ತಾಯಗೊಳಿಸಿಲ್ಲ. ಮರಣೋತ್ತರ ಪರೀಕ್ಷಾ ವರದಿ, ವಿಧಿವಿಜ್ಞಾನ ವರದಿಗಳನ್ನು ಅಂತಿಮ ಅಭಿಪ್ರಾಯಕ್ಕಾಗಿ ಬೇರೆ ಯದೇ ಸಂಸ್ಥೆಯ ಸ್ವತಂತ್ರ ತಜ್ಞರಿಗೆ ಕಳುಹಿಸಿ ಕೊಡುವ ಸಾಧ್ಯತೆಯಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಮೃಗೀಯ ವರ್ತನೆ; ಪಶ್ಚಾತ್ತಾಪದ ಲವಲೇಶವೂ ಕಾಣೆ

ಸೈಕೊಅನಾಲಿಸಿಸ್ ಪರೀಕ್ಷೆ ನಡೆಸಿದಾಗ ಆರೋಪಿ ಸಂಜಯ್ ರೇನಲ್ಲಿ ಮೃಗೀಯ ವರ್ತನೆ ಕಂಡುಬಂದಿತು. ಆ.9ರ ನಸುಕಿನ 3ರಿಂದ 5ಗಂಟೆ ನಡುವೆ

ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಕಟ್ಟಡದ 3ನೇ ಮಹಡಿಯಲ್ಲಿ ಎದೆಗೂಡು ವಿಭಾಗದಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿದ ಬಳಿಕ ಊಟ ಮಾಡಿ ನಿದ್ರಿಸುತ್ತಿದ್ದ ಕಿರಿಯ ವೈದ್ಯೆಯ ಮೇಲೆ ತಾನು ಹೇಗೆ ಎರಗಿದೆ. ಪ್ರತಿರೋಧ ತೋರಿದ ವೈದ್ಯೆಗೆ ಹೇಗೆಲ್ಲಾ ಹೊಡೆದೆ, ಅತ್ಯಾಚಾರ ನಡೆಸಿ ಹೇಗೆ ಕೊಲೆ ಮಾಡಿದೆ ಎಂಬುದನ್ನೆಲ್ಲಾ ಆರೋಪಿ ಸಂಜಯ್ ರೇ, ಸೈಕೊಅನಾಲಿಸಿಸ್ ಪರೀಕ್ಷೆ ವೇಳೆ ಎಳೆಎಳೆಯಾಗಿ ವಿವರಿಸಿದ್ದಾನೆ. ಆಗ ಆತನಲ್ಲಿ ಸಣ್ಣ ಪ್ರಮಾಣದ ಪಶ್ಚಾತ್ತಾಪ ಭಾವವೂ ಕಾಣಿಸಲಿಲ್ಲ. ತಣ್ಣಗಿನ ದನಿಯಲ್ಲಿ ಆತ ಎಲ್ಲವನ್ನೂ ಸರಾಗವಾಗಿ ವಿವರಿಸುತ್ತಾ ಹೋದ. ಆತನ ಮಾತಿನಲ್ಲೇ ಅತಿಯಾದ ಕ್ರೌರ್ಯ ಕಾಣುತ್ತಿತ್ತು. ಆತನ ವರ್ತನೆ ನಿರ್ಭಾವುಕವಾಗಿತ್ತು, ಅಷ್ಟೇ ಮೃಗೀಯವಾಗಿತ್ತು ಎಂದು ಸಿಬಿಐ ಮೂಲಗಳು ತಿಳಿಸಿವೆ.

36 ಗಂಟೆಗಳ ಕರ್ತವ್ಯ ಅಮಾನವೀಯ: ಸುಪ್ರೀಂ

ದೆಹಲಿ: ಅತ್ಯಾಚಾರ-ಹತ್ಯೆ ಪ್ರಕರಣದ ಕಿರಿಯ ವೈದ್ಯೆಗೆ ಸತತವಾಗಿ 36 ಗಂಟೆಗಳ ಕಾಲ ಕೆಲಸ ಮಾಡು ವಂತೆ ಒತ್ತಾಯಿಸಲಾಗಿತ್ತು ಎಂಬುದೇ ಆಘಾತಕಾರಿಯಾಗಿದೆ. ಇಂಥ ನಡೆ ಬಲು ಅಮಾ

ನವೀಯ ಎಂದು ಕಿಡಿಕಾರಿರುವ ಸುಪ್ರೀಂ ಕೋರ್ಟ್, ವೈದ್ಯಕೀಯ ಆಡಳಿತದಲ್ಲಿ ಇಂಥ ಕ್ರೌರ್ಯ ಮೆರೆಯುವವರೂ ಇರುತ್ತಾರಾ? ಎಂದು ಆಘಾತ ವ್ಯಕ್ತಪಡಿಸಿದೆ. ದೇಶದ ಯಾವುದೇ ಭಾಗದಲ್ಲೂ ಇಂಥ ಕ್ರಮ ಇರಬಾರದು. ದೇಶಾದ್ಯಂತ ಕರ್ತವ್ಯ ನಿರತ ವೈದ್ಯರಿಗೆ ಕೆಲಸದ ಅವಧಿಗೆ ಸಂಬಂಧಿಸಿ ಸಮರ್ಪಕ ಕಾರ್ಯ ಸೂಚಿ ಇರಬೇಕು. ಅದು ದೇಶಾದ್ಯಂತವೂ ಏಕರೀತಿ ಅನ್ವಯವಾಗಬೇಕು. ಅಂಥ ದೊಂದು ಮಾರ್ಗ ಸೂಚಿಯನ್ನು ಅಧ್ಯಯನ ನಡೆಸಿ ರಚಿಸುವಂತೆ ಸುಪ್ರೀಂ ಕೋರ್ಟ್, ವಾರದ ಹಿಂದೆ ತಾನೇ ರಚಿಸಿದ್ದ 10 ಸದಸ್ಯರ ರಾಷ್ಟ್ರೀಯ ಕಾರ್ಯಪಡೆ (ಎನ್‌ಟಿಎಫ್)ಗೆ ಆದೇಶಿಸಿದೆ. ವೈದ್ಯರು ಮತ್ತು ಆರೋಗ್ಯ ಸೇವಾ ಸಿಬ್ಬಂದಿಗಳಿಗೆ ಕರ್ತವ್ಯದ ವೇಳೆ ಸುರಕ್ಷತೆ ಮತ್ತು ಭದ್ರತೆ ನೀಡುವುದನ್ನು ಖಚಿತಪಡಿಸಿಕೊಳ್ಳಲು, ಮಾರ್ಗಸೂಚಿ ರಚಿಸಲೆಂದೇ ಸುಪ್ರೀಂ ಕೋರ್ಟ್ 10 ಸದಸ್ಯರ ರಾಷ್ಟ್ರೀಯ ಕಾರ್ಯಪಡೆ (ಎನ್‌ಟಿಎಫ್) ಅನ್ನು ವಾರದ ಹಿಂದೆ ರಚಿಸಿತ್ತು.

ಕರ್ತವ್ಯಲೋಪ; ಪೊಲೀಸರಿಗೆ ಛೀಮಾರಿ

ವಿಚಾರಣೆ ವೇಳೆ, ಕೋಲ್ಕತ್ತ ಪೊಲೀಸರ ಕರ್ತವ್ಯಲೋಪ, ನಿರ್ಲಕ್ಷ್ಯದ ನಡೆಯನ್ನು ಖಂಡಿಸಿದ ಸುಪ್ರೀಂ ಕೋರ್ಟ್, ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆಗೆ ಛೀಮಾರಿ ಹಾಕಿತು. ಆ.9ರ ನಸುಕಿನಲ್ಲಿ ಕೃತ್ಯ ನಡೆದಿದೆ. ಘಟನೆ ಬೆಳಕಿಗೆ ಬಂದಿದ್ದು ಬೆಳಗ್ಗೆ. ಆದರೆ, ಮರಣೋತ್ತರ ಪರೀಕ್ಷೆ ನಡೆದಿರುವುದು ಸಂಜೆ 6.30ಕ್ಕೆ. ಆ ಬಳಿಕ ರಾತ್ರಿ 10.30ಕ್ಕೆ ತಲತಲಾ ಪೊಲೀಸ್ ಠಾಣೆಯಲ್ಲಿ 'ಅಸಹಜ ಸಾವು' ಪ್ರಕರಣ ದಾಖಲಾಗಿದೆ. ಪೊಲೀಸರ ಇಂಥ ತನಿಖಾ ಕ್ರಮವನ್ನು ನನ್ನ 30 ವರ್ಷಗಳ ಸೇವಾವಧಿಯಲ್ಲಿ ಎಂದೂ ನೋಡಿಯೇ ಇಲ್ಲ ಎಂದು ನ್ಯಾ.ಜೆ.ಬಿ.ಪರ್ದಿವಾಲಾ ಆಘಾತ ವ್ಯಕ್ತಪಡಿಸಿದರು. ಪ್ರಕರಣ ದಾಖಲಿಸಿಕೊಂಡ ಪೊಲೀಸ್ ಅಧಿಕಾರಿ ಮುಂದಿನ ವಿಚಾರಣೆ ವೇಳೆ ಖುದ್ದು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದೂ ಪೀಠ ಆದೇಶಿಸಿದೆ.

ಕರ್ತವ್ಯಕ್ಕೆ ಮರಳಿ; ವೈದ್ಯರಿಗೆ ಸುಪ್ರೀಂ ಸೂಚನೆ

ದೆಹಲಿ: ಕೋಲ್ಕತ್ತದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ತ್ವರಿತ ನ್ಯಾಯಕ್ಕೆ ಆಗ್ರಹಿಸಿ ಹಾಗೂ ಸೇವಾನಿರತ ವೈದ್ಯರಿಗೆ ಗರಿಷ್ಠ ಭದ್ರತೆ ಒದಗಿಸುವಂತೆ ಮತ್ತು ವೈದ್ಯರ ಸುರಕ್ಷತೆಗೆ ಸಂಬಂಧಿಸಿ ಪ್ರಬಲ ಕಾಯಿದೆ ರೂಪಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ವೈದ್ಯರು ತಕ್ಷಣವೇ ಕೆಲಸಕ್ಕೆ ಮರಳಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ರೋಗಿಗಳ ಶುಶ್ರೂಷೆಯೇ ವೈದ್ಯರ ಧರ್ಮ, ರೋಗಿಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಕರ್ತವ್ಯಕ್ಕೆ ಹಾಜರಾಗಬೇಕು. ಪ್ರತಿಭಟನೆ ನಡೆಸುತ್ತಿದ್ದವರ ವಿರುದ್ಧ ಯಾವುದೇ ಕಾನೂನು ಅಥವಾ ಶಿಸ್ತು ಕ್ರಮ ಜರುಗದಂತೆ ಕೋರ್ಟ್ ನೋಡಿಕೊಳ್ಳಲಿದೆ ಎಂದು ಸುಪ್ರೀಂ ಕೋರ್ಟ್ ಭರವಸೆ ನೀಡಿದೆ. ದೊಡ್ಡ ಸಂಖ್ಯೆಯ ವೈದ್ಯರು ಪ್ರತಿಭಟನೆ ಮುಂದುವರಿಸಿದರೆ ಜನರಿಗೆ ಆರೋಗ್ಯ ಸೇವೆ ಒದಗಿಸುವುದು ಹೇಗೆ? ಎಂದು ಪ್ರಶ್ನೆ ಮಾಡಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾ.ಜೆ.ಬಿ.ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ, ಕರ್ತವ್ಯಕ್ಕೆ ಮರಳಿದ ವೈದ್ಯರುಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಂತೆ ಅಧಿಕಾರಿಗಳಿಗೆ ನಾವು ಸೂಚನೆ ನೀಡಿದ್ದೇವೆ. ವೈದ್ಯರು ನಿಶ್ಚಿಂತೆಯಿಂದ ಕರ್ತವ್ಯಕ್ಕೆ ಮರಳಬಹುದು ಎಂದು ಭರವಸೆ ನೀಡಿತು.

2026ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ

ನಟ ವಿಜಯ್‌ರ 'ಟಿವಿಕೆ' ಪಕ್ಷದ ಧ್ವಜ, ಚಿನ್ಹೆ, ಹಾಡು ಅನಾವರಣ

ಚೆನ್ನೈ: ತಮಿಳು ಚಿತ್ರರಂಗದ ಜನಪ್ರಿಯ ನಟ, ನಿರ್ಮಾಪಕ 'ಇಳೆಯ ದಳಪತಿ' ಬಿರುದಿನ ವಿಜಯ್ ಅವರು ಗುರುವಾರ ಬೆಳಗ್ಗೆ ತಮ್ಮ ತಮಿಳಗ ವೇಟ್ರಿ ಕಳಗಂ(ಟಿವಿಕೆ) ರಾಜಕೀಯ ಪಕ್ಷದ ಧ್ವಜ ಮತ್ತು ಚಿಹ್ನೆಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದಾರೆ.

ಪಣಿಯೂರ್‌ನಲ್ಲಿರುವ ಪಕ್ಷದ ಕಚೇರಿಯಲ್ಲಿ ಧ್ವಜ- ಚಿನ್ಹೆ ಬಿಡುಗಡೆಗೊಳಿಸಿದರು. ಬಳಿಕ ಪಕ್ಷದ ಅಧಿಕೃತ ಹಾಡು ಪರಿಚಯಿಸಿದರು. ಕುಂಕುಮ ಮತ್ತು ಹಳದಿ ಬಣ್ಣದ ಧ್ವಜದಲ್ಲಿ ಆನೆ ಮತ್ತು ನವಿಲು ಚಿತ್ರವಿದ್ದು ಮಧ್ಯದಲ್ಲಿ ನಕ್ಷತ್ರಗಳಿವೆ. 2024ರ ಫೆಬ್ರುವರಿಯಲ್ಲಿ 'ತಮಿಳಗ ವೇಟ್ರಿ ಕಳಗಂ' ಪಕ್ಷ ಸ್ಥಾಪನೆ ಮೂಲಕ ನಟ ವಿಜಯ್ ರಾಜಕೀಯ ಪ್ರವೇಶಿಸಿದ್ದರು. 2026ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ಹೇಳಿದ್ದರು. ಅಲ್ಲದೇ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಟಿವಿಕೆ ಪಕ್ಷ ಬೇರಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಂಡಿರಲಿಲ್ಲ.

ಬಳಿಕ ಮಾತನಾಡಿದ ವಿಜಯ್, ಪಕ್ಷದ ಮೊದಲ ಸಾರ್ವಜನಿಕ ಸಭೆ ಬಗ್ಗೆ ಎಲ್ಲರೂ ಕಾತುರರಾಗಿದ್ದೀರಿ. ಸಿದ್ಧತೆ ನಡೆಯುತ್ತಿವೆ. ಶೀಘ್ರವೇ ಮಾಹಿತಿ ನೀಡುತ್ತೇನೆ. ಸದ್ಯಕ್ಕೆ ಪಕ್ಷದ ಧ್ವಜ ಬಿಡುಗಡೆಗೊಳಿಸಿದ್ದೇನೆ. ತಮಿಳುನಾಡಿನ ಅಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ದುಡಿಯಬೇಕಿದೆ ಎಂದರು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಶ್ವಸಂಸ್ಥೆ, ಇತರೆ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಸುಧಾರಣೆ ಅತ್ಯಗತ್ಯ

ಸಮಸ್ಯೆ ಪರಿಹಾರ ಯುದ್ಧಭೂಮಿಯಲ್ಲ: ಮೋದಿ

ವಾರ್ಸಾ: ರಷ್ಯಾ-ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಗಳು ತೀವ್ರ ಸ್ವರೂಪದ ಕಾಳಜಿಯ ವಿಷಯಗಳಾಗಿವೆ. ಇಲ್ಲಿನ ಸಮಸ್ಯೆಗಳಿಗೆ ಪರಿಹಾರ ಯುದ್ಧಭೂಮಿಯಲ್ಲ. ರಣಾಂಗಣದಲ್ಲಿ ಯಾವುದೇ ಸಮಸ್ಯೆಯನ್ನು ಪರಿಹರಿಸಲಾಗದು ಎಂಬುದೇ ಭಾರತದ ನಂಬಿಕೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪೋಲೆಂಡ್‌ನಲ್ಲಿ ಗುರುವಾರ ಹೇಳಿದರು.

ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಜತೆ ಜಂಟಿ ಸುದ್ದಿಗೋಷ್ಠಿ ನಡೆಸಿದ ಪ್ರಧಾನಿ ಮೋದಿ,'ಯಾವುದೇ ಬಿಕ್ಕಟ್ಟಿನಲ್ಲಿ ಮುಗ್ಧ ಜೀವಗಳ ಜೀವಕ್ಕೆ ಹಾನಿ ಮಾಡುವುದು ಸರಿಯಲ್ಲ. ಇಂಥ ಪರಿಹಾರ ಕಂಡುಕೊಳ್ಳುವ ಮಾರ್ಗ ಮಾನವಕುಲಕ್ಕೇ ದೊಡ್ಡ ಸವಾಲಾಗಿದೆ. ಶಾಂತಿ ಮತ್ತು ಸ್ಥಿರತೆ ಮರುಸ್ಥಾಪನೆಗಾಗಿ ಭಾರತ ಮಾತುಕತೆ ಮತ್ತು ರಾಜತಾಂತ್ರಿಕತೆಯನ್ನು ಬೆಂಬಲಿಸುತ್ತದೆ. ಮಿತ್ರದೇಶಗಳಿಗೆ ಇದೇ ಮಾರ್ಗದಲ್ಲಿ ಸಾಧ್ಯವಿರುವ ಎಲ್ಲ ಸಹಕಾರವನ್ನು ನೀಡಲು ಭಾರತ ಸಿದ್ಧವಾಗಿದೆ' ಎಂದು ಹೇಳಿದರು.

ಯುರೋಪಿಯನ್ ಒಕ್ಕೂಟದ ಅಧ್ಯಕ್ಷ ಸ್ಥಾನವನ್ನು 2025ರ ಜನವರಿಯಲ್ಲಿ ಪೋಲೆಂಡ್ ವಹಿಸಿಕೊಳ್ಳಲಿದೆ ಎಂದು ವಿಶ್ವಾಸದಿಂದ ಹೇಳಿದ ಪ್ರಧಾನಿ ಮೋದಿ, ನಿಮ್ಮ ಬೆಂಬಲ ಭಾರತ ಮತ್ತು ಯೂರೋಪ್ ಒಕ್ಕೂಟದ (ಇ.ಯು) ನಡುವಿನ ಸಂಬಂಧವನ್ನು ಇನ್ನಷ್ಟು ಬಲಪಡಿಸುತ್ತದೆ ಎಂಬ ವಿಶ್ವಾಸವಿದೆ ಎಂದರು.

ಪ್ರಧಾನಿ ಮೋದಿ ವಾರ್ಸಾದಲ್ಲಿನ ಜಾಮ್ ಸಾಹೇಬ್ ನವನಗರ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ ನಮಿಸಿದರು.

ಈ ಮಧ್ಯೆ, ಸಾವಿರಾರು ಯಹೂದಿ ಅನಾಥ ಮಕ್ಕಳನ್ನು ಸ್ವಂತ ತಂದೆಯ ರೀತಿ ಸಾಕಿ ಸಲುಹಿದ್ದ ಜಾಮ್ ಸಾಹೇಬ್ ಸ್ಮಾರಕಕ್ಕೆ ಪೋಲೆಂಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ನಮನ ಸಲ್ಲಿಸಿದರು. ನವನಗರದ ಮಹಾರಾಜ ಜಾಮ್ ಸಾಹೇಬ್ ಪೋಲೆಂಡ್‌ನಿಂದ ಭಾರತಕ್ಕೆ ಅನೇಕ ಯಹೂದಿಗಳನ್ನು ಕರೆತಂದು ಅವರ ಜೀವ ಉಳಿಸಿದ್ದರು.

ಕಾರ್ಯತಂತ್ರ ಪಾಲುದಾರಿಕೆ

ಭಾರತ-ಪೋಲೆಂಡ್ ರಾಜತಾಂತ್ರಿಕ ಸಂಬಂಧದ 70ನೇ ವಾರ್ಷಿಕೋತ್ಸವ ಆಚರಿಸುತ್ತಿದ್ದು, ಈಗಿನ ಸಂಬಂಧವನ್ನು ಕಾರ್ಯತಂತ್ರ ಪಾಲುದಾರಿಕೆ ಹಂತಕ್ಕೆ ಪರಿವರ್ತಿಸಲು ನಿರ್ಧರಿಸಿವೆ. ಪ್ರಜಾಪ್ರಭುತ್ವ ಮತ್ತು ಕಾನೂನಿನ ಆಳ್ವಿಕೆಯಂತಹ ಹಂಚಿಕೆಯ ಮೌಲ್ಯಗಳನ್ನು ಆಧರಿಸಿವೆ ಎಂದು ಪ್ರಧಾನಿ ಮೋದಿ ಹೇಳಿದರು. ರಕ್ಷಣಾ ಕ್ಷೇತ್ರದಲ್ಲಿನ ಸಹಕಾರ ಉಭಯ ದೇಶಗಳಲ್ಲಿನ ಆಳವಾದ ನಂಬಿಕೆಯ ಸಂಕೇತ. ಸಹಕಾರಕ್ಕೆ ಪರಸ್ಪರ ಆದ್ಯತೆ ನೀಡಿರುವುದು ನಾವೀನ್ಯತೆ ಮತ್ತು ಪ್ರತಿಭೆಗಳು ಎರಡೂ ದೇಶಗಳ ಯುವ ಶಕ್ತಿಯ ಗುರುತಾಗಿದೆ ಎಂದರು. ನುರಿತ ಉದ್ಯೋಗಿಗಳ ಕಲ್ಯಾಣಕ್ಕಾಗಿ ಮತ್ತು ಚಲನಶೀಲತೆಯನ್ನು ಉತ್ತೇಜಿಸಲು ಸಾಮಾಜಿಕ ಭದ್ರತಾ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಉಗ್ರವಾದದ ಸವಾಲು, ಹವಾಮಾನ ಬದಲಾವಣೆ ಉಭಯ ದೇಶಗಳಿಗೂ ಸಾಮಾನ್ಯ ಆದ್ಯತೆ ವಿಷಯಗಳಾಗಿವೆ. ನಾವು ನಮ್ಮ ಸಾಮರ್ಥ್ಯಗಳನ್ನು ಸಂಯೋಜಿಸುವ ಮೂಲಕ ಹಸಿರು ಭವಿಷ್ಯಕ್ಕಾಗಿ ಕೆಲಸ ಮಾಡುತ್ತೇವೆ ಎಂದರು.

ಅಮೆರಿಕದ ಟೆಕ್ಸಾಸ್ ರಾಜ್ಯದ ಹ್ಯೂಸ್ಟನ್ ನಗರದ ಬಳಿ 90 ಅಡಿ ಎತ್ತರದ ಹನುಮಂತ ಭಗವಾನರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ. ಇದು ಭಾರತದ ಹೊರಗೆ ಇರುವ ಅತಿಎತ್ತರದ ಆಂಜನೇಯ ಸ್ವಾಮಿಯ ಪ್ರತಿಮೆ ಎನಿಸಿಕೊಂಡಿದೆ. 'ಅಭಯ ಹಸ್ತ' ಮುದ್ರೆಯಲ್ಲಿರುವ ಪ್ರತಿಮೆಗೆ 'ಸ್ಟ್ಯಾಚ್ಯು ಆಫ್ ಯೂನಿಯನ್' ಎಂದು ಹೆಸರಿಡಲಾಗಿದೆ. ವನವಾಸ ಕಾಲದಲ್ಲಿ ದೂರವಾಗಿದ್ದ ಶ್ರೀರಾಮ-ಸೀತಾಮಾತೆ ಒಂದಾಗಲು ನೆರವಾಗಿದ್ದಕ್ಕಾಗಿ ಈ ಹೆಸರಿಡಲಾಗಿದೆ.

ಮಾಜಿ ಪ್ರಧಾನಿ ಹಸೀನಾ ಪರವಾಗಿದ್ದ ಪತ್ರಕರ್ತರ ಬಂಧನ

ಹಿಂದೂ ಶಿಕ್ಷಕರ ರಾಜೀನಾಮೆಗೆ ಒತ್ತಡ

ಢಾಕಾ: ಬಾಂಗ್ಲಾದೇಶದಲ್ಲಿ ಮಧ್ಯಂತರ ಸರಕಾರ ರಚನೆಯಾಗಿ 2 ವಾರವಾಗಿದ್ದರೂ, ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರೇ ಖುದ್ದಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿ ಹಿಂದೂಗಳ ಹಿತರಕ್ಷಣೆಯ ಭರವಸೆ ನೀಡಿದ್ದರೂ ನೆರೆಯ ದೇಶದಲ್ಲಿನ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಢಾಕಾ ಸೇರಿದಂತೆ ದೇಶದ ವಿವಿಧೆಡೆ ಹಿಂದೂಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ಹಿಂಸೆ, ದೌರ್ಜನ್ಯ ಮುಂದುವರಿದೇ ಇದೆ.

ಹಿಂದೂ ಶಿಕ್ಷಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಹಿಂದೂ ಶಿಕ್ಷಕಿಯರನ್ನು ಮರಕ್ಕೆ ಕಟ್ಟಿ ಥಳಿಸಿ ಬಲವಂತವಾಗಿ ರಾಜೀನಾಮೆ ಪತ್ರ ಬರೆಸಿಕೊಳ್ಳಲಾಗುತ್ತಿದೆ. ದೇಶದ ವಿವಿಧೆಡೆಯ ಶಾಲಾ-ಕಾಲೇಜುಗಳ 70 ಹಿಂದೂ ಶಿಕ್ಷಕರಿಗೆ ರಾಜೀನಾಮೆ ನೀಡುವಂತೆ ಒತ್ತಾಯಿಸಲಾಗಿದೆ. ಅಜೀಂಪುರ ಸರಕಾರಿ ಬಾಲಕಿಯರ ಶಾಲೆ ಮತ್ತು ಕಾಲೇಜಿನ ಪ್ರಾಂಶುಪಾಲೆ ಗೀತಾಂಜಲಿ ಬರುವಾ ಅವರಿಗೆ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಮುಸ್ಲಿಂ ವಿದ್ಯಾರ್ಥಿನಿಯರೇ ಮರಕ್ಕೆ ಕಟ್ಟಿ ಹಾಕಿದ್ದರು. ಬಾಂಗ್ಲಾ ಸೇನೆಯ ಯೋಧರು ಮಧ್ಯಪ್ರವೇಶಿಸಿ ಅವರನ್ನು ರಕ್ಷಿಸಿದರು. ರೆಡ್ ಕ್ರೆಸೆಂಟ್ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿಯಾಗಿರುವ ಮತ್ತೊಬ್ಬ ಹಿಂದೂ ಮಹಿಳೆ ಸೋನಾಲಿ ರಾಣಿ ದಾಸ್ ಅವರಿಗೂ ರಾಜೀನಾಮೆ ನೀಡುವಂತೆ ಒತ್ತಡ ಹೇರಲಾಗಿದೆ.

ಮೀಸಲು ತಾರತಮ್ಯ ವಿರುದ್ಧದ ಹೋರಾಟ ನೆಪದಲ್ಲಿ ರಾಜಕೀಯ ಕ್ರಾಂತಿ ನಡೆಸಿ ಪ್ರಧಾನಿ ಶೇಖ್ ಹಸೀನಾ ಅವರು ದೇಶ ತೊರೆಯುವಂತೆ ಮಾಡಿದ ವಿದ್ಯಾರ್ಥಿ ಮುಖಂಡರು, 'ವಿದ್ಯಾರ್ಥಿ ಜಾಗೃತ ಗುಂಪು' ರಚಿಸಿಕೊಂಡಿದ್ದಾರೆ. ಅಲ್ಲದೇ, ತಮ್ಮನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ದೇಶದ ಜನರಿಗೆ ಉಪದೇಶ ನೀಡುತ್ತಿದ್ದಾರೆ.

ಅಜೀಂಪುರ ಸರಕಾರಿ ಬಾಲಕಿಯರ ಶಾಲೆ-ಕಾಲೇಜು ಪ್ರಾಂಶುಪಾಲೆ ಗೀತಾಂಜಲಿ ಬರುವಾ ಅವರನ್ನು ಮುಸ್ಲಿಂ ವಿದ್ಯಾರ್ಥಿನಿಯರೇ ಮರಕ್ಕೆ ಕಟ್ಟಿಹಾಕಿ ರಾಜೀನಾಮೆಗೆ ಒತ್ತಾಯಿಸುತ್ತಿದ್ದ ದೃಶ್ಯ.

ಪತ್ರಕರ್ತರ ಬಂಧನ: ಮಾಜಿ ಪ್ರಧಾನಿ ಶೇಖ್ ಹಸೀನಾ ಆಡಳಿತದ ಪರವಾಗಿದ್ದವರೆಂಬ ಆರೋಪದಡಿ ಕೆಲವು ಪತ್ರಕರ್ತರನ್ನು ಬಂಧಿಸಲಾಗುತ್ತಿದೆ. ಹಸೀನಾ ನೇತೃತ್ವದ ಆಡಳಿತಕ್ಕೆ ನಿಕಟವಾಗಿದ್ದ ಪತ್ರಕರ್ತರನ್ನು ಅಪರಾಧಿಗಳೆಂದು ಪರಿಗಣಿಸಲಾಗುತ್ತಿದೆ. ಫ್ರಾನ್ಸ್‌ಗೆ ತೆರಳಲು ಸಿದ್ಧರಾಗಿದ್ದ ಖಾಸಗಿ ಚಾನೆಲ್ ಮಾಜಿ ಸಂಪಾದಕ ಶಕೀಲ್ ಅಹ್ಮದ್ ಮತ್ತು ಅವರ ಪತ್ನಿ ಫರ್ಜಾನಾ ಹಾಗೂ ಮತ್ತೊಬ್ಬ ಪತ್ರಕರ್ತರನ್ನು ಢಾಕಾ ವಿಮಾನ ನಿಲ್ದಾಣದಲ್ಲಿ ಬುಧವಾರ ಬಂಧಿಸಲಾಗಿದೆ.

ವಿವಾಹದ ಹೊಸ ವಿಧೇಯಕಕ್ಕೆ ಅಸ್ಸಾಂ ಸಚಿವ ಸಂಪುಟ ಸಮ್ಮತಿ

ಗುವಾಹಟಿ: ಖಾಜಿ ಅಥವಾ ಧರ್ಮಗುರು ಮುಸ್ಲಿಮರ ವಿವಾಹ ನೋಂದಾಯಿಸುವುದನ್ನು ತಡೆಯುವ ಹೊಸ ಮಸೂದೆಗೆ ಅಸ್ಸಾಂ ಸಚಿವ ಸಂಪುಟ ಅನುಮೋದನೆ ನೀಡಿದೆ. ಅಸ್ಸಾಂ ವಿವಾಹ-ವಿಚ್ಛೇದನದ ಕಡ್ಡಾಯ ನೋಂದಣಿ ಮಸೂದೆ ಬಾಲ್ಯ ವಿವಾಹಗಳ ನೋಂದಣಿ ಸಹ ನಿಷೇಧಿಸುತ್ತದೆ.

ಮುಸ್ಲಿಂ ವೈಯಕ್ತಿಕ ಕಾನೂನಿನ ಕೆಲವು ನಿಬಂಧನೆಗಳನ್ನು ರದ್ದುಗೊಳಿಸುವ ಹೊಸ ವಿಧೇಯಕವನ್ನು ಅಸ್ಸಾಂ ವಿಧಾನಸಭೆಯ ಮುಂಗಾರು ಅಧಿವೇಶನದಲ್ಲಿ ಮಂಡಿಸಲಾಗುವುದು. ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವುದರಲ್ಲಿ ಇದು ಅಸ್ಸಾಂನ ಮೊದಲ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಹೊಸ ವಿಧೇಯಕದ ಪ್ರಕಾರ, ಉಪ ನೋಂದಣಾಧಿಕಾರಿ ಕಚೇರಿಯಲ್ಲೇ ಮುಸ್ಲಿಂ ವಿವಾಹಗಳ ನೋಂದಣಿ ಮಾಡಬೇಕಾಗಿರುತ್ತದೆ.

ವಿವಾಹದ ವಿಧಿವಿಧಾನಗಳಿಗೆ ವಿವಿಧ ಸಮುದಾಯಗಳಲ್ಲಿ ವೈವಿಧ್ಯಮಯ ಸಂಸ್ಕೃತಿ-ಸಂಪ್ರದಾಯಗಳಿರುತ್ತವೆ. ಆದರೆ, ಹೊಸ ವಿಧೇಯಕದಲ್ಲಿ ಉಪ ನೋಂದಣಾಧಿಕಾರಿಯಿಂದ ವಿವಾಹ ನೋಂದಣಿ ಪೂರ್ಣಗೊಳ್ಳುತ್ತದೆ. ಉಳಿದಂತೆ ಹಿಂದೂ ಅಥವಾ ಮುಸ್ಲಿಂ ವಿವಾಹಗಳಲ್ಲಿ ಅವರಿಷ್ಟದ ಧಾರ್ಮಿಕ ನಿಯಮಗಳು ಆಚರಣೆಗೊಳ್ಳಬಹುದಾಗಿದೆ ಎಂದು ಸಿಎಂ ಶರ್ಮಾ ವಿವರಿಸಿದರು. ಈವರೆಗೆ 18-21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮುಸ್ಲಿಂ ಹುಡುಗಿ- ಹುಡುಗ ವಿವಾಹ ನೋಂದಾಯಿ ಸಬಹುದಿತ್ತು. ಹೊಸ ಕಾನೂನಿನ ಪ್ರಕಾರ ಆ ಪದ್ಧತಿ ನಿಷೇಧಗೊಳ್ಳಲಿದೆ. ಮುಸ್ಲಿಂ ಅಪ್ರಾಪ್ತರ ವಿವಾಹ ರಾಜ್ಯದಲ್ಲಿ ನೋಂದಾಯಿಸುವಂತಿಲ್ಲ. ಲವ್ ಜಿಹಾದ್ ಅಪರಾಧವಾಗಿದೆ. ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆ ವಿಧಿಸುವ ಹೊಸ ಕಾನೂನನ್ನು ಸರ್ಕಾರ ತರಲಿದೆ ಎಂದು ಹೇಳಿದರು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವತಿಯರ ವಿವಾಹ ನೋಂದಾಯಿಸಬಾರದೆಂಬ ಷರತ್ತು ವಿಧಿಸುವ ಮಸೂದೆ ಮಂಡಿಸಿದ್ದೇವೆ. ವಿವಾಹ ನೋಂದಣಿ ಅಧಿಕಾರ ಖಾಜಿಯಿಂದ ಉಪ ನೋಂದಣಾಧಿಕಾರಿಗೆ ವರ್ಗವಾಗುತ್ತದೆ.

-ಹಿಮಂತ ಬಿಸ್ವಾ ಶರ್ಮಾ
ಅಸ್ಸಾಂ ಮುಖ್ಯಮಂತ್ರಿ

ಕಮಲಾ ಹ್ಯಾರಿಸ್ ಪ್ರಚಾರ ವೇಳೆ ಸಂಸ್ಕೃತ ಪ್ರಾರ್ಥನೆ!

ಚಿಕಾಗೊ: ಅಮೆರಿಕದ ಚಿಕಾಗೊ ನಗರದಲ್ಲಿ ಕಮಲಾ ಹ್ಯಾರಿಸ್ ಅವರ ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಸಮಾವೇಶದ 3ನೇ ದಿನ ಉಡುಪಿ ಮೂಲದ ಅರ್ಚಕರು ಸಂಸ್ಕೃತ ಪ್ರಾರ್ಥನೆ ಮೂಲಕ

ಕಲಾಪ ಪ್ರಾರಂಭಿಸಿ ಗಮನ ಸೆಳೆದರು. ವೈದಿಕ ಪ್ರಾರ್ಥನೆ ಮಾಡಿ ಅದರ ಅರ್ಥ ವಿವರಿಸಿದ ಮೇರಿಲ್ಯಾಂಡ್ ಶಿವ-ವಿಷ್ಣು ದೇವಸ್ಥಾನದ ಅರ್ಚಕ ರಾಕೇಶ್ ಭಟ್ ಬಳಿಕ, ಓಂ ಶಾಂತಿ ಶಾಂತಿ ಮಂತ್ರಪಠಿಸಿ ಸಭಾಂಗಣದಲ್ಲಿ ಪ್ರತಿಧ್ವನಿಸುವಂತೆ ಮಾಡಿದರು.

ನಮ್ಮಲ್ಲಿ ಭಿನ್ನಾಭಿಪ್ರಾಯವಿದ್ದರೂ ದೇಶದ ವಿಷಯ ಬಂದಾಗ ಒಗ್ಗಟ್ಟಾಗಬೇಕು. ಮನಸ್ಸು ಒಟ್ಟಿಗೇ ಯೋಚಿಸಲಿ, ಹೃದಯಗಳು ಒಂದಾಗಿ ಮಿಡಿಯಲಿ. ಎಲ್ಲರೂ ಸಮಾಜದ ಒಳಿತಿಗಾಗಿ ದುಡಿಯಲಿ. ನಾವು ಒಂದಾಗಬಹುದು ಮತ್ತು ನಮ್ಮ ರಾಷ್ಟ್ರದ ಬಗ್ಗೆ ಹೆಮ್ಮೆಪಡಬಹುದು ಎಂದು ಭಟ್ ಹೇಳಿದರು. 'ವಸುಧೈವ ಕುಟುಂಬಕಂ'(ಇಡೀ ಜಗತ್ತು ಒಂದೇ ಕುಟುಂಬ) ಎಂಬ ವೈದಿಕ ಪರಿಕಲ್ಪನೆಯಲ್ಲಿ ನಂಬಿಕೆಯಿರುವ ನಾಯಕನನ್ನು ಆಯ್ಕೆ ಮಾಡುವಂತೆ ಅಮೆರಿಕ ಮತದಾರರನ್ನು ಭಟ್ ಒತ್ತಾಯಿಸಿದರು. ಗುರುಗಳಾದ ಉಡುಪಿ ಅಷ್ಟಮಠದ ಪೇಜಾವರ ಸ್ವಾಮೀಜಿ ಬಳಿ ಋಗ್ವೇದ ಮತ್ತು ತಂತ್ರಸಾರ(ಮಾಧ್ವ) ಆಗಮದಲ್ಲಿ ಭಟ್ ತರಬೇತಿ ಪಡೆದಿದ್ದಾರೆ. ಅಮೆರಿಕ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿರುವ ಕಮಲಾ ಹ್ಯಾರಿಸ್(59) ಅವರ ತಾಯಿ ಭಾರತೀಯರು.

ಜಪಾನ್‌ಗೆ ಭಾರತದಿಂದ ಹಸಿರು ಅಮೋನಿಯ ರಫ್ತು

ದೆಹಲಿ: ನವೀಕರಿಸಬಹುದಾದ ಇಂಧನಗಳ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಿರುವ ಭಾರತ, ಈಗ ಜಪಾನ್‌ಗೆ ಹಸಿರು ಅಮೋನಿಯ ರಫ್ತು ಮಾಡಲು ಒಪ್ಪಂದ ಮಾಡಿಕೊಂಡಿದೆ. ಹೊಸ ಮತ್ತು ನವೀ

ಕರಿಸಬಹುದಾದ ಇಂಧನಗಳ ಸಚಿವಾಲಯದ ಹಿರಿಯ ಅಧಿಕಾರಿಗಳು ಜಪಾನ್ ಜತೆಗಿನ ಒಪ್ಪಂದಕ್ಕೆ ಗುರುವಾರ ದೆಹಲಿಯಲ್ಲಿ ಸಹಿ ಹಾಕಿದರು.

ಈ ಸಂದರ್ಭ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಜಪಾನ್‌ಗೆ ಹಸಿರು ಅಮೋನಿಯ ರಫ್ತು ಒಪ್ಪಂದವಾಗಿರುವುದು ಹಸಿರು ಜಲಜನಕ ಮತ್ತು ಅಮೋನಿಯ ಉತ್ಪಾದನೆಯಲ್ಲಿ ಭಾರತ ಜಾಗತಿಕ ನಾಯಕನಾಗುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದರು. ಜಪಾನ್ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಬದಲು ಹಸಿರು ಅಮೋನಿಯ ಬಳಕೆಗೆ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಜಪಾನ್‌ನ ಈ ಕಾರ್ಯಕ್ಕೆ ಭಾರತ ಹಸಿರು ಅಮೋನಿಯ ಪೂರೈಸುವ ಮೂಲಕ ಸಾಥ್ ನೀಡಲಿದೆ. ವಾರ್ಷಿಕ ಹಸಿರು ಅಮೋನಿಯದ 7.5 ಲಕ್ಷ ಟನ್ ಟೆಂಡರ್ ಆಗಿದ್ದು, 4.5 ಲಕ್ಷ ಟನ್ ಸಾಮರ್ಥ್ಯಕ್ಕೆ ಹೆಚ್ಚುವರಿ ಟೆಂಡರ್ ನಿರೀಕ್ಷಿಸಲಾಗಿದೆ ಎಂದು ಸಚಿವ ಜೋಶಿ ತಿಳಿಸಿದರು. ವಾರ್ಷಿಕ 10 ಲಕ್ಷ ಟನ್ ಹಸಿರು ಜಲಜನಕ ಉತ್ಪಾದನೆ ಗುರಿಯನ್ನು ಭಾರತ ಹೊಂದಿದೆ. ಭಾರತ, ಜಪಾನ್ ಮತ್ತು ಸಿಂಗಾಪುರ ದೇಶಗಳು ಇಂಧನ ದಕ್ಷತೆ ಮತ್ತು ನವೀಕರಿ ಸಬಹುದಾದ ಇಂಧನ ತಂತ್ರಜ್ಞಾನಗಳಲ್ಲಿ ಸಹಯೋಗ ಸಾಧಿಸಿವೆ ಎಂದರು.

ಕಂಗನಾ 'ಎಮರ್ಜೆನ್ಸಿ' ಚಿತ್ರ ನಿಷೇಧಕ್ಕೆ ಒತ್ತಾಯ

ಚಂಡೀಗಢ: ಬಾಲಿವುಡ್ ನಟಿ-ನಿರ್ಮಾಪಕಿ ಕಂಗನಾ ರಣಾವತ್ ನಿರ್ಮಾಣ ಮತ್ತು ಅಭಿನಯದ 'ಎಮರ್ಜೆನ್ಸಿ' ಹಿಂದಿ ಚಿತ್ರದಲ್ಲಿ ಸಿಖ್ ಸಮುದಾಯದ ತೇಜೋವಧೆ ಮಾಡಲಾಗಿದೆ ಎಂದು

ಆರೋಪಿಸಿರುವ ಸಿಖ್ಖರ ಧಾರ್ಮಿಕ ಸಮಿತಿಗಳಾದ 'ಅಕಾಲ್ ತಖ್ತ್' ಮತ್ತು 'ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ'(ಎಸ್‌ಜಿಪಿಸಿ) ಸಿನಿಮಾವನ್ನು ನಿಷೇಧಿಸಬೇಕೆಂದು ಆಗ್ರಹಿಸಿವೆ.

ಎಸ್‌ಜಿಪಿಸಿ ಮುಖ್ಯಸ್ಥ ಹರ್ಜಿಂದರ್ ಸಿಂಗ್ ಧಾಮಿ ಅವರು ಗುರುವಾರ ಸುದ್ದಿಗೋಷ್ಠಿ ನಡೆಸಿ, ನಟಿ ಕಂಗನಾ ರಣಾವತ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿದರು. 'ಎಮರ್ಜೆನ್ಸಿ' ಸಿನಿಮಾ ಮೂಲಕ ಸಿಖ್ಖರ ಧಾರ್ಮಿಕ ಭಾವನೆಗಳನ್ನು ಕೆರಳಿಸಿರುವ ಸಂಸದೆ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಅವರು ಒತ್ತಾಯಿಸಿದರು.

'ಎಮರ್ಜೆನ್ಸಿ' ಹಿಂದಿ ಸಿನಿಮಾದಲ್ಲಿ ಉದ್ದೇಶಪೂರ್ವಕವಾಗಿಯೇ ಸಿಖ್ಖರನ್ನು ಪ್ರತ್ಯೇಕತಾವಾದಿ ಎಂದು ತಪ್ಪಾಗಿ ತೋರಿಸಲಾಗಿದೆ. ಸಮುದಾಯವನ್ನು ಅಪಮಾನಿಸುವ ಹೇಯ ಕೃತ್ಯ ಇದಾಗಿದೆ ಎಂದು ಆರೋಪಿಸಲಾಗಿದೆ. 1975ರಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರ ಸರಕಾರ ದೇಶದ ಮೇಲೆ 'ತುರ್ತು ಪರಿಸ್ಥಿತಿ' ಹೇರಿದ ಸಂದರ್ಭವನ್ನು ಆಧರಿಸಿ ಚಿತ್ರ ನಿರ್ಮಿಸಲಾಗಿದೆ. ಕಂಗನಾ ಮಾಜಿ ಪ್ರಧಾನಿ ಇಂದಿರಾ ಗಾಂಧಿಯಾಗಿ ನಟಿಸಿದ್ದಾರೆ. ಸಿನಿಮಾ ಸೆ.6ರಂದು ತೆರೆಕಾಣಲಿದ್ದು, ಸದ್ಯ ಟ್ರೇಲರ್ ಬಿಡುಗಡೆಯಾಗಿದೆ.

ಗಾಜಾ- ಈಜಿಪ್ಟ್ ಗಡಿ ಸೇನೆ ವಾಪಸ್‌ಗೆ ಒಪ್ಪಿಲ್ಲ

ಇಸ್ರೇಲ್ ಅಧ್ಯಕ್ಷ ನೆತನ್ಯಾಹು

ಇಸ್ರೇಲ್: ಹಮಾಸ್ ಉಗ್ರ ಸಂಘಟನೆ ಜತೆಗಿನ ಸಂಭಾವ್ಯ ಕದನವಿರಾಮದ ಒಪ್ಪಂದದಂತೆ ಗಾಜಾ-ಈಜಿಪ್ಟ್ ಗಡಿಯಲ್ಲಿನ ಸೇನಾಪಡೆ ವಾಪಸ್ ಕರೆಸಲು ಒಪ್ಪಿಗೆ ಸೂಚಿಸಲಾಗಿದೆ ಎಂಬ ಹೇಳಿಕೆಯನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಿರಾಕರಿಸಿದ್ದಾರೆ.

ಅಮೆರಿಕ ಮಧ್ಯಸ್ಥಿಕೆಯ ಕದನ ವಿರಾಮದ ಪ್ರಸ್ತಾವದಂತೆ ಒತ್ತೆಯಾಳು ಬಿಡುಗಡೆ ಹಾಗೂ ಗಾಜಾಪಟ್ಟಿ ಮತ್ತು ಈಜಿಪ್ಟ್ ಗಡಿಭಾಗದಲ್ಲಿನ ಸೇನೆ ಹಿಂಪಡೆಯಬೇಕೆಂಬ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಸೂಚನೆಯನ್ನು ಇಸ್ರೇಲ್ ಅಂಗೀಕರಿಸಿದೆ ಎಂದು ಇಸ್ರೇಲ್ ಟಿವಿ ವರದಿ ಬಿತ್ತರಿಸಿತ್ತು. ಆದರೆ, ಸೇನೆ ವಾಪಸ್‌ಗೆ ಒಪ್ಪಿಕೊಂಡಿಲ್ಲ ಎಂದು ನೆತನ್ಯಾಹು ಅವರೇ ಸ್ಪಷ್ಟಪಡಿಸಿರುವುದಾಗಿ ಗುರುವಾರ ವರದಿ ಪ್ರಕಟವಾಗಿದೆ. ಸೇನಾಪಡೆ ಹಿಂತೆಗೆತ ವರದಿ ಸತ್ಯಕ್ಕೆ ದೂರವಾಗಿದೆ. ಫಿಲಿಡೆಲ್ಫಿ ಕಾರಿಡಾರ್ ಮೇಲಿನ ಹಿಡಿತ ಬಿಟ್ಟುಕೊಡುವುದಕ್ಕೆ ಇಸ್ರೇಲ್ ಸಮ್ಮತಿಸಿಲ್ಲ ಎಂದು ನೆತನ್ಯಾಹು ಸ್ಪಷ್ಟವಾಗಿ ಹೇಳಿದ್ದಾರೆ ಎಂದು 'ಕ್ನಿನ್ ಹುವಾ' ಸುದ್ದಿಸಂಸ್ಥೆ ಗುರುವಾರ ವರದಿ ಬಿತ್ತರಿಸಿದೆ.

ಸಮಾಚಾರ ಸಣ್ಣದಲ್ಲ

ಒಂದು ವೃಕ್ಷ ನೆಡುವ ಅಭಿಯಾನಕ್ಕೆ ಚಾಲನೆ

ಕುಷ್ಟಗಿ: ತಾಲೂಕಿನ ಕಂದಕೂರ ಗ್ರಾಮದ ಹೊರವಲಯದಲ್ಲಿ 'ಏಕ್ ಪೇಡ್ ಮಾ ಕೆ ನಾಮ್' ಅಂದರೆ ತಾಯಿಯ ಹೆಸರಲ್ಲಿ ಒಂದು ವೃಕ್ಷ ಎಂಬ ವಿನೂತನ ಕಾರ್ಯಕ್ರಮಕ್ಕೆ ಕುಷ್ಟಗಿ ತಾಪಂ ಹಾಗೂ ಸಾಮಾಜಿಕ ಅರಣ್ಯ ಇಲಾಖೆ ಸಹಯೋಗದಲ್ಲಿ ಗುರುವಾರ ಚಾಲನೆ ನೀಡಲಾಯಿತು. ತಾಪಂ ಇಒ ಪಂಪಾಪತಿ ಹಿರೇಮಠ, ತಮ್ಮ ತಾಯಿ ಹೆಸರಲ್ಲಿ ಸಸಿ ನೆಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮದ ಪ್ರತಿಯೊಬ್ಬರೂ ತಮ್ಮ ತಾಯಿಯ ಸ್ಮರಣಾರ್ಥ ನೂರಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಮನವಿ ಮಾಡಿದರು. ಈ ವೇಳೆ ತಾಪಂ ಸಹಾಯಕ ನಿರ್ದೇಶಕ ನಿಂಗನಗೌಡ ವಿ. ಎಚ್., ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿ ಸತೀಶ್ ಎಲ್., ಸಿಬ್ಬಂದಿ ಶಿವಶಂಕರ, ಆದೇಶ್, ಚಿದಾನಂದ, ವಿಠ್ಠಲ್ ರಾವ್, ಆಕಾಶ್, ವಿರೂಪಾಕ್ಷಿ , ತಿಮ್ಮಣ್ಣ, ತಾಪಂ ಐಇಸಿ ಸಂಯೋಜಕ ಚಂದ್ರಶೇಖರ ಹಿರೇಮಠ್ ಹಾಗೂ ಊರಿನ ಗಣ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದು, ಹೊರವಲಯದ ರಸ್ತೆ ಬದಿಯಲ್ಲಿ ವಿವಿಧ ತಳಿಯ ಸಸಿಗಳನ್ನು ಪ್ರತ್ಯೇಕವಾಗಿ ನೆಟ್ಟು ಸಸಿ ಬೆಳಸಿ, ಪರಿಸರ ಕಾಪಾಡುವ ಸಂಕಲ್ಪ ಪ್ರತಿಜ್ಞೆಯನ್ನು ಮಾಡಿದರು.

ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ರಾಯಚೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2024-25ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ. ಯುವ ಸಬಲೀ ಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದ ಕ್ರೀಡಾ ಪೋಷಕರನ್ನು ಗುರುತಿಸಿ ಗೌರವಿಸಲು ಅವರಿಗೆ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲಾಗುತ್ತಿದ್ದು, ಆಸಕ್ತರು ನಿಗದಿತ ಅರ್ಜಿ ನಮೂನೆ ಹಾಗೂ ಇನ್ನಿತರ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಮಹಾತ್ಮಗಾಂಧಿ ಕ್ರೀಡಾಂಗಣವನ್ನು ಸಂಪರ್ಕಿಸಿ, ಇದೇ 2024ರ ಸೆ.10ರ ಸಂಜೆ 5.30ರೊಳಗಾಗಿ ದಾಖಲೆ ಪ್ರಮಾಣ ಪತ್ರಗಳೊಂದಿಗೆ ಪೂರ್ತಿ ಪ್ರಮಾಣದ ಅರ್ಜಿಗಳನ್ನು ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಪಾಲರ ವಿರುದ್ಧ ಕೈ ನಡೆ ಖಂಡನೀಯ

ರಾಯಚೂರು: ಮುಡಾ ಹಗರಣಕ್ಕೆ ಸಂಬಂಧಿಸಿ ದಂತೆ ಮುಖ್ಯಮಂತ್ರಿ ಸಿದ್ದರಾಮ ಯ್ಯ ವಿರುದ್ಧ ಪ್ರಾಸಿಕ್ಯೂಶನ್ ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆಯನ್ನು ಮತ್ತು ಅವರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ ರಾಜ್ಯ ಕಾಂಗ್ರೆಸ್ ಸರಕಾರ ವಿರುದ್ಧ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ನಗರದ ಡಾ.ಬಿಆರ್.ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ವಿರೋಧ ದೋರಣೆ ಅನುಸರಿಸಿದ ಕಾಂಗ್ರೆಸ್ ನಡೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು. ಬೃಹತ್ ಪ್ರತಿಭಟನೆ ಭಾರಿ ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡು ರಾಜ್ಯ ಸರಕಾರ ವಿರುದ್ಧ ದಿಕ್ಕಾರ ಪ್ರತಿಭಟನೆ ನಡೆಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಮತ್ತು ಶಾಸಕ ಶಿವರಾಜ ಪಾಟೀಲ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷರು ಮತ್ತು ಶಾಸಕ ಶಿವರಾಜ ಪಾಟೀಲ್ ಮಾತನಾಡಿ, ಮೂಡ ಪ್ರಕರಣಕ್ಕೆ ಸಂಬಂಧಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಸಂವಿಧಾನ ಅಡಿಯಲ್ಲಿ ಪ್ರಾಸಿಕ್ಯೂ ಶನ್ ಅನುಮತಿ ನೀಡಲಾಗಿದೆ. ಟೀಕಿಸುವ ಭರದಲ್ಲಿ ಅವರನ್ನು ಏಕವಚನದಲ್ಲಿ ನಿಂದಿಸಿ ಸಂವಿಧಾನಿಕ ಹುದ್ದೆಗೆ ಅಗೌರವ ತಂದಿದ್ದಾರೆ.

ಪಶ್ಚಿಮ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

ರಾಯಚೂರು: ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಸದೃಢತೆ ಸಾಧ್ಯವಾಗಲಿದ್ದು, ಕ್ರೀಡಾ ಮನೋ ಭಾವನೆಯಿಂದ ಪ್ರತಿಯೊಬ್ಬರು ಪಾಲ್ಗೊಳ್ಳುವ ಮೂಲಕ ಸೋಲು ಗೆಲುವು ಸಮಾನವಾಗಿ ಸ್ವೀಕರಿಸಬೇಕು ಎಂದು ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ರವೀಂದ್ರ ಜಲ್ದಾರ್ ಹೇಳಿದರು. ಅವರು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾ ಯತ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ ಸಹಯೋ ಗದಲ್ಲಿ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರತಿಯೊಬ್ಬ ಕ್ರೀಡಾಪಟುಗಳು ಶಿಸ್ತು ಬದ್ಧವಾಗಿ ಕ್ರೀಡೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸ ಬೇಕೆಂದರು. ಕ್ರೀಡಾ ಮನೋಭಾವದಿಂದ ಭಾಗವಹಿಸಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ವಿಭಾಗ, ರಾಜ್ಯ ಮಟ್ಟಕ್ಕೆ ಆಯ್ಕೆ ಯಾಗಿ ಜಿಲ್ಲೆಗೆ ಹೆಸರು ತರಬೇಕೆಂದು. ಕ್ರೀಡೆಯಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ನೀಡಬಾರದು ಎಂದರು.

{ಡಿ.ಕೆ.ಶಿವಕುಮಾರ್} ಉಪ ಮುಖ್ಯಮಂತ್ರಿ

ಯಾವುದೇ ಆಕ್ಷೇಪ ವ್ಯಕ್ತಪಡಿಸಿದರೂ ನಗರದಲ್ಲಿ ನೀರಿನ ದರ ಏರಿಕೆ ಮಾಡುತ್ತೇವೆ. ಹಾಗೆಂದು, ಎಲ್ಲರಿಗೂ ನೀರಿನ ದರ ಹೆಚ್ಚಳ ಮಾಡುವುದಿಲ್ಲ. ಎಷ್ಟು ಏರಿಕೆ ಮಾಡಬೇಕೆಂದು ಇನ್ನೂ ನಿರ್ಧರಿಸಿಲ್ಲ. ರಾಜಧಾನಿಯ 1.40 ಕೋಟಿ ಜನಸಂಖ್ಯೆಗೆ ನೀರನ್ನು ಒದಗಿಸಲೇಬೇಕು. ಇದಕ್ಕಾಗಿ ಸಾಲ ಮಾಡಿ, ಸಂಪರ್ಕ ಜಾಲವನ್ನು ಹೆಚ್ಚಿಸದ ಹೊರತು ನೀರು ಪೂರೈಸಲು ಕಷ್ಟವಾಗುತ್ತದೆ. ದರ ಹೆಚ್ಚಳ ಮಾಡದಿದ್ದರೆ ನೀರು ಸರಬರಾಜು ಕಂಪನಿ ಉಳಿಯುವುದಿಲ್ಲ.

10 ಲಕ್ಷಕ್ಕೂ ಹೆಚ್ಚು ಮೌಲ್ಯದ ವಿದೇಶಿ ಸಸಿಗಳ ಖರೀದಿಗೆ ನೋಂದಣಿ | ಸುಮಾರು 30 ಲಕ್ಷ ರು. ವಹಿವಾಟು

ಸಸ್ಯ ಸಂತೆ, ತೋಟಗಾರಿಕೆ ಅಭಿಯಾನಕ್ಕೆ ತೆರೆ

ಕೊಪ್ಪಳ: ನಗರದ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರ ಕಚೇರಿ ಆವರಣದಲ್ಲಿ ಸ್ವಾತಂತ್ರ್ಯ ದಿನ ಹಾಗೂ ತೋಟಗಾರಿಕೆ ಪಿತಾಮಹ ಡಾ. ಎಂ.ಎಚ್. ಮರೀಗೌಡ ಅವರ ಜನ್ಮ ದಿನದ ಅಂಗವಾಗಿ ಆ. 15ರಿಂದ 6 ದಿನ ಆಯೋಜಿಸಿದ್ದ '''ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನ-2024' ತೆರೆ ಕಂಡಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕಾರ್ಯಕ್ರಮದ ಮೂಲಕ 30 ಲಕ್ಷಕ್ಕೂ ಹೆಚ್ಚಿನ ವಹಿವಾಟು ಆಗಿದ್ದು, ತೋಟಗಾರಿಕೆ ಇಲಾಖೆ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಸಸ್ಯಸಂತೆಯಲ್ಲಿ ಸುಮಾರು 20 ಲಕ್ಷಕ್ಕೂ ಹೆಚ್ಚಿನ ಮೊತ್ತದ ಮಾವು, ಪೇರಲ, ತೆಂಗು, ನುಗ್ಗೆ ಹಾಗೂ ತೋಟಗಾರಿಕೆ ಕ್ಷೇತ್ರದಲ್ಲಿ ಉತ್ಪಾದಿಸಿದ ತರಕಾರಿ ಸಸಿಗಳು, ಹೂವಿನ, ಅಲಂಕಾರಿಕ ಸಸಿಗಳು, ಎರೆಹುಳು ಗೊಬ್ಬರ, ಬೇವಿನ ಹಿಂಡಿ, ಎರೆಜಲ ಹಾಗೂ ವಿವಿಧ ಪರಿಕರಗಳನ್ನು ಖರೀದಿಸಲು ರೈತರು ಹಾಗೂ ಸಾರ್ವಜನಿಕರು ಬೇಡಿಕೆ ಸಲ್ಲಿಸಿದ್ದಾರೆ. ಇನ್ನು 30 ಲಕ್ಷಕ್ಕೂ ಹೆಚ್ಚಿನ ಸಸಿಗಳ ಹಾಗೂ ವಿವಿಧ ಪರಿಕರಗಳ ಬೇಡಿಕೆಯ ವಹಿವಾಟು ಮಾಡುವ ಮೂಲಕ ಸಸ್ಯಸಂತೆಯು ಮುಕ್ತಾಯವಾಗಿದೆ.

ಸಸ್ಯಸಂತೆ ಮತ್ತು ತೋಟಗಾರಿಕೆ ಅಭಿಯಾನ-2024 ಕಾರ್ಯಕ್ರಮವನ್ನು ವಿದೇಶಿ ಹಣ್ಣಿನ ಸಸಿಗಳ ಪರಿಚಯ ಮಾಡುವ ಮೂಲಕ ಉದ್ಘಾಟಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಾಕಷ್ಟು ಹೊರ ಜಿಲ್ಲೆ ಹಾಗೂ ಸ್ಥಳಿಯ ರೈತರು ಭಾಗವಹಿಸಿ 64ಕ್ಕೂ ಹೆಚ್ಚಿನ ವಿದೇಶಿ ಹಣ್ಣಿನ ಸಸಿಗಳ ಪರಿಚಯ ಮಾಡಿಕೊಂಡು ತಾವು ಸಹ ತಮ್ಮ ತೋಟದಲ್ಲಿ ಬೆಳೆಯುವ ಬಗ್ಗೆ ಆಸಕ್ತಿ ತೋರಿದರು. ವಿದೇಶಿ ಸಸಿಗಳಲ್ಲಿ ಮುಖ್ಯವಾಗಿ ಮಿಯಾಜಾಕಿ ಮಾವಿನ ಸಸಿಗೆ ಸಾಕಷ್ಟು ಬೇಡಿಕೆ ಬಂದು ಜನರು ತಮ್ಮ ತೋಟದಲ್ಲಿ ಹಾಗೂ ಮನೆಯ ಹತ್ತಿರ ಬೆಳೆಯಲು 4000ಕ್ಕೂ ಹೆಚ್ಚಿನ ಸಸಿ ಖರೀದಿಸಲು ತಮ್ಮ ಹೆಸರು ನೋಂದಾಯಿಸಿದರು. ಈ ಮೇಳದಲ್ಲಿ 2000ಕ್ಕೂ ಹೆಚ್ಚಿನ ಅವಕಾಡೋ ಹಣ್ಣಿನ ಗಿಡ ಖರೀದಿಸಲು ತಮ್ಮ ಹೆಸರು ನೋಂದಾಯಿಸಿದರು. ಈ ಮೇಳದಲ್ಲಿ ಮೆಕಡೋಮಿಯಾ, ಮ್ಯಾಂಗೋಸ್ಟಿನ್, ಲಿಚ್ಚಿ, ವಿದೇಶಿ ಹಲಸು, ಚೆರ್ರಿ ಮುಂತಾದ ವಿದೇಶಿ ಹಣ್ಣಿನ ತಳಿಗಳ ಸಸಿಗಳು ಸೇರಿ 10 ಸಾವಿರಕ್ಕೂ ಹೆಚ್ಚಿನ ವಿದೇಶಿ ಹಣ್ಣಿನ 10.00 ಲಕ್ಷಕ್ಕೂ ಹೆಚ್ಚಿನ ಮೊತ್ತದ ಸಸಿಗಳನ್ನು ತಮ್ಮ ತೋಟ ಮನೆಯ ಮುಂದೆ ನಾಟಿ ಮಾಡಲು ರೈತರು ಹಾಗೂ ಸಾರ್ವಜನಿಕರು ಸಸಿಗಳನ್ನು ಖರೀದಿಸಲು ನೋಂದಾಯಿಸಿರುತ್ತಾರೆ.

ಕೊಪ್ಪಳದ ತೋಟಗಾರಿಕೆ ಇಲಾಖೆ ಆವರಣದಲ್ಲಿ ಸಸ್ಯಸಂತೆಗೆ ಸಚಿವ ಶಿವರಾಜ ತಂಗಡಗಿ ಭೇಟಿ ನೀಡಿದ್ದರು.

> **ಸಸ್ಯ ಸಂತೆ ಮತ್ತು ತೋಟಗಾರಿಕೆ ಅಭಿಯಾನ 6 ದಿನ ನಡೆಯಿತು. ಹೊರ ಜಿಲ್ಲೆಯ ರೈತರು ಸೇರಿ ಸುಮಾರು 8 ಸಾವಿರ ರೈತರು ಸಸ್ಯಸಂತೆಗೆ ಭೇಟಿ ನೀಡಿದ್ದಾರೆ. ತೋಟಗಾರಿಕೆಯ ಹೊಸ ಆವಿಷ್ಕಾರ ಪರಿಚಯ ಮಾಡುವಲ್ಲಿ ಅಭಿಯಾನ ಯಶಸ್ವಿ ಆಗಿದೆ.**
> **-ಕೃಷ್ಣ ಸಿ ಉಕ್ಕುಂದ**, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ

ಇಲಾಖೆ ಸಸ್ಯಾಗಾರದಲ್ಲಿ ಉತ್ಪಾದಿಸಿದ ಹಣ್ಣು ಸಸಿಗಳಾದ ಮಾವು, ಲಿಂಬೆ, ತೆಂಗು, ಪೇರಲದ ವಿವಿಧ ತಳಿ ಸೇರಿ ಸುಮಾರು 2.3 ಲಕ್ಷ ಸಸಿ ಮಾರಾಟವಾಗಿದ್ದು ಗಮನಾರ್ಹ. ಇದರ ಜೊತೆಗೆ ಎರೆಹುಳು ಗೊಬ್ಬರ 10 ಟನ್, ಎರೆಜಲ 3 ಸಾವಿರ ಲೀ. ಮತ್ತು ಬೇವಿನ ಪುಡಿ 4 ಸಾವಿರ ಕೆ.ಜಿ. ಮಾರಾಟ ಮಾಡಲಾಯಿತು. ಹಾಗೂ 500 ಕೆಜಿ. ಜೈವಿಕ ಪರಿಕರ ಮಾರಾಟ ಮಾಡಲಾಗಿದೆದೆ.

ಬೆಳೆ ಪ್ರಾತ್ಯಕ್ಷಿಕೆ: ಕಾರ್ಯಕ್ರಮದಲ್ಲಿ ವಿವಿಧ ಪ್ರಾತ್ಯಕ್ಷಿಕೆಯನ್ನು ಸಾವಿರಾರು ರೈತರು ವೀಕ್ಷಿಸಿ ಮಾಹಿತಿ ಪಡೆದರು. ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷಿಕೆ ಮಾಡಲಾಗಿದ್ದು, ರೈತ ಸಮಗ್ರ ಕೃಷಿ ಚೇತನ ಪ್ರಾತ್ಯಕ್ಷಿಕೆಯಲ್ಲಿ ಇಸ್ರೇಲ್ ಮಾದರಿ ಮತ್ತು ಸಮಗ್ರ ಕೃಷಿ ಅಭಿವೃದ್ಧಿ ಪಡಿಸಿದ ನಿಡಶೇಷಿ ತೋಟಗಾರಿಕೆ ಕ್ಷೇತ್ರದ ಪ್ರಾತ್ಯಕ್ಷಿಕೆ ಪ್ರದರ್ಶಿಸಲಾಯಿತು. ಇದರಲ್ಲಿ ಹನಿ ನೀರಾವರಿ ಮತ್ತು ರಸಾವರಿ ಪದ್ಧತಿ, ಮೀನುಗಾರಿಕೆ, ಹೈನುಗಾರಿಕೆ, ಕುರಿ ಸಾಗಾಣಿಕೆ, ಜೇನು ಸಾಕಾಣಿಕೆ, ಮಳೆ ನೀರು ಕೊಯ್ಲು ಮಾದರಿ, ಎರೆಹುಳು ಮತ್ತು ಎರೆಜಲ ಉತ್ಪಾದನಾ ಘಟಕ, ಮಾದರಿ ಕೈತೋಟ, ತಾರಸಿ ತೋಟ, ವರ್ಟಿಕಲ್ ಗಾರ್ಡನ್ ಮತ್ತು ಹೈಡ್ರೋಪೋನಿಕ್ ಪ್ರಾತ್ಯಕ್ಷಿಕೆ ಗಮನ ಸೆಳೆದವು.

ರೈತರಿಗೆ ಭೂದೃಶ್ಯ (ಲಾನ್) ನಿರ್ಮಿಸಿದರ ಬಗ್ಗೆ ಮತ್ತು ವಿವಿಧ ಹಾಸು ಹುಲ್ಲಿನ ಬಗ್ಗೆ (ಬರ್ಮೋಡಾ) ಮಾಹಿತಿ ನೀಡಲಾಯಿತು. ಮನೆಯಲ್ಲಿ ದೊರೆಯುವ ವಿವಿಧ ಅನುಪಯುಕ್ತ ಪ್ಲಾಸ್ಟಿಕ್, ರಬ್ಬರ್, ಕಬ್ಬಿಣ ಹಾಗೂ ಇತರೇ ವಸ್ತುಗಳಿಂದ ತಯಾರಿಸಿದ ಕುಂಡಲಗಳಲ್ಲಿ ಅಲಂಕಾರಿಕ ಮತ್ತು ತರಕಾರಿ ಸಸ್ಯ ಬೆಳೆಯುವ ವಿಧಾನವನ್ನು ಪ್ರದರ್ಶಿಸಲಾಯಿತು. ಇದರಿಂದ ಅನೇಕ ಜನ ಮೆಚ್ಚುಗೆ ವ್ಯಕ್ತಪಡಿಸಿದರು.

ಮಸ್ಕಿ ಡ್ಯಾಂಗೆ ಮಾಜಿ ಶಾಸಕರಿಂದ ಬಾಗಿನ

ಮಸ್ಕಿ: ಕಲ್ಯಾಣ ಕರ್ನಾಟಕ ಈ ಭಾಗದ ರೈತರ ಜೀವನಾಡಿ ಮಸ್ಕಿ ಜಲಾಶಯ ಭರ್ತಿಯಾಗಿದ್ದು, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಅವರು ಬೆಂಬಲಿಗರೊಂದಿಗೆ ತೆರಳಿ ಬಾಗಿನ ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಅಧಿಕಾರ ಬಂದಾಗಿನಿಂದ ಗ್ಯಾರಂಟಿ ಯೋಜನೆ ಕೊಡುವುದರಲ್ಲಿ ಕಾಲಹರಣ ಮಾಡುತ್ತಿದ್ದಾರೆ ಹೊರತು ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿಲ್ಲ, ಬಡ ಜನರಿಗೆ ಸೇರಬೇಕಾದ ವಾಲ್ಮೀಕಿ ನಿಗಮದ ಕೋಟ್ಯಾಂತರ ರು. ಹಣವನ್ನು ಆಂಧ್ರದ ಬ್ಯಾಂಕ್ ಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡಿ ಲೂಟಿ ಮಾಡಿದ್ದಾರೆ. ಮುಡಾ ಹಗರಣದಲ್ಲಿ ಪಾಲುದಾರರಾಗಿದ್ದಾರೆ, ಇಷ್ಟೆಲ್ಲ ಭ್ರಷ್ಟಾಚಾರ ನಡೆಸಿದರೂ ಕಾಂಗ್ರೆಸ್ ಸಮರ್ಥನೆ ಮಾಡಿಕೊಳ್ಳುತ್ತಿದೆ, ರಾಜ್ಯದ ಸಿಎಂ ಸಿದ್ದರಾಮಯ್ಯನವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿ ಎಂದು ಗುಡುಗಿದರು. ನನ್ನ ಅಧಿಕಾರದ ಅವಧಿಯಲ್ಲಿ ಮಸ್ಕಿ ಜಲಾಶಯ ಎಡದಂಡೆ, ಬಲದಂಡೆ ಕಾಲುವೆ ಆಧುನೀಕರಣಗೊಳಿಸಲು 54ಕೋಟಿ ರು. ಮಂಜೂರು ಆಗಿತ್ತು, ಕಾಮಗಾರಿಯಲ್ಲಿ ಗುಣಮಟ್ಟತೆ ಕಂಡು ಬಂದಿಲ್ಲ ಕಳಪೆ ಮಟ್ಟದಿಂದ ಕೂಡಿದೆ ಎಂದು ಆರೋಪಿಸಿದರು. ಮಳೆ ಉತ್ತಮವಾಗಿ ಮಸ್ಕಿ ಜಲಾಶಯ ಭರ್ತಿ ಆಗಿದ್ದು, ರೈತರು ಎರಡು ಬೆಳೆ ಬೆಳೆಯಲು ಅನುಕೂಲ ಮಾಡಬೇಕೆಂದು ಹೇಳಿದರು.

ಮಸ್ಕಿ ಜಲಾಶಯಕ್ಕೆ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಅವರು ಬುಧವಾರ ಬಾಗಿನ ಸಲ್ಲಿಸಿದರು.

ಈ ವೇಳೆ ಮುಖಂಡ ಮಹಾದೇವಪ್ಪಗೌಡ ಪೊಲೀಸ್ ಪಾಟೀಲ, ಬಿಜೆಪಿ ಮಂಡಲ ಅಧ್ಯಕ್ಷ ಶರಣ ಬಸವ ಸೊಪ್ಪಿಮಠ, ಅಪ್ಪಾಜಿಗೌಡ ಕಾರ್ಲಕುಂಟಿ, ಡಾ. ಬಿ.ಹೆಚ್ ದಿವಟರ್, ಪಂಪಣ್ಣ ಗುಂಡಳ್ಳಿ, ಸಿದ್ದಣ್ಣ ಹೂವಿನಭಾವಿ ಮೌನೇಶ ಮುರಾರಿ, ಮಲ್ಲಣ್ಣ ಬ್ಯಾಳಿ, ಜನಾರ್ಧನ ಪತ್ತಾರ, ಅಭಿಜೀತ್ ಪಾಟೀಲ, ಡಾ. ಸಂತೋಷ ಪತ್ತಾರ, ಅಮರೇಶ ಅಡವಿಭಾವಿ ಸೇರಿದಂತೆ ಅನೇಕ ಮುಖಂಡರು ಭಾಗಿಯಾಗಿದ್ದರು.

ತಾಯಿ ಹೆಸರಿನಲ್ಲಿ ಗಿಡ ನೆಟ್ಟು ಪೋಷಿಸಿ

ಸಿಂಧನೂರು: ತಾಲೂಕಿನ ದೇವರಗುಡಿ ಮಲ್ಲಾಪೂರ ರಸ್ತೆಯ ಅಕ್ಕಪಕ್ಕದಲ್ಲಿ ಕರ್ನಾಟಕ ಸರಕಾರ ಜಿಲ್ಲಾ ಪಂಚಾಯತ್ , ಸಾಮಾಜಿಕ ಅರಣ್ಯ ವಿಭಾಗ , ತಾಲೂಕು ಪಂಚಾಯತ್, ಸಾಮಾಜಿಕ ಅರಣ್ಯ ವಲಯ ಹಾಗೂ ವನಸಿರಿ ಫೌಂಡೇಶನ್ (ರಿ) ಸಂಯುಕ್ತಾಶ್ರಯದಲ್ಲಿ ತಾಯಿ ಹೆಸರಲ್ಲಿ ಒಂದು ಗಿಡ ನೆಡಿ ಅಭಿಯಾನ ಕಾರ್ಯಕ್ರಮ ನೆರವೇರಿತು.

> **ದೇಶದ ಪ್ರಧಾನಮಂತ್ರಿಗಳು ಕೈಗೊಂಡ ತಾಯಿಗಾಗಿ ಒಂದು ಗಿಡ ನೆಡುವ ಅಭಿಯಾನ ತುಂಬಾ ಒಳ್ಳೆಯ ಕಾರ್ಯಕ್ರಮವಾಗಿದ್ದು, ಪ್ರತಿಯೊಬ್ಬರೂ ಇಂತಹ ಕಾರ್ಯಗಳಲ್ಲಿ ಭಾಗವಹಿಸಬೇಕು ಮತ್ತು ಪ್ರತಿಯೊಬ್ಬರೂ ತಮ್ಮ ತಾಯಿಯ ಹೆಸರಲ್ಲಿ ಒಂದೊಂದು ಗಿಡನೆಟ್ಟು ಪಾಲನೆ ಪೋಷಣೆ ಮಾಡಬೇಕು ಇದರ ಮೂಲಕ ತಾಯಿಯ ಋಣ ತೀರಿಸಲು ಮುಂದಾಗಬೇಕು.**
> **-ಅಮರೇಗೌಡ ಮಲ್ಲಾಪೂರ**, ವನಸಿರಿ ಫೌಂಡೇಶನ್ ಸಂಸ್ಥಾಪಕ

ತಾಯಿಯ ಹೆಸರಲ್ಲಿ ಒಂದು ಗಿಡ ನೆಡುವ ಅಭಿಯಾನಕ್ಕೆ ಚಂದ್ರಶೇಖರ್ ಪಾಟೀಲ್ ಚಾಲನೆ ನೀಡಿ ಮಾತನಾಡಿ, ತಾಯಿಯ ಅಭಿಯಾನ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು. ಪ್ರತಿಯೊಬ್ಬ ನಾಗರಿಕರು ತಮ್ಮ ತಾಯಿಯ ಹೆಸರಲ್ಲಿ ಒಂದು ಗಿಡ ನೆಟ್ಟು ಬೆಳಸುವಂತೆ ನಮ್ಮ ದೇಶದ ಪ್ರಧಾನ ಮಂತ್ರಿಗಳ ಘೋಷವಾಕ್ಯವಾಗಿದೆ ಅದನ್ನು ಎಲ್ಲರೂ ಪಾಲಿಸುವಂತಾಗಬೇಕು ಮತ್ತು ಇಂತಹ ಕಾರ್ಯಗಳನ್ನು ವನಸಿರಿ ಫೌಂಡೇಶನ್ ನಂತಹ ಸಂಘ ಸಂಸ್ಥೆಗಳು ಮುಂಚೂಣಿಯಲ್ಲಿ ನಿಂತು ಕಾರ್ಯಗತಗೊಳಿಸುತ್ತಿರುವುದು ತುಂಬಾ ಶ್ಲಾಘನೀಯ ಎಂದರು.

ಸಿಂಧನೂರು ತಾಲೂಕಿನ ದೇವರಗುಡಿ ಮಲ್ಲಾಪೂರ ರಸ್ತೆಯ ಬಳಿ ತಾಯಿಯ ಹೆಸರಲ್ಲಿ ಒಂದು ಗಿಡ ನೆಡುವ ಅಭಿಯಾನಕ್ಕೆ ಚಂದ್ರಶೇಖರ್ ಪಾಟೀಲ್ ಚಾಲನೆ ನೀಡಿದರು.

ಈ ವೇಳೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ,ಸಮಾಜಿಕ ಅರಣ್ಯ ಅಧಿಕಾರಿ ಕೆ, ವಿ ರುದ್ರಮುನಿ, ಪರಿಸರ ಪ್ರೇಮಿ ರಾಜ್ಯ ಪ್ರಶಸ್ತಿ ಪುರಸ್ಕತರು ಅಮರೇಗೌಡ ಮಲ್ಲಾಪುರ, ದೇವರಗುಡಿ ಗ್ರಾಮ ಪಂಚಾಯತಿ ಅಧಿಕಾರಿ ಸಿದ್ದಪ್ಪ.ಅರಣ್ಯ ಇಲಾಖೆ ಅಧಿಕಾರಿಗಳು ಸಿಬ್ಬಂದಿಗಳು ತಾಲೂಕು ಪಂಚಾಯತಿ ಅಧಿಕಾರಿಗಳೂ ಸಿಬ್ಬಂದಿಗಳು ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು,ವನಸಿರಿ ಫೌಂಡೇಶನ್ ಅಧ್ಯಕ್ಷರು ಸದಸ್ಯರು,ದೇವರಗುಡಿ ಹಾಗೂ ಮಲ್ಲಾಪೂರ ಗ್ರಾಮದ ಹಿರಿಯರು ಯುವಕರು ಭಾಗವಹಿಸಿದ್ದರು.

ಪತ್ರಕರ್ತನ ಮೇಲೆ ದೌರ್ಜನ್ಯ: ಕ್ರಮಕ್ಕೆ ಮನವಿ

ಕೊಪ್ಪಳ: ಶಿವಮೊಗ್ಗ ಜಿಲ್ಲೆ ತೀರ್ಥಗಳ್ಳಿಯಲ್ಲಿ ಪತ್ರಕರ್ತನ ವಿ.ನಿರಂಜನ ಮೇಲೆ ಪೊಲೀಸರಿಂದ ನಡೆದ ದೌರ್ಜನ್ಯ ಖಂಡಿಸಿ, ಕೊಪ್ಪಳ ಮೀಡಿಯಾ ಕ್ಲಬ್ ಸದಸ್ಯರು ಕೊಪ್ಪಳ ಜಿಲ್ಲಾಧಿಕಾರಿಗೆ ಗುರುವಾರ ಮನವಿ ಸಲ್ಲಿಸಿದರು.

ತೀರ್ಥಹಳ್ಳಿ ಪೊಲೀಸ್ ಇನ್ಸ್‌ಪೆಕ್ಟರ್ ಅಶ್ವತ್ಥಗೌಡ ಟ್ರಾಫಿಕ್ ನಲ್ಲಿ ಸಾರ್ವಜನಿಕರಿಗೆ ಅವಾಚ್ಯ ಶಬ್ದದಿಂದ ನಿಂದನೆ ಮಾಡುವುದನ್ನು ವಿಡಿಯೋ ಮಾಡಿದ್ದಾರೆ. ಇದನ್ನು ಗಮನಿಸಿದ ಅಶ್ವತ್ಥಗೌಡ ವಾಹನ ಚಾಲಕ ಪತ್ರಕರ್ತನನ್ನು ಪೊಲೀಸ್ ಠಾಣೆಗೆ ಕರೆದೊಯ್ದು ದೌರ್ಜನ್ಯ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲಾ ಎಸ್ಪಿ, ತೀರ್ಥಹಳ್ಳಿಯ ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿದ್ದ ವೇಳೆಯೇ ಘಟನೆ ನಡೆದಿದೆ. ವೀಡಿಯೋ ಡಿಲೀಟ್ ಮಾಡುವಂತೆ ಇನ್ಸ್‌ಪೆಕ್ಟರ್, ಜೀಪು ಚಾಲಕ ಬೆದರಿಕೆ ಹಾಕಿದ್ದಾರೆ. ಬಳಿಕ ಠಾಣೆಗೆ ಕರೆದೊಯ್ದು ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದಾರೆ. ದೈಹಿಕ ಹಲ್ಲೆಗೂ ಮುಂದಾಗಿದ್ದಾರೆ ಎಂದು ನಿರಂಜನ ದೂರು ನೀಡಿದ್ದಾರೆ. ಬಲವಂತವಾಗಿ ಮೊಬೈಲ್ ಕಸಿದುಕೊಂಡು ವಿಡಿಯೋ ಡಿಲೀಟ್ ಮಾಡಿದ್ದು, ಶಿಕ್ಷಾರ್ಹ. ಕೂಡಲೇ ಇನ್ಸ್ಪೆಕ್ಟರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮೀಡಿಯಾ ಕ್ಲಬ್ ಸದಸ್ಯರು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಪರ್ತಕರ್ತರ ಮೇಲೆ ರಾಜ್ಯಾದ್ಯಂತ ಇಂಥ ಘಟನೆ ನಡೆಯುತ್ತಿವೆ. ಇದರಿಂದ ಪತ್ರಕರ್ತರ ಹಿತ ರಕ್ಷಣಾ ಕಾಯ್ದೆ ಜಾರಿಗೆ ತರಬೇಕು. ಪ್ರಕರಣ ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥ ಪೊಲೀಸ್ ಅಧಿಕಾರಿ ವಿರುದ್ಧ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೀಡಿಯಾ ಕ್ಲಬ್ ಅಧ್ಯಕ್ಷ ರವೀಂದ್ರ ವಿ.ಕೆ, ಕಾರ್ಯದರ್ಶಿ ದತ್ತು ಕಮ್ಮಾರ, ಖಜಾಂಚಿ ಅನೀಲ ಬಾಚನಹಳ್ಳಿ, ಸದಸ್ಯರಾದ ಬಸವರಾಜ ಶೀಲವಂತರ, ಸೋಮರೆಡ್ಡಿ ಅಳವಂಡಿ, ದೇವು ದಾಗನೂರು, ಮಂಜುನಾಥ ಗಂಗಾವತಿ, ಬಸವರಾಜ ಕರುಗಲ್, ಸಂಜಯ್ ಚಿಕ್ಕಮಠ, ಪ್ರಮೋದ, ವಿನಾಯಕ ಇದ್ದರು.

ತಾಯಿಯ ಹೆಸರಲ್ಲಿ ವೃಕ್ಷ ಅಭಿಯಾನದಲ್ಲಿ ಪಿಡಿಒ ಮನವಿ

ಎಲ್ಲರೂ ಗಿಡ ನೆಡುವ ಸಂಕಲ್ಪ ಮಾಡಿ

ಕಾರಟಗಿ: ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಅದಕ್ಕಾಗಿ ಪ್ರತಿಯೊಬ್ಬರೂ ತಾಯಿ ಹೆಸರಿನಲ್ಲಿ ಒಂದು ಸಸಿ ನೆಡುವ ಸಂಕಲ್ಪ ಮಾಡಬೇಕು ಎಂದು ಮೈಲಾಪುರ ಗ್ರಾಪಂ ಪಿಡಿಒ ಸೈಯದ್ ಜೆ.ಬಿ ಹೇಳಿದರು.

> **ದಿನೇ ದಿನೇ ಪರಿಸರ ನಾಶವಾಗಿ ತಾಪಮಾನ ಏರಿಕೆಯಂತಹ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಹಾಗಾಗಿ ಭೂಮಿ ತಾಯಿಯನ್ನು ಕಾಪಾಡುವುದು ಅತಿ ಅವಶ್ಯಕವಾಗಿದೆ. ಮುಂದಿನ ಪೀಳಿಗೆಗೆ ಸುಂದರವಾದ ಪರಿಸರವನ್ನು ಉಳಿಸುವ ಬಗ್ಗೆ ಯೋಚಿಸಬೇಕು. ಇದಕ್ಕೆಲ್ಲ ಸಸಿ ನೆಡುವುದೊಂದೇ ಪರಿಹಾರವಾಗಿದೆ.**
> **-ಶಿವಶರಣ ಕೋಳಿ**, ಅರಣ್ಯ ಇಲಾಖೆಯ ಗಸ್ತು ಪಾಲಕ

ತಾಲೂಕಿನ ಸೋಮನಾಳ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ತಾಪಂ ಹಾಗೂ ಸಾಮಾಜಿಕ ವಲಯ ಅರಣ್ಯ ಇಲಾಖೆ ಹಾಗೂ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ತಾಯಿ ಹೆಸರಿನಲ್ಲಿ ಒಂದು ವೃಕ್ಷ ಅಭಿಯಾನಕ್ಕೆ ಚಾಲನೆ ನೀಡಿ ಗುರುವಾರ ಮಾತನಾಡಿದರು.

ನಮ್ಮ ದೇಶದ ಪ್ರಧಾನ ಮಂತ್ರಿ ಅವರು ಪ್ರತಿಯೊಬ್ಬರೂ ಪರಿಸರವನ್ನು ಬೆಳೆಸಿ, ಸಂರಕ್ಷಣೆ ಮಾಡುವ ಉದ್ದೇಶದಿಂದ ಪರಿಸರ ದಿನದ ಅಂಗವಾಗಿ ತಾಯಿಯ ಹೆಸರಿನಲ್ಲಿ ಒಂದು ವೃಕ್ಷ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿನ್ನಲೆಯಲ್ಲಿ ಪ್ರತಿಯೊಬ್ಬರೂ ತಾಯಿಯ ಹೆಸರಿನಲ್ಲಿ ಒಂದು ವೃಕ್ಷ ನೆಡುವ ಕಾರ್ಯಕ್ರವನ್ನು ದೇಶದೆಲ್ಲೆಡೆ ಹಮ್ಮಿಕೊಳ್ಳಲಾಗಿದೆ. ಬರೀ ಕಾರ್ಯಕ್ರಮಗಳ ಮಾಡಿ ಸಸಿಗಳನ್ನ ನೆಟ್ಟರೆ ಸಾಲದು ಅವುಗಳನ್ನು ಪೋಷಿಸಿ ಬೆಳಿಸಿ ದೊಡ್ಡ ಮರಗಳನ್ನಾಗಿ ಮಾಡಬೇಕು. ನಾವೆಲ್ಲರೂ ತಾಯಿಯ ಮೇಲಿನ ಪ್ರೀತಿ ಮತ್ತು ಗೌರವದ ಸಂಕೇತವಾಗಿ ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದರು.

ಕೊಪ್ಪಳ ತಾಲೂಕು ಸೋಮನಾಳ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ತಾಯಿ ಹೆಸರಿನಲ್ಲಿ ಒಂದು ವೃಕ್ಷ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಗ್ರಾಪಂ ಕಾರ್ಯದರ್ಶಿ ಸಂದೀಪ, ತಾಲೂಕು ಪಂಚಾಯತ ಐಇಸಿ ಸಂಯೋಜಕ ಸೋಮನಾಥ ಗೌಡರ್, ಗ್ರಾಮದ ಪ್ರಮುಖರಾದ ಬಸವರಾಜ್ ತಳವಾರ, ರಾಜಪ್ಪ ಭಾವಿಕಟ್ಟಿ, ಶಾಲಾ ಮುಖ್ಯೋಪಾಧ್ಯಾಯ ಬೆಟ್ಟದಪ್ಪ ಕುಂಬಾರ್, ಶಿಕ್ಷಕರಾದ ರಮೇಶ್ ಖ್ಯಾಡೇದ್ , ಗ್ರಾ.ಪಂ ಸಿಬ್ಬಂದಿಗಳಾದ ಲಿಂಗರಾಜ್, ನಾಗರಾಜ್, ಸೇರಿ ನರೇಗಾ ಕೂಲಿಕಾರರು ಇದ್ದರು.

ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆಗೆ ಖಂಡನೆ

ಜಿಲ್ಲಾ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ಕೊಪ್ಪಳ: ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿರುವ ವ್ಯಕ್ತಿಗಳ ವಿರುದ್ಧ ಹಾಗೂ ಪೂರ್ವಯೋಜಿತ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾ ಪಕ್ಷದ ನೇತೃತ್ವದಲ್ಲಿ ಕಾರ್ಯಕರ್ತರು ನಗರದ ಬಸವೇಶ್ವರ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು..

ರಾಜ್ಯಪಾಲರು ಮುಖ್ಯಮಂತ್ರಿ ವಿರುದ್ಧ ಖಾಸಗಿ ವ್ಯಕ್ತಿ ಮಾಡಿದ ಆರೋಪಗಳ ಬಗ್ಗೆ ತನಿಖೆಗೆ ಅನುಮತಿ ನೀಡಿದ ಕೂಡಲೇ ರಾಜ್ಯಪಾಲರ ವಿರುದ್ಧ ರಾಜ್ಯದಲ್ಲಿ ಕಾಂಗ್ರೆಸ್ ನಾಯಕರು ಮತ್ತು ಬೆಂಬಲಿಗರು ಅತ್ಯಂತ ಅವಹೇಳನಕಾರಿ ಹೇಳಿಕೆ ನೀಡುತ್ತಿದ್ದಾರೆ. ಅದರಲ್ಲೂ ವೈಯಕ್ತಿಕವಾಗಿ ತೇಜೋವಧೆ ಮಾಡುತ್ತಿರುವುದು ಖಂಡನೀಯವಾಗಿದೆ. ಮೊದಲಿನಿಂದಲೂ ಸಂವಿಧಾನಿಕ ಹುದ್ದೆಗಳಲ್ಲಿವವರನ್ನು ಹೀನಾಯವಾಗಿ ನಡೆಸಿಕೊಂಡ ಕಾಂಗ್ರೆಸ್ಸಿಗರು ಈಗಲೂ ಅದೇ ಚಾಳಿ ಮುಂದುವರೆಸಿದ್ದಾರೆ. ಅದರಲ್ಲೂ ರಾಜ್ಯದಲ್ಲಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವರ್ಗಾವಣೆಗೆ ಕಾರಣವಾದ ಹಾಗೂ ಮುಡಾದ ನಿವೇಶನ ತಮ್ಮ ಪತ್ನಿಗೆ ಅಕ್ರಮವಾಗಿ ವರ್ಗಾಯಿಸಿಕೊಳ್ಳುವ ಮೂಲಕ ನಾಡಿನ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನತೆಗೆ ಅನ್ಯಾಯ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಈಗ ಶೋಷಿತ ವರ್ಗಕ್ಕೆ ಸೇರಿದ ರಾಜ್ಯಪಾಲರ ಮೇಲೆ ಮುಗಿಬಿದ್ದಿರುವುದು ಕಾಂಗ್ರೆಸ್ ಶೋಷಿತ ಸಮುದಾಯದ ವಿರೋಧಿ ಪ್ರವೃತ್ತಿಗೆ ಸಾಕ್ಷಿಯಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ಪಕ್ಷದ ಕಾರ್ಯಕರ್ತರು ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿಗೆ ಮನವಿ ಸಲ್ಲಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣನವರ, ವಿಧಾನಸಭೆಯ ವಿರೋಧ ಪಕ್ಷದ ಮುಖ್ಯಸಚೇತಕ ದೊಡ್ಡನಗೌಡ ಪಾಟೀಲ್, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಮಾಜಿ ಸಚಿವ ಹಾಲಪ್ಪ ಆಚಾರ್, ಮಾಜಿ ಸಂಸದ ಶಿವರಾಮೇಗೌಡ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಡಾ.ಬಸವರಾಜ ಕ್ಯಾವಟರ್, ಮಾಜಿ ಶಾಸಕ ಬಸವರಾಜ ದಡೇಸಗೂರು, ಚಂದ್ರಶೇಖರ್ ಪಾಟೀಲ್ ಇದ್ದರು.

ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ಖಂಡಿಸಿ ಬಿಜೆಪಿ ಜಿಲ್ಲಾ ಪಕ್ಷದ ನೇತೃತ್ವದಲ್ಲಿ ಕಾರ್ಯಕರ್ತರು ನಗರದ ಬಸವೇಶ್ವರ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಭಕ್ತಿಯಿಂದ ರಾಯರ 353ನೇ ಆರಾಧನೆ

ಕಾರಟಗಿ: ಕಲಿಯುಗದ ಕಾಮಧೇನು ಕಲ್ಪತರು ಗುರುಸಾರ್ವಭೌಮ ಶ್ರೀಗುರು ರಾಘವೇಂದ್ರ ಸ್ವಾಮಿ ಗಳ 353ನೇ ಆರಾಧನಾ ಮಹೋತ್ಸವದ ಮಧ್ಯರಾಧನೆ ಬುಧವಾರ ಇಲ್ಲಿನ ಶ್ರೀ ಗುರು ರಾಯರ ಮಠದಲ್ಲಿ ಶ್ರದ್ಧಾ ಭಕ್ತಿಯಿಂದ ನಡೆಯಿ ತು. ಶ್ರೀ ಗುರು ರಾಘ ವೇಂದ್ರಸ್ವಾಮಿಗಳ ಬೃಂದಾ ವನಕ್ಕೆ ಅರ್ಚಕ ಪ್ರಮೋದ ಆಚಾರ್ ಮತ್ತು ರಾಮ ರಾವ್ ಕುಲಕರ್ಣಿ ಇವರ ನೇತೃತ್ವದಲ್ಲಿ ಬೆಳಗ್ಗೆ ಸುಪ್ರಭಾತ ಮತ್ತು ನಿರ್ಮಾಲ್ಯದಿಂದ ದಿನದ ವಿವಿಧ ಪೂಜೆ ವಿಧಿವಿಧಾನಗಳು ಪ್ರಾರಂಭವಾದವು. ನಂತರ ಅಷ್ಟೋತ್ತರ ಸಹಿತ ಪಂಚಾಮೃತಾಭಿಷೇಕ. ಪಾದ ಪೂಜೆ, ಅರ್ಚನೆ ನಂತರ ಬೃಂಧಾನವ ಅಲಂಕಾರಗಳು ಭಕ್ತ ಸಮೂಹಕದ ನಡುವೆ ನಡೆಯಿತು. ಪಟ್ಟಣ ಭಕ್ತ ಸಮೂಹ ಶ್ರೀಗಳ ಮಠಕ್ಕೆ ಭೇಟಿ ನೀಡಿ ದರ್ಶನ ಪಡೆದರು. ಸಂಜೆ ಭಕ್ತ ಮಹಿಳೆಯರು ಸಮೂಹಿಕ ಭಜನೆ ಮಾಡಿದರು. ನಂತರ ಮಠದ ಆವರಣದಲ್ಲಿ ಪಲ್ಲಕಿ ಉತ್ಸವ ನಡೆಯಿತು. ಆರಾಧನ ಮಹೋತ್ಸವದ ಮೊದಲ ದಿನವಾದ ಸೋಮವಾರದಂದು ಮಠದ ಪ್ರಾಂಗಣದಲ್ಲಿ ಗೋಪೂಜೆ, ಧ್ವಜಾರೋಹಣ, ಧಾನ್ಯಪೂಜೆ, ಲಕ್ಷ್ಮೀಪೂಜೆ, ಸ್ವಸ್ತಿ ಪೂಜೆ ನಡೆಸುವ ಮೂಲಕ ಆರಾಧನೆ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ಈ ವೇಳೆ ಪ್ರಹ್ಲಾದ್ ಜೋಶಿ, ವಿಚಾರಣಕರ್ತ ರಾಘವೇಂದ್ರ ಕುಲಕರ್ಣಿ ಕೃಷ್ಣಾಚಾರ್ಯ ಇನಾಂದಾರ್, ನಾಗ ರಾಜ ಕುಲಕರ್ಣಿ, ರಾಘವೇಂದ್ರರಾವ್ ಕುಲಕರ್ಣಿ, ಪುರಂದರ್ ವಿಠ್ಠಲ್‌ಕೊಳ್ಳಿ, ಶೇಷಗಿರಿ ದೇಶಪಾಂಡೆ ಇದ್ದರು.

ಮುದಗಲ್ ವಲಯ ಮಟ್ಟದ ಕ್ರೀಡಾಕೂಟ



ಕ್ರಿಸ್ತಜ್ಯೋತಿ ಪ್ರೌಢ ಶಾಲೆ ಆವರಣದಲ್ಲಿ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದ ಉದ್ಘಾಟನೆ ನಡೆಯಿತು.

ಮುದಗಲ್: ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷಾರತಾ ಇಲಾಖೆ ರಾಯಚೂರು ಮುದಗಲ್ ಕ್ರಿಸ್ತಜ್ಯೋತಿ ಪ್ರೌಢಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ 2024-25ನೇ ಸಾಲಿನ ಮುದಗಲ್ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟ ಕಾರ್ಯಕ್ರಮ ಕ್ರಿಸ್ತಜ್ಯೋತಿ ಪ್ರೌಢ ಶಾಲೆ ಆವರಣದಲ್ಲಿ ನಡೆಯಿತು.

ಸಂತ ಅನ್ನಮ್ಮನವರ ಶಿಕ್ಷಣ ಸಂಸ್ಥೆಯ ಸಂಚಾಲಕಿ ಮಾರ್ಟಿನ್ ಲೂಥರ್ ರವರು ಜ್ಯೋತಿ ಬೆಳಗುವ ಮೂಲಕ ಕ್ರೀಡಾಕೂಟ ಕಾರ್ಯಕ್ರಮ ಉದ್ಘಾಟನೆ ಮಾಡಿದರು. ಪುರಸಭೆ ಸದಸ್ಯ ಶ್ರೀಕಾಂತಗೌಡ ಪಾಟೀಲ್ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ನಂತರ ಕಾರ್ಯಕ್ರಮ ಕುರಿತು ದೈಹಿಕ ಪರಿವೀಕ್ಷಕ ಚನ್ನಬಸವ ಮೇಟಿ, ಕನ್ನಡ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಗೌಡರ, ಧರ್ಮಗುರು ಪೊನ್ನು ಸ್ವಾಮಿ ಮಾತನಾಡಿದರು.

ಈ ವೇಳೆ ಪುರಸಭೆ ಸದಸ್ಯೆ ರಾಬೀಯ ಬೇಗಂ, ನಾಗರಾಜ ತಳವಾರ, ಮುಖ್ಯ ಶಿಕ್ಷಕ ಮಹಮದ್ ಶರೀಫ್, ಅನಿಫ್, ಬಸವರಾಜ ಸಜ್ಜನ, ನೀಲಣ್ಣ ಅಚನೂರ, ಸುಶೀಲಾ ಪೋಲರಾಜ ಎಮ್ಮಿ, ರಾಮಚಂದ್ರ ಡವಳೆ, ದೈಹಿಕ ಶಿಕ್ಷಕ ಎಸ್ ಎನ್ ಅಕ್ಕಿ, ಮಹಾಂತೇಶ ಚಲವಾದಿ ಸೇರಿದಂತೆ ವಿವಿಧ ಶಾಲೆಗಳ ದೈಹಿಕ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕರ ವಸೂಲಿ: ವ್ಯಾಪಾರ ಸ್ಥಗಿತಕ್ಕೆ ನಗರಸಭೆ ಸೂಚನೆ

ರಾಯಚೂರು: ನಗರಸಭೆ ಆಸ್ತಿಕರ, ಟ್ರೇಡಿಂಗ್ ಲೈಸ ನ್ಸ್ ಮತ್ತು ನೀರಿನ ಕರ ಬಾಕಿ ಉಳಿಸಿರುವ ಕೊಂಡಿರುವ ವ್ಯಾಪಾರ ಮಳಿಗೆಗಳು, ಮನೆಗಳ ವಿರುದ್ಧ ಕಾರ್ಯಾಚರಣೆ ಪ್ರಾರಂಭಿಸಿದ್ದು ಪರವಾನಿಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿಯ ನೃಪತುಂಗಹೋಟೆಲ್ ನಿಂದ ಕಾರ್ಯಾಚರಣೆ ಪ್ರಾರಂಭಿಸಿದರು. ಅನೇಕ ದಿನಗಳಿಂದ ನಗರಸಭೆಗೆ ಪಾವತಿಸಬೇಕಾದ ಕರ ಪಾವತಿಸದೇ ಇರುವವರ ವಿರುದ್ಧ ನೋಟಿಸ್ ಜಾರಿ ಮಾಡಿದ್ದರೂ ಸ್ಪಂದಿಸದೇ ಇರುವರ ಮನೆ ಬಾಗಿಲಿಗೆ ಹೋಗಿ ವಸೂಲಿ ಕಾರ್ಯಮಾಡುವ ಕಾರ್ಯಕ್ಕೆ ಸಿಬ್ಬಂದಿಗಳು ಮುಂದಾಗಿದ್ದಾರೆ. ಕರಪಾವತಿಸುವದು, ಲೈಸನ್ಸ್ ನವೀಕರಣಗೊಳಿಸುವಂತೆ ಸೂಚಿಸಿದ್ದರೂ ಕರ ಪಾವತಿಸದೇ ಇರುವರ ಪಟ್ಟಿ ಸಿದ್ದಪಡಿ ಸಿಕೊಂಡಿರುವ ನಗರಸಭೆ ಸಿಬ್ಬಂದಿಗಳೊಂದಿಗೆ ತೆರಳಿ ಸ್ಥಳದಲ್ಲಿಯೇ ಪರಿಶೀಲನೆ ನಳಗ ಸಂಪರ್ಕ ಕಡಿತ, ವ್ಯಾಪಾರ ಮಳಿಗೆ ಬೀಗ ಹಾಕುವ ಕ್ರಮಕ್ಕೂ ಮುಂದಾಗಿದೆ. ನಗರಸಭೆ ಸಿಬ್ಬಂದಿಗಳ ಕಾರ್ಯಾಚರಣೆಯಿಂದ ವ್ಯಾಪಾರಸ್ಥರು ಬಾಕಿಯಿರುವ ಕರದ ಹಣಪಾವತಿಗೆ ಮುಂದಾಗಿದ್ದಾರೆ. ಅನೇಕರುಹತ್ತಾರು ವರ್ಷ ಗಳಿಂದ ಕರ ಪಾವತಿ ಸದೇ ಇರುವದು ಸಹ ಪತ್ತೆಯಾಗಿದ್ದು ಎಚ್ಚರಿಕೆ ಸಂದೇಶವನ್ನು ನಗರಸಭೆ ನೀಡಿದೆ. ನಗರಸಭೆಗೆ ಕಳೆದ 6-7 ವರ್ಷಗಳಿಂದ ತೆರಿಗೆ ಪಾವತಿ ಸದೇ ಬಹುತೇಕ ವಾಣಿಜ್ಯ ಮಳಿಗೆ, ಹೋಟೆಲ್ ಸೇರಿದಂತೆ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಿಗೆ ನಗರಸಭೆ ಪೌರಾಯುಕ್ತರು ಗುರುಸಿದ್ದಯ್ಯ ಹಿರೇಮಠ ಅವರು ಬೀಗ ಹಾಕಿ ಬಂದ್ ಮಾಡಿದರು.

ಸಮಾಚಾರ ಸಣ್ಣದಲ್ಲ

ಗುತ್ತಿಗೆದಾರರ ನಡುವೆ ಮಾರಾಮಾರಿ: 9 ಬಂಧನ

ಚಿತ್ತಾಪುರ: ಎಸಿಸಿ ಸಿಮೆಂಟ್ ಕಾರ್ಖಾನೆಗೆ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ಮಧ್ಯೆ ಘರ್ಷಣೆ ಜರುಗಿದ ಘಟನೆ ಚಿತ್ತಾಪುರ ತಾಲೂಕಿನ ವಾಡಿ ಪಟ್ಟಣದ ಕಾಗಿಣಾ ಗೆಸ್ಟ್ ಹೌಸ್ ಬಳಿ ಸೋಮವಾರ ಮಧ್ಯಾಹ್ನ ಜರುಗಿದೆ. ಘಟನೆಯಲ್ಲಿ 4 ಜನ ಗಾಯಗೊಂಡಿದ್ದಾರೆ. ಸುನೀಲ ಗುತ್ತೇದಾರ, ಕೃಷ್ಣ ಹೊಸಮನಿ, ಸೂರ್ಯಪ್ರಕಾಶ ಹಾಗೂ ಕಾರ್ತಿಕ್ ಅವರು ಗಾಯಗೊಂಡಿದ್ದು ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಾರ್ಖಾನೆಗೆ ಕಾರ್ಮಿಕರನ್ನು ಪೂರೈಸುವ ವಿಚಾರಕ್ಕೆ ಸಂಬಂಧಿಸಿದಂತೆ ಜರುಗಿದ ವಾಗ್ವಾದ ನಂತರ ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದೆ. ಕೈಯಲ್ಲಿ ಬ್ಲೇಡು, ಚಾಕುಗಳನ್ನು ಹಿಡಿದುಕೊಂಡು ಹೊಡೆದಾಡಿಕೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿ 9 ಜನರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಘಟನಾ ಸ್ಥಳಕ್ಕೆ ಎಸ್ಪಿ ಅಡ್ಡಿರು ಶ್ರೀನಿವಾಸಲು, ಡಿವೈಎಸ್ಪಿ ಶಂಕರಗೌಡ ಪಾಟೀಲ ಸಿಪಿಐ ಚಂದ್ರಶೇಖರ ತಿಗಡಿ, ಸ್ಥಳೀಯ ಪಿಎಸ್ಐ ತಿರುಮಲೇಶ ಕುಂಬಾರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜೆಸ್ಕಾಂನಿಂದ ವಾಟ್ಸಾಪ್ ಸೇವೆ

ಕಲಬುರಗಿ: ಪಟ್ಟಣ ಸೇರಿ ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ದಾಖಲಿಸಿ, ಬಗೆಹರಿಸಲು ಜೆಸ್ಕಾಂ ವಾಟ್ಸಾಪ್ ಸಹಾಯವಾಣಿ ಸೇವೆ ಆರಂಭಿಸಿದೆ. ವಾಟ್ಸಾಪ್ ಸಹಾಯವಾಣಿ ಸಂಖ್ಯೆ 9480847593 ಮೂಲಕ ನಿಮ್ಮ ದೂರು ದಾಖಲಿಸಿ ಪರಿಹಾರ ಪಡೆದುಕೊಳ್ಳಬಹುದಾಗಿದೆ. ಜೆಸ್ಕಾಂನ ಎಲ್ಲ ಗ್ರಾಹಕರು ಈ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಬಹುದು. ಅಲ್ಲದೆ, 24★7 ಸಹಾಯವಾಣಿ ಸಂಖ್ಯೆ 1912ಕ್ಕೆ ಕರೆಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಜೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿಧ ಸಂಘ-ಸಂಸೆಗಳ ಕುಂದು ಕೊರತೆ ಆಲಿಕೆ

ಕಲಬುರಗಿ: ಡಾ. ಬಾಬುಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ ಚರ್ಮಕುಶಲಕರ್ಮಿಗಳು/ವಿವಿಧ ಸಂಘ-ಸಂಸ್ಥೆಗಳ ಕುಂದುಕೊರತೆಗಳನ್ನು ಆಲಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಇದೇ ಆಗಸ್ಟ್ 30 ರಂದು ಕಚೇರಿ ವೇಳೆಯಲ್ಲಿ ಬೆಂಗಳೂರಿನ ಲಿಡ್ಕರ ನಿಗಮದ ಪ್ರಧಾನ ಕಚೇರಿಯ ಡಾ. ಬಾಬೂಜಿ ಸಭಾಂಗಣದಲ್ಲಿ ಸಭೆ ನಡೆಸಲಿದ್ದಾರೆ. ನಿಗಮದ ವ್ಯಾಪಿಗೆ ಒಳಪಡುವ ಚರ್ಮಕುಶಲಕರ್ಮಿಗಳು/ ವಿವಿಧ ಸಂಘ-ಸಂಸ್ಥೆಗಳು ಮೇಲ್ಕಂಡ ದಿನದಂದು ನಡೆಯುವ ಈ ಸಭೆಗೆ ಹಾಜರಾಗಿ ತಮ್ಮ ಕುಂದುಕೊರತೆಗಳನ್ನು ಮೌಖಿಕವಾಗಿ/ಲಿಖಿತ ಮನವಿಗಳನ್ನು ಸಲ್ಲಿಸಬಹುದಾಗಿದೆ ಎಂದು ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಕಲಬುರಗಿ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ಸೋಮಶೇಖರ ಎಂ

ಕಲಬುರಗಿ: ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಕಲಬುರಗಿಯ ನಿವಾಸಿ ನಿವೃತ್ತ ಶಿಕ್ಷಕ



ಸೋಮಶೇಖರ ಎಂ. ಚಿನಮಳ್ಳಿ ಅವರು ಬುಧವಾರ ಗುರುವಾರ ನಸುಕಿನ ಜಾವ 3 ಗಂಟೆಗೆ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಪತ್ನಿ, ವಾರ್ತಾ ಇಲಾಖೆಯ ಉಮಾಶಂಕರ ಚಿನಮಳ್ಳಿ ಸೇರಿದಂತೆ ಮೂವರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಗುರುವಾರ ಕಲಬುರಗಿ ನಗರದ ಗಂಜ್ ಪ್ರದೇಶದ ಶಿವಮುಕ್ತ ಧಾಮದಲ್ಲಿ ಗುರುವಾರ ಸಂಜೆ 4.30 ಗಂಟೆಗೆ ನಡೆಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನಿಂದ ರಾಜ್ಯಪಾಲರಿಗೆ ಅಪಮಾನ | ಜಿಲ್ಲಾ ಬಿಜೆಪಿಯಿಂದ ಬೃಹತ್ ಪ್ರತಿಭಟನೆ | ಸಚಿವರ ವಿರುದ್ಧ ಕ್ರಮಕ್ಕೆ ಒತ್ತಾಯ

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಾಂಗ್ರೆಸ್ ಸರಕಾರದ ಸಚಿವರು ರಾಜ್ಯಪಾಲ ತಾವರ್ ಚಂದ್ ಗೆಲ್ಲೋಟ್ ಅವರನ್ನು ಅವಮಾನಿಸಿದ್ದಾರೆಂದು ಖಂಡಿಸಿ ಹಾಗೂ ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಗುರುವಾರ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಸರ್ದಾರ್ ವಲ್ಲಭ ಭಾಯ್ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಬಿಜೆಪಿ ನಾಯಕರು ಹಾಗೂ ನೂರಾರು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ಮೂಲಕ ಕಾಂಗ್ರೆಸ್ ಸರಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರಾದ ಕೃಷ್ಣಭೈರೇಗೌಡ, ಜಮೀರ್ ಅಹ್ಮದ್ ಖಾನ್, ವಿಪ ಸದಸ್ಯ ಐವಾನ್ ಡಿಸೋಜಾ ವಿರುದ್ದ ಘೋಷಣೆ ಕೂಗುತ್ತಾ ರಸ್ತೆ ತಡೆದು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು, ರಾಜ್ಯಪಾಲರ ಭಾವಚಿತ್ರಕ್ಕೆ ಅವಮಾನ ಮಾಡಿದ್ದಾರೆ. ಕೆಲವೆಡೆ ಭಾವಚಿತ್ರವನ್ನು ದಹಿಸಲಾಗಿದೆ. ಸಚಿವರಾದ ಜಮೀರ್ ಅಹ್ಮದ್, ಕೃಷ್ಣಭೈರೇಗೌಡ, ವಿಧಾನಪರಿಷತ್ ಸದಸ್ಯ ಐವಾನ್ ಡಿಸೋಜ ಮೊದಲಾದವರು ರಾಜ್ಯಪಾಲರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ಕೊಟ್ಟಿದ್ದಾರೆ. ಅಲ್ಲದೇ, ಬಾಂಗ್ಲಾ ಮಾದರಿಯಂತೆ ರಾಜ್ಯಪಾಲರನ್ನು ಓಡಿಸಬೇಕಾಗುತ್ತದೆ ಎಂದು ಹೇಳಿಕೆ ನೀಡಿದ್ದು ಖಂಡನೀಯವಾಗಿದೆ. ಕೂಡಲೇ, ಸಚಿವರ ವಿರುದ್ಧ ಪೊಲೀಸ್ ಇಲಾಖೆಯು ಸ್ವಯಂಪ್ರೇರಿತ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಇನ್ನೂ, ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳು ಪ್ರಭಾವ ಬೆಳೆಸಿ ಅಕ್ರಮ ನಡೆಸಿದ್ದಾರೆ. ವಾಲ್ಮೀಕಿ ನಿಗಮದಲ್ಲಿ ದಲಿತರಿಗೆ ಮೀಸಲಿದ್ದ ಹಣವನ್ನು ಬೇರೆಡೆಗೆ ವರ್ಗಾಯಿಸಿ ಅಕ್ರಮ ಎಸಗಿದ್ದಾರೆ. ಆದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ, ವಿಚಾರಣೆಗೆ ಒಳಗಾಗಬೇಕು ಎಂದು ಹೇಳಿದರು.

ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ್ ಮಾತನಾಡಿ, ಸಮಾಜವಾದಿ ಎನ್ನುವ ಸಿದ್ದರಾಮಯ್ಯ ಅವರು ಮಜಾವಾದಿಯಾಗಿದ್ದಾರೆ. ದಲಿತರ ಹಣ ದುರ್ಬಳಕೆ ಮಾಡಿ ಅನ್ಯಾಯ ಮಾಡಿದ್ದಾರೆ. ಉಪ ಮುಖ್ಯಮಂತ್ರಿ ಇದ್ದಾಗ ತಮ್ಮ ಪ್ರಭಾವ ಬಳಸಿ ಮುಡಾದಲ್ಲಿ 3.16 ಜಮೀನು ನೋಟಿಫೈ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಹೇಳಿದರು.

> ರಾಜ್ಯಪಾಲರಿಗೆ ಅವಮಾನಿಸುವ ಮುಖೇನ ಕಾಂಗ್ರೆಸ್ ಸರಕಾರ ತನ್ನ ಭಂಡತನವನ್ನು ಪ್ರದರ್ಶಿಸುತ್ತಿದೆ. ಸಂವಿಧಾನಿಕವಾದ ಉನ್ನತ ಸ್ಥಾನದಲ್ಲಿರುವ ರಾಜ್ಯಪಾಲರಿಗೆ ಅಪಮಾನ ಮಾಡುವುದು ಸಾಂವಿಧಾನಕ್ಕೆ ಮಾಡುವ ಅಪಮಾನವಾಗಿದೆ. ಕೂಡಲೇ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು.
> – ಅವಿನಾಶ್ ಜಾಧವ್, ಶಾಸಕ.

ಕಳೆದ ಒಂದೂವರೆ ವರ್ಷದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ. ರಾಜ್ಯ ಸರಕಾರ ಕೇವಲ ಭ್ರಷ್ಟಚಾರದಲ್ಲಿಯೇ ಮಗ್ನವಾಗಿದೆ. ಈ ಸರಕಾರವನ್ನು ಕಿತ್ತೆಸೆಯಬೇಕು. ಜನಪರ ಸರಕಾರ ಅಧಿಕಾರಕ್ಕೆ ತರಬೇಕು ಎಂದ ಅವರು, ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾರು ಅನುಮತಿ ನೀಡಿದ್ದಾರೆ. ಮುಖ್ಯಮಂತ್ರಿಗಳು ಮುಂದೆ ಬಂದು ತನಿಖೆಗೆ ಸಹಕರಿಸಿಬೇಕು ಎಂದು ಹೇಳಿದರು.

> ಬಾಂಗ್ಲಾ ಮಾದರಿ ದಂಗೆ ಬಗ್ಗೆ ಹೇಳಿಕೆ ನೀಡುವ ಜಮೀರ್ ಅಹ್ಮದ್, ಐವನ್ ಡಿಸೋಜಾ ವಿರುದ್ಧ ಸೋಮೋಟೋ ದೂರು ದಾಖಲಿಸಬೇಕು. ಮುಡಾ ಹಗರಣದಲ್ಲಿ ಭಾಗಿಯಾದ ಸಿಎಂ ಸಿದ್ದು ರಾಜೀನಾಮೆ ಕೊಡಲಿ. ರಾಜ್ಯದಲ್ಲಿ ಇಷ್ಟೊಂದು ಭ್ರಷ್ಟಾಚಾರ ನಡೆಯುತ್ತಿದ್ದರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೌನ ವಹಿಸುವುದು ಶೋಭೆ ತರುವಂತದಲ್ಲ.
> – ರಾಜಕುಮಾರ್ ಪಾಟೀಲ್ ತೇಲ್ಕೂರ್, ಮಾಜಿ ಶಾಸಕ,

> ರಾಜ್ಯದ ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಕಾಂಗ್ರೆಸ್? ನಾಯಕರ ನಡೆ ಖಂಡನೀಯವಾಗಿದೆ. ಸರಕಾರ ದಲಿತ ಹಣ ದುರ್ಬಳಕೆ ಮಾಡಿಕೊಂಡಿದೆ. ಎಸ್ ಟಿ ಮೀಸಲು ಹಣ ಬೇರೆಡೆಗೆ ವರ್ಗಾವಣೆ ಮಾಡಿದೆ. ಇನ್ನೂ ಹಲವಾರು ಹಗರಣಗಳು ಬಯಲಿಗೆ ಬರುತ್ತವೆ. ನೈತಿಕ ಹೊಣೆ ಹೊತ್ತು ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು.
> – ಬಸವರಾಜ್ ಮತ್ತಿಮಡು, ಶಾಸಕ

ಈ ವೇಳೆ ಶಾಸಕ ಡಾ. ಅವಿನಾಶ್ ಜಾಧವ, ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ಅವ್ವಣ್ಣಾ ಮ್ಯಾಕೇರಿ, ಶರಣಪ್ಪಾ ತಳವಾರ ಮಾತನಾಡಿದರು.

ಈ ಸಂದರ್ಭದಲ್ಲಿ ನಿತೀನ್ ಗುತ್ತೇದಾರ್, ಅಮರನಾಥ ಪಾಟೀಲ್, ಶಿವಯೋಗಿ ನಾಗೇನಹಳ್ಳಿ, ರಾಘವೇಂದ್ರ ಕುಲಕರ್ಣಿ, ಅಂಬಾರಾಯ್ ಅಷ್ಟಗಿ, ಹರ್ಷಾನಂದ ಗುತ್ತೇದಾರ್, ಅರುಣಕುಮಾರ ಪಾಟೀಲ್, ಗಂಗಪ್ಪಗೌಡ ಪಾಟೀಲ್, ಗಿರಿರಾಜ್ ಯಳಮೇಲಿ, ಅಶೋಕ ಬಗಲಿ, ಸಂತೋಷ್ ಹಾದಿಮನಿ,ಶೋಭಾ ಬಾಣಿ, ಚಂದಮ್ಮಾ ಪಾಟೀಲ್, ಸಾವಿತ್ರಿ ಕುಳಗೇರಿ,ಸುಧಾ ಹಾಲಕಾಯಿ,ಗೌರಿ ಚಿತ್ತಕೋಟಿ, ಸುವರ್ಣ ವಾಡೆ, ಸವಿತಾ ಪಾಟೀಲ್, ವಿಜಯಲಕ್ಷ್ಮಿ ಗೊಬ್ಬುರಕರ್, ಸಂತೋಷ್ ಹಾದಿಮನಿ, ಅಪ್ಪು ಕಣಕಿ, ಶ್ರೀನಿವಾಸ ದೇಸಾಯಿ,ಸೇರಿದಂತೆ ಇದ್ದರು.

ರಾಘವೇಂದ್ರ ಸ್ವಾಮಿಗಳ ಆರಾಧನೆ

ಚಿತ್ತಾಪುರ: ಪಟ್ಟಣದ ಬ್ರಾಹ್ಮಣ ಗಲ್ಲಿಯಲ್ಲಿಯಲ್ಲಿರುವ ರಾಘವೇಂದ್ರ ಮಠದಲ್ಲಿ ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವು ಸಂಭ್ರಮದಿಂದ ಜರುಗಿತು.

ಆರಾಧನೆಯ ಅಂಗವಾಗಿ ಬೆಳಗ್ಗೆ ರಾಘವೇಂದ್ರರ ಬೃಂದಾವನಕ್ಕೆ ಪುಷ್ಪಾಲಂಕಾರ, ಅಷ್ಟೋತ್ತರ ಪಾರಾಯಣ, ಪಂಚಾಮೃತ ಅಭಿಷೇಕ, ಪ್ರವಚನ, ಮಹಿಳೆಯರಿಂದ ಭಜನೆ, ರಥೋತ್ಸವ ಹಾಗೂ ಗಜವಾಹನೋತ್ಸವ, ದಾಸವಾಣಿ ಕಾರ್ಯಕ್ರಮ, ಪಲ್ಲಕ್ಕಿ ಸೇವೆ, ತೊಟ್ಟಿಲು ಸೇವೆ, ಸೇರಿದಂತೆ ಅನೇಕ ಕಾರ್ಯಕ್ರಮಗಳು ಜರುಗಿತು. ಆರಾಧನೆಯಲ್ಲಿ ವಿಪ್ರಬಾಂಧವರು ಸೇರಿದಂತೆ ಪಟ್ಟಣದ ವಿವಿಧ ಸಮುದಾಯದ ಭಕ್ತರು ಪಾಲ್ಗೊಂಡು ಭಕ್ತಿ ಸೇವೆ ಸಲ್ಲಿಸಿದರು. ಪಂಡಿತ್ ತಿರುಪತಿ ಆಚಾರ್ ,ದೇವಸ್ಥಾನದ ಅರ್ಚಕ ಗುರುರಾಜ ಆಚಾರ್ಯ,ಪಂ ವೆಂಕಣ್ಣಾಚಾರ್ಯ,ಪವನ ಕುಲಕರ್ಣಿ ಅವರು ಆರಾಧನೆಯ ಸೇವೆ ಸಲ್ಲಿಸಿದರು. ನರ್ಸಿಂಗ್ ರಾವ್ ದೇಶಪಾಂಡೆ , ಸುಧಾಕರ ಕುಲಕರ್ಣಿ, ಸಂಜೀವ ಕೊಡದುರ, ವೆಂಕಟೇಶ ಭರತ ಕುಮಾರ ಅನಂತ್ ಹೇಡಿಗಿಮುದ್ರ ಅವರಿಂದ ಅನ್ನ ಸಂತ ತರ್ಪಣೆ ಸೇವೆ ಮಾಡಿಸಿದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ಗಿರಿಶ ಜಾನೀಬ್, ರವಿ ಕುಲಕರ್ಣಿ,ವೇಂಕಟೇಶ್ ಕುಲಕರ್ಣಿ,ವಿಶ್ವನಾಥ ಅಫಜಲಪುರಕರ, ರಾಮಾಚಾರಿ, ಧನರಾಜ ದೇಶಪಾಂಡೆ, ಪವನ ಕುಮಾರ ರಾಜೇಶ್ ದೇಶಪಾಂಡೆ ಅಂಬರೀಷ್ ಕುಲಕರ್ಣಿ, ನಾಗರಾಜ್ ಅಲ್ಲೂರು, ರಾಜು ಕೊಡದೂರ, ಜಯಂತ್ ಮಾಲಗತಿ, ನರಹರಿ ಕುಲಕರ್ಣಿ, ಚನ್ನಪ್ಪ ಕೊಟ್ರಕಿ,ಸೇರಿದಂತೆ ಭಜನಾ ಮಂಡಳಿಯ ಮಹಿಳೆಯರು ಇದ್ದರು.

ಜೇವರ್ಗಿ ತಾಲೂಕಿನಲ್ಲಿ ಬಿಜೆಪಿ ಪುರಸಭೆ ಸದಸ್ಯರನ್ನ ಹೆದರಿಸಿ ಪಕ್ಷಕ್ಕೆ ಸೇರ್ಪಡೆ

ಜೆಡಿಎಸ್'ನಿಂದ ಮೈತ್ರಿಧರ್ಮ ಉಲ್ಲಂಘನೆ: ರದ್ದೇವಾಡಗಿ

ಕಲಬುರಗಿ: ಜೇವರ್ಗಿ ತಾಲೂಕಿನ ಜೆಡಿಎಸ್ ನಾಯಕರು ಬಿಜೆಪಿ ಪುರಸಭೆ ಸದಸ್ಯರನ್ನು ಹೆದರಿಸಿ, ಬೇದರಿಸಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು, ಮೈತ್ರಿಧರ್ಮದ ಒಪ್ಪಂದ ಮುರಿಯುವ ಮೂಲಕ ಉಲ್ಲಂಘನೆ ಮಾಡಿದ್ದಾರೆ ಎಂದು ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಹೇಳಿದ್ದಾರೆ.

ಗುರುವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿಯಾಗಿದ್ದು, ಲೋಕಸಭೆ ಚುನಾವಣೆಯಲ್ಲಿ ಒಟ್ಟಾಗಿ ಸ್ಪರ್ಧೆ ಮಾಡಬೇಕು ಎಂದು ರಾಜ್ಯಮಟ್ಟದ ನಾಯಕರು ತೀರ್ಮಾನ ಮಾಡಿದರು. ಜತೆಗೆ ಯಾವುದೇ ಸಂದರ್ಭದಲ್ಲಿ ಒಂದು ಪಕ್ಷ ಇನ್ನೊಂದು ಪಕ್ಷವನ್ನು ಅಭದ್ರ ಆಗುವ ರೀತಿ ಮಾಡಬಾರದು, ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷವನ್ನು ಎದುರಿಸುವಂತಹ ಕೆಲಸ ಮಾಡಬೇಕು ಎನ್ನುವ ಒಪ್ಪಂದ ಆಗಿತ್ತು. ಆದರೆ, ಅದನ್ನು ತಾಲೂಕಿನ ಜೆಡಿಎಸ್ ನಾಯಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್ ಅವರು ನಿಯಮ ಮುರಿದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜೆಡಿಎಸ್ ನಾಯಕರಾದ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ ಅವರು ಜೇವರ್ಗಿ ಪುರಸಭೆಯ 13 ಜನ ಸದಸ್ಯರನ್ನು ಜೆಡಿಎಸ್'ಗೆ ಕರೆದುಕೊಂಡು ಹೋಗಿದ್ದಾರೆ. ಸದಸ್ಯರನ್ನು ಹೆದರಿಸಿ, ಬೆದರಿ, ಆಮಿಷವೊಡ್ಡಿ ತಮ್ಮ ಪಕ್ಷಕ್ಕೆ ಕರೆದೊಯ್ಯುವುದಲ್ಲದೇ ಒಂಭತ್ತು ದಿನಗಳ ಕಾಲ ಅವರ ಕುಟುಂಬದವರ ಸಂಪರ್ಕಕ್ಕೆ ಬರದಂತಹ ರೀತಿಯಲ್ಲಿ ನೋಡಿಕೊಳ್ಳುವುದೆಂದರೇ ಏನರ್ಥ? ಜೆಡಿಎಸ್ ಮುಖಂಡರು ಈ ರೀತಿ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಸಹಕಾರ ಮಾಡುವಂತಹ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಮಾತನಾಡಿದರು.

> ನಮ್ಮ ಸದಸ್ಯರನ್ನು ಜೆಡಿಎಸ್ ಪಕ್ಷದ ನಾಯಕರು ಹೈಜಾಕ್ ಮಾಡಿದ್ದಾರೆ. ಕೂಡಲೇ, ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಅವರು ಸದಸ್ಯರನ್ನು ಹಿಂದಿರುಗಿಸಬೇಕು.
> – ದೇವೀಂದ್ರಪ್ಪ ಮುತ್ತಕೋಡ್, ಬಿಜೆಪಿ, ತಾಲೂಕಾಧ್ಯಕ್ಷ

ಈ ಬಗ್ಗೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಅವರೊಂದಿಗೆ ರಾಜ್ಯ ನಾಯಕರು ಮಾತುಕತೆ ನಡೆಸಿದ್ದಾರೆ. ಈ ಬಗ್ಗೆ ಒಂದು ವಾರದೊಳಗೆ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

ತಾಲೂಕಾ ಬಿಜೆಪಿ ಅಧ್ಯಕ್ಷ ದೇವೀಂದ್ರಪ್ಪ ಮುತ್ತಕೋಡ್ ಮಾತನಾಡಿದರು.ಈ ಸಂದರ್ಭದಲ್ಲಿ ಮಲ್ಲಿನಾಥ್ ಪಾಟೀಲ್ ಯಲಗೋಡ್, ಹಳ್ಳೆಪ್ಪ ಆಚಾರ್ಯ ಜೋಶಿ, ಶೋಭಾ ಬಾಣಿ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರೇವಣಸಿದ್ದಪ್ಪ ಸಂಕಾಲಿ, ಮಲ್ಲಿಕಾರ್ಜುನ ಕುಸ್ತಿ, ಸಂತೋಷ ಹಾದಿಮನಿ, ಸುರೇಶ ಪಾಟೀಲ್ ನೇದಲಗಿ ಸೇರಿ ಅನೇಕರು ಇದ್ದರು.

ಶರಣಬಸವ ವಿವಿಯಲ್ಲಿ ಇ-ಯಂತ್ರ ಲ್ಯಾಬ್ ಆರಂಭ

ಕಲಬುರಗಿ: ಶರಣಬಸವ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯುನಿಕೇಶನ್ಸ್ ಎಂಜಿನಿಯರಿಂಗ್ (ಮಹಿಳಾ) ವಿಭಾಗದಲ್ಲಿ ಅತ್ಯಾಧುನಿಕ ಇ-ಯಂತ್ರ ಪ್ರಯೋಗಾಲಯವನ್ನು ಬಾಂಬೆ ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿನ ಇ-ಯಂತ್ರದ ಪ್ರಧಾನ ತನಿಖಾಧಿಕಾರಿ ಪ್ರೊ. ಕವಿ ಆರ್ಯ ಗುರುವಾರ ಉದ್ಘಾಟಿಸಿದರು.

ಮೊಟ್ಟಮೊದಲ ಬಾರಿಗೆ ಪ್ರಯೋಗಾಲಯವನ್ನು ಐಐಟಿ ಬಾಂಬೆಯ ತಾಂತ್ರಿಕ ಜ್ಞಾನವನ್ನು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಕ ರಾಷ್ಟ್ರೀಯ ಮಿಷನ್ ಅಡಿಯಲ್ಲಿ ಸ್ಥಾಪಿಸಲಾಗುತ್ತಿದೆ. ಇದು ವಿದ್ಯಾರ್ಥಿಗಳಿಗೆ ರೋಬೋಟಿಕ್ಸ್ ಮತ್ತು ನವೀನ ಚಿಂತನೆಯನ್ನು ಬಳಸಿಕೊಂಡು ಕಲಿಕೆಯ ಕ್ರಮವನ್ನು ಉತ್ತೇಜಿಸುತ್ತದೆ. ಎಂಬೆಡೆಡ್ ಮತ್ತು ರಿಯಲ್ ಟೈಮ್ ಸಿಸ್ಟಮ್ಸ್ ಲ್ಯಾಬ್ (ಇಖಖಿಖ)ನ ಸಂಚಾಲಕರು ಮತ್ತು ಇ-ಯಂತ್ರ ಯೋಜನೆಯ ಪ್ರಧಾನ ತನಿಖಾಧಿಕಾರಿಗಳಾದ ಪ್ರೊಫೆಸರ್ ಆರ್ಯ ಕೇಂದ್ರ ಸರ್ಕಾರದಿಂದ ಧನಸಹಾಯ ಪಡೆದು, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ರೋಬೋಟಿಕ್ಸ್ ಬಳಸಿಕೊಂಡು ಪ್ರಾಜೆಕ್ಟ್ ಆಧಾರಿತ ಕಲಿಕೆ ಜನಪ್ರಿಯಗೊಳಿಸುತ್ತಿದ್ದಾರೆ.

ಐಐಟಿ ಬಾಂಬೆಯ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮತ್ತು ಬೋಧಕ ಸಿಬ್ಬಂದಿಗೆ ರೋಬೋಟಿಕ್ಸ್ ಮತ್ತು ಇ-ಯಂತ್ರ ಪ್ರಯೋಗಾಲಯದಲ್ಲಿ 30 ದಿನಗಳ ಆನ್‌ಲೈನ್ ತರಬೇತಿಯನ್ನು ನೀಡುತ್ತಾರೆ ಹಾಗೂ ತರಬೇತಿ ಕಾರ್ಯಕ್ರಮದ ಕೊನೆಯಲ್ಲಿ ಯಶಸ್ವಿ ವಿದ್ಯಾರ್ಥಿಗಳೊಂದಿಗೆ ಬೋಧಕ ಸಿಬ್ಬಂದಿಗಳಿಗೂ ಪ್ರಮಾಣಪತ್ರಗಳನ್ನು ನೀಡುತ್ತಾರೆ. ಐಐಟಿ ಬಾಂಬೆ ಶರಣಬಸವ ವಿಶ್ವವಿದ್ಯಾಲಯದಲ್ಲಿ ಅದರ ಸ್ಥಾಪನೆಗೆ ಉಪಕರಣಗಳು ಮತ್ತು ಇತರ ಪ್ರಯೋಗಾಲಯ ಉಪಕರಣಗಳನ್ನು ಈಗಾಗಲೇ ಒದಗಿಸಿದೆ.

ರೋಬೋಟಿಕ್ಸ್, ತಂತ್ರಜ್ಞಾನದ ಜಗತ್ತಿನಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಪ್ರತಿ ಉದ್ಯಮದಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರಯೋಗಾಲಯದ ವರ್ಚುವಲ್ ಉದ್ಘಾಟನಾ ಸಮಾರಂಭದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ವಿಶ್ವವಿದ್ಯಾಲಯದ ಡೀನ್ ಡಾ. ಲಕ್ಷ್ಮೀ ಪಾಟೀಲ್ ಮಾಕಾ ಹಾಗೂ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯುನಿಕೇಶನ್ಸ್ ಇಂಜಿನಿಯರಿಂಗ್ (ಮಹಿಳಾ) ವಿಭಾಗದ ಅಧ್ಯಾಪಕರು ಉಪಸ್ಥಿತರಿದ್ದರು.

ಅತ್ಯಾಧುನಿಕ ಇ-ಯಂತ್ರ ಪ್ರಯೋಗಾಲಯವನ್ನು ಬಾಂಬೆ ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿನ ಇ-ಯಂತ್ರದ ಪ್ರಧಾನ ತನಿಖಾಧಿಕಾರಿ ಪ್ರೊ. ಕವಿ ಆರ್ಯ ಉದ್ಘಾಟಿಸಿದರು.

ಹಳೆ ವಿದ್ಯಾರ್ಥಿಗಳ ಒಕ್ಕೂಟ ರಚನೆ

ಕಾಲೇಜಿನ ಅಭಿವೃದ್ಧಿಗೆ ಒಕ್ಕೂಟದ ಸಹಕಾರ ಅಗತ್ಯ

ಜೇವರ್ಗಿ: ಕಾಲೇಜಿನ ಶ್ರೇಯ ಅಭಿವೃದ್ಧಿಗೆ ಹಳೆ ವಿದ್ಯಾರ್ಥಿಗಳ ಅವಶ್ಯಕತೆ ಇರುವದರಿಂದ ಇಂದು ನಮ್ಮ ಕಾಲೇಜಿನ ಸಿಬ್ಬಂದಿ ಸಾಯದೊಂದಿಗೆ ಹಳೆ ವಿದ್ಯಾರ್ಥಿಗಳ ಸಭೆ ಕರೆದು ಪದಾಧಿಕಾರಿಗಳ ನೇಮಕ ಮತ್ತು ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯ ಜರುಗಿತು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಬೆಳವಣಿಗೆಗಾಗಿ ಹಳೆ ವಿದ್ಯಾರ್ಥಿಗಳ ಸಂಘ ರಚನೆ ಮಾಡಲಾಯಿತು. ಈ ಸಂಘದ ಉದ್ದೇಶ ಕಾಲೇಜು ಅಭಿವೃದ್ಧಿಗೆ ಮತ್ತು ಸಮಸ್ಯೆಗಳ ಕುರಿತು ಸಮಗ್ರವಾಗಿ ಹಳೆ ವಿದ್ಯಾರ್ಥಿಗಳು ಇನ್ನೂ ಅಭಿವೃದ್ಧಿ ಕುರಿತು ತಾವು ಮಾಡುವ ಕೆಲಸ ಕುರಿತು ಈ ಸಭೆಯಲ್ಲಿ ಚರ್ಚೆ ಮಾಡಲಾಯಿತು. ಹಳೇಬೀರು ಹೊಸ ಚಿಗುರು ಎಂಬ ವಿಶ್ವವಿದ್ಯಾಲಯದ ಯೋಜನೆ ಮೇರಿಗೆ ಇಂದು ನಮ್ಮ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿಗಳ ಒಕ್ಕೂಟ ಅವರ ಜವಾಬ್ದಾರಿಗಳನ್ನು ತಿಳಿಸಲಾಯಿತು. ಕಾಲೇಜಿನ ಅಭಿವೃದ್ಧಿಗಾಗಿ ಹಳೆಯ ವಿದ್ಯಾರ್ಥಿಗಳ ಸಹಕಾರ ಅಗತ್ಯ, ಡಾ. ಕರಗುಳೇಶ್ವರ್ ಹೇಳಿದರು.

ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ಡಾ. ಗಿರೀಶ್ ರಾಟೋಡ ಆಯ್ಕೆಯಾದರು, ಉಪಾಧ್ಯಕ್ಷರಾಗಿ ಡಾಕ್ಟರ್ ಅಹಮ್ಮದ್ ಯಾಸೀನ್, ಹಾಗೂ ನಾಗಣ್ಣ ಶಾಬಾದ್ ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಗಳಾಗಿ ಲಿಂಗರಾಜ್ ಹಿರೇಗೌಡ, ಕಾರ್ಯದರ್ಶಿಗಳಾಗಿ ಶರಣಪ್ಪ ಎನ್ ನೇರಡಿಗಿ, ಸಹಕಾರದರ್ಶಿ ಅಬ್ದುಲ್ ಹಮೀದ್, ಸಹಕಾರದರ್ಶಿ ಶರಣಪ್ಪ ಎಮ್ ಬಡಿಗೇರ್, ಸಂಘಟನ ಕಾರ್ಯದರ್ಶಿ ಜಗನ್ನಾಥ್ ಉಖನಾಳ,ಭೀಮರಾಯ, ಖಜಾಂಚಿ ವೆಂಕಟರಾವ್ ಮುಜುಂದರ್, ವಿಜಯ್ ಕುಮಾರ್ ನರಿಬೋಳ ಕಾನೂನು ಸಲಹೆಗಾರರು, ಮಹಿಳಾ ಪ್ರತಿನಿಧಿ ಕುಮಾರಿ ಶಾಲಿನಿ ಹಡಪಾದ, ಕಾರ್ಯಕಾರಿ ಸಮಿತಿಯ ಸದಸ್ಯರು ಡಾ. ಸಂತೋಷ್ ಕುಮಾರ್, ಎಲ್ಲಾ ಲಿಂಗ್ ಬೋಸ್ಲೆ, ಅಂಬಿಕಾ ಜಮಾದಾರ್, ವಿನೋದ್ ಕುಮಾರ್, ಯಲ್ಲಲಿಂಗ ಪೂಜಾರಿ, ಡಾಕ್ಟರ್ ಶರಣಪ್ಪ ಸೈದಾಪುರ್ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

{ಈಶ್ವರ ಖಂಡ್ರೆ } ಸಚಿವ

ಭಾದ್ರಪದ ಶುಕ್ಲ ಚೌತಿಯ ದಿನ ಆಚರಿಸುವ ಸಿದ್ಧಿವಿನಾಯಕ ವ್ರತದ ಕಥೆಯಲ್ಲಿ ಚಿನ್ನ, ಬೆಳ್ಳಿ ಅಥವಾ ಮಣ್ಣಿನ ಗಣೇಶ ಮೂರ್ತಿ ಪೂಜಿಸುವಂತೆ ತಿಳಿಸಲಾಗಿದೆ. ಆದರೆ ಪರಿಸರಕ್ಕೆ ಹಾನಿ ಆಗುವ ಪಿಒಪಿ ಗಣೇಶ ಮೂರ್ತಿಗಳ ವ್ಯಾಪಕ ಬಳಕೆ ಆಗುತ್ತಿದ್ದು, ಪರಿಸರ ಉಳಿಸಲು ಜನ ಜಾಗೃತಿ ಮೂಡಿಸಬೇಕು.



ಸ್ಮಾರಕಗಳ ಸಂರಕ್ಷಣೆಗೆ ಕ್ರಮ: ಸಚಿವ ಖರ್ಗೆ

ಕಲಬುರಗಿ: ಜಿಲ್ಲೆಯ ನಾಗಾವಿ ಮತ್ತು ಕಾಳಗಿಯಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವದರೊಂದಿಗೆ ಈ ಎರಡು ಸ್ಥಳಗಳನ್ನು

ಪ್ರವಾಸೋದ್ಯಮ ದೃಷ್ಟಿಯಿಂದಲೂ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಖರ್ಗೆ ಹೇಳಿದ್ದಾರೆ. ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳೊಂದಿಗೆ ಬೆಂಗಳೂರಿನಲ್ಲಿ ಸಭೆ ನಡೆಸಿದ ಸಚಿವರು ಕಲಬುರಗಿ ಜಿಲ್ಲೆಯ ನಾಗಾವಿ, ಸನ್ನತಿ, ಕಾಳಗಿ, ಮಲಖೇಡ್, ಶಹಬಾದ್, ಫಿರೋಜಾ ಬಾದ್ ಹಂಪಾಪುರ, ಕನಗನಹಳ್ಳಿ ಐತಿಹಾಸಿಕ ಸ್ಮಾರಕಗಳನ್ನು ಹೊಂದಿ ವೆ. ಈ ಸ್ಮಾರಕಗಳನ್ನು ಮರಳಿ ಹಿಂದಿನ ರೂಪಕ್ಕೆ ತರುವದರೊಂದಿಗೆ ಮುಂದಿನ ಪೀಳಿಗೆಗಾಗಿ ಈ ಸ್ಥಳಗಳನ್ನು ಸಂರಕ್ಷಿಸಲಾಗುತ್ತಿದೆ ಹಾಗೂ ಇತಿಹಾಸದ ಬಗ್ಗೆ ಕುತೂಹಲ ಇರುವವರಿಗೆ ಇಲ್ಲಿನ ಐತಿಹಾಸಿಕ ಮಹತ್ವವನ್ನು ದಾಖಲೆ ಮಾಡಲಾಗುವುದು ಹಾಗೂ ಪ್ರವಾಸೋದ್ಯಮ ದೃಷ್ಟಿಯಿಂದ ರಸ್ತೆ, ನೀರು, ಶೌಚಾಲಯ ಮತ್ತಿತರ ಸೌಲಭ್ಯಗಳನ್ನು ರೂಪಿಸಲಾಗುವುದು ಎಂದು ಹೇಳಿದರು. ಕಾಳಗಿಯಲ್ಲಿನ ನರಸಿ ಗಸ್ವಾಮಿ, ಸೂರ್ಯ ನಾರಾಯಣಸ್ವಾಮಿ ಹಾಗೂ ಕಾಳೇಶ್ವರ ದೇಗು ಲಗಳು ಐತಿಹಾಸಿಕ ಮಹತ್ವವ ಈ ಸ್ಥಳಗಳನ್ನು ರಕ್ಷಣೆ ಮಾಡಿ, ಯಾತ್ರಾರ್ಥಿಗಳಿಗೆ ಅನುಕೂಲ ಕಲ್ಪಿಸಿದಕೊಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಚಿವರು ಹೇಳಿದರು. ಹೊಳಕುಂಡದ ಬಳಿ 28 ಎಕರೆ ಯಲ್ಲಿ ಗುಮ್ಮಟಗಳನ್ನು ಸಂರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಗುಣಮಟ್ಟದ ಕಾಮಗಾರಿಗೆ ಆದ್ಯತೆ ಕೊಡಿ

ಆಳಂದ: ಶಾಲಾ ಮಕ್ಕಳ ಭವಿಷ್ಯ ವೃದ್ಧಿಸುವ ಉದ್ದೇಶದಿಂದ ಕಾಮಗಾರಿಯ ಕಟ್ಟಡವು ಗುಣಮಟ್ಟದಿಂದ ಕೂಡಿರಬೇಕೆಂದು ಗುತ್ತಿಗೆದಾರನಿಗೆ ಮುಖ್ಯಮಂತ್ರಿ ಸಲಹೆಗಾರ, ಶಾಸಕ ಬಿ.ಆರ್.ಪಾಟೀಲ್ ಅವರು ಖಡಕ್ಕಾಗಿ ತಾಕೀತು ಮಾಡಿದರು.

ಪಟ್ಟಣದ ನೇಕಾರಿ ಕಾಲೋನಿಯ ಸರಕಾರಿ ಪ್ರಾಥಮಿಕ ನೇಕಾರ ಕಾಲೋನಿಯಲ್ಲಿ ಕೆಕೆಆರ್‌ಡಿಯಲ್ಲಿ ಮಂಜೂರು ಆದ 50 ಲಕ್ಷ ರು 3 ನೂತನ ಕೋಣೆಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹಣದಾಸೆಯಿಂದಾಗಿ ಕಳಪೆ ದರ್ಜೆ ಕಾಮಗಾರಿ ಮಾಡಿದ್ದರೆ ಗುತ್ತಿಗೆದಾರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ, ಶಾಲೆಯ ಸುತ್ತಮುತ್ತಲಿನ ಪಾಲಕರು ಕೂಡಾ ಸಹಕರಿಸಿಬೇಕು ಮತ್ತು ಪಿಡಬ್ಲುಡಿ ಇಲಾಖೆಯ ಅಧಿಕಾರಿಗಳು ಕೂಡಾ ಮೇಲಿಂದ ಮೇಲೆ ಬಂದು ಕಟ್ಟಡದ ಪರಿಶೀಲನೆ ಮಾಡಬೇಕು, ಸಿಸಿ ಕ್ಯಾಮರಾ, ಕಂಪ್ಯೂಟರಗಳು ಸಹ ಈ ಅನುದಾನದಲ್ಲಿ ಒದಗಿಸಲಾಗುತ್ತಿದೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬಹುತೇಕ ಕ್ಷೇತ್ರದಲ್ಲಿ ಸರಕಾರ ಶಾಲೆಗಳು ಶಿಥಿಲಗೊಂಡು ಮಳೆಯಿಂದ ಸೋರಿಕೆ ಆಗುತ್ತಿವೆ. ಅಗತ್ಯಗೆ ತಕ್ಕಂತೆ ಶಾಲಾ ಕಟ್ಟಡಕ್ಕೆ 18 ಕೋಟಿ ರು. ಅನುದಾನ ಇಡಲಾಗಿದ್ದು ಹಂತ ಹಂತವಾಗಿ ಜಾರಿ ಮಾಡಲಾಗುವುದು ಎಂದರು.

ಕೆಪಿಸಿಸಿ ಸದಸ್ಯ ರಾಜಶೇಖರ ಪಾಟೀಲ್, ಪುರಸಭೆ ಸದಸ್ಯ ಚಂದ್ರಕಾಂತ ಹತ್ತರಕಿ, ಲಕ್ಷ್ಮಣ ಝುಳಕಿ, ಅಬ್ದುಲ ವಾಹೀದ ಜರ್ದಿ, ತಾ.ಪಂ ಮಾಜಿ ಅಧ್ಯಕ್ಷ ಮೋಹನಗೌಡ ಪಾಟೀಲ್, ನೇಕಾರ ಸಂಘದ ಯೂನಸ ಅಲಿ, ಗುತ್ತಿಗೆದಾರರ ಜಮೀಲ ಅನ್ಸಾರಿ, ಶಾಲೆ ಮುಖ್ಯಗುರು ಚಂದುಬಾಯಿ, ಎಸ್‌ಡಿಎಂಸಿ ಅಧ್ಯಕ್ಷ ನಾಮದೇವ ಕಾಂಬಳೆ ಮತ್ತು ಮಹ್ಮದ ಅನ್ಸಾರಿ, ಪಾಶಾ ಜರ್ದಿ, ಸತ್ತಾರ ಮುರುಮಕರ, ಸುಲೇಮಾನ ಮುಗುಟ, ಪೀರಾಸತ ಅನ್ಸಾರಿ, ಮುಕ್ತಾರ ಸಗರಿ, ಸಿದ್ದು ಟೈಪಿಸ್ಟ್ ಸಂಜಯನಾಯಕ, ಸೇರಿದಂತೆ ಇದ್ದರು.

> ಶಾಸಕರು ಕ್ಷೇತ್ರದಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ಕೊಡುತ್ತಿದ್ದಾರೆ, ಶಿಕ್ಷಕರು ಕೊರತೆ ಇದ್ದ ಶಾಲೆಗಳಲ್ಲಿ ಹೆಚ್ಚುವರಿ ಅತಿಥಿ ಶಿಕ್ಷಕರನ್ನು ನೇಮಿಸಿ ಇದಕ್ಕೆ ತಗಲು ಅನುದಾನವನ್ನು ಕೊಡಿಸುವ ಭರವಸೆ.
> –ಸಿ.ಜಿ.ಹಳ್ಳದ, ಕ್ಷೇತ್ರ ಶಿಕ್ಷಣಾಧಿಕಾರಿ

ಡಾ.ಜಯಶ್ರೀಗೆ ಸತೀಶ್ ಧವನ್ ರಾಜ್ಯ ಪ್ರಶಸ್ತಿ

ಕಲಬುರಗಿ: ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್

ವಿಭಾಗದ ಪ್ರಾಧ್ಯಾಪಕರಾದ ಡಾ.ಜಯಶ್ರೀ ಅಗರಖೇಡ್, ಅವರಿಗೆ 2022ನೇ ಸಾಲಿನ ಕರ್ನಾಟಕ ಸರಕಾರದ ಪ್ರೊ.ಸತೀಶ್ ಧವನ್ ರಾಜ್ಯ ಪ್ರಶಸ್ತಿ ಲಭಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದಿಂದ 'ಸಂಶೋಧನಾ ಪ್ರಕಟಣೆ' ಗಾಗಿ ಎರಡು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊ ಂಡ ಕಲ್ಯಾಣ ಕರ್ನಾಟಕದ ಅತ್ಯಂತ ಕಿರಿಯ ಮಹಿಳೆಯಾ ಗಿದ್ದಾರೆ. ಅದಲ್ಲದೆ ಇವರಿಗೆ ಹಲವಾರು ಪ್ರಶಸ್ತಿಗಳು ದೊರೆತಿವೆ. ಅತ್ಯುತ್ತಮ ಮಹಿಳಾ ಎಂಜಿನಿಯರಿಂಗ್ ಕಾಲೇಜು ಶಿಕ್ಷಕಿ, 3 ಸೂಪರ್ ಸ್ಟಾರ್‌ಗಳು, 3 ಡಿಸಿಪ್ಲಿನ್ ಸ್ಟಾರ್‌ಗಳು, 2 ಡೊಮೇನ್ ಸ್ಕಾಲರ್ ಪ್ರಶಸ್ತಿಗಳು, 1 ಉತ್ಸಾಹಿ ಪ್ರಶಸ್ತಿ, 4ಚಿನ್ನದ ಪದಕ, 13 ಬೆಳ್ಳಿ ಪದಕಗಳೊಂದಿಗೆ ಪ್ರೇರಿತ ಲರ್ನರ್ ಪ್ರಶಸ್ತಿ ಪಡೆದಿದ್ದಾರೆ. ಅದಲ್ಲದೆ 16 ಪೇಟೆಂಟ್‌ಗಳಲ್ಲಿ ಭಾರತೀಯ ಪೇಟೆಂಟ್‌ನೊಂದಿಗೆ ನೀಡಲಾದ ಮೂರು ಸಂಶೋಧನಾ ಕೃತಿಗಳು ಮತ್ತು ಮೂರು ಪ್ರಕ್ರಿಯೆ ಪೇಟೆಂಟ್‌ಗಳು ಮತ್ತು ನೋಂದಣಿ ಯೊಂದಿಗೆ ನೀಡಲಾದ ನಾಲ್ಕು ವಿನ್ಯಾಸ ಪೇಟೆಂಟ್‌ಗಳನ್ನು ಪ್ರಕಟಿಸಲಾಗಿದೆ. ಇವರು ಸಲ್ಲಿಸಿದ 200 ಸಂಶೋಧನಾ ಕೃತಿಗಳ ಪ್ರಕಟಣೆಗಳಲ್ಲಿ 100 ಪ್ರಕಟಣೆಗಳು ಸ್ಕೋಪಸ್ ಇಂಡೆಕ್ಸ್ ಅಂತಾರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಗೊಂಡಿವೆ.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಶುಕ್ರವಾರ
23 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಸೋಜಿಗ

ಹಸುರಿನ ಚಿತ್ತಾರ ಬರೆದ ಎಲೆ ಚಪ್ಪರ
ಉಸುರಿಗೆ ಸಿಹಿ ತುಂಬಿದ ಈ ಸೋಜಿಗ
ಭಾನು ಸುರಿಸಿದ ಬಿಸಿಲ ಕೋಲಿಗೆ
ಕಾಡೆಲ್ಲ ಬಣ್ಣದ ಬೆಳಕಿನ ದೀವಳಿಗೆ

• ಶಶಿ

ಚಿತ್ತ ವಿಹಾರ

ಶಿಸ್ತು ಇದ್ದರೆ ಗೆದ್ದೆ

ಗೆಲುವು ಗಳಿಸಿಕೊಳ್ಳಬೇಕು ಎನ್ನುವ ಅತೀವ ಹಂಬಲ ಇರುವ ವ್ಯಕ್ತಿಗೆ ಇರಬೇಕಾದ ಮೊದಲ ಆದ್ಯತೆಯೇ ಶಿಸ್ತು. ಶಿಸ್ತು ಎಂದರೆ ಕಲಿಸುವುದು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ನಿಯಮಗಳನ್ನು ಅಥವಾ ಆದೇಶಗಳನ್ನು ಪಾಲಿಸಬೇಕಾದ ಅಗತ್ಯವಿರುವ ಸ್ವಯಂ ನಿಯಂತ್ರಣವಾಗಿದೆ. ಶಿಸ್ತು ಎನ್ನುವ ಪಾಠಶಾಲೆಯು ಹೇಳಿಕೊಡುವ ಪ್ರಧಾನವಾದ ಅಧ್ಯಾಯವೇ ಸ್ವಯಂ ನಿಯಂತ್ರಣ. ಇದು ದೀರ್ಘಾವಧಿಯ ಗುರಿಗಳನ್ನು ಸಾಧಿಸಲು ನಮ್ಮನ್ನು ಎತ್ತಿಕಟ್ಟಿ, ನಮ್ಮ ಪರಿಕಲ್ಪನೆ ಹಾಗೂ ವರ್ತನೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಹೊಂದಿದೆ. ಜೀವನ ಹಾಗೂ ಶಿಕ್ಷಣದಲ್ಲಿನ ಎಲ್ಲ ರೀತಿಯ ಹೆಚ್ಚಿನ ಧ್ಯೇಯೋದ್ದೇಶಗಳನ್ನು ಸಾಧಿಸಿಕೊಳ್ಳಲು ಶಿಸ್ತು ಎನ್ನುವುದು ಒಂದು ಬಹುಮುಖ್ಯ ಅಂಶವಾಗಿದೆ. ಇದರಿಂದ ಜೀವನದಲ್ಲಿ ಹಾಕಿಕೊಂಡ ಗುರಿಗಳ ಸಾಧನೆಯು ಕ್ಷಿಪ್ರಗತಿಯಲ್ಲಿ ಸಾಧ್ಯವಾಗುತ್ತದೆ.

ನಮ್ಮಲ್ಲಿನ ಅಪರಿಮಿತ ಸೋಮಾರಿತನವನ್ನು ಬಲವಾಗಿ ಒದ್ದು ಹೊಡೆದೋಡಿಸುವ ಅಸ್ತ್ರವೇ ಶಿಸ್ತು. ನಮ್ಮ ದಿನನಿತ್ಯದ ದಿನಚರಿಯು ನಗು, ಉಲ್ಲಾಸ, ಉತ್ಸಾಹಗಳಿಂದ ಕೂಡಿರಲು ಇವೆಲ್ಲದಕ್ಕೂ ಮೂಲ ಪ್ರೇರಣೆಯೇ ಶಿಸ್ತು. ಯಾವುದೇ ಸಮಯದಲ್ಲಿಯೂ ನಮ್ಮ ವ್ಯಕ್ತಿತ್ವ ಕುಸಿದು ಕುಗ್ಗಿ, ನರಳದಂತೆ ನೋಡಿಕೊಳ್ಳುವ ಗುರುತರ ಹೊಣೆ ಇದರದ್ದಾಗಿದೆ. ಮನುಷ್ಯನಿಗೆ ಸಕಾರಾತ್ಮಕ ವ್ಯಕ್ತಿತ್ವ ಹಾಗೂ ಧನಾತ್ಮಕ ಚಿಂತನೆಗಳು ಮೈಗೂಡಿಸಿದರೆ ಶಿಸ್ತು ನಮ್ಮಲ್ಲಿ ನಳನಳಿಸುತ್ತದೆ. ಶಿಸ್ತಿನ ವ್ಯಕ್ತಿಯು ತನ್ನ ಸಮರ್ಪಕ ಸ್ವಭಾವ ಹಾಗೂ ಆದರ್ಶಮಯ ನಡವಳಿಕೆಗಳಿಗೆ ಸಮಾಜದಲ್ಲಿನ ಇತರರಿಂದ ಅಪಾರ ಗೌರವ, ಆದರಗಳ ಪಡೆಯುತ್ತಾನೆ. ಶಿಸ್ತು ಆತ್ಮವಿಶ್ವಾಸದ ಪ್ರತೀಕ. ಶಿಸ್ತು ಇರುವವರಲ್ಲಿ ಧೈರ್ಯ, ಶಕ್ತಿ, ಸಾಮರ್ಥ್ಯ ತನ್ನಿಂದಾನೇ ಬೆಳೆದು ನಿಲ್ಲುತ್ತದೆ. ಸಂಪೂರ್ಣ, ಪರಿಪೂರ್ಣ, ಅರ್ಥಪೂರ್ಣ ಯಶಸ್ಸಿನೊಂದಿಗೆ ಜೀವನ ನಡೆಸಲು ಶಿಸ್ತು ನಮಗೆ ಅನುಕ್ಷಣವೂ ಸಹಕಾರಿಯಾಗುತ್ತದೆ. ಶಿಸ್ತು ಇದ್ದರೆ ಗೆದ್ದೆ, ಇಲ್ಲದಿದ್ದರೆ ಬಿದ್ದೆ ಎನ್ನುವ ಮಾತು ಜನಜನಿತ. ನಮ್ಮಲ್ಲಿ ಶಿಸ್ತು ಇರದೇ ಹೋದರೆ ಕನಸುಮನಸಲ್ಲೂ ಯಶಸ್ಸು ಕಾಣಲು ಸಾಧ್ಯವಿಲ್ಲ. ಅದಕ್ಕೆಂದೆ ಬರಿಮೈ ಫಕೀರ ಮಹಾತ್ಮ ಗಾಂಧಿ ಅವರು ಹೇಳುವಂತೆ 'ಶಿಸ್ತು ಇಲ್ಲದ ಜೀವನ ಕಡಿವಾಣವಿಲ್ಲದ ಕುದುರೆಯಂತೆ' ಎನ್ನುವ ಹೇಳಿಕೆಯು ವಿಶೇಷ ಅರ್ಥವುಳ್ಳದ್ದು.

• ರಂಗನಾಥ್ ಗುಡಿಮನಿ

ಮುಸುಕು ತೆರೆದು ಚಿತ್ರಗ್ರಹಣ!

• ಬೀರಣ್ಣ ನಾಯಕ ಮೊಗಟಾ

ಮಹಾ ಕವಿ ಕಾಳಿದಾಸನು, ಶಬ್ದ ಮತ್ತು ಅರ್ಥದ ಬಗ್ಗೆ ಅಭಿಪ್ರಾಯ ಪಡುತ್ತಾ 'ಶಬ್ದ ಮತ್ತು ಅರ್ಥಗಳು ಪಾರ್ವತಿ ಪರಮೇಶ್ವರ ಇದ್ದ ಹಾಗೆ' ಎಂದಿದ್ದಾನೆ. ಇಲ್ಲಿ ನಾವು ಶಬ್ದ ಮತ್ತು ಅರ್ಥದ ಮಹತ್ವವನ್ನು ಕಾಣಬಹುದು. ಹಾಗೆಯೇ ಸಾವಿರಾರು ಪುಟಗಳಲ್ಲಿ ಹೇಳಲ್ಪಡುವ ಒಂದು ವಸ್ತುವಿನ, ಒಂದು ಪ್ರದೇಶದ ಶಬ್ದ ಮತ್ತು ಅರ್ಥವನ್ನು ಒಂದು ಚಿತ್ರ ನಮ್ಮ ಕಣ್ಣೆದುರಿಗೆ ತೆರೆದಿಡುತ್ತದೆ. ಕೇರಳದ ವಯನಾಡ್ ನಲ್ಲಿ ನಡೆದ ನೈಸರ್ಗಿಕ ವಿಕೋಪದ ಪರಿಕಲ್ಪನೆಯನ್ನು ಒಂದು ಚಿತ್ರ ನಮಗೆ ಮಾಡಿಸುತ್ತದೆ. ಇಂದು ಒಂದು ಘಟನೆ ಅಥವಾ ವಿದ್ಯಮಾನವನ್ನು ನಮಗೆ ತಿಳಿಸುವಲ್ಲಿ ಛಾಯಾಚಿತ್ರಗಳು ಬಹು ಶಕ್ತಿಶಾಲಿ ಮಾಧ್ಯಮವಾಗಿ ಕೆಲಸ ಮಾಡುತ್ತವೆ. ಬಹು ದೊಡ್ಡ ಗಾತ್ರದ ಕ್ಯಾಮೆರಾಗಳ ಮೂಲಕ ಚಿತ್ರಿಸುವ ಚಿತ್ರಗಳು ಹಿಂದೆ ಪ್ರಮುಖ ದೃಶ್ಯ ಮಾಧ್ಯಮ ಎನಿಸಿದ್ದವು. ಕ್ಯಾಮೆರಾಗಳು ಬೆಳೆದು ಬಂದ ಬಗೆಯೇ ರೋಚಕ ಎನಿಸಿದ್ದು, ಇಂದು ಡಿಜಿಟಲ್ ಯುಗದಲ್ಲಿ, ಮೊಬೈಲ್‌ನಲ್ಲೂ ಕ್ಯಾಮೆರಾಗಳು ಇರುವುದರಿಂದ, ಛಾಯಾಚಿತ್ರ ಕಲೆಯಲ್ಲೆ ಕ್ರಾಂತಿಯಾಗಿದೆ. ಆದರೆ, ಹಿಂದೆ ಇದ್ದ ದೊಡ್ಡ ಗಾತ್ರದ ಕ್ಯಾಮೆರಾಗಳೇ ಒಂದು ವಿಸ್ಮಯ!

ಸುಮಾರು ಅರ್ಧಶತಮಾನದ ಹಿಂದೆ ನಾನು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹಿರೇಗುತ್ತಿಯ ಸೆಕಂಡರಿ ಪ್ರೌಢ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಓದಿ ಪರೀಕ್ಷೆಗೆ ತೆರಳುವ ಸಂದರ್ಭದಲ್ಲಿ ನಮ್ಮ ಬ್ಯಾಚ್‌ನ ಫೋಟೋ ತೆಗೆಯುವ ಸಂದರ್ಭದಲ್ಲಿ ಈ ರೀತಿಯ ದೊಡ್ಡ ಗಾತ್ರದ ಕ್ಯಾಮರಾ ಬಳಕೆಯಾಗಿತ್ತು! ಅಣ್ಣನ ವಾಚ್‌ನ್ನು ಕೈಗೆ ಕಟ್ಟಿ, ಇದ್ದ ಒಳ್ಳೆಯ ಅಂಗಿ ಚಡ್ಡಿಗೆ ಇಸ್ತ್ರಿ ಮಾಡಿಸಿ, ನಮ್ಮ ಇಷ್ಟದ ಗೆಳೆಯರ ಜೊತೆಗೆ ನಿಲ್ಲಲು ಹಾಗೂ ನಮ್ಮ ಪ್ರೀತಿಯ ಶಿಕ್ಷಕರ ಹಿಂದೆ ಇರಲು ಪೈಪೋಟಿ ನಡೆಸಿ ಹೊತ್ತು ಮುಳುಗುವ ಹೊತ್ತಿಗೆ ಆಳೆತ್ತರದ ಬೆಂಚ್ ಹತ್ತಿ ಪ್ರಯಾಸ ಪಟ್ಟು ನಿಂತಿದ್ದವು. ಆಗ, ದೊಡ್ಡ ಗಾತ್ರದ ಕ್ಯಾಮೆರಾವನ್ನು ಸ್ಟ್ಯಾಂಡಿನ ಮೇಲಿಟ್ಟು, ಒಂದು ಕಪ್ಪನೆಯ ಚೀಲದಲ್ಲಿ ಕ್ಯಾಮರಾ ಮೆನ್ ಸೇರಿ ಕೊಂಡು 'ಸ್ಮಾಯಿಲ್ ಪ್ಲೀಸ್' ಎನ್ನುತ್ತ ಪೋಟೊ ತೆಗೆಯುತ್ತಿದ್ದರು! ಅಂದಿನ ದಿನಗಳಲ್ಲಿ ಬಹುತೇಕರ ಪಾಲಿಗೆ ಅದೇ ಪ್ರಥಮ ಫೋಟೋ ಆಗಿರುತಿತ್ತು! ಮುಸುಗು ಹಾಕಿಕೊಂಡ ಕ್ಯಾಮೆರಾ ಮನ್, ಲೆನ್ಸ್‌ನ್ನು ಒಂದೆರಡು ಸೆಕೆಂಡ್ ತೆಗೆದು, ಚಿತ್ರವನ್ನು ಸೆರೆ ಹಿಡಿದು, ಇಡೀ ಕ್ಯಾಮೆರಾ ಮತ್ತು ಫಿಲಂನ್ನು ಸ್ಟುಡಿಯೋಗೆ ತೆಗೆದುಕೊಂಡು ಹೋಗುತ್ತಿದ್ದರು. ಸ್ಟುಡಿಯೋದಲ್ಲಿ, ಆ ಫಿಲಂನ್ನು ಸೂಕ್ತವಾಗಿ 'ತೊಳೆದು', ನಂತರ ಪ್ರಿಂಟ್ ಹಾಕಿ ಕೊಡುತ್ತಿದ್ದರು. ಇದಕ್ಕೆ ಎರಡು ಮೂರು ದಿನಗಳ ಕಾಲಾವಕಾಶ ಅಗತ್ಯವಿರುತ್ತಿತ್ತು. ನಂತರ, ನಮಗೆಲ್ಲಾ ಪ್ರಿಂಟ್ ಹಾಕಿಸಿ, ಅದರ ಕೆಳಗೆ ನಮ್ಮೆಲ್ಲರ ಹೆಸರನ್ನು ಸಹ ಮುದ್ರಿಸಿ ಕೊಡುತ್ತಿದ್ದ ಆ ಫೋಟೋವನ್ನು ಫ್ರೇಮ್ ಹಾಕಿಸಿ, ನಮ್ಮ ಮನೆಯ ಗೋಡೆಗಳ ಮೇಲೆ ನೇತು ಹಾಕಿ ಸಂತಸ ಪಡುತ್ತಿದ್ದವು, ಮನೆಗೆ ಬಂದವರಿಗೆಲ್ಲರಿಗೂ, ಆ ಫೋಟೋದಲ್ಲಿದ್ದ ನಮ್ಮೆಲ್ಲರ ಹೆಸರುಗಳನ್ನು ಹೇಳಿ ಸಂಭ್ರಮಿಸುತ್ತಿದ್ದವು!

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

• ನವೀನಕೃಷ್ಣ ಎಸ್. ಉಪ್ಪಿನಂಗಡಿ

ಕೊಕ್ಕು ಮತ್ತು ಪಾದ ಬಳಸಿ, ಎರಡು ಅಥವಾ ಮೂರು ಎಲೆಗಳನ್ನು ಹೊಲಿದು ಗೂಡು ಕಟ್ಟುವ ಈ ಹಕ್ಕಿಯ ಕೌಶಲ್ಯವು ವಿಸ್ಮಯ ಹುಟ್ಟಿಸುವಂತಹದ್ದು. ಮನುಷ್ಯರು ವಾಸಿಸುವ ಸನಿಹದಲ್ಲೇ ಗೂಡು ಕಟ್ಟುವುದು ಇದರ ಹವ್ಯಾಸ.

ಪಕ್ಷಿಲೋಕದ ದರ್ಜಿ

ನಿಶೆ ಕಳೆದು ಉಷೆ ಮೂಡುವ ಹೊತ್ತು. ದಿಗಂತದಿಂದ ಸೂರ್ಯರಶ್ಮಿ ಆಗತಾನೇ ಧರೆಯನ್ನು ಸೋಕುವ ಸಮಯದಲ್ಲಿ ಹೊರಬಂದಾಗ ಟುವ್ವಿ ಟುವ್ವಿ ಟುವ್ವಿ ಟುವ್ವಿ ಎನ್ನುವ ದೊಡ್ಡದಾದ ಸ್ಪಷ್ಟ ಶಬ್ದ ಕಿವಿಗೆ ಬೀಳುತ್ತಿತ್ತು. ಅದೊಂದು ಪುಟ್ಟ ಹಕ್ಕಿಯ ಸ್ವರವೆಂದು ಮೊದಲ ಬಾರಿಗೆ ತಿಳಿದಾಗ ಆಶ್ಚರ್ಯ! ಗುಬ್ಬಚ್ಚಿಗಿಂತಲೂ ಪುಟ್ಟದಾದ ಹಕ್ಕಿಯ ಸ್ವರ ಇಷ್ಟು ತಾರಕಕ್ಕೇರುತ್ತದೆ ಎಂದರೆ ಅದೊಂದು ವಿಸ್ಮಯ. ಟೈಲರ್ ಬರ್ಡ್ ಅಥವಾ ಟುವ್ವಿ ಹಕ್ಕಿ ನೋಡಲು ಬಹು ಆಕರ್ಷಕ ಮತ್ತು ಸುಂದರ. 13 ಸೆಂ. ಮೀ. ಗಾತ್ರವಿರುವ ಈ ಹಕ್ಕಿಯ ಮೇಲ್ಭಾಗ ಬಹುತೇಕ ಹಸುರು ಬಣ್ಣ, ಕೆಳ ಭಾಗ ಬಿಳಿ ಬಣ್ಣಗಳಿಂದ ಕೂಡಿದೆ. ಇದರ ಹಣೆಯಲ್ಲಿ ಮಣ್ಣು ಮಿಶ್ರಿತ ಕೆಂಪು ಬಣ್ಣದ ಪಟ್ಟೆ ಇದೆ. ಗಂಡು ಮತ್ತು ಹೆಣ್ಣು ಹಕ್ಕಿಗಿರುವ ವ್ಯತ್ಯಾಸವೆಂದರೆ ಗಂಡು ಹಕ್ಕಿಗೆ ಬಾಲದಲ್ಲಿ ಎರಡು ಪುಕ್ಕಗಳು ಉದ್ದವಾಗಿರುವುದು.

ಟುವ್ವಿ ಹಕ್ಕಿ ನಮ್ಮ ಪರಿಸರದಲ್ಲಿ ಹೆಚ್ಚಾಗಿ ಕಾಣಸಿಗುವುದು ಏಕಾಂಗಿಯಾಗಿ. ನಾನಂತೂ ಜೋಡಿಯೊಡನೆ ಈವರೆಗೆ ನೋಡಿಲ್ಲ. ಮನುಷ್ಯರೊಡನೆ ಇದೆಷ್ಟು ನಿರ್ಭೀತಿಯಿಂದ ಇರುತ್ತದೆಯೆಂದರೆ ಒಮ್ಮೊಮ್ಮೆ ನಮ್ಮ ಮನೆಯ ವರಾಂಡದ ಬಳಿ ಹುಳು ಹುಪ್ಪಟೆಗಳಿಗೆ ಹೊಂಚು ಹಾಕುತ್ತಿರುತ್ತದೆ. ಇದು ನಗರ ಪ್ರದೇಶಗಳಲ್ಲಿಯೂ ಕಂಡುಬರುತ್ತದೆ. ಮಾನವನ ಉಪಸ್ಥಿತಿಗೆ ಚೆನ್ನಾಗಿ ಹೊಂದಿಕೊಂಡಿರುವ ಪಕ್ಷಿಗಳಲ್ಲಿ ಇದೂ ಒಂದು. ಮನುಷ್ಯರು ವಾಸಿಸುವ ಸನಿಹದಲ್ಲೇ ಗೂಡು ಕಟ್ಟುವುದು ಇದರ ಹವ್ಯಾಸ.

ಸಣ್ಣ ಕೀಟಗಳು, ಜೇಡಗಳು ಮತ್ತು ಅವುಗಳ ಮೊಟ್ಟೆ ಟುವ್ವಿ ಹಕ್ಕಿಯ ಮುಖ್ಯ ಆಹಾರ. ಅಪರೂಪಕ್ಕೊಮ್ಮೆ ಹಣ್ಣು, ಹೂವಿನ ಮಕರಂದಗಳೂ ಇದರ ಆಹಾರ. ನಮ್ಮ ಮನೆಯ ಎದುರಿಗಿರುವ ಪಾಲಾಶ ಮರದಲ್ಲಿ ಕುಳಿತು ಟುವ್ವಿ ಹಕ್ಕಿಯಿಂದ ಕೀಟಗಳನ್ನು ಹಿಡಿಯುವುದಕ್ಕಾಗಿ ವೈಮಾನಿಕ ವೀಕ್ಷಣಾ ಕಾರ್ಯಕ್ರಮ ನಡೆಯುತ್ತದೆ. ಎಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಗೂಡುಕಟ್ಟುವ ಟುವ್ವಿ ಹಕ್ಕಿ, 3-4 ಮೊಟ್ಟೆಗಳನ್ನಿಡುತ್ತದೆ. ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಗೂಡಿನ ಕೆಲಸಗಳನ್ನು ಜೊತೆಯಾಗಿ ನಿರ್ವಹಿಸುತ್ತವೆ. ಆದರೆ ಕಾವು ಕೊಡುವ ಕೆಲಸ ಮಾಡುವುದು ಹೆಣ್ಣು ಹಕ್ಕಿ ಮಾತ್ರ.

ಕಳೆದ ವರ್ಷದಿಂದ ಟುವ್ವಿ ಹಕ್ಕಿಯ ಸಂಖ್ಯೆ ನಮ್ಮಲ್ಲಿ ವೃದ್ಧಿಸಿದೆ. ಈಗ ನಮ್ಮಲ್ಲಿ ಹೆಚ್ಚಾಗಿ ಕಾಣಸಿಗುವ ಪಕ್ಷಿಗಳಲ್ಲಿ ಇದೂ ಒಂದು. ಮೊದಮೊದಲು ಮರೆಯಿಂದಲೇ

ಕೇಳಿಸುತ್ತಿದ್ದ ಟುವ್ವಿ ಹಕ್ಕಿಯ ಆಲಾಪನೆ ಈಗ ಮನೆಯಂಗಳಲ್ಲಿ ಕೇಳಿಸುತ್ತದೆ. ಒಂದೆರಡು ಬಾರಿ ಹುಳುಹುಪ್ಪಟೆಗಳನ್ನು ಬೇಟೆಯಾಡುವ ಸನ್ನಿವೇಶದಲ್ಲಿ ಭಾಗಿಯಾಗುವ ಅವಕಾಶವೂ ಲಭಿಸಿತು. ಈಗ ಹೆಚ್ಚಾಗಿ ಈ ಪಕ್ಷಿ ನನ್ನ ಗಮನಕ್ಕೆ ಬರುವುದು ನಮ್ಮ ದನಗಳ ಹಟ್ಟಿಯ ಸಮೀಪ. ಕೂತಲ್ಲಿ ಕೂರುವ ಹಕ್ಕಿ ಇದಲ್ಲ. ಸದಾ ಚಂಚಲ. ಟುವ್ವಿ ಹಕ್ಕಿ ಗೂಡು ಕಟ್ಟುವುದು ವಿಶಿಷ್ಟ ಮತ್ತು ಅನನ್ಯ. ಇದು ಸಸ್ಯದ ನಾರುಗಳು ಹಾಗೂ ಎಲೆಗಳನ್ನು ಹೊಲಿದು ಜೋಳಿಗೆಯಂತೆ ಮಾಡಿ ಗೂಡು ಕಟ್ಟುತ್ತದೆ. ಗೂಡು ಕಟ್ಟುವಾಗ ಗರಿಗಳು ಮತ್ತು ತುಪ್ಪಳಗಳನ್ನೂ ಉಪಯೋಗಿಸುತ್ತದೆ. ಇದು ಎಲೆಗಳನ್ನು ಬಹಳ ಅಚ್ಚುಕಟ್ಟಾಗಿ ಹೊಲಿಯುವುದು ಒಂದು ವಿಸ್ಮಯ. ತನ್ನ ಕೊಕ್ಕಿನ ಸಹಾಯದಿಂದ, ಎರಡು ಎಲೆಗಳನ್ನು ಒಂದಕ್ಕೊಂದು ಹೊಲಿದು, ಅದರೊಳಗೆ ಗೂಡುಕಟ್ಟುತ್ತದೆ. ಚೂಪಾದ ಕೊಕ್ಕಿನ ಸಹಾಯದಿಂದ ಸುಂದರವಾಗಿ ಎಲೆಗಳನ್ನು ಹೊಲಿಯುವ ಟುವ್ವಿ ಹಕ್ಕಿಯ ಚಮತ್ಕಾರ ಆಸಕ್ತಿದಾಯಕವಾದದ್ದು.

ಪಾದ ಮತ್ತು ಕೊಕ್ಕಿನ ಸಹಾಯ

ಹೆಣ್ಣು ಹಕ್ಕಿ ಎಲೆಯನ್ನು ಎಳೆಯಲು ತನ್ನ ಪಾದಗಳನ್ನು ಬಳಸುತ್ತದೆ. ಸೂಜಿಯ ಆಕಾರದಲ್ಲಿರುವ ತನ್ನ ಉದ್ದವಾದ, ತೆಳ್ಳಗಿನ ಕೊಕ್ಕಿನ ಸಹಾಯದಿಂದ ಎಲೆಯ ಅಂಚಿನಲ್ಲಿ ಸಣ್ಣ ರಂಧ್ರಗಳನ್ನು ಸರಣಿಯಂತೆ ಕೊರೆಯುತ್ತದೆ. ಬಳಿಕ ಹತ್ತಿ ಅಥವಾ ಲಿಂಟ್‌ನಂತಹ ನಾರುಗಳನ್ನು ಅಥವಾ ಕೋಬ್‌ವೆಬ್‌ಗಳು, ಕ್ಯಾಟರ್‌ಪಿಲ್ಲರ್ ಕೋಕೂನ್‌ಗಳಂತಹ ರೇಷ್ಮೆಯನ್ನು ರಂಧ್ರಗಳ ಮೂಲಕ ದಾರದಂತೆ ಮಾಡಿ ಸುತ್ತುತ್ತದೆ. ಟುವ್ವಿ ಹಕ್ಕಿ ತನ್ನ ಕೊಕ್ಕಿನಲ್ಲಿ ದಾರ ಅಥವಾ ಸಸ್ಯ ನಾರುಗಳನ್ನು ಹಿಡಿದಿಟ್ಟುಕೊಳ್ಳುತ್ತದೆ. ಈ ದಾರವು ಎಲೆಗಳ ಅಂಚುಗಳನ್ನು ಒಟ್ಟುಗೂಡಿಸುವಲ್ಲಿ ಸಹಕರಿಸುತ್ತದೆ. ಈ ಹೊಲಿಗೆಗಳು ಸಡಿಲಗೊಳ್ಳುವುದಿಲ್ಲ. ಒಂದು ಗೂಡು 150ರಿಂದ 200 ಹೊಲಿಗೆಗಳನ್ನು ಹೊಂದಿರುತ್ತದೆ!

ಒಂದು ವೇಳೆ ಗೂಡು ಕಟ್ಟುವಾಗ ನಾರು ಮತ್ತು ರೇಷ್ಮೆಗಳಿಂದ ಮಾಡಿದ ದಾರ ಸಡಿಲಗೊಂಡಾಗ ಅಥವಾ ಅಚಾನಕ್ ಆಗಿ ಎಲೆಗಳು ಹರಿದಾಗ, ಹೆಚ್ಚು ಎಲೆಗಳನ್ನು ಮತ್ತು ಹೊಲಿಗೆಗಳನ್ನು ಸೇರಿಸುವುದರ ಮೂಲಕ ಹಾನಿಯನ್ನು ಸರಿಪಡಿಸುತ್ತದೆ. ಗೂಡು ಕಟ್ಟುವ ಈ ಪ್ರಕ್ರಿಯೆ ನಡೆಯುವುದು ಬೆಳಗ್ಗೆ ಅಥವಾ ಮಧ್ಯಾಹ್ನದ ಅವಧಿಯಲ್ಲಿ. ಎರಡರಿಂದ ನಾಲ್ಕು ದಿನಗಳೊಳಗಾಗಿ ಟುವ್ವಿ ಹಕ್ಕಿಯ ಬೆಚ್ಚಗಿನ ಗೂಡು ಸಿದ್ಧವಾಗುತ್ತದೆ. ಎಲೆಗಳನ್ನು ಸೊಗಸಾಗಿ ಹೊಲಿಯುವ ಕೆಲಸವನ್ನು ಕರಗತವಾಗಿಸಿಕೊಂಡಿರುವ ಇದು ಪಕ್ಷಿಲೋಕದ ದರ್ಜಿ!

ಹೋಳಾ ಹಬ್ಬದ ಹರ್ಷೋಲ್ಲಾಸ!

ಎತ್ತುಗಳನ್ನು ಪೂಜಿಸುವ ಹೋಳಾ ಹಬ್ಬವು ಕೃಷಿ ಸಂಸ್ಕೃತಿಯ ಜೀವಾಳ ಎನಿಸಿದೆ.

• ಜಿ. ಚಂದ್ರಕಾಂತ, ಕಲಬುರಗಿ

ನಮ್ಮ ದೇಶದಲ್ಲಿ ಹಬ್ಬಗಳ ಮೂಲಕ ಪ್ರಾಣಿಗಳನ್ನು ಗೌರವಿಸುವ, ಸತ್ಕರಿಸುವ ಸಂಸ್ಕೃತಿ ಮತ್ತು ಪರಂಪರೆಯಿದೆ. ಕೃಷಿಯಲ್ಲಿ ಹಗಲಿರುಳು ಶ್ರಮಿಸುವ ಎತ್ತುಗಳು ಕೃಷಿ ಸಂಸ್ಕೃತಿಯ ದ್ಯೋತಕವಾಗಿವೆ. ರೈತಾಪಿವರ್ಗ ಪ್ರತಿ ವರ್ಷ 'ಕಾರಹುಣ್ಣಿಮೆ' ಹಾಗೂ 'ಹೋಳಾ' ಹಬ್ಬಗಳನ್ನು ಆಚರಿಸಿ ಎತ್ತುಗಳ ಬಗ್ಗೆ ಕಾಳಜಿ, ಪೂಜನೀಯ ಮತ್ತು ಗೌರವಪೂರ್ವಕ ಕೃತಜ್ಞತಾ ಭಾವ ವ್ಯಕ್ತಪಡಿಸುವರು.

ಈ ಹಬ್ಬವನ್ನು ಮಹಾರಾಷ್ಟ್ರದಲ್ಲಿ 'ಬೈಲ ಪೋಳಾ' ವೃಷಭ ಪೂಜನ ಹಾಗೂ ಜಾರ್ಖಂಡ್, ಛತ್ತೀಸಗಢ ರಾಜ್ಯ ಮತ್ತು ಖಂಡವಾ ಮತ್ತಿತರ ಪ್ರದೇಶಗಳಲ್ಲಿ ಲೋಕಪರ್ವ ಹಬ್ಬದ ರೂಪದಲ್ಲಿ ವಿಜೃಂಭಣೆಯಿಂದ ಆಚರಿಸುವರು. ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ರೈತರು ಕಾರಹುಣ್ಣಿಮೆಯನ್ನು ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿರುವ ರಾಜ್ಯದ ಬೀದರ, ಕಲಬುರಗಿ, ವಿಜಯಪುರ ಜಿಲ್ಲೆಗಳಲ್ಲಿ 'ಹೋಳಾ' ಹಬ್ಬವನ್ನು ವಿಭಿನ್ನ ದಿನಗಳಂದು ಆಚರಿಸುವರು.

ಮರಾಠಿಯ 'ಪೋಳಿ'ಯಿಂದ 'ಪೋಳಾ' ಶಬ್ದವಾಗಿದ್ದು, ಇದೇ 'ಪೋಳಾ' ಕನ್ನಡದಲ್ಲಿ 'ಹೋಳಾ' ಹಬ್ಬವಾಗಿದೆ. ಆಡು ಭಾಷೆಯಲ್ಲಿಯೂ ಬೀಜದ ಹೋರಿಗೆ ಪೋಳ್ ಎನ್ನುವರು. ಕಾರಹುಣ್ಣಿಮೆಯಂದು ಕಳೆದುಹೋದ ಎತ್ತುಗಳು ಶ್ರಾವಣ ಮಾಸಾಂತ್ಯದಲ್ಲಿ ಬರುವ ದರ್ಶ/ಪಿಠೋರಿ(ವದ್ಯ) ಅಮಾವಾಸ್ಯೆಯಂದು ಸಿಕ್ಕಿರುವುದರಿಂದ ಈ ಹಬ್ಬದಾಚರಣೆ. ಹೋಳಾ ಹಬ್ಬವನ್ನು 2024ರ ಸೆಪ್ಟೆಂಬರ್ 2ರಂದು, ಸೋಮವಾರ ಆಚರಿಸಲಾಗುತ್ತದೆ. ಹಬ್ಬದ ಹಿಂದಿನ ದಿನ ಅರಿಶಿಣ ಮತ್ತು ಎಣ್ಣೆಯಿಂದ ರೈತರು ಎತ್ತುಗಳ ಹೆಗಲಿಗೆ ಮಾಲೀಶ್ ಮಾಡಿ ಶಾಖ ನೀಡಿ ಸ್ನಾನ ಮಾಡಿಸುವರು. ಹಬ್ಬದಂದೂ ಸ್ನಾನ ಮಾಡಿಸಿ ಅವುಗಳ ಕೊಂಬುಗಳನ್ನು ವಿವಿಧ ಬಣ್ಣಗಳಿಂದ ಅಲಂಕರಿಸುವರು. ಕೊರಳಲ್ಲಿ ಕವಡೆ ಮತ್ತು ಗೆಜ್ಜೆನಾದದ ಸರಮಾಲೆ, ಕಾಲುಗಳಲ್ಲಿ ಗೆಜ್ಜೆ(ತೋಡೆ)

ಮತ್ತು ಬೆನ್ನಲ್ಲಿ ಬಣ್ಣಬಣ್ಣದ ಝೂಲ್, ಬೆಲೆಬಾಳುವ ಶಾಲು, ಹಣೆಗೆ ರಂಗುರಂಗಿನ ಹಗ್ಗಗಳಿಂದ ತಯಾರಿಸಿದ ಬಾಸಿಂಗ್ ತೊಡಿಸುವರು. ಎತ್ತುಗಳಿಗೆ ಗುಗ್ಗರಿ ಮತ್ತಿತರ ದ್ರವ ಪದಾರ್ಥ ನೀಡುವರಲ್ಲದೇ ಎತ್ತುಗಳ ನಿಯಂತ್ರಣಕ್ಕಾಗಿ ಬಳಸಲಾಗುವ ನೊಗದ ಹಗ್ಗವನ್ನು ಸಹ ಬದಲಾಯಿಸುವರು.

ಮಧ್ಯಾಹ್ನದವರೆಗೆ ಎತ್ತುಗಳ ಮೆರವಣಿಗೆ ಮತ್ತು ಹನುಮಂತನ ದರ್ಶನದ ಬಳಿಕ ಮನೆಯಲ್ಲಿ ಎತ್ತುಗಳನ್ನು ಪೂಜಿಸಿ ಆರತಿ ಬೆಳಗುವರು. ತುಪ್ಪದೊಂದಿಗೆ ಹೂರಣ ಹೋಳಿಗೆ, ಕರ್ಚಿಕಾಯಿ, ಹುಗ್ಗಿ ಮುಂತಾದ ಮೃಷ್ಟಾನ್ನ ಭೋಜನ ಮಾಡಿಸುವರು. ಎತ್ತುಗಳ ಪೂಜೆ ಮಾಡುವ ರೈತರು ಹಬ್ಬದಂದು ಉಪವಾಸವಿರುವರು. ಎತ್ತುಗಳ ಊಟದ ನಂತರವೇ ಇವರ ಊಟ. ಸಂಜೆ ಆಯಾ ಗ್ರಾಮದ 40-50 ಜೋಡಿ ಎತ್ತುಗಳನ್ನು ಸಣ್ಣ ಬಂಡಿಗೆ ಜೋಡಿಸಿ ಊರಲ್ಲಿ ವಾದ್ಯಮೇಳದೊಂದಿಗೆ ಆಕರ್ಷಕ ಮೆರವಣಿಗೆ ನಡೆಯುವುದು.

ಗ್ರಾಮದ ಮುಖಂಡರು ಊರಿನ ಅಗಸಿ ಬಾಗಿಲಿನಲ್ಲಿ ಕರಿ ಕಡಿದ ನಂತರವೇ ಎತ್ತುಗಳ ಓಟದ ಸ್ಪರ್ಧೆ ಪ್ರಾರಂಭವಾಗುತ್ತದೆ. ಗ್ರಾಮದ ಮುಖ್ಯ ರಸ್ತೆಯಲ್ಲಿ ಸಣ್ಣ ಚಕ್ಕಡಿಯ ಮೇಲೆ ನಿಂತು ಎತ್ತುಗಳನ್ನು ಓಡಿಸುವವರ ಸಾಹಸ ಮೆಚ್ಚುವಂಥದ್ದು. ಈ ಓಟದ ಮಧ್ಯದಲ್ಲೇ ಏಳುತ-ಬೀಳುತ ಓಟ ಪೂರ್ಣಗೊಳಿಸುವ ದೃಶ್ಯ ಕಂಡಾಗ ಮೈ ಜುಂ..! ಎನ್ನುತ್ತದೆ.

ಸ್ಪರ್ಧೆಯ ಬಳಿಕ ಒಂದೂ ಹೊಡೆತವಿಲ್ಲದೆ ಜೋರಾಗಿ ಓಡುವ ಎತ್ತುಗಳಿಗೆ ಹಾಗೂ ಉತ್ತಮ ಜೋಡೆತ್ತುಗಳಿಗೆ ಬಹುಮಾನ ವಿತರಿಸಲಾಗುತ್ತದೆ. ಈ ಹಬ್ಬವು ದೇಶಿ ಮತ್ತು ಕೃಷಿ ಸಂಸ್ಕೃತಿಯ ಜೀವ-ಜೀವಾಳವಾಗಿದೆ. ನಮ್ಮ ಜಾನಪದ ಸಂಸ್ಕೃತಿ, ಪರಂಪರೆ ಮತ್ತು ಹಳೆಯ ಪಳೆಯುಳಿಕೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ರೈತ ಸಮುದಾಯ ಇಂದಿಗೂ ಈ ಹಬ್ಬವನ್ನು ಹರ್ಷೋಲ್ಲಾಸದಿಂದ ಆಚರಿಸುತ್ತಿರುವುದು ವಿಶೇಷ.

ನನ್ನ ಸೆಲ್ಫಿ ಹುಚ್ಚು

ನನಗೆ ಸೆಲ್ಫಿ ಹುಚ್ಚು ಜಾಸ್ತಿ. ಕಾರ್ಯಕ್ರಮವೊಂದರಲ್ಲಿ ಸಿನಿಮಾ ನಟರು, ಸಾಹಿತಿಗಳು ಹತ್ತಿರದಿಂದ ನೋಡಲು ಸಿಗುತ್ತಾರೆಂದು, ಆಸೆಯಿಂದ ಹೋಗಿ, ಅವರ ಬಳಿ ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದಾಯ್ತು. ಆದರೆ, ಫೋಟೋ ಸರಿಯಾಗಿ ಬರಲೇ ಇಲ್ಲ! ಏನು ಕಾರಣ?

• ಕೆ. ಲಲಿತಾ ಮೂರ್ತಿ

ಅಂದು ಬೆಳಿಗ್ಗೆಯೇ ನನ್ನ ತಂಗಿ ಕರೆಮಾಡಿ ಸಾಹಿತ್ಯ ಸಾಂಸ್ಕೃತಿಕ ಜಾತ್ರೆಗೆ ಹೋಗೋಣ ಅಂತ ಹೇಳಿದಾಗ ಬಿಡುವಾಗಿದ್ದ ನಾನೂ ತಯಾರಾದೆ. ಸರಿಯಾದ ಸಮಯಕ್ಕೆ ಜಾತ್ರೆಜಾಗವನ್ನ ತಲುಪಿದಾಗ ನನ್ನ ಸಂತೋಷಕ್ಕೆ ಪಾರವೇ ಇಲ್ಲ!

ಅಬ್ಬಬ್ಬಾ ಎಷ್ಟೊಂದು ಜನ ಸೆಲೆಬ್ರಿಟಿಗಳು! ಯಾರನ್ನ ನೋಡೋದು ಯಾರನ್ನ ಬಿಡೋದು ನನ್ನ ಉತ್ಸಾಹ ತಾರಕಕ್ಕೇರಿತ್ತು. ಯಾಕಂದ್ರೆ, ನಂಗೆ ಸ್ವಲ್ಪ ಸೆಲ್ಫಿ ಹುಚ್ಚು, ಆದರೆ ನಾನಂತೂ ಇದನ್ನು ಹುಚ್ಚು ಅನ್ನೋಕೆ ತಯಾರಿಲ್ಲ. ನನ್ನ ಇಷ್ಟದವರೊಡನೆ ನಾನಿರೋದನ್ನ ಜಗತ್ತಿಗೆ ತೋರಿಸೋ ಈ ಅವಕಾಶ ಹುಚ್ಚು ಹೇಗಾದೀತು. ಸರಿ ಸರಿ ಮೊದಲು ಎಷ್ಟಾಗುತ್ತೋ ಅಷ್ಟು ಕನಿಷ್ಟ ಒಂದು ಮೂರಾದ್ರೂ ಸೆಲ್ಫಿ ಹೊಡ್ಕೊಂಡ್ಬಿಡ್ಬೇಕು ಅಂತ ಅತ್ತಿತ್ತ ನೋಡ್ತಿದ್ದಂಗೇ ವಾವ್ ನನ್ನ ಮೆಚ್ಚಿನ ಹಿರಿಯ ನಟ!

ಓಡಿದೆ.. ಸರ್ ನಾನು ನಿಮ್ಮ ಅಪ್ಪಟ ಅಭಿಮಾನಿ.. ಒಂದೇ ಒಂದು ಸೆಲ್ಫೀ ಸಾರ್ ಅಂದೆ. ತಕ್ಷಣ ಅವರು ಮುಖ ಸೊಟ್ಟ ಮಾಡಿಕೊಂಡು 'ಅಯ್ಯೋ ಅದೆಲ್ಲ ನಂಗೆ ಸರಿ ಹೋಗಲ್ಲಮ್ಮಾ. ನನ್ನ ಸಿನಿಮಾ ನೋಡಿ ಅಷ್ಟೇ ಸಾಕು' ಅಂತೆಲ್ಲ ಲೆಕ್ಚರ್ ಕೊಡೋಕೆ ಶುರು ಮಾಡಿದರು.

ಷ್ಟರಲ್ಲಿ ನನ್ನ ತಂಗಿ ಮಾರುದೂರದಿಂದ ಕೂಗಿದಳು 'ಅಕ್ಕಾ ಇಲ್ನೋಡೆ ಇವರು.... ಓ ರಂಗಭೂಮಿಯ ಪ್ರಸಿದ್ಧ ಕಲಾವಿದೆ ಇವರ ಕಂಠಕ್ಕೆ ಮನಸೋಲದವರಿಲ್ಲ'. ಸರಿ ಅವರನ್ನು ಸುತ್ತುವರಿದಿದ್ದ ಜನರ ನಡುವೆ ತೂರಿಕೊಂಡು ಅಂತೂ ಇಂತೂ ಅವರ ಪಕ್ಕದಲ್ಲಿಯೇ ನಿಂತು ಮೊಬೈಲ್ ಕ್ಯಾಮೆರಾ ರೆಡಿ ಮಾಡಿಕೊಂಡು 'ಮೇಡಂ ಒಂದು ಸೆಲ್ಫಿ' ಅಂದೆ. 'ಹಾಂ ತೊಗೊಳಿ' ಅಂದಿದ್ದೇ ತಡ ಕ್ಲಿಕ್ ಎಂದು ಹೇಳಿ, ಸೆಲ್ಫಿ ತೆಗೆದೆ. ಮೇಡಂ ಅಲ್ಲಿಂದ ಸರಿದ ತಕ್ಷಣ ಫೋಟೊ ಹೇಗೆ ಬಂದಿದೆ ಅಂತ ನೋಡಿಕೊಂಡರೆ, ನಾನು ಕ್ಲಿಕ್ ಅನ್ನುವಾಗ ಸರಿಯಾಗಿ ಮೇಡಂ ದೂರದಲ್ಲಿ ಕಂಡ ಇನ್ನಾರಿಗೋ ಹಾಯ್ ಮಾಡಲು ಕೈ ಎತ್ತಿದ್ದರು. ಅವರ ಕೈಯೇ ಅವರ ಮುಖವನ್ನ ಮರೆಮಾಡಿತ್ತು!

ಛೆ ಇದೂ ಮಿಸ್ಸಾಯ್ತಾ... ಹೋಗಲಿ ಈ ಲೇಖಕರೊಂದಿಗಾದರೂ ಸಿಕ್ಕೀತಾ ಸೆಲ್ಫಿ ಅಂದುಕೊಂಡು ಅವರ ಸುತ್ತ ನಿಂತಿದ್ದ ಯುವಪಡೆಯೆಡೆಗೆ ಸಾಗಿದೆ. ಯಾವುದೋ ಹಾಸ್ಯ ಪ್ರಸಂಗವನ್ನ ಸೀರಿಯಸ್ಸಾಗಿ ಚರ್ಚೆ ಮಾಡುತ್ತಿದ್ದಂತಿತ್ತು. ಆದರೆ ಅವರು ಮಾತಾಡುತ್ತಿದ್ದಂತೆಯೇ ಕೆಲವರು ಅವರಷ್ಟಕ್ಕೆ ಅವರು ಸೆಲ್ಫಿ ತೆಗೆದುಕೊಳ್ಳೋದನ್ನ ನೋಡಿ, 'ಅರೆ ಹೀಗೇ ಮಾಡ್ಬೋದಲ್ಲಾ' ಅಂದ್ಕೊಂಡು ಯಾವ್ಯಾವುದೋ ಕೋನಗಳಿಂದ ಛಕ ಛಕ ಅಂತ ಒಂದೆರೆಡು ಮೂರು ಬಾರಿ ಸೆಲ್ಪಿ ಕ್ಲಿಕ್ಕಿಸಿಯೇ ಬಿಟ್ಟೆ. ಅಬ್ಬ ಅಂತೂ ಒಂದಾದರೂ ಫೋಟೋ ಸಿಕ್ಕಿತಲ್ಲಾ ಅಂದ್ಕೊಂಡು ಗುಂಪಿನಿಂದ ಹೊರಬಂದು ನನ್ನ ಛಾಯಾಗ್ರಹಣದ ಪ್ರತಿಭೆಯನ್ನ ನೋಡಿಕೊಂಡು, ಅದನ್ನ ಯಾವಾಗ ನನ್ನ ಸ್ಟೇಟಸ್‌ಗೆ ಹಾಕಿಯೇನು ಅನ್ನೋ ಕಾತುರತೆಯಿಂದ ಗ್ಯಾಲರಿಯಲ್ಲಿ ನೋಡುತ್ತಿದ್ದಂತೇ ಅಳು ಬರುವುದೊಂದು ಬಾಕಿ! ಒಂದರಲ್ಲಿ ನನ್ನ ಮುಖ ಗಡಿಗೆ ಗಾತ್ರ ಬಂದು, ಆ ಮಹಾನುಭಾವರ ಮುಖವೇ ಕಾಣುತ್ತಿಲ್ಲ. ಇನ್ನೊಂದರಲ್ಲಿ ಅವರು ಮಾತಾಡುವ ಸೊಟ್ಟಬಾಯಿಯ ಭಂಗಿಯಿದ್ದರೆ ನನ್ನ ಮುಖವೇ ಇಲ್ಲ! ಮತ್ತೊಂದರಲ್ಲಿ ನಾನೂ ಇಲ್ಲ ಲೇಖಕರೂ ಇಲ್ಲ, ಯಾರ್ಯಾರೋ ಪಡ್ಡೆ ಹುಡುಗರ ಮುಖಗಳು. ಮತ್ತೊಂದರಲ್ಲಿ ಇಡೀ ಫೋಟೋನೇ ಶೇಕ್ ಶೇಕ್! ಅಂತೂ ಹುಚ್ಚಲ್ಲದ ನನ್ನ ಈ ಹುಚ್ಚಿನಿಂದಾಗಿ ಸಮಾರಂಭದ ಸವಿನೆನಪಿಗಿಂತ, ನಿರಾಶೆಯೇ ಹೆಚ್ಚಾದುದು ಮಾತ್ರ ಸುಳ್ಳಲ್ಲ!



ಶಿಳ್ಳೆ ಮೂಲಕ ಸಂವಹನ

• ವಿಶ್ವನಾಥ್ ಬಳುವನೇರಲು

ಈ ಭಾಷೆಯನ್ನು ಯಾರೂ ಮಾತನಾಡುವುದಿಲ್ಲ. ಆದರೂ ಮೂರು ಶತಮಾನಗಳಿಂದ, ಉತ್ತರ ಟರ್ಕಿಯ ದೂರದ ಪರ್ವತಗಳಲ್ಲಿ ವಾಸಿಸುವ ರೈತರು ಸೀಟಿಗಳ ಮೂಲಕ ದೂರದವರೆಗೆ ಸಂವಹನ ನಡೆಸುತ್ತಿದ್ದಾರೆ. ಇದು ಕೂಸ್ ಡಿಲಿ ಎಂಬ ಭಾಷೆಯಾಗಿದ್ದು ಇದನ್ನು 'ಪಕ್ಷಿ ಭಾಷೆ' ಎಂದೂ ಕರೆಯುತ್ತಾರೆ. ಇದನ್ನು ಇಂದಿಗೂ ಬಳಸಲಾಗುತ್ತಿದೆಯಾದರೂ ಸೆಲ್‌ಫೋನ್ ಯುಗದಲ್ಲಿ ಕಡಿಮೆ ಜನರು ಇದನ್ನು ಕಲಿಯುತ್ತಿದ್ದಾರೆ. ಉತ್ತರ ಟರ್ಕಿಯ ಕಪ್ಪು ಸಮುದ್ರದ ನಿವಾಸಿಗಳ 'ಪಕ್ಷಿ ಭಾಷೆ' ಯನ್ನು ಸುಮಾರು 10,000 ಜನರು, ಹೆಚ್ಚಾಗಿ ಗಿರ್ಸನ್ ಕೌಂಟಿಯ ಕನಾಚಿ ಕೌಂಟಿಯಲ್ಲಿ ಬಳಕೆ ಮಾಡುತ್ತಿದ್ದಾರೆ. ಮೊಬೈಲ್ ಫೋನ್‌ಗಳ ಬಳಕೆ ಹೆಚ್ಚಾಗುತ್ತಿರುವು ದರಿಂದ ಈ ಭಾಷೆಯು ಅಳಿವಿನಂಚಿನಲ್ಲಿದೆ. ತೀಕ್ಷ್ಣ ದನಿಯ ಸಿಳ್ಳೆಗಳ ಮಿಶ್ರಣವೇ 'ಪಕ್ಷಿ ಭಾಷೆ'. ಇದನ್ನು ಸಂರಕ್ಷಿಸಬೇಕು ಎಂದು ಯೋಚಿ ಸಿದ ಯುನೆಸ್ಕೋ, ಈ ಭಾಷೆಯನ್ನು 'ಅಮೂರ್ತ ಸಾಂಸ್ಕೃತಿಕ ಪರಂಪರೆ' ಪಟ್ಟಿಯಲ್ಲಿ ಸೇರಿಸಿದೆ.

ವಿಶ್ವವಾಣಿ ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್
23.08.2024
ಬೆಂಗಳೂರು • ಶುಕ್ರವಾರ

ಲಂಡನ್ ಕೆಫೆಯಲ್ಲಿ ನಕ್ಸಲ್ ಛಾಯೆ

ಜಿಲ್ಲಾ ಖ್ಯಾತಿಯ ಕವೀಶ್ ಶೆಟ್ಟಿ ಲಂಡನ್ ಕೆಫೆಯಲ್ಲಿ ಪ್ರತ್ಯಕ್ಷವಾಗಿದ್ದಾರೆ. ಕನ್ನಡ, ಮರಾಠಿ, ಹಿಂದಿ, ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಆಪರೇಷನ್ ಲಂಡನ್ ಕೆಫೆ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಟೀಸರ್ ಕೂಡ ಬಿಡುಗಡೆಯಾಗಿದೆ. ಈ ಟೀಸರ್‌ಗೆ ಭರ್ಜರಿ ರೆಸ್ಪಾನ್ಸ್ ವ್ಯಕ್ತವಾಗುತ್ತಿದೆ. ಆಪರೇಷನ್ ಲಂಡನ್ ಕೆಫೆಯಲ್ಲಿ ನಕ್ಸಲ್ ಛಾಯೆ ಇದ್ದು, ನಾಯಕ ನಕ್ಸಲರ ವಿರುದ್ಧ ಹೋರಾಡುವ ರೋಚಕ ಕಥೆ ಚಿತ್ರದಲ್ಲಿದೆ. ದಟ್ಟಾರಣ್ಯದಲ್ಲಿ ಗುಂಡುಗಳ ಸದ್ದು ಮಾರ್ಧನಿಸುತ್ತದೆ. ಸಡಗರ ರಾಘವೇಂದ್ರ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಮೇಘಾ ಶೆಟ್ಟಿ ನಾಯಕಿಯಾಗಿ ನಟಿಸಿದ್ದು, ಬಿ. ಸುರೇಶ್, ಅರ್ಜುನ್ ಕಾಪಿಕ್ಕಾಡ್, ವಿರಾಟ್ ಮಡಕೆ, ರುಕ್ಮಿಣಿ ಸುತಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಾನು ಮರಾಠಿ ಕಲಿತು ಈ ಚಿತ್ರದಲ್ಲಿ ಅಭಿನಯಿಸಿದ್ದೇನೆ. ನಿರ್ದೇಶಕರಾಗಿ ಸಡಗರ ರಾಘವೇಂದ್ರ ಅವರು ತಮ್ಮ ಮೊದಲ ನಿರ್ದೇಶನದಲ್ಲೇ ಉತ್ತಮ ಚಿತ್ರ ನೀಡಿದ್ದಾರೆ. ಒಳ್ಳೆಯ ತಂಡದ ಜತೆಗೆ ಕೆಲಸ ಮಾಡಿರುವ ಖುಷಿಯಿದೆ ಎಂದು ಮೇಘಾ ಶೆಟ್ಟಿ ಸಂತಸದಿಂದ ನುಡಿದರು. ಇಂಡಿಯನ್ ಫಿಲಂಸ್ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲಂಸ್ ಲಾಂಛನದಲ್ಲಿ ವಿಜಯ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ, ಹವರಾಲ್ ಹಾಗೂ ದೀಪಕ್ ರಾಣೆ ಒಟ್ಟಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಎನ್.ಡಿ.ನಾಗಾರ್ಜುನ್ ಛಾಯಾಗ್ರಹಣ, ಮಾಸ್ ಮಾದ ಸಾಹಸ ನಿರ್ದೇಶನ ಆಪರೇಷನ್ ಲಂಡನ್ ಕೆಫೆ ಚಿತ್ರಕ್ಕಿದೆ.

> ಇದೊಂದು ನಕ್ಸಲಿಸಂ ಬೇಸಾಗಿಟ್ಟುಕೊಂಡು ಹೆಣೆದಿರುವ ಕಥೆ, ಹಾಗಂತ ನಕ್ಸಲಿಸಂನ ವೈಭವೀಕರಿಸಿಲ್ಲ. ಯಾವುದೇ ಒಬ್ಬ ವ್ಯಕ್ತಿಯ ಕುರಿತಾದ ಚಿತ್ರವೂ ಇದಲ್ಲ. ಇದು ಆಫ್ಟರ್ ಆಪರೇಷನ್ ಲಂಡನ್ ಕೆಫೆ, ನೀವು ಮೊದಲು ನೋಡುವುದು ಚಿತ್ರದ ಪ್ರೀಕ್ವೆಲ್. ಮೊದಲ ಭಾಗ ಆನಂತರ ಬರಲಿದೆ. ಕನ್ನಡ ಹಾಗೂ ಮರಾಠಿ ಎರಡೂ ಭಾಷೆಯಲ್ಲಿ ಚಿತ್ರೀಕರಣ ಮಾಡಲಾಗಿದೆ. ಉಳಿದಂತೆ ಹಿಂದಿ, ತೆಲುಗು, ತಮಿಳು ಹಾಗೂ ಮಲೆಯಾಳಂನಲ್ಲೂ ಚಿತ್ರ ಬಿಡುಗಡೆಯಾಗಲಿದೆ. ಕನ್ನಡ ಕಲಾವಿದರು ಮರಾಠಿ ಕಲಿತು, ಮರಾಠಿ ಕಲಾವಿದರು ಕನ್ನಡ ಕಲಿತು ಅಭಿನಯಿಸಿರುವುದು ಈ ಚಿತ್ರದ ವಿಶೇಷ.
>
> -ಸಡಗರ ರಾಘವೇಂದ್ರ, ನಿರ್ದೇಶಕ

ಪೌಡರ್‌ನಲ್ಲಿ ಕಾಮಿಡಿ ಕಚಗುಳಿ

ನಟ ದಿಗಂತ್ ಮತ್ತೆ ಹಾಸ್ಯಮಯ ಪಾತ್ರದಲ್ಲಿ ಪ್ರೇಕ್ಷಕರನ್ನು ರಂಜಿಸುತ್ತಿದ್ದಾರೆ. ಪೌಡರ್ ಶೀರ್ಷಿಕೆಯೇ ವಿಭಿನ್ನವಾಗಿದೆ, ಕಥೆಯೂ ವಿಶೇಷವಾಗಿದೆ. ಈ ಹಿಂದೆ ಗುಲ್ಟ್ ಚಿತ್ರದಲ್ಲಿ ಥ್ರಿಲ್ಲರ್ ಕಥೆ ಹೇಳಿದ್ದ ಜನಾರ್ಧನ್ ಚಿಕ್ಕಣ್ಣ ಈ ಚಿತ್ರದ ಮೂಲಕ ನಗುವಿನ ಕಚಗುಳಿ ಇಟ್ಟಿದ್ದಾರೆ. ಇಬ್ಬರು ಯುವಕರು ಒಂದು ನಿಗೂಢವಾದ ಪೌಡರ್ ಪ್ರಭಾವದಿಂದಾಗಿ ದಿಢೀರನೇ ಸಿರಿವಂತರಾಗಲು ಮಾಡುವ ಪ್ರಯತ್ನಗಳು, ಅದರಿಂದ ಅವರಿಗೆ ಎದುರಾಗುವ ಸಮಸ್ಯೆಗಳು ಇವೆಲ್ಲವನ್ನೂ ಪೌಡರ್‌ನಲ್ಲಿ ಬೆರೆಸಲಾಗಿದೆ. ಆ ಯುವಕರು ಎಲ್ಲಾ ಸಮಸ್ಯೆಗಳನ್ನು ಮೀರಿ ನಿಲ್ಲುವರೇ ಅವರ ಎಲ್ಲಾ ಕನಸುಗಳು ನನಸಾಗುವುದೇ, ಪೌಡರ್ ಹಿಂದಿನ ಪವರ್ ಏನು ಎಂಬುದೇ ಚಿತ್ರದ ಕಥೆ. ದಿಗಂತ್ ಮಂಚಾಲೆ ನಾಯಕನಾಗಿ ನಟಿಸಿದ್ದು, ಧನ್ಯಾ ರಾಮ್ ಕುಮಾರ್, ಶರ್ಮಿಳಾ ಮಾಂಡ್ರೆ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಅನಿರುದ್ಧ್ ಆಚಾರ್ಯ, ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ರವಿಶಂಕರ್ ಗೌಡ, ನಾಗಭೂಷಣ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಸಂಘರ್ಷದ ನಡುವೆ ಅರಳಿದ ಪ್ರೇಮಕಥೆ

ಟೈಟಲ್‌ನಲ್ಲೇ ಗಮನಸೆಳೆದಿದ್ದ ಕರ್ಕಿ ಈಗ ಟ್ರೇಲರ್ ನಲ್ಲಿ ಕುತೂಹಲ ಹೆಚ್ಚಿಸಿದೆ. ತೆರೆಗೆ ಬರಲು ಸಿದ್ಧವಾಗಿರುವ ಕರ್ಕಿ ಟ್ರೇಲರ್ ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರಿಗೆ ಆಹ್ವಾನ ನೀಡಿದೆ. ಜನಾಂಗೀಯ ಸಂಘರ್ಷದ ನಡುವೆ ಅರಳುವ ಅಪರೂಪದ ಪ್ರೇಮಕಥೆ ಈ ಚಿತ್ರದಲ್ಲಿದ್ದು, ತಮಿಳಿನಲ್ಲಿ ಹಲವು ಸಿನಿಮಾಗಳನ್ನು ನಿರ್ದೇಶಿಸಿರುವ ಪವಿತ್ರನ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಜಯಪ್ರಕಾಶ್ ರೆಡ್ಡಿ ನಾಯಕನಾಗಿ ಕಾಣಿಸಿಕೊಂಡಿದ್ದು, ಕಾನೂನು ಪದವಿಧರನಾಗಬೇಕು ಎಂಬ ಕನಸು ಇಟ್ಟುಕೊಂಡ ಹಳ್ಳಿ ಹುಡುಗನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ನಾನು ಮುತ್ತುರಾಜ್ ಎಂಬ ಹಳ್ಳಿ ಹುಡುಗನ ಪಾತ್ರದಲ್ಲಿ ನಟಿಸಿದ್ದೇನೆ. ಜಾತಿ ಮತ್ತು ಜನಾಂಗೀಯ ವಿಷಯವನ್ನು ಮನ ಮುಟ್ಟುವಂತೆ ಈ ಸಿನಿಮಾದಲ್ಲಿ ಹೇಳಲಾಗಿದೆ. ಸ್ನೇಹ, ಪ್ರೀತಿ, ಪ್ರೇಮ ಮತ್ತು ಮಾನವೀಯತೆಯ ಅಂಶಗಳ ಸುತ್ತ ಈ ಸಿನಿಮಾ ಸಾಗುತ್ತದೆ ಎಂದು ಜೆಪಿ ಹೇಳಿದರು. ಮಲೆಯಾಳಂ ಬೆಡಗಿ ಮೀನಾಕ್ಷಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಸಾಧುಕೋಕಿಲ, ಬಲರಾಜವಾಡಿ, ಯತಿರಾಜ್, ಮಿಮಿಕ್ರಿ ಗೋಪಿ, ಸ್ವಾತಿ, ಸವಿತಾ ಮೊದಲಾದವರು ಕರ್ಕಿ ತಾರಾಬಳಗದಲ್ಲಿದ್ದಾರೆ.

ಥರ್ಡ್ ಐ ಮೀಡಿಯಾ ಬ್ಯಾನರಿನಲ್ಲಿ ಪ್ರಕಾಶ್ ಪಳನಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಹೃಷಿಕೇಶ ಛಾಯಾಗ್ರಹಣ, ಕ್ರೇಜಿಮೈಂಡ್ಸ್ ಸಂಕಲನವಿದೆ. ಸಿನಿಮಾದ ಆರು ಹಾಡುಗಳಿಗೆ ಕವಿರಾಜ್ ಸಾಹಿತ್ಯವಿದ್ದು, ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಶಿವಮೊಗ್ಗ, ದಾವಣಗೆರೆ, ಬಂಗಾರಪೇಟೆ, ಕೋಲಾರ, ಬಾಗಲಕೋಟೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಸಿಯಲ್ಲಿ ಮೆಡಿಕಲ್ ಮಾಫಿಯಾ

ನಿರ್ದೇಶಕ ಕಿರಣ್ ಸುಬ್ರಮಣಿ ಸಿ ಚಿತ್ರದ ಮೂಲಕ ಮೆಡಿಕಲ್ ಮಾಫಿಯಾದ ಸುತ್ತ ನಡೆಯುವ ಡಾರ್ಕ್ ಕ್ರೈಂ ಕಥೆಯನ್ನು ಹೇಳಿದ್ದಾರೆ. ಜತೆಗೆ ತಂದೆ ಮಗಳ ಬಾಂಧವ್ಯದ ಕಥೆಯೂ ಇದೆ. ಕಿರಣ್ ಅವರೇ ಚಿತ್ರದ ನಾಯಕನಾಗಿಯೂ ನಟಿಸಿದ್ದಾರೆ. ಸಿ ಚಿತ್ರದ ವಿಶೇಷತೆ ಏನೆಂದರೆ, ರೀಲ್‌ನಲ್ಲಿ ತಂದೆ, ಮಗಳ ಬಾಂಧವ್ಯದ ಕಥೆಯಿದ್ದರೂ, ರಿಯಲ್ಲಾಗಿ ಒಬ್ಬ ತಂದೆ, ತನ್ನ ಮಗನ ನಿರ್ದೇಶನದ ಕನಸನ್ನು ನನಸು ಮಾಡಲು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ತಂದೆಯ ಪಾತ್ರವನ್ನು ಕಿರಣ್ ಅವರೇ ನಿರ್ವಹಿಸಿದ್ದು, ಮಗಳ ಪಾತ್ರದಲ್ಲಿ ಬಾಲನಟಿ ಸಾನ್ವಿಕಾ ಕಾಣಿಸಿಕೊಂಡಿದ್ದಾರೆ. ಸಿ ಎಂದರೆ ನೋಡು. ಆದರೆ ಚಿತ್ರದಲ್ಲಿ ಈ ಪದಕ್ಕೆ ಮೂರು ಅರ್ಥಗಳಿವೆ. ಟ್ರೇಲರ್ ನಲ್ಲಿ ಒಂದು ಸಿ ಬಗ್ಗೆ ಮಾತ್ರ ಹೇಳಲಾಗಿದ್ದು, ಉಳಿದೆರಡು ಸಿಗಳ ಅರ್ಥವನ್ನು ತಿಳಿಯಲು ಸಿನಿಮಾ ನೋಡಬೇಕು ಎನ್ನುತ್ತಾರೆ ಕಿರಣ್.ಪ್ರಶಾಂತ್ ನಟನ, ಶ್ರೀಧರ್ ರಾಮ್, ರೂಪೇಶ್ ಆರ್ಯನ್ ನೆಗೆಟಿವ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಹೃದಯ ಶಿವ ಸಾಹಿತ್ಯದ ಹಾಡಿಗೆ ವಾಸುಕಿ ವೈಭವ್ ದನಿಯಾಗಿದ್ದಾರೆ. ಎ.ಬಿ.ಮುರಳೀಧರನ್ ಸಂಗೀತ ನಿರ್ದೇಶನ, ನವೀನ್ ಸೂರ್ಯ ಮತ್ತು ವೀರೇಶ್ ಕುಮಾರ್ ಛಾಯಾಗ್ರಹಣವಿದೆ.

ಇಂದಿನಿಂದ ಅಮೋಘ ಪ್ರಾರಂಭ

GOPALAN CINEMAS
LEGACY
ARCADE
INNOVATION
GRAND
SIGNATURE

Cinépolis
ETA
RMM
ORION EAST
SHANTINIKETAN
SJR
LULU

ROCKLINE cinemas
INNOVATIVE MULTIPLEX
MUKTA A2 CINEMAS
KINO CINEMAS KADUGODI

PVR CINEMAS
ORION
FORUM
VAISHNAVI
REGALIA
MARKETCITY
VEGA CITY
SPIRIT
UPTOWN
GT MALL
AURA
VR
REX
BHARATHIYA CITY
GLOBAL MALL
FALCON CITY

INOX LIVE THE MOVIE
SWAGATH
MANTRI
CENTRAL MALL
GARUDA MALL
LIDO
VALUE MALL
BROOKFIELD
RMZ
GARUDA YALAHANKA
SBR HORIZON

ಮೈಸೂರು
ಪ್ರಭಾ
DRC Cinemas
PVR CINEMAS
FORUM CENTRE MALL
GARUDA MALL
INOX
MYSURU VISION CINEMAS
ತೋರಣಗಲ್
ವಿಜಯಲಕ್ಷ್ಮೀ
4Shows
ಬಳ್ಳಾರಿ
ಎಸ್.ಎಲ್.ಎನ್ ಮಾಲ್
4Shows
ಇಳಕಲ್
ಮಹಂತೇಶ್
4Shows
ನವಲಗುಂದ
ಸಿದ್ಧಲಿಂಗೇಶ್ವರ
4Shows

ರಾಣೆಬೆನ್ನೂರು
ಸಮರ್ಥ
4Shows
ಮುಧೋಳ
ಅಪ್ಪುಸೋನ
4Shows
ಅಥಣಿ
ಧನಲಕ್ಷ್ಮೀ
4Shows
ಅರಕೆರೆ
ಮಂಜುನಾಥ
4Shows
ಕನಕಗಿರಿ
ನಂದಿ
4Shows
ಗೋಕಾಕ್
ಕರ್ನಾಟಕ
4Shows
GOA
Almonto Vaso
ಹಾಗೂರಾಜ್ಯದ್ಯಂತ

ಗೋಪಿಲೋಲನ ಹೊಸ ಗಾನ

ಗೋಪಿಲೋಲ ಹಾಡುಗಳ ಮೂಲಕವೇ ಪ್ರೇಕ್ಷಕರ ಮನಗೆದ್ದಿದ್ದಾನೆ. ಈ ಚಿತ್ರದ ಎರಡು ಗೀತೆಗಳು ಸಂಗೀತ ಪ್ರಿಯರು ಮನಗೆದ್ದಿವೆ. ಈಗ ಪ್ರಪಂಚವೆಲ್ಲಾ ಯಾಕೋ ಸುತ್ತಿದಂಗೆ ಆಗುತ್ತೈತೆ .. ಹಾಡು ಬಿಡುಗಡೆಯಾಗಿದೆ. ಕೇಶವ ಚಂದ್ರ ಸಾಹಿತ್ಯದ ಈ ಗಾನ ವಿಜಯ್ ಪ್ರಕಾಶ್ ಹಾಗೂ ವಾರಿಜಶ್ರೀ ಕಂಠ ಸಿರಿಯಲ್ಲಿ ಮೂಡಿಬಂದಿದ್ದು, ಮಿಥುನ್ ಅಶೋಕನ್ ಸಂಗೀತ ಸಂಯೋಜಿಸಿದ್ದಾರೆ.

ಮಂಜುನಾಥ್ ಅರಸು ಹಾಗೂ ನಿಮಿಷಾ ಗೀತೆಯಲ್ಲಿ ಕಾಣಿಸಿಕೊಂಡಿದ್ದಾರೆ. ನಟಿ ಜಾಹ್ನವಿ, ಎಸ್.ನಾರಾಯಣ್, ಪದ್ಮಾ ವಾಸಂತಿ, ಕೆಂಪೇಗೌಡ, ಡಿಂಗ್ರಿ ನಾಗರಾಜ್, ರೇಖಾ ದಾಸ್, ನಾಗೇಶ್ ಯಾದವ್, ಸ್ವಾತಿ, ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಆರ್.ರವೀಂದ್ರ ನಿರ್ದೇಶನದ ಗೋಪಿಲೋಲ ಚಿತ್ರವನ್ನು ಎಸ್. ಆರ್. ಸನತ್ ಕುಮಾರ್ ನಿರ್ಮಾಣ ಮಾಡಿದ್ದಾರೆ.

ಗೋಪಿಲೋಲ ಸಿನಿಮಾಗೆ ಕೇಶವ ಚಂದ್ರ ಚಿತ್ರಕಥೆ ಸಂಭಾಷಣೆ ಬರೆದಿದ್ದು, ಕೆಎಂ ಪ್ರಕಾಶ್ ಸಂಕಲನ, ಮಿದುನ್ ಅಶೋಕನ್ ಸಂಗೀತ, ರಾಕೇಶ್ ಆಚಾರ್ಯ ಹಿನ್ನೆಲೆ ಸಂಗೀತ, ಸೂರ್ಯಕಾಂತ್ ಛಾಯಾಗ್ರಹಣ, ಥ್ರಿಲ್ಲರ್ ಮಂಜು, ಜಾನಿ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಿತ್ರೀಕರಣ ಮುಗಿಸಿರುವ ಗೋಪಿಲೋಲ ಮುಂದಿನ ತಿಂಗಳು ತೆರೆಯಲ್ಲಿ ಪ್ರತ್ಯಕ್ಷವಾಗಲಿದ್ದಾನೆ.

ಕ್ಲಾಸ್ ಆ್ಯಂಡ್ ಮಾಸ್ ತಾಜ್

ಟೈಟಲ್, ಟೀಸರ್ ಮತ್ತು ಹಾಡುಗಳ ಮೂಲಕ ಸದ್ದು ಮಾಡುತ್ತಿರುವ ತಾಜ್ ಅದ್ದೂರಿಯಾಗಿ ತೆರೆಗೆ ಬಂದಿದೆ. ಕೋಮು ದಳ್ಳುರಿಯ ನಡುವೆಯೂ ಅರಳುವ ಪ್ರೇಮ್ ಕಹಾನಿ ಚಿತ್ರದಲ್ಲಿದೆ. ಅದಕ್ಕೆ ಆ್ಯಕ್ಷನ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಕಮರ್ಷಿಯಲ್ ಚೌಕಟ್ಟಿನಲ್ಲಿ ಕಟ್ಟಿಕೊಡಲಾಗಿದೆ. ಪ್ರಸ್ತುತ ಅಗತ್ಯವಾಗಿರುವ ಕೋಮು ಸಾಮರಸ್ಯದ ಜತೆಗೆ ಸಾಮಾಜಿಕ ಸಂದೇಶ ಸಾರುವ ಈ ಚಿತ್ರವನ್ನು ಬಿ.ರಾಜರತ್ನ ನಿರ್ದೇಶನ ಮಾಡಿದ್ದಾರೆ.

ನಟ ಷಣ್ಮುಖ ಜೈ ನಾಯಕನಾಗಿ ನಟಿಸಿದ್ದು, ತಾಜ್ ಮೂಲಕ ಚಂದನವನಕ್ಕೆ ಪರಿಚಯವಾಗುತ್ತಿದ್ದಾರೆ. ಅಪ್ಸರಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಕಡ್ಡಿ ವಿಶ್ವ, ವರ್ಧನ್, ರೋಬೋ, ಕಾಶೀನಾಥ್, ಬಲರಾಜವಾಡಿ, ಪದ್ಮವಾಸಂತಿ, ಶೋಭರಾಜ್, ಪಟ್ರೆ ನಾಗರಾಜ್, ಸೂರಜ್ ಹೀಗೆ ಕಲಾವಿದರ ಬಳಗವೇ ತಾಜ್ ಸಿನಿಮಾದಲ್ಲಿದೆ. ಚಿತ್ರದ ಹಾಡುಗಳಿಗೆ ಜೆಸ್ಸಿಗಿಫ್ಟ್ ಸಂಗೀತ ಸಂಯೋಜಿಸಿದ್ದು, ಹಿತನ್ ಹಾಸನ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ಪಾವನಿ ಲಕ್ಷ್ಮೀ ಕಂಬೈನ್ಸ್ ಬ್ಯಾನರಿನಲ್ಲಿ ಚಿತ್ರ ನಿರ್ಮಾಣವಾಗಿದೆ. ಬೆಂಗಳೂರು, ತುಮಕೂರು, ಯಲಹಂಕ, ನೆಲಮಂಗಲ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

> ನಿರೀಕ್ಷೆಗೂ ಮೀರಿ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಟೀಸರ್, ಟ್ರೇಲರ್ ಗೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಒಳ್ಳೆಯ ಸಂದೇಶ ಹೊತ್ತುಬಂದಿರುವ ಈ ಚಿತ್ರವನ್ನು ನೋಡಿ ಹೊರಬಂದ ಮೇಲೂ ನಿಮ್ಮನ್ನು ಬಿಡದೆ ಕಾಡುತ್ತದೆ.
>
> -ಷಣ್ಮುಖ ನಟ

> ತಾಜ್ ನೈಜ ಘಟನೆ ಆಧರಿಸಿದ ಸಿನಿಮಾ. ನಮ್ಮ ಸುತ್ತಮುತ್ತ ನಡೆದ ಒಂದಷ್ಟು ವಿಷಯಗಳನ್ನು ಆಧರಿಸಿ ಅದಕ್ಕೆ ಸಿನಿಮೀಯ ಅಂಶಗಳನ್ನು ಸೇರಿಸಿ ತೆರೆಗೆ ತರಲಾಗಿದೆ. ಎಲ್ಲ ವರ್ಗದ ಆಡಿಯನ್ಸ್ ಗೂ ಈ ಸಿನಿಮಾ ಇಷ್ಟವಾಗಲಿದೆ. ಜಾತಿ, ಧರ್ಮಕ್ಕಿಂತ ಪ್ರೀತಿ, ಮಾನವೀಯತೆ ಮುಖ್ಯ ಎಂಬ ಸಂದೇಶವನ್ನು ಇಲ್ಲಿ ಹೇಳಿದ್ದೇವೆ.
>
> -ಬಿ.ರಾಜರತ್ನ ನಿರ್ದೇಶಕ